ಮಂಗಳೂರು
ಗುರುವಾರ, 5 ಮಾರ್ಚ್ 2026
ಸಂಪುಟ 47, ಸಂಚಿಕೆ 336, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಉತ್ತರೆ

ದಿನದ ಮಾತು

ಸತ್ಯವನ್ನೇ ನುಡಿಯಬೇಕು. ಅದರ ಪರಿಣಾಮವನ್ನೂ ಎದುರಿಸಬೇಕು.
▲ ಲೋಕೋಕ್ತಿ

ಕೈಯ ಆಯುಧವೂ, ಸುಡುವ ಬೆಂಕಿಯೂ


ಆ-ಲೋಚನ
• ರಾಧಾಕೃಷ್ಣ ಕಲ್ಚಾರ್

• ಪುಟ ೬

ಕಿರುಸುದ್ದಿ

ಕೈಗಾರಿಕಾ ವಿದ್ಯುತ್ ದರ ಹೆಚ್ಚಿಸಿದ ಕೆಇಆರ್‌ಸಿ

ಯೂನಿಟ್‌ಗೆ 10ರಿಂದ 95 ಪೈಸೆವರೆಗೆ ಏರಿಕೆ



• **ಬೆಂಗಳೂರು:** ವಾಣಿಜ್ಯ ಮತ್ತು ಕೈಗಾರಿಕಾ ವಲಯಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ) ಶಾಕ್ ನೀಡಿದೆ. ಯೂನಿಟ್‌ಗೆ 10 ಪೈಸೆಯಿಂದ 95 ಪೈಸೆವರೆಗೆ ಏರಿಸಲಾಗಿದೆ. ವಾಣಿಜ್ಯ ಬಳಕೆ ವಿದ್ಯುತ್ ಗೆ 10 ಪೈಸೆ, ಕೈಗಾರಿಕೆಗೆ ಬಳಸುವ ವಿದ್ಯುತ್‌ಗೆ 70 ಪೈಸೆ, ಮೆಟ್ರೋ, ರೈಲ್ವೆ ಇತರೆ ವಿದ್ಯುತ್ ದರ 10ಪೈಸೆ, ಕಾಂಪ್ಲೆಕ್ಸ್, ಥಿಯೇಟರ್, ಹೋಟೆಲ್‌ಗೆ ಬಳಸುವ ವಿದ್ಯುತ್ ದರವನ್ನು 95 ಪೈಸೆ ಏರಿಕೆ ಮಾಡಲಾಗಿದೆ. ಹೊಸ ವಿದ್ಯುತ್ ದರ 2025-26ನೇ ಆರ್ಥಿಕ ವರ್ಷಕ್ಕೆ ಅನ್ವಯವಾಗಲಿದೆ. ಈ ನಿರ್ಧಾರವನ್ನು ಕೈಗಾರಿಕೋದ್ಯಮಿಗಳು ಮತ್ತು ವಾಣಿಜ್ಯೋದ್ಯಮಿಗಳು ಖಂಡಿಸಿದ್ದು, ಆಕ್ರೋಶ ಹೊರಹಾಕಿದ್ದಾರೆ. ದರ ಏರಿಕೆ ಸಂಬಂಧ ಫೆ.20ರಂದು ಸಾರ್ವಜನಿಕರ ಜತೆ ಚರ್ಚೆ ನಡೆದಿದ್ದು, ಈ ವೇಳೆ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆ ವಿದ್ಯುತ್ ದರ ಏರಿಸುವುದಿಲ್ಲ ಎಂದು ಕೆಇಆರ್‌ಸಿ ಭರವಸೆ ನೀಡಿತ್ತು. ಆದರೀಗ ಬೆಲೆ ಏರಿಕೆ ಮಾಡಿ ಆದೇಶ ನೀಡಿದ್ದು, ಭಾರೀ ಆಕ್ರೋಶಕ್ಕೆ ಕಾರಣವಾಗಿದೆ. ➡ಪುಟ ೪

ಇರಾನ್ ಮೇಲೆ 5ನೇ ದಿನವೂ ಅಮೆರಿಕ-ಇಸ್ರೇಲ್ ದಾಳಿ

ಆಧುನಿಕ ಯುದ್ಧ

• **ದುಬೈ:** ಅಮೆರಿಕ ಮತ್ತು ಇಸ್ರೇಲ್ 5ನೇ ದಿನವಾದ ಬುಧವಾರ ಇರಾನ್ ರಾಜಧಾನಿ ಟೆಹ್ರಾನ್ ಸೇರಿದಂತೆ ಹಲವು ನಗರಗಳ ಮೇಲೆ ಹಲವು ಬಾರಿ ವಾಯುದಾಳಿಗಳನ್ನು ನಡೆಸಿದವು. ಇಸ್ರೇಲ್, ಇರಾನ್‌ನ ನಾಯಕತ್ವ ಮತ್ತು ಭದ್ರತಾ ಪಡೆಗಳನ್ನು ಗುರಿಯಾಗಿಸಿದರೆ, ಇರಾನ್, ಇಸ್ರೇಲ್ ಮತ್ತು ಅಮೆರಿಕದ ಸೇನಾ ನೆಲೆಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳ ಮೂಲಕ ಪ್ರತಿಕ್ರಿಯಿಸಿತು.

ಈ ಮಧ್ಯೆ , ಅಮೆರಿಕದ ಸೇನಾ ನೆಲೆಗಳು ಮತ್ತು ಆರ್ಥಿಕ ಮೂಲಸೌಕರ್ಯಗಳ ಸಂಪೂರ್ಣ ನಾಶಕ್ಕೆ ನಾವು ಸಿದ್ಧ ಎಂದು ಇರಾನ್‌ನ ಅರೆಸೈನಿಕ ಕ್ರಾಂತಿಕಾರಿ ಪಡೆ(ಐಆರ್‌ಜಿಸಿ) ಎಚ್ಚರಿಕೆ ನೀಡಿದೆ.



ಟೆಹ್ರಾನ್ ಗುರಿಯಾಗಿಸಿದ ದಾಳಿ: ಟೆಹ್ರಾನ್ ನಿವಾಸಿಗಳು ಬೆಳಗ್ಗೆ ಸ್ಫೋಟಗಳ ಶಬ್ದಕ್ಕೆ ಎಚ್ಚರಗೊಂಡರು. ಇರಾನ್ ಸರ್ಕಾರಿ ಸ್ವಾಮ್ಯದ ಟಿವಿ ರಾಜಧಾನಿಯ ಕೇಂದ್ರ ಭಾಗದಲ್ಲಿರುವ ಕಟ್ಟಡದ ಅವಶೇಷ ಗಳನ್ನು ಪ್ರದರ್ಶಿಸಿತು. ಶಿಯಾ ಪವಿತ್ರ ನಗರ ಕೊಮ್ ಸೇರಿದಂತೆ ಇನ್ನೂ ಹಲವು ನಗರಗಳು ವಾಯುದಾಳಿಗೆ ಗುರಿಯಾಗಿದ್ದವು. ಯುದ್ಧ ವಿಮಾನಗಳು ಆಕಾಶದಲ್ಲಿ ಘರ್ಜಿಸುತ್ತಿದ್ದಾಗ, ಟೆಹ್ರಾನ್‌ನಲ್ಲಿ ಉಳಿದವರು ಆತಂಕದಿಂದ ಆಕಾಶ ನೋಡುತ್ತಿದ್ದರು.

ಇಸ್ರೇಲ್ ಮೇಲೆ ಇರಾನ್ ಪ್ರತಿದಾಳಿ: ಇಸ್ರೇಲ್ ಸೈನ್ಯವು ತನ್ನ ಎಫ್-35 ಸ್ಟೆಲ್ತ್ ಯುದ್ಧ ವಿಮಾನವು ಟೆಹ್ರಾನ್ ಮೇಲ್ಭಾಗದಲ್ಲಿ ಇರಾನ್ ವಾಯುಪಡೆಯ ಯಾಕ್-130 ಯುದ್ಧ ವಿಮಾನವನ್ನು ಹೊಡೆದುರುಳಿಸಿದೆ ಎಂದು ತಿಳಿಸಿತು. ಇಸ್ರೇಲ್‌ನ ವಾಯು ರಕ್ಷಣಾ ವ್ಯವಸ್ಥೆಗಳು ಇರಾನ್‌ನ ಕ್ಷಿಪಣಿ ಗಳನ್ನು ಆಕಾಶದಲ್ಲೇ ಹೊಡೆದುರುಳಿಸಿದವು. ಜೆರೂಸಲೇಮ್ ಸುತ್ತಮುತ್ತ ಸ್ಫೋಟಗಳು ಕೇಳಿಬಂದವು. ➡ಪುಟ ೪

ಖಮೇನಿ ಶೋಕಸಭೆ ಮುಂದಕ್ಕೆ

ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ತೀವ್ರತೆಯಿಂದ ಇರಾನ್ ಸುಪ್ರೀಂ ಲೀಡರ್ ಅಯತೊಲ್ಲಾ ಅಲಿ ಖಮೇನಿ ಅವರ ಶೋಕಸಭೆಯನ್ನು ಮುಂದೂಡಲಾಯಿತು ಎಂದು ಇರಾನ್ ಸರ್ಕಾರಿ ಟಿವಿ ಸುದ್ದಿ ಪ್ರಸಾರ ಮಾಡಿದೆ.



ತೈಲ ಬೆಲೆ ಏರಿಕೆ, ಷೇರುಪೇಟೆ ಕುಸಿತ

ಹಾರ್ಮುಜ್ ಜಲಸಂಧಿಯ ಮೂಲಕ ಸಾಗುವ ತೈಲ ಸಾಗಣೆಯ ಮೇಲೆ ಇರಾನ್ ಒತ್ತಡ ಹೆಚ್ಚಿಸಿದ ಹಿನ್ನೆಲೆ ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 84 ಡಾಲರ್‌ಗೆ ಏರಿಕೆಯಾಯಿತು. ಜಾಗತಿಕ ಷೇರು ಮಾರುಕಟ್ಟೆಗಳು ಕುಸಿದಿವೆ. ಸೌದಿ ಅರೇಬಿಯಾದ ರಾಸ್ ತನುರಾ ತೈಲ ಶುದ್ಧೀಕರಣ ಸ್ಥಾವರ ಮತ್ತೊಮ್ಮೆ ಡ್ರೋನ್ ದಾಳಿಗೆ ಗುರಿಯಾಗಿದೆ. ಆದರೆ, ಹಾನಿ ಆಗಿಲ್ಲ ಎಂದು ತಿಳಿಸಲಾಗಿದೆ.

ಇರಾನ್ ನಾಯಕತ್ವದ ಮೇಲೆ ಒತ್ತಡ



ಆರಂಭಿಕ ದಾಳಿಯಲ್ಲಿ ಖಮೇನಿ ಬಲಿಯಾದ ನಂತರ ಹೊಸ ಸುಪ್ರೀಂ ಲೀಡರ್ ಆಯ್ಕೆ ಪ್ರಕ್ರಿಯೆ ಆರಂಭವಾಗಿದೆ. ಅವರ ಪುತ್ರ ಮೊಜ್ತಬಾ ಖಮೇನಿ ಅವರ ಹೆಸರು ಸಂಭಾವ್ಯ ಅಭ್ಯರ್ಥಿಯಾಗಿ ಕೇಳಿಬರುತ್ತಿದೆ.ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಸ್, ಹೊಸ ಸುಪ್ರೀಂ ಲೀಡರ್ ಯಾರೇ ಆಗಲಿ ಹೊಡೆದುರುಳಿಸುತ್ತೇವೆ ಎಂದು ಹೇಳಿದ್ದಾರೆ. ಇರಾನ್ ನ್ಯಾಯಾಂಗ ಮುಖ್ಯಸ್ಥ ಘೋಲಾಮ್ ಹೊಸೇನಿ ಮೊಹ್ಸೆನಿ ಏಜೇಹಿ, ಅಮೆರಿಕ-ಇಸ್ರೇಲ್ ಯುದ್ಧ ಬೆಂಬಲಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ್ದಾರೆ.

ಸಾವಿರಾರು ಮಂದಿ ಬಲಿ

ಇರಾನ್‌ನ ಫೌಂಡೇಶನ್ ಆಫ್ ಮಾರ್ಟಿಯರ್ಸ್ ಮತ್ತು ವೆಟರನ್ಸ್ ಅಫೇರ್ಸ್ ಪ್ರಕಾರ, 1,045 ಮಂದಿಯ ಮೃತದೇಹಗಳನ್ನು ಗುರುತಿಸಲಾಗಿದೆ. ಇಸ್ರೇಲ್‌ನಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಕುವೈತ್‌ನಲ್ಲಿ 11 ವರ್ಷದ ಬಾಲಕಿ ಶೆಲ್‌ನ ಶೆಲ್ಲಿನ ಅವಶೇಷ ಬಿದ್ದು ಮೃತಪಟ್ಟಿದ್ದಾಳೆ. ಯುಎಇಯಲ್ಲಿ ಮೂವರು ಮತ್ತು ಬಹ್ರೇನ್‌ನಲ್ಲಿ ಒಬ್ಬರು ಅಸುನೀಗಿದ್ದಾರೆ. ಕುವೈತ್‌ನಲ್ಲಿ ಅಮೆರಿಕದ ಆರು ಯೋಧರು ಮೃತಪಟ್ಟಿದ್ದಾರೆ.


ಒಂದೇ ಕೊಠಡಿಯಲ್ಲಿ ಮುಖ್ಯ ಪರೀಕ್ಷೆ ಬರೆದ 10-15 ಅಭ್ಯರ್ಥಿಗಳು ತೇರ್ಗಡೆ!

ಕೆಪಿಎಸ್‌ಸಿಯಲ್ಲಿ ಮತ್ತೆ ಭ್ರಷ್ಟಾಚಾರ ಆರೋಪ



• **ಬೆಂಗಳೂರು:** ಸದಾ ಒಂದಿಲ್ಲೊಂದು ವಿವಾದದ ಸುಳಿಗೆ ಸಿಲುಕುತ್ತಿರುವ ಕರ್ನಾಟಕ ಲೋಕಸೇವಾ ಆಯೋಗ ಈಗ ಮತ್ತೊಂದು ವಿವಾದದಲ್ಲಿ ಸಿಲುಕಿದೆ. ಇತ್ತೀಚೆಗೆ ನಡೆದ ಗೆಜೆಟೆಡ್ ಪ್ರೊಬೆಷನರಿ (ಕೆಎಎಸ್) ಮುಖ್ಯ ಪರೀಕ್ಷಾ ಫಲಿತಾಂಶಗಳಲ್ಲಿ ಅಕ್ರಮ ನಡೆದಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಇದರಿಂದಾಗಿ ಆಕಾಂಕ್ಷಿಗಳಲ್ಲಿ ಮತ್ತೆ ನಿರಾಸೆ ಮೂಡಿದೆ. ಲೋಕಸೇವಾ ಆಯೋಗದ ಮೇಲೆ ಮತ್ತೆ ಸಂಶಯದ ಕಾರ್ಮೋಡ ಕವಿದಿದೆ.

ಕೆಎಎಸ್ ಮುಖ್ಯ ಪರೀಕ್ಷೆಯ ಫಲಿತಾಂಶದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಅಭ್ಯರ್ಥಿಗಳು ದೂರಿದ್ದಾರೆ. ಈ ಮೂಲಕ ಪಾರದರ್ಶಕವಾಗಿ ನಡೆಯಬೇಕಿದ್ದ ಮತ್ತೊಂದು ಪರೀಕ್ಷೆಗೆ ಈಗ ಹಗರಣ ಮೆತ್ತಿಕೊಂಡಿದೆ. ನೇಮಕಾತಿಗೆ ಗ್ರಹಣ ಹಿಡಿಯುವ ಎಲ್ಲ ಸಾಧ್ಯತೆಗಳು ನಿಚ್ಚಳವಾಗಿವೆ. ಒಂದೇ ಪರೀಕ್ಷಾ ಕೇಂದ್ರದ ಒಂದೇ ಕೊಠಡಿಯಲ್ಲಿ ಪರೀಕ್ಷೆ ಬರೆದ 10 ರಿಂದ 15 ಅಭ್ಯರ್ಥಿಗಳು ತೇರ್ಗಡೆಯಾಗಿದ್ದಾರೆ. ಸರಣಿಯಾಗಿ ಅನುಕ್ರಮ ಸಂಖ್ಯೆ ಹೊಂದಿದವರು ಪಾಸಾಗಿದ್ದು, ಒಂದೇ ಕುಟುಂಬದ ಹಲವರು ಆಯ್ಕೆಯಾಗಿರುವ ಆರೋಪ ಕೇಳಿಬಂದಿದೆ. ಈ ಘಟನೆಯು ಕೆಪಿಎಸ್‌ಸಿ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯ ಬಗ್ಗೆ ಮತ್ತೊಮ್ಮೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.



ಕೆಎಎಸ್ ಮೇನ್ಸ್ ಪರೀಕ್ಷೆ ಪ್ರಶ್ನೆಪತ್ರಿಕೆ ಸೀಲ್ ಓಪನ್ ಎಡವಟ್ಟು

ಕೆಎಎಸ್ ಮುಖ್ಯ ಪರೀಕ್ಷೆಯಲ್ಲೂ ಮತ್ತೊಂದು ಗಂಭೀರ ಎಡವಟ್ಟು ಬೆಳಕಿಗೆ ಬಂದಿದೆ. ಕಳೆದ ವರ್ಷ ಮೇನಲ್ಲಿ ನಡೆದಿದ್ದ ಮುಖ್ಯ ಪರೀಕ್ಷೆಯ ವೇಳೆ ಪ್ರಶ್ನೆಪತ್ರಿಕೆ ಸೀಲ್ ಮೊದಲೇ ಓಪನ್ ಆಗಿತ್ತು ಎಂದು ಅಭ್ಯರ್ಥಿಗಳು ಆರೋಪಿಸಿದ್ದರು. ಅಚ್ಚರಿಯ ವಿಷಯವೆಂದರೆ, ಪರೀಕ್ಷಾ ಮೇಲ್ವಿಚಾರಕರೇ ಈ ತಪ್ಪನ್ನು ಒಪ್ಪಿಕೊಂಡು ಅಭ್ಯರ್ಥಿಗಳಿಗೆ ಪತ್ರದ ಮೂಲಕ ಲಿಖಿತ ಹೇಳಿಕೆ ನೀಡಿದ್ದರು.

ಒಂದೇ ಕೊಠಡಿಯಲ್ಲಿದ್ದ 10ಕ್ಕೂ ಹೆಚ್ಚು ಮಂದಿ ಪಾಸ್!

ಪರೀಕ್ಷಾ ಅಕ್ರಮದ ಅನುಮಾನಕ್ಕೆ ಮುಖ್ಯ ಕಾರಣವಾಗಿದ್ದು ಒಂದೇ ಪರೀಕ್ಷಾ ಕೊಠಡಿಯಲ್ಲಿದ್ದ 10ಕ್ಕೂ ಹೆಚ್ಚು ಅಭ್ಯರ್ಥಿಗಳು ಪಾಸಾಗಿರುವುದು. ಸುಮಾರು 5,700ಕ್ಕೂ ಅಧಿಕ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದಾರೆ. ➡ಪುಟ ೪

ಭ್ರಷ್ಟಾಚಾರ ನಡೆದಿಲ್ಲ, ಇದು ಪಾರದರ್ಶಕ ಫಲಿತಾಂಶ: ಕೆಪಿಎಸ್ಸಿ

• ಪುಟ ೪

ಹಿಂದು ಮಹಾಸಾಗರದಲ್ಲಿ ಅಮೆರಿಕ ಜಲಾಂತರ್ಗಾಮಿ ದಾಳಿ

ಮುಳುಗಿದ ಇರಾನ್ ನೌಕೆ, 90 ಸಾವು

• **ಕೊಲಂಬೊ:** ಶ್ರೀಲಂಕಾದ ಬಳಿ ಅಮೆರಿಕದ ಜಲಾಂತರ್ಗಾಮಿ ದಾಳಿಯಿಂದ ಇರಾನ್‌ನ ಯುದ್ಧನೌಕೆ ಐರಿಸ್ ದೇನಾ ಮುಳುಗಡೆಯಾಗಿದೆ. ಘಟನೆಯಲ್ಲಿ 90 ಮಂದಿ ಮೃತಪಟ್ಟಿದ್ದಾರೆ ಎಂದು ಶ್ರೀಲಂಕಾದ ಉಪ ವಿದೇಶಾಂಗ ಸಚಿವರು ಬುಧವಾರ ತಿಳಿಸಿದ್ದಾರೆ. ಹಡಗಿನಲ್ಲಿ ಒಟ್ಟು 180 ಸಿಬ್ಬಂದಿ ಇದ್ದರು. ಈ ಪೈಕಿ 30 ಮಂದಿಯನ್ನು ರಕ್ಷಿಸಲಾಗಿದೆ. ಇನ್ನುಳಿದವರು ನಾಪತ್ತೆಯಾಗಿದ್ದಾರೆ. ಐರಿಸ್ ದೇನಾ ಯುದ್ಧನೌಕೆಯು ಭಾರತ ಆಯೋಜಿಸಿದ್ದ ನೌಕಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ ನಂತರ ಇರಾನ್‌ಗೆ ಹಿಂದಿರುಗುತ್ತಿದ್ದ ವೇಳೆ ಈ ಘಟನೆ ಸಂಭವಿಸಿದೆ. ಇದರಿಂದ ಮಧ್ಯಪ್ರಾಚ್ಯದಲ್ಲಿ ಉಲ್ಬಣಗೊಂಡಿರುವ ಇರಾನ್-ಇಸ್ರೇಲ್ ಸಂಘರ್ಷ ಇದೀಗ ಭಾರತದ ಸಮೀಪಕ್ಕೂ ವಿಸ್ತರಿಸಿರುವುದು ಸ್ಪಷ್ಟವಾಗಿದೆ. ಐರಿಸ್ ದೇನಾ ಮೌಡ್ಜ್ ವರ್ಗದ ಯುದ್ಧನೌಕೆಯಾಗಿದ್ದು, ಇದು ಭಾರತದ ವಿಶಾಖಪಟ್ಟಣದಲ್ಲಿ ನಡೆದ ಮಿಲನ್ 2026 ಬಹುರಾಷ್ಟ್ರೀಯ ನೌಕಾ ತುಕಡಿಯಲ್ಲಿ ಭಾಗವಹಿಸಿ ಇರಾನ್‌ಗೆ ಮರಳುತ್ತಿತ್ತು. ➡ಪುಟ ೪



30 ಜನರನ್ನು ರಕ್ಷಿಸಿದ ಲಂಕಾ ಸೇನೆ

ಶ್ರೀಲಂಕಾ ಸೇನೆಯು ಹಡಗಿನಲ್ಲಿದ್ದ ಕನಿಷ್ಠ 30 ಜನರನ್ನು ರಕ್ಷಿಸಿದೆ ಮತ್ತು ಗಾಯಾಳುಗಳನ್ನು ಗ್ಯಾಲೆಯ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಲಂಕಾ ವಿದೇಶಾಂಗ ಸಚಿವೆ ವಿಜಿತಾ ಹೆರಾತ್ ಹೇಳಿದ್ದಾರೆ. ನಾವು ಹೆಚ್ಚಿನ ಜನರನ್ನು ರಕ್ಷಿಸಬಹುದೆಂಬ ಭರವಸೆ ಹೊಂದಿದ್ದೇವೆ. ➡ಪುಟ ೪

ಹುದ್ದೆ ಭರ್ತಿ ಮಾಡದಿದ್ದರೆ ಹೋರಾಟ: ಬಿವೈವಿ ಎಚ್ಚರಿಕೆ

ಎಸ್ಸಿ, ಎಸ್ಟಿಗಳಿಗೆ ಉದ್ಯೋಗ ನೀಡಿ



• **ಬೆಂಗಳೂರು:** ಪರಿಶಿಷ್ಟ ಜಾತಿ, ಪಂಗಡಗಳ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇದ್ದರೆ ರಾಜ್ಯ ನ್ಯಾಯಾಲಯದ ಕುಂಟುನೆಪ ಹೇಳದೆ ಈ ಸಮುದಾಯಗಳಿಗೆ ಉದ್ಯೋಗ ನೀಡಿ ನ್ಯಾಯ ಕೊಡಿ. ಇಲ್ಲದಿದ್ದರೆ ಬಿಜೆಪಿ ಉಗ್ರ ಹೋರಾಟಕ್ಕೆ ಇಳಿಯುವುದು ಅನಿವಾರ್ಯವಾದೀತು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ನೀಡಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೇ.56 ಒಳ ಮೀಸಲಾತಿ ನೀಡಿ ಬಿಜೆಪಿ ಸರ್ಕಾರವು ಎಲ್ಲ ಸಮುದಾಯಗಳಿಗೆ ನ್ಯಾಯ ಕೊಡುವ ಕೆಲಸ ಮಾಡಿದೆ. ಅದರ ಆಧಾರದಲ್ಲಿ ಶೋಷಿತ-ಪೀಡಿತ ಸಮುದಾಯಗಳಿಗೆ ಒಳ ಮೀಸಲಾತಿ ಪರಿಗಣಿಸಿ ಈ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಆಗ್ರಹಿಸಿದರು. ➡ಪುಟ ೪

ನಾಳೆಯಿಂದ ಸರಣಿ ಪ್ರತಿಭಟನೆ

ಮಾ.6ರಂದು ಅಧಿವೇಶನ ಆರಂಭ ಆಗುತ್ತಿದೆ. ಸರಣಿ ಪ್ರತಿಭಟನೆಗಳು ಬೆಂಗಳೂರಿನಲ್ಲಿ ಪ್ರಾರಂಭ ಆಗಲಿವೆ. ಅಂಗನವಾಡಿ, ಆಶಾ ಕಾರ್ಯಕರ್ತೆಯರು ಹೋರಾಟ ಪ್ರಾರಂಭ ಮಾಡಲಿದ್ದಾರೆ. ಅತಿಥಿ ಉಪನ್ಯಾಸಕರ ಆಶ್ವಾಸನೆಯನ್ನೂ ಸರ್ಕಾರ ಈಡೇರಿಸಿಲ್ಲ. ಅವರೂ ಬೀದಿಗಿಳಿದು ಹೋರಾಟ ಮಾಡುವ ಸಂದರ್ಭ ಸೃಷ್ಟಿಯಾಗಿದೆ. ಕೆಎಸ್‌ಆರ್‌ಟಿಸಿ- ಬಿಎಂಟಿಸಿ ನೌಕರರಿಗೆ ಪಿಎಫ್- ಗ್ರಾಚ್ಯುಟಿ ಕೊಡದೆ ಅನ್ಯಾಯ ಮಾಡುತ್ತಿದ್ದು, ಅವರೂ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಮತ್ತೊಂದು ಕಡೆ ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುವ ವೈದ್ಯರೂ ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿಗೆ ಬಂದು ತಲುಪಿದೆ. ➡ಪುಟ ೪

ಯಡೂರಲ್ಲಿಂದು ರಾಜಗೋಪುರ ಲೋಕಾರ್ಪಣೆ ಕಾರ್ಯಕ್ರಮ



ಉಪರಾಷ್ಟ್ರಪತಿ, ರಾಜ್ಯಪಾಲ, ಡಿಸಿಎಂ ಭಾಗಿ

• **ಬೆಳಗಾವಿ:** ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಮಾಜರೇಯ ಯಡೂರ ವೀರಭದ್ರೇಶ್ವರ ದೇವಾಲಯದ ರಾಜಗೋಪುರಗಳ ಲೋಕಾರ್ಪಣೆ ಹಾಗೂ ವಿವಿಧ ಕಾರ್ಯಕ್ರಮಗಳು ಗುರುವಾರ ನಡೆಯಲಿವೆ. ಈ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ರಾಜ್ಯಪಾಲರಾದ ಗೆಹಲೋತ್ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಪಾಲ್ಗೊಳ್ಳಲಿದ್ದಾರೆ. ➡ಪುಟ ೪

ನಿರೀಕ್ಷೆಗಳನ್ನು ಹೆಚ್ಚಿಸಿದ ಸಿದ್ದರಾಮಯ್ಯ ಬಜೆಟ್



• **ಬೆಂಗಳೂರು:** ರಾಜ್ಯ ಸರ್ಕಾರದ 2026-27ನೇ ಸಾಲಿನ ಬಜೆಟ್‌ಗೆ ಇನ್ನೊಂದೇ ದಿನ ಬಾಕಿ ಉಳಿದಿದ್ದು, ವಿತ್ತೀಯ ಕೊರತೆಯನ್ನು ನಿಭಾಯಿಸಿ ಸಮಗ್ರ ಆದ್ಯತೆಯ ಮೇರೆಗೆ ಜನಪ್ರಿಯ ಮತ್ತು ಜನಪರ ಬಜೆಟ್ ಮಂಡಿಸಬೇಕಾದ ಅನಿವಾರ್ಯತೆಯಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಲೆಕ್ಕಾಚಾರ ಅಪಾರ ನಿರೀಕ್ಷೆ ಮೂಡಿಸಿದೆ. 3ನೇ ವರ್ಷದ ಹೊಸ್ತಿಲಲ್ಲಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವು ಗ್ಯಾರಂಟಿಗಳ ಹೊರತಾಗಿ ಸಮೃದ್ಧ ಬಜೆಟ್ ನೀಡಲಿದೆ ಎಂದು ಜನರಿಗೆ ಸಾಬೀತುಪಡಿಸಬೇಕಿರುವು ದರಿಂದ ಈ ಬಜೆಟ್ ಮುಖ್ಯಮಂತ್ರಿಗಳಿಗೆ ಸವಾಲಾಗಿದೆ. ಏಕೆಂದರೆ, ಆದಾಯ ತಂದುಕೊಡುವ ಪ್ರಮುಖ ಇಲಾಖೆಗಳಿಗೆ ನಿರೀಕ್ಷಿತ ಮಟ್ಟದಲ್ಲಿ ವರಮಾನ ಬಂದಿಲ್ಲ. ಇದನ್ನು ಸರಿದೂಗಿಸಿ ಜನಪರ ಬಜೆಟ್ ಮಂಡಿಸಬೇಕಾದ ಅನಿವಾರ್ಯತೆ ಇದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ:2,78,000(2,83,300)	ಅಪರಂಜಿ ಚಿನ್ನ 16,200(16,740)	ಆಭರಣ ಚಿನ್ನ: 15,080(15,545)	ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ	ಬಿಎಸ್‌ಇ 79,116 (1,122↓)	ಎನ್‌ಎಸ್‌ಇ 24,480 (385↓)	$1 = ₹91.48	

ಮಧ್ಯಪ್ರಾಚ್ಯ ಸಂಘರ್ಷದ ನಡುವೆ ಕತಾರ್‌ನಿಂದ ಎಲ್‌ಎನ್‌ಜಿ ಉತ್ಪಾದನೆ ಸ್ಥಗಿತ | ಪೂರೈಕೆಯಲ್ಲಿ ಶೇ.40 ಕಡಿತ

ಭಾರತದ ಕೈಗಾರಿಕೆಗಳಿಗೆ ಅನಿಲ ಬಿಕ್ಕಟ್ಟು

ಹೊಸದಿಲ್ಲಿ: ಪಶ್ಚಿಮ ಏಷ್ಯಾದ ಸಂಘರ್ಷದ ನಡುವೆ ಕತಾರ್‌ನ ಅನಿಲ ಉತ್ಪಾದನಾ ಘಟಕಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳು ನಡೆದಿದ್ದು, ಇದರ ಪರಿಣಾಮವಾಗಿ ದ್ರವೀಕೃತ ನೈಸರ್ಗಿಕ ಅನಿಲ(ಎಲ್‌ಎನ್‌ಜಿ) ಉತ್ಪಾದನೆಯನ್ನು ಸ್ಥಗಿತಗೊಳಿಸಲಾಗಿದೆ. ಈ ಬೆಳವಣಿಗೆಯಿಂದಾಗಿ ಭಾರತದ ಇಂಧನ ಭದ್ರತೆಗೆ ಭಾರಿ ಹೊಡೆತ ಬಿದ್ದಿದ್ದು, ದೇಶೀಯ ಕೈಗಾರಿಕಾ ಗ್ರಾಹಕರು ಮತ್ತು ನಗರ ಅನಿಲ ವಿತರಕರಿಗೆ ಪೂರೈಕೆಯಲ್ಲಿ ಶೇ.40ರಷ್ಟು ಕಡಿತವಾಗಿದೆ.

ಸಾರಿಗೆ ಮಾರ್ಗಗಳ ಬಂದ್: ಇತ್ತೀಚಿನ ಯುದ್ಧದ ಹಿನ್ನೆಲೆಯಲ್ಲಿ ಅತ್ಯಂತ ನಿರ್ಣಾಯಕ ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತ ಸಂಚಾರಕ್ಕಾಗಿ ಮುಚ್ಚಲಾಗಿದೆ. ಪರಿಣಾಮವಾಗಿ, ಪೆಟ್ರೋನೆಟ್ ಎಲ್‌ಎನ್‌ಜಿ ಸಂಸ್ಥೆಯು ಫೋರ್ಸ್ ಮಜೂರ್ ನೋಟಿಸ್ ಜಾರಿಗೊಳಿಸಿದೆ. ಭಾರತದ ಶೇ.50ರಷ್ಟು ಕಚ್ಚಾ ತೈಲ ಮತ್ತು ಶೇ.54ರಷ್ಟು ಎಲ್‌ಎನ್‌ಜಿ ಆಮದು ಈ ಕಿರಿದಾದ ಜಲಸಂಧಿಯ ಮೂಲಕವೇ ಸಾಗಬೇಕಿದ್ದು, ಪ್ರಸ್ತುತ ಹಡಗುಗಳ ಸಂಚಾರ ಗಣನೀಯವಾಗಿ ಕುಸಿದಿದೆ.

ದೇಶೀಯ ವಲಯಗಳ ಮೇಲೆ ಪರಿಣಾಮ: ಗೊಬ್ಬರ ತಯಾರಿಕೆ, ವಿದ್ಯುತ್ ಉತ್ಪಾದನೆ ಮತ್ತು ನಗರ ಅನಿಲ ವಿತರಣಾ(ಸಿಜಿಡಿ) ವಲಯಗಳಿಗೆ ಕಚ್ಚಾ ವಸ್ತುವಿನ ಕೊರತೆ ಎದುರಾಗಿದೆ. ಒಪ್ಪಂದದ ಅನ್ವಯ ಸಿಗುತ್ತಿದ್ದ ಕತಾರ್ ಅನಿಲದ ಬದಲಿಗೆ ಮುಕ್ತ ಮಾರುಕಟ್ಟೆಯಿಂದ ದುಪ್ಪಟ್ಟು ಬೆಲೆಗೆ ಅನಿಲ ಖರೀದಿಸಬೇಕಾಗಿ ಬಂದಿದೆ. ಇದು ಸಿಎನ್‌ಜಿ ಬೆಲೆ ಏರಿಕೆಗೆ ಕಾರಣವಾಗಲಿದ್ದು, ಮನೆಗಳಿಗೆ ಪೂರೈಕೆಯಾಗುವ ಪೈಪ್ಡ್ ಅಡುಗೆ ಅನಿಲದ ಲಭ್ಯತೆಯ ಬಗ್ಗೆಯೂ ಆತಂಕ ಮೂಡಿಸಿದೆ.

ಮಾ.3ರಂದು ಗೇಲ್ ಸಂಸ್ಥೆಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದ ಪತ್ರದಲ್ಲಿ, ನಗರ ಅನಿಲ ವಿತರಣಾ ಸಂಸ್ಥೆಗಳ ಒಕ್ಕೂಟ(ಎಸಿಇ), ಕಡಿಮೆ ಬೆಲೆಯ ಅನಿಲ ಪೂರೈಕೆಯನ್ನು ಶೇ.60ಕ್ಕೆ ಇಳಿಸಿರುವುದು ಮತ್ತು ಸ್ಪಾಟ್ ಅಥವಾ ಪ್ರಸ್ತುತ ಮಾರುಕಟ್ಟೆಯ ಅನಿಲ ಪೂರೈಕೆಯನ್ನು ಶೂನ್ಯಕ್ಕೆ ನಿರ್ಬಂಧಿಸಿರುವುದು, ಈ ವಲಯದಲ್ಲಿ ಅನಿಲದ ಲಭ್ಯತೆಯ ಮೇಲೆ ಗಮನಾರ್ಹ ಪರಿಣಾಮ ಬೀರಲಿದೆ, ಎಂದು ಎಚ್ಚರಿಸಿದೆ.

ಹಣಕಾಸಿನ ಹೊರೆ: ಗೇಲ್ (ಜಿಎಐಎಲ್) ಮತ್ತು ಐಒಸಿ ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದ ಅನಿಲ ಖರೀದಿಸಲು ಪ್ರಯತ್ನಿಸುತ್ತಿವೆಯಾದರೂ, ಬೆಲೆಗಳು ಪ್ರತಿ ಯೂನಿಟ್‌ಗೆ 25 ಡಾಲರ್‌ಗೆ ಏರಿಕೆಯಾಗಿವೆ. ಈ ಬಿಕ್ಕಟ್ಟಿನಿಂದಾಗಿ ರಸಗೊಬ್ಬರಗಳ ಮೇಲಿನ ಸರ್ಕಾರದ ಸಬ್ಸಿಡಿ ಹೊರೆ ಹೆಚ್ಚಾಗುವ ಸಾಧ್ಯತೆಯಿದ್ದು, ಬೆಲೆ ಏರಿಕೆಯ ಕಾರಣದಿಂದ ಕೈಗಾರಿಕೆಗಳು ಪರ್ಯಾಯ ಇಂಧನಗಳತ್ತ ಮುಖ ಮಾಡುವ ಅನಿವಾರ್ಯತೆ ಎದುರಾಗಿದೆ.



ರಷ್ಯಾ ನಿರ್ಮಿತ ಇರಾನಿನ ಯಾಕ್-130 ಜೆಟ್ ಪತನ



ಇಸ್ರೇಲಿ ವಾಯುಪಡೆಯ ಎಫ್-35 ಫೈಟರ್ ಜೆಟ್ ಟೆಹ್ರಾನ್ ಮೇಲೆ ರಷ್ಯಾ ನಿರ್ಮಿತ ಇರಾನಿನ ಯಾಕ್-130 ಜೆಟ್ ಅನ್ನು ಹೊಡೆದುರುಳಿಸಿದೆ. ಇದು ಎಫ್-35ನಿಂದ ಮಾನವ ಚಾಲಿತ ವಿಮಾನವನ್ನು ಹೊಡೆದುರುಳಿಸಿದ್ದು, ಇದೇ ಮೊದಲು. ಸುಮಾರು 40 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಇಸ್ರೇಲಿ ವಾಯುಪಡೆಯು ಮಾನವಸಹಿತ ವಿಮಾನದೊಂದಿಗೆ ಹೋರಾಡುತ್ತಿದೆ.

ಕುವೈತ್ ಎಫ್-18ನಿಂದ ಮೂರು ಎಫ್-15 ಪತನ

ಅಮೆರಿಕದ ಮೂರು ಎಫ್-15 ವಿಮಾನಗಳನ್ನು ಆಕಸ್ಮಿಕವಾಗಿ ಹೊಡೆದುರುಳಿಸಿದ್ದು, ಕುವೈತ್ ಎಫ್-18 ಎಂದು ವಾಲ್‌ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಕೇವಲ ಒಂದು ಕುವೈತ್ ಎಫ್-18ನಿಂದ ಮೂರು ಎಫ್-15 ಅನ್ನು ಹೊಡೆದುರುಳಿಸಲಾಗಿದೆ. ಅಮೆರಿಕದ ಅಧಿಕಾರಿಯೊಬ್ಬರ ಪ್ರಕಾರ, ಎಫ್-18 ಹಾರ್ನೆಟ್‌ನ ಪೈಲಟ್ ತಪ್ಪಾಗಿ ಮೂರು ಕ್ಷಿಪಣಿಗಳನ್ನು ಅಮೆರಿಕದ ಮೂರು ಜೆಟ್‌ಗಳ ಕಡೆಗೆ ಉಡಾಯಿಸಿದ್ದಾರೆ.

ಮಹಾ ಕೈಗಾರಿಕೆಗಳಿಗೆ ನಷ್ಟ

ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಸಮರದಿಂದಾಗಿ ಜಾಗತಿಕ ಪೂರೈಕೆ ಸರಪಳಿ ಅಸ್ತವ್ಯಸ್ತಗೊಂಡಿದ್ದು, ವಿದೇಶಗಳಿಗೆ ಸರಕುಸಾಗಣೆ ರಫ್ತು ದುಸ್ತರವಾಗಿದೆ. ಸಮರದಿಂದಾಗಿ ಮಹಾರಾಷ್ಟ್ರದ ಛತ್ರಪತಿ ಸಂಭಾಜಿನಗರದ ಕೈಗಾರಿಕಾ ಘಟಕಗಳು ಬಲು ತೊಂದರೆಗೀಡಾಗಿವೆ. ಮಹಾರಾಷ್ಟ್ರದಿಂದ ಯುರೋಪ್‌ಗೆ ಸಾಗಬೇಕಿದ್ದ ಆಟೊಮೊಬೈಲ್ ಬಿಡಿಭಾಗಗಳ ಹೊತ್ತ ಕಂಟೈನರ್‌ಗಳು ತೀರಾ ವಿಳಂಬಗತಿಯಲ್ಲಿವೆ. ಇಲ್ಲಿನ ಸಾವಿರಕ್ಕೂ ಅಧಿಕ ಸಣ್ಣ ಮಧ್ಯಮ ಮತ್ತು ಬೃಹತ್ ಉದ್ದಿಮೆಗಳು ತಮ್ಮ ಉತ್ಪನ್ನಗಳನ್ನು ಛತ್ರಪತಿ ಸಂಭಾಜಿನಗರದಿಂದ ನೇರ ಅಥವಾ ಪರೋಕ್ಷವಾಗಿ ರಫ್ತು ಮಾಡುತ್ತಿದ್ದವು. ಆದರೆ ಅಮೆರಿಕ-ಇರಾನ್ ಸಮರದಿಂದ ಪೂರೈಕೆ ಸರಪಳಿಗಳು ಹಾಳಾಗಿದ್ದು, ಇಲ್ಲಿಂದ ದೂರದೂರುಗಳಿಗೆ ಸರಕುಗಳ ಸಾಗಣೆ ವಿಳಂಬವಾಗುತ್ತಿದೆ. ಪರಿಣಾಮ, ಛತ್ರಪತಿ ಸಂಭಾಜಿನಗರದ ಉದ್ದಿಮೆಗಳು ತೀವ್ರ ಸಂಕಷ್ಟಕ್ಕೀಡಾಗಿವೆ ಎಂದು ಮರಾಠವಾಡ ಕೈಗಾರಿಕೆ ಹಾಗೂ ಕೃಷಿ ಚೇಂಬರ್‌ನ ಮರಾಠವಾಡ ರಫ್ತುಗಾರರ ವೇದಿಕೆ ಪದಾಧಿಕಾರಿಗಳು ಹೇಳಿದ್ದಾರೆ.

ಸ್ಟ್ರೇಟ್ ಆಫ್ ಹಾರ್ಮುಜ್ ಜಗತ್ತಿನ ಪ್ರಮುಖ ಹಡಗು ಮಾರ್ಗವಾಗಿದೆ. ಹಾರ್ಮುಜ್ ಜಲಸಂಧಿಯು ಉತ್ತರಕ್ಕೆ ಇರಾನ್ ಮತ್ತು ದಕ್ಷಿಣಕ್ಕೆ ಒಮಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ದೇಶದ ಗಡಿಯನ್ನು ಹಂಚಿಕೊಂಡಿದೆ. ಒಮಾನ್ ಹಾಗೂ ಇರಾನ್ ಮಧ್ಯದಲ್ಲಿರುವ ಈ ಜಲಸಂಧಿಯು ಪರ್ಷಿಯನ್ ಕೊಲ್ಲಿಯನ್ನು ಗಲ್ಫ್ ಆಫ್ ಒಮಾನ್‌ಗೆ ಸಂಪರ್ಕಿಸುತ್ತದೆ ಜಲಸಂಧಿಯ ಪ್ರವೇಶ ಹಾಗೂ ನಿರ್ಗಮನದಲ್ಲಿ 50 ಕಿಮೀ ಅಗಲವಿದ್ದು, ಜಲಸಂಧಿಯ ಅತ್ಯಂತ ಕಿರಿದಾದ ಘಟ್ಟವು 33 ಕಿಮೀ ಅಗಲವಿದೆ.




ಹಾರ್ಮುಜ್ ಹೊರೆಯಿಂದ ಜಾಗತಿಕ ತೈಲ ಮಾರುಕಟ್ಟೆ ತತ್ತರ

ಏನಿದು ಸ್ಟ್ರೇಟ್ ಆಫ್ ಹಾರ್ಮುಜ್?

ಪವನ್. ಎಸ್, ಬೆಂಗಳೂರು

ಜಲಸಂಧಿ ಸಮುದ್ರ ಮಾರ್ಗ ಎಂದರೇನು ?

ಎರಡು ಬೃಹತ್ ಜಲಮೂಲಗಳನ್ನು ಸಂಪರ್ಕಿಸುವ(ಉದಾ: ಸಮುದ್ರ ಹಾಗೂ ಮಹಾಸಾಗರ) ಹಾಗೂ ಎರಡು ಭೂ ಪ್ರದೇಶವನ್ನು ಬೇರ್ಪಡಿಸುವ ಕಿರಿದಾದ ಹಾಗೂ ನೈಸರ್ಗಿಕವಾಗಿ ನಿರ್ಮಾಣವಾಗಿರುವ ಜಲಮಾರ್ಗವನ್ನು ಜಲಸಂಧಿ ಎನ್ನುತ್ತಾರೆ. ಸದರಿ ಜಲಸಂಧಿಗಳಲ್ಲಿ ನೌಕಾಯಾನ ಮಾಡಬಹುದಾಗಿದ್ದು, ಕಡಲ ವ್ಯಾಪಾರಕ್ಕೆ ಭೌಗೋಳಿಕ ಪ್ರಾಮುಖ್ಯತೆ ಹೊಂದಿರುತ್ತದೆ. 2025ರಲ್ಲಿ ಸುಮಾರು 20 ಮಿಲಿಯನ್ ಬ್ಯಾರಲ್‌ನಷ್ಟು ಕಚ್ಚಾ ತೈಲವನ್ನು ಈ ಜಲಸಂಧಿಯ ಮೂಲಕ ಸಾಗಿಸಲಾಗಿತ್ತು. ಅಮೆರಿಕದ ಎನರ್ಜಿ ಇನ್ಫಾರ್ಮೇಷನ್ ಆ್ಯಂಡ್ ಅಡ್ಮಿನಿಸ್ಟ್ರೇಷನ್‌ನ ಅಧಿಕೃತ ಮಾಹಿತಿಯ ಪ್ರಕಾರ ಸುಮಾರು 600 ಬಿಲಿಯನ್‌ನಷ್ಟು ವ್ಯಾಪಾರ ವಹಿವಾಟು ಪ್ರತಿ ವರ್ಷ ಈ ಜಲಸಂಧಿಯ ಮೂಲಕ ಆಗುತ್ತದೆ. ಕಚ್ಚಾ ತೈಲವು ಕೇವಲ ಇರಾನ್‌ನಿಂದ ಅಲ್ಲದೆ ಇತರೆ ಕೊಲ್ಲಿ ರಾಷ್ಟ್ರಗಳಾದ ಕುವೈತ್, ಯುನೈಟೆಡ್ ಅರಬ್ ಎಮಿರೇಟ್ಸ್, ಸೌದಿ ಅರೇಬಿಯಾ ಮತ್ತು ಕತಾರ್ ದೇಶಗಳಿಂದ ಹಾರ್ಮುಜ್ ಜಲಸಂಧಿಯ ಮೂಲಕ ಸಾಗುತ್ತದೆ.



ಮುಚ್ಚಲು ಇರಾನ್‌ಗೆ ಸಾಧ್ಯವೇ?

ಇರಾನ್ ಸೇನೆಯ ಇಸ್ಲಾಮಿಕ್ ರೆವೊಲ್ಯೂಷನರಿ ಗಾರ್ಡ್ ಕಾರ್ಪ್ಸ್(ಐಆರ್‌ಜಿಸಿ) ಹಾರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ಸಂಚಾರವನ್ನು ಸ್ಥಗಿತಗೊಳಿಸಿದೆ. ವಿಶ್ವದ ಅತಿ ದೊಡ್ಡ ಬಹುರಾಷ್ಟ್ರೀಯ ಹಡಗು ಸಾಗಣೆ ಮತ್ತು ಲಾಜಿಸ್ಟಿಕ್ಸ್ ಕಂಪನಿಯಾದ ಮೆರ್ಸ್ಕ್ ತನ್ನೆಲ್ಲ ನೌಕೆಗಳ ಸಂಚಾರವನ್ನು ರದ್ದುಗೊಳಿಸಿದೆ. ಈಗಾಗಲೇ ಈ ಪ್ರದೇಶದಲ್ಲಿ ಇರಾನ್ ತನ್ನ ಜಲಾಂತರ್ಗತ ಸ್ಫೋಟಕ ಸಾಧನ, ಯುದ್ಧ ನೌಕೆಗಳು, ಕ್ಷಿಪಣಿ ಹಾಗೂ ಡ್ರೋನ್‌ಗಳನ್ನು ಸಜ್ಜುಗೊಳಿಸಿವೆ.

ಪ್ರಮುಖ ಜಲಮಾರ್ಗ

ಪ್ರತಿ ತಿಂಗಳು ಸುಮಾರು 3000 ಹಡಗುಗಳು ಈ ಜಲಸಂಧಿಯ ಮೂಲಕ ಸಾಗುತ್ತದೆ. ವಿಶ್ವದ 20% ರಷ್ಟು ಕಚ್ಚಾ ತೈಲ ಹಾಗೂ 25% ರಷ್ಟು ದ್ರವೀಕೃತ ನೈಸರ್ಗಿಕ ತೈಲ ಹಾಗೂ 33% ಜಾಗತಿಕ ರಸಗೊಬ್ಬರ ವ್ಯಾಪಾರ ಈ ಜಲಸಂಧಿಯ ಮೂಲಕ ಸಾಗುತ್ತದೆ.

ಪರ್ಯಾಯವೇನು?

ಸೌದಿ ಅರೇಬಿಯಾದ ಅರಂಕೋ ಸೌದಿ ಅರೇಬಿಯಾ ತೈಲ ಕಂಪನಿ ತನ್ನ ಬೃಹತ್ ಪೈಪ್‌ಲೈನ್ ಮೂಲಕ ಗಲ್ಫ್‌ನಲ್ಲಿರುವ ತೈಲ ಹಾಗೂ ನೈಸರ್ಗಿಕ ಅನಿಲ ಉತ್ಪಾದನಾ ಪ್ರದೇಶಗಳನ್ನು ಸೌದಿ ಅರೇಬಿಯಾದ ಪಶ್ಚಿಮ ತೀರದ ಕೆಂಪು ಸಮುದ್ರ ತೀರದ ಬಂದರಿಗೆ ಸಂಪರ್ಕಿಸುತ್ತದೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನ ಹಾಬ್ಷಾನ್ ಫುಜೈರಾಹ್ ಪೈಪ್ ಲೈನ್ ತೈಲ ನಿಕ್ಷೇಪಗಳನ್ನು ಗಲ್ಫ್ ಆಫ್ ಒಮಾನ್‌ನ ತೈಲ ಸಂಗ್ರಹಣಾ ಕೇಂದ್ರಗಳಿಗೆ ಸಂಪರ್ಕಿಸುತ್ತದೆ. ಆದರೆ, ದ್ರವೀಕೃತ ನೈಸರ್ಗಿಕ ತೈಲಯಾವುದೇ ಪೈಪ್ ಲೈನ್ ಪರ್ಯಾಯವಿಲ್ಲ.

ಭಾರತದ ಮೇಲೆ ಏನು ಪರಿಣಾಮ?

ಭಾರತ ಆಮದು ಮಾಡಿಕೊಳ್ಳುವ ಶೇ.40 ತೈಲವು ಹಾರ್ಮುಜ್ ಜಲಸಂಧಿಯಿಂದ ಬರುತ್ತದೆ. ಸದ್ಯ ಈ ಜಲಮಾರ್ಗವನ್ನು ಇರಾನ್ ಮುಚ್ಚಿರುವುದರಿಂದ ತೈಲ ಕಂಪನಿಗಳು ಬೇರೆ ಮಾರ್ಗದಿಂದ ತೈಲವನ್ನು ಆಮದು ಮಾಡಿಕೊಳ್ಳಬೇಕಾಗಿದೆ, ಇದರಿಂದ ತೈಲ ಬೆಲೆಗಳು ಹೆಚ್ಚಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಇರಾನ್ ಗತಿ ಏನು?

ಹಾರ್ಮುಜ್ ಸಮುದ್ರ ಮಾರ್ಗವನ್ನು ಬಳಸಿಕೊಂಡು ಇರಾನ್ ಬೆದರಿಕೆ ಒಡ್ಡುತ್ತಿರುವುದು ನಿಜವಾದರೂ ಈ ತಂತ್ರಗಾರಿಕೆಯಿಂದ ಇರಾನ್ ಗೂ ಸಾಕಷ್ಟು ನಷ್ಟವಾಗುವ ಸಾಧ್ಯತೆಯಿದೆ. ಪಕ್ಕದ ಬಹರೇನ್‌ನಲ್ಲಿ ಇರಾನ್‌ನ ಯಾವುದೇ ಕುಚೇಷ್ಟೆಗೆ ಸರಿಯಾದ ಪ್ರತ್ಯುತ್ತರ ನೀಡಲು ಅಮೆರಿಕದ ಅತ್ಯಂತ ಬಲಿಷ್ಠ ಹಾಗೂ ಸುಸಜ್ಜಿತ ಫಿಫ್ತ್ ಅವೆನ್ಯೂ ಫ್ಲೀಟ್ ಸಜ್ಜಾಗಿದೆ. ಇರಾನ್‌ಗೆ ಹೋಲಿಸಿದಲ್ಲಿ ಅಮೆರಿಕದ ನೌಕಾಪಡೆ ಬಲಿಷ್ಠವಾಗಿದೆ. ಹಾರ್ಮುಜ್ ಜಲಸಂಧಿಯನ್ನು ಮುಚ್ಚಿದರೆ ಇರಾನ್‌ನ ಕಚ್ಚಾ ತೈಲದ ರಫ್ತಿಗೆ ಹೊಡೆತ ಬೀಳುತ್ತದೆ. ಇದು ಒಂದು ರೀತಿಯಾದ ಸೆಲ್ಫ್ ಗೋಲ್ ಆಗುತ್ತದೆ. ಪ್ರತಿ ದಿನ ಇರಾನ್ ಸುಮಾರು 1.65 ಮಿಲಿಯನ್ ಬ್ಯಾರೆಲ್ ನಷ್ಟುಕಚ್ಚಾ ತೈಲ ರಫ್ತು ಮಾಡುತ್ತದೆ. ಜಲಸಂಧಿಯನ್ನು ಪೂರ್ಣವಾಗಿ ಮುಚ್ಚುವುದು ಪ್ರಾಯೋಗಿಕವಾಗಿ ಅಸಾಧ್ಯವಾಗುತ್ತದೆ. ಹಾರ್ಮುಜ್ ಜಲಸಂಧಿಯಲ್ಲಿ ಹಡಗು ಸಂಚರಿಸುವ ಹಾದಿಯಲ್ಲಿ ಜಲಾಂತರ್ಗತ ಸ್ಫೋಟಕ ಸಾಧನಗಳನ್ನು ಇಡುವ ಮೂಲಕ ತನ್ನ ಜಲಪ್ರಭುತ್ವವನ್ನು ವಿಶ್ವಕ್ಕೆ ಪ್ರದರ್ಶಿಸಬಹುದು. ಹಾರ್ಮುಜ್ ಜಲಸಂಧಿಯನ್ನು ಬಂದ್ ಮಾಡುವ ಬೃಹನ್ನಾಟಕ ಇರಾನ್‌ಗೆ ಹೊಸದೇನಲ್ಲ. ಈ ತಂತ್ರಗಾರಿಕೆಯನ್ನು 1979 ನಿಂದ ಮಾಡಿಕೊಳ್ಳುತ್ತ ಬಂದಿದೆಯಾದರೂ ಇದರಲ್ಲಿ ಸಫಲವಾಗಿಲ್ಲ.

ಅಮೆರಿಕ ಯುದ್ಧ ವಿಮಾನ ಮೇಲೆ ಭಾರತಕ್ಕಿಲ್ಲ ವಿಶ್ವಾಸ

ಹೊಸದಿಲ್ಲಿ: ಪ್ರಸ್ತುತ ಇರಾನ್ ಮೇಲೆ ಅಮೆರಿಕದ ವೈಮಾನಿಕ ಪ್ರಾಬಲ್ಯ ಎಷ್ಟೇ ಪ್ರದರ್ಶಿತವಾಗುತ್ತಿದ್ದರೂ, ಭಾರತ ಅಮೆರಿಕದ ಯುದ್ಧ ವಿಮಾನಗಳನ್ನು ತಿರಸ್ಕರಿಸುವ ನೀತಿಯನ್ನು ದಶಕಗಳಿಂದಲೂ ಪಾಲಿಸಿಕೊಂಡು ಬಂದಿದೆ. ಸಾರಿಗೆ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳಿಗಾಗಿ ಅಮೆರಿಕಕ್ಕೆ ಕೋಟ್ಯಂತರ ಡಾಲರ್ ನೀಡಲಾಗಿದ್ದರೂ, ರಾಷ್ಟ್ರೀಯ ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳಲು ಮುಂಚೂಣಿಯ ಯುದ್ಧ ವಿಮಾನಗಳ ವಿಷಯದಲ್ಲಿ ಮಾತ್ರ ಕಟ್ಟುನಿಟ್ಟಾದ ಅಂತರ ಕಾಯ್ದುಕೊಳ್ಳಲಾಗಿದೆ.

ಭಾರತದ ಈ ಹಿಂದೇಟಿಗೆ ಶೀತಲ ಸಮರದ ಇತಿಹಾಸವೇ ಕಾರಣ ಎಂಬುದು ಕುತೂಹಲಕಾರಿ. ಅಂದು ವಾಷಿಂಗ್ಟನ್ ಪಾಕಿಸ್ತಾನಕ್ಕೆ ಎಫ್-16 ನಂತಹ ಸುಧಾರಿತ ವಿಮಾನಗಳನ್ನು ಪೂರೈಸಿತ್ತು, ಇವುಗಳನ್ನು ಭಾರತದ ವಿರುದ್ಧವೇ ಬಳಸಲಾಗಿತ್ತು. 1998ರಲ್ಲಿ ಭಾರತ ಅಣು ಪರೀಕ್ಷೆ ನಡೆಸಿದಾಗ ಅಮೆರಿಕ ವಿಧಿಸಿದ ನಿರ್ಬಂಧಗಳು ಮತ್ತು ತಂತ್ರಜ್ಞಾನದ ತಡೆ ಈ ಅಪನಂಬಿಕೆಯನ್ನು ಮತ್ತಷ್ಟು ಹೆಚ್ಚಿಸಿತು. ಯುದ್ಧದ ಸಮಯದಲ್ಲಿ ಅಮೆರಿಕವನ್ನು ನಂಬಲು ಸಾಧ್ಯವಿಲ್ಲ ಎಂಬ ಭಾವನೆ ಅಂದೇ ದೃಢವಾಗಿ ಬೇರೂರಿತು. ಹೀಗಾಗಿ ಭಾರತ ಪರ್ಯಾಯ ಹಾದಿಯನ್ನು ಆರಿಸಿಕೊಂಡಿತು. ಸೋವಿಯತ್ ಕಾಲದ ಮಿಗ್-21, ಮಿಗ್-23, ಮಿಗ್-29 ಮತ್ತು ಇಂದಿಗೂ ಭಾರತೀಯ ವಾಯುಪಡೆಯ ಬೆನ್ನೆಲುಬಾಗಿರುವ ಸುಖೋಯ್-30 ಎಂಕೆಐ ವಿಮಾನಗಳನ್ನು ಅಳವಡಿಸಿಕೊಂಡಿತು. ಇದರೊಂದಿಗೆ ಬ್ರಿಟಿಷ್-ಫ್ರೆಂಚ್ ಜಂಟಿ ತಯಾರಿಕೆಯ ಜಾಗ್ವಾರ್‌ಗಳು, ಫ್ರೆಂಚ್ ಮಿರಾಜ್ 2000ಗಳು ಮತ್ತು ಬ್ರಿಟಿಷ್ ಹಾಕರ್ ಹಂಟರ್ಸ್‌ಗಳನ್ನು ಬಳಸಿತು. ತಲೆಮಾರುಗಳಿಂದ ಭಾರತ ವಾಷಿಂಗ್ಟನ್‌ನ ಹಂಗಿಲ್ಲದ ವಾಯುಪಡೆಯನ್ನು ಅತ್ಯಂತ ಜಾಗರೂಕತೆಯಿಂದ ಮತ್ತು ವ್ಯವಸ್ಥಿತವಾಗಿ ಕಟ್ಟಿಕೊಂಡಿದೆ.



ಸ್ವತಂತ್ರ ನಿರ್ಧಾರದ ಹಂಬಲ

ಎಫ್/ಎ-18 ಸೂಪರ್ ಹಾರ್ನೆಟ್ ಅಥವಾ ಎಫ್-15ಇಎಕ್ಸ್‌ನಂತಹ ವಿಮಾನಗಳನ್ನು ನಿರಾಕರಿಸಲು ಯುದ್ಧದಲ್ಲಿ ಸ್ವಾಯತ್ತತೆ ಕಾಪಾಡಿಕೊಳ್ಳುವುದು ಮುಖ್ಯ ಕಾರಣ. ಅಮೆರಿಕದ ಯುದ್ಧ ವಿಮಾನಗಳನ್ನು ಖರೀದಿಸಿದರೆ ಬಿಡಿಭಾಗಗಳು, ಸಾಫ್ಟ್‌ವೇರ್ ಅಪ್‌ಗ್ರೇಡ್‌ಗಳು ಮತ್ತು ಅಮೆರಿಕದ ರಾಜಕೀಯ ತೀರ್ಮಾನಗಳ ಮೇಲೆ ಅವಲಂಬಿತವಾಗಬೇಕಾಗುತ್ತದೆ ಎಂಬ ಆತಂಕ ಭಾರತಕ್ಕಿದೆ. ಟರ್ಕಿ ಮತ್ತು ಪಾಕಿಸ್ತಾನದಂತಹ ಮಿತ್ರರಾಷ್ಟ್ರಗಳಿಗೂ ಬಿಡಿಭಾಗಗಳನ್ನು ನಿರಾಕರಿಸುವ ಮೂಲಕ ಅಮೆರಿಕ ಒತ್ತಡ ಹೇರಿದ ಉದಾಹರಣೆಗಳನ್ನು ನೋಡಿ ಭಾರತ ಎಚ್ಚೆತ್ತುಕೊಂಡಿದೆ.ಅಮೆರಿಕ ತನ್ನ ಅತ್ಯಂತ ಶ್ರೇಷ್ಠ ಎಫ್-35 ಸ್ಟೆಲ್ತ್ ಫೈಟರ್ ನೀಡಲು ಮುಂದಾಗಿದ್ದರೂ, ಭಾರತ ರಷ್ಯಾದ ಸು-57 ವಿಮಾನದತ್ತ ಒಲವು ತೋರುತ್ತಿದೆ. ಸಾರಿಗೆ ಮತ್ತು ಕಣ್ಗಾವಲು ವಿಮಾನಗಳಿಗಾಗಿ ಸಹಕಾರ ಮುಂದುವರಿಯುತ್ತದೆಯಾದರೂ, ಯುದ್ಧ ವಿಮಾನಗಳ ವಿಷಯದಲ್ಲಿ ತನ್ನ ಕೀಲಿಕೈಯನ್ನು ಯುಎಸ್ ಕೈಗೆ ನೀಡಲು ಹೊಸದಿಲ್ಲಿ ಸುತಾರಾಂ ಸಿದ್ಧವಿಲ್ಲ.

ಇರಾನ್ ಮುಂದಿನ ಪರಮೋಚ್ಚ ನಾಯಕ ಮೊಜ್ತಾಬಾ ಖಮೇನಿ?

ಅಯತೊಲ್ಲಾ ಅಲಿ ಖಮೇನಿ ಅವರ ಉತ್ತರಾಧಿಕಾರಿಯಾಗಿ ಹಾಗೂ ಇರಾನ್‌ನ ಮುಂದಿನ ಪರಮೋಚ್ಚ ನಾಯಕನಾಗಿ ಖಮೇನಿ ಅವರ ಪುತ್ರ ಮೊಜ್ತಾಬಾ ಹುಸೈನಿ ಖಮೇನಿ ಆಯ್ಕೆಯಾಗಿದ್ದು, ಇರಾನ್‌ನ ತಜ್ಞರ ಕೂಟ ಈ ಆಯ್ಕೆ ನಡೆಸಿದೆ ಎಂದು ಇಸ್ರೇಲಿ ಮಾಧ್ಯಮಗಳು ವರದಿ ಮಾಡಿವೆ. ಆದರೆ, ಈ ವರದಿಯನ್ನು ತಳ್ಳಿಹಾಕಿರುವ ಇರಾನ್ ಸರ್ಕಾರ, ಉತ್ತರಾಧಿಕಾರಿ ಆಯ್ಕೆ ಬಗ್ಗೆ ಮಾಧ್ಯಮ ವರದಿಗಳು ಅಧಿಕೃತ ಮೂಲಾಧಾರಿತವಲ್ಲ, ಇಂತಹ ಯಾವುದೇ ಬೆಳವಣಿಗೆ ನಡೆದಿಲ್ಲ ಎಂದು ಮುಂಬೈ ಎಕ್ಸ್ ಹ್ಯಾಂಡಲ್‌ನಲ್ಲಿ ಕಾನ್ಸುಲೇಟ್ ಜನರಲ್ ಮುಖೇನ ಸ್ಪಷ್ಟಪಡಿಸಿದೆ.

ಖಮೇನಿ ದಫನ ವಿಧಿ ದಿನಾಂಕ ಇನ್ನೂ ನಿರ್ಧಾರವಾಗಿಲ್ಲ

ಅಮೆರಿಕ-ಇಸ್ರೇಲ್ ದಾಳಿಯಲ್ಲಿ ಮೃತಪಟ್ಟಿದ್ದ ಸುಮಾರು 36 ವರ್ಷಗಳ ಕಾಲ ಇರಾನ್ ಆಳಿದ ಆಯತೊಲ್ಲಾ ಖಮೇನಿಅವರ ದಫನ ವಿಧಿ ಮಶಾದ್ ನಗರದಲ್ಲಿ ಖಮೇನಿ ನಡೆಯಲಿದೆ ಮತ್ತು ಟೆಹ್ರಾನ್‌ನಲ್ಲಿ ಬೃಹತ್‌ವಿದಾಯ ಸಮಾರಂಭ ಕೂಡ ನಡೆಸಲಾಗುವುದು ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ತಿಳಿಸಿದೆ. ಆದರೆ, ದಫನ ವಿಧಿ ದಿನಾಂಕ ನಿರ್ಧಾರವಾಗಿಲ್ಲ.

ಇರಾನ್‌ನ ಯಾವುದೇ ಹೊಸ ನಾಯಕರ ಹತ್ಯೆ: ಇಸ್ರೇಲ್

ಜೆರುಸಲೇಮ್: ಹತರಾದ ಆಯತೊಲ್ಲಾ ಅಲಿ ಖಮೇನಿ ನಂತರ ಅಧಿಕಾರಕ್ಕೆ ಬರುವ ಯಾವುದೇ ನಾಯಕ ಇಸ್ರೇಲ್ ವಿರುದ್ಧ ಹಗೆತನ ಮುಂದುವರಿಸಿದರೆ ಅವನನ್ನೂ ಹತ್ಯೆ ಮಾಡಲಾಗುವುದು ಎಂದು ಇಸ್ರೇಲ್ ಕಠಿಣ ಎಚ್ಚರಿಕೆ ನೀಡಿದೆ. ಇಸ್ರೇಲ್ ವಿನಾಶದ ಹಾದಿ ಹಿಡಿಯುವ ಯಾವುದೇ ನಾಯಕನ ಹೆಸರು ಅಥವಾ ಅಡಗುತಾಣ ನಮಗೆ ಮುಖ್ಯವಲ್ಲ, ಅವರು ನಮ್ಮ ಸ್ಪಷ್ಟ ಗುರಿ ಆಗಿರುತ್ತಾರೆ ಎಂದು ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಬುಧವಾರ ಘೋಷಿಸಿದ್ದಾರೆ.

ಪಾಕ್‌ನಿಂದ ಅಮೆರಿಕದ ಸಿಬ್ಬಂದಿ ವಾಪಸ್

ಇಸ್ಲಾಮಾಬಾದ್: ಪಾಕಿಸ್ತಾನದ ಕರಾಚಿ ಮತ್ತು ಲಾಹೋರ್‌ನಲ್ಲಿರುವ ತನ್ನ ರಾಯಭಾರ ಕಚೇರಿಗಳಿಂದ ತುರ್ತು ಅಲ್ಲದ ಸಿಬ್ಬಂದಿ ಮತ್ತು ಅವರ ಕುಟುಂಬ ಸದಸ್ಯರು ಕೂಡಲೇ ಹೊರಬರುವಂತೆ ಅಮೆರಿಕ ಆದೇಶಿಸಿದೆ. ಭದ್ರತಾ ಕಾರಣಗಳು ಹಾಗೂ ಇರಾನ್‌ನಿಂದ ಎದುರಾಗಬಹುದಾದ ಡ್ರೋನ್ ಮತ್ತು ಕ್ಷಿಪಣಿ ದಾಳಿ ಭೀತಿಯಿಂದಾಗಿ ಅಮೆರಿಕ ವಿದೇಶಾಂಗ ಇಲಾಖೆ ಬುಧವಾರ ಈ ನಿರ್ದೇಶನ ನೀಡಿದೆ.

ಇತ್ತೀಚೆಗೆ ಇರಾನ್ ಅಧ್ಯಕ್ಷ ಅಯತೊಲ್ಲಾ ಅಲಿ ಖಮೇನಿಯವರ ಹತ್ಯೆಯ ನಂತರ ರಾಜತಾಂತ್ರಿಕ ಕಚೇರಿಗಳ ಮೇಲೆ ನಡೆದ ಹಿಂಸಾತ್ಮಕ ಪ್ರತಿಭಟನೆಗಳ ಬೆನ್ನಲ್ಲೇ ಈ ನಿರ್ಧಾರ ಹೊರಬಿದ್ದಿದೆ.

ನೆತನ್ಯಾಹು, ಟ್ರಂಪ್ ಚಿತ್ರಕ್ಕೆ ಮುಫ್ತಿ ಬೆಂಕಿ



ಶ್ರೀನಗರ: ಪಿಡಿಪಿ ಅಧ್ಯಕ್ಷೆ ಮತ್ತು ಜಮ್ಮು-ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಬುಧವಾರ ಪ್ರತಿಭಟನೆ ನಡೆಸಿ, ಇರಾನ್ ವಿರುದ್ಧ ನಡೆಯುತ್ತಿರುವ ಯುಎಸ್-ಇಸ್ರೇಲಿ ಮಿಲಿಟರಿ ಕ್ರಮವನ್ನು ಮತ್ತು ದಾಳಿಯಲ್ಲಿ ಅದರ ಸರ್ವೋಚ್ಚ ನಾಯಕನ ಹತ್ಯೆಯನ್ನು ಖಂಡಿಸಿ ಬೆಂಜಮಿನ್ ನೆತನ್ಯಾಹು ಮತ್ತು ಡೊನಾಲ್ಡ್ ಟ್ರಂಪ್‌ನ ಪೋಸ್ಟರ್‌ಗಳನ್ನು ಸುಟ್ಟುಹಾಕಿದ್ದಾರೆ.ಅಮೆರಿಕ-ಇಸ್ರೇಲ್ ದಾಳಿಯಲ್ಲಿ ಖಮೇನಿಯ ಸಾವು ವರದಿಯಾದ ನಂತರ ಕಣಿವೆಯಲ್ಲಿ ವ್ಯಾಪಕ ಪ್ರತಿಭಟನೆಗಳ ನಡುವೆ ನಡೆದ ಈ ಪ್ರದರ್ಶನದಲ್ಲಿ, ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರು ಖಮೇನಿಯ ದೊಡ್ಡ ಭಿತ್ತಿಪತ್ರಗಳನ್ನು ಹೊತ್ತುಕೊಂಡು ಅಮೆರಿಕ ಮತ್ತು ಇಸ್ರೇಲ್ ವಿರೋಧಿ ಘೋಷಣೆಗಳನ್ನು ಕೂಗಿದರು. ಜಮ್ಮು-ಕಾಶ್ಮೀರದ ಕೆಲವೆಡೆ ಪ್ರತಿಭಟನೆಗಳು ಹರಡಿದ್ದರಿಂದ ಅಧಿಕಾರಿಗಳು ಶ್ರೀನಗರ ಮತ್ತು ಇತರೆಡೆಗಳಲ್ಲಿ ಭದ್ರತೆಯನ್ನು ಹೆಚ್ಚಿಸಿದ್ದಾರೆ.

ಬಣ್ಣದಲ್ಲಿ ಮಿಂದೆದ್ದ ಜನ | ಮಥುರಾದ ವೃಂದಾವನದಲ್ಲಿ ಸಾಂಪ್ರದಾಯಿಕ ಆಚರಣೆ ಸಂಪನ್ನ

ದೇಶಾದ್ಯಂತ ಹೋಳಿ ಹಬ್ಬದ ರಂಗಿನ ಸಂಭ್ರಮ

ಹೊಸದಿಲ್ಲಿ: ಕೆಡುಕಿನ ವಿರುದ್ಧ ಒಳಿತಿನ ವಿಜಯದ ದ್ಯೋತಕವಾಗಿ, ಪರಸ್ಪರ ರಂಗುರಂಗಿನ ಬಣ್ಣವೆರಚಿ, ಸಿಹಿ ಹಂಚಿ, ನವಿರಾದ ಸಂಗೀತ-ನಾಟ್ಯ, ವಿಶಿಷ್ಟ ಸಾಂಪ್ರ ದಾಯಿಕ ಕಾರ್ಯಕ್ರಮಗಳೊಂದಿಗೆ ದೇಶಾದ್ಯಂತ ಬುಧವಾರ ಹೋಳಿ ಹಬ್ಬವನ್ನು ಜನರು ರಂಗುರಂಗಾಗಿ ಆಚರಿಸಿದರು.

ಮಥುರಾದ ವೃಂದಾವನದಲ್ಲಿ ಧಾರ್ಮಿಕ ವಿಧಿವಿಧಾನಗಳು ಕಳೆಗಟ್ಟಿತ್ತಲ್ಲದೆ, ಭಕ್ತರು, ಸ್ಥಳೀಯರು ಹಬ್ಬವನ್ನು ಸಾಂಪ್ರದಾಯಿಕ ಮೆರುಗಿನೊಂದಿಗೆ ಆಚರಿಸಿದರು. ಬಂಕಿ ಬಿಹಾರಿ ದೇವಾಲಯದ ಹೊರಗಡೆ ಜನರು ಬಣ್ಣಗಳ ಹಬ್ಬವನ್ನು ಗೌಜಿಯಿಂದ ಆಚರಿಸಿದರು. ರಾಜಸ್ತಾನದಲ್ಲಿ ಧುಲಂದಿ ಸಮಾರಂಭದ ಗೌಜಿ, ದಿಲ್ಲಿಯಲ್ಲಿ ಆಪ್ ಪಕ್ಷ ಕಟ್ಟರ್ ಇಮಾಂದಾರ್ ಹೋಲಿ ಆಯೋಜಿಸಿತು. ಅಂತು ದೇಶಾದ್ಯಂತ ನಗರಗಳು, ಗ್ರಾಮೀಣ ಪ್ರದೇಶಗಳು ರಂಗು ರಂಗಿನ ಬಣ್ಣಗಳಲ್ಲಿ ಮಿಂದೆದ್ದಿದ್ದವು. ಸ್ಥಳೀಯರು ಹಾಗೂ ಭಕ್ತರು ಉತ್ಸವ ಸ್ಫೂರ್ತಿಯೊಂದಿಗೆ ಹೋಳಿ ಆಚರಿಸಿದರು.

ಮೋದಿ ಶುಭ ಹಾರೈಕೆ: ಹೋಳಿ ಶುಭ ಘಳಿಗೆಯಲ್ಲಿ ದೇಶವಾಸಿಗಳೆಲ್ಲರಿಗೂ ಹೃತ್ಪೂರ್ವಕ ಶುಭಾಶಯಗಳು. ಬಣ್ಣಗಳು ಮೇಳೈಸುವ ಹಾಗೂ ಉತ್ಸಾಹಭರಿತ ಈ ಉತ್ಸವವು ಪ್ರತಿಯೋರ್ವರಿಗೂ ತುಂಬು ಸಂತಸ -ನೆಮ್ಮದಿಯ ನೀಡುವಂತಾಗಲಿ ಎಂದು ಪ್ರಧಾನಿ ಮೋದಿ ಹಾರೈಸಿದ್ದಾರೆ.

ಚಪ್ಪಲ್ ಹೋಳಿ: ಬಳ್‌ಗಾಂವ್ ಗ್ರಾಮದಲ್ಲಿ ಹೋಳಿಹಬ್ಬಕ್ಕೆ ಚಪ್ಪಲ್ ಹೋಳಿ ಎಂದೇ ಹೆಸರು. ಬ್ರಿಟಿಷರ ದೌರ್ಜನ್ಯ ವಿರುದ್ಧ ಸಾಂಕೇತಿಕವಾಗಿ ಆಚರಿಸೋ ಚಪ್ಪಲ್ ಹೋಳಿಗೆ 150 ವರ್ಷಗಳ ಇತಿಹಾಸವಿದೆ. ಹಿರಿಯರು ಸ್ಲಿಪ್ಪರ್ ಧರಿಸಿ ಕಿರಿಯರನ್ನು ಮೆಟ್ಟುವ ಚೇಷ್ಟೆ ಮೆರೆಯುತ್ತಾರೆ.



ಗಡಿಯಲ್ಲಿ ಸೈನಿಕರಿಂದ ರಂಗಿನ ಹಬ್ಬ ಆಚರಣೆ

ಜಮ್ಮುವಿನಲ್ಲಿ ಭಾರತ-ಪಾಕ್ ಗಡಿಯಲ್ಲಿ ಸೇನೆ ಮತ್ತು ಅರೆ ಸೇನಾ ಪಡೆಗಳು ಅತ್ಯಂತ ಹರ್ಷೋಲ್ಲಾಸದಿಂದ ರಂಗಿನ ಹಬ್ಬ ಹೋಳಿ ಆಚರಿಸಿತು. ಜಮ್ಮು ನಗರದಲ್ಲಿ ಪ್ರಧಾನ ಕಾರ್ಯಕ್ರಮಗಳು ನಡೆದುವು. ಇಲ್ಲಿ ವಿವಿಧ ಸಮುದಾಯಗಳ ಜನರು ಸೌಹಾರ್ದತೆಯ ಸ್ಫೂರ್ತಿಯೊಂದಿಗೆ ಪರಸ್ಪರ ಶುಭಾಶಯ ವಿನಿಮಯ ಮಾಡಿದರು. ಎಲ್‌ಒಸಿ ಮತ್ತು ಅಂತಾರಾಷ್ಟ್ರೀಯ ಗಡಿಯುದ್ದಕ್ಕೂ ನಿಯೋಜಿತ ಸೇನೆ ಮತ್ತು ಬಿಎಸ್‌ಎಫ್ ಪಡೆಗಳು ಗಡಿ ನಿವಾಸಿಗಳು ಹಾಗೂ ಎನ್‌ಜಿಒಗಳ ಜತೆಗೂಡಿ ಹಬ್ಬ ಆಚರಿಸಿದರು.

ಗಡಿನುಸುಳುವಿಕೆ ಯತ್ನ ವಿಫಲಗೊಳಿಸಿದ ಸೇನೆ

ರಜೌರಿ: ವಾಸ್ತವಿಕ ಗಡಿ ನಿಯಂತ್ರಣ ರೇಖೆಯೊಳಗೆ(ಎಲ್‌ಒಸಿ) ನುಸುಳಲೆತ್ನಿಸಿದ ಭಯೋತ್ಪಾದಕರ ಯತ್ನವನ್ನು ಭಾರತೀಯ ಸೇನೆ ಬುಧವಾರ ವಿಫಲಗೊಳಿಸಿದೆ. ಶಂಕಿತ ಭಯೋತ್ಪಾದಕರು ಮುಂಜಾನೆ 4.30ರ ಸುಮಾರಿಗೆ ತುರ್ಕಂಡಿ ಪ್ರದೇಶದಲ್ಲಿ ನುಸುಳಲು ಯತ್ನಿಸಿದ್ದಾರೆ. ಇದನ್ನು ಗಮನಿಸಿದ ಸೇನೆ ಗುಂಡಿನ ದಾಳಿ ನಡೆಸಿದೆ. ನಿರ್ಣಾಯಕ ಬಲದಿಂದ ಪ್ರತಿಕ್ರಿಯಿಸಿದ ವೈಟ್ ನೈಟ್ ಕಾರ್ಪ್ಸ್ ಎಚ್ಚರಿಕೆಯ ಪಡೆಗಳು ಒಳನುಸುಳುವಿಕೆಯ ಪ್ರಯತ್ನವನ್ನು ವಿಫಲಗೊಳಿಸಿದವು.


ಇಂದು ನೇಪಾಳ ಚುನಾವಣೆ

ಹೊಸದಿಲ್ಲಿ: ನೇಪಾಳದ 275 ಸದಸ್ಯ ಬಲದ ಸಂಸತ್ತಿಗೆ ಗುರುವಾರ ಚುನಾವಣೆ ನಡೆಯಲಿದ್ದು,18.9 ಮಿಲಿಯನ್‌ಗೂ ಅಧಿಕ ಮತದಾರರು ಮತ ಚಲಾಯಿಸಲಿದ್ದಾರೆ. ಸಂಸತ್ತಿನ 165 ಸ್ಥಾನಗಳಿಗೆ 3,406 ಅಭ್ಯರ್ಥಿಗಳು ನೇರ ಮತದಾನ ಪದ್ಧತಿಯಲ್ಲಿ ಸ್ಪರ್ಧಾ ಕಣದಲ್ಲಿದ್ದು, 110 ಸ್ಥಾನಗಳಿಗೆ ಅನುಪಾತದ ಪ್ರಾತಿ ನಿಧ್ಯದಲ್ಲಿ 3,135 ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ಕಠ್ಮಂಡುವಿನ ದರ್ಬಾರ್ ಸ್ಕ್ವಾರ್‌ನಲ್ಲಿ ಚುನಾವಣೆ ನಡೆಯಲಿದ್ದು, ಮತದಾನ ಕೇಂದ್ರದಲ್ಲಿ ಸಕಲ ಸಿದ್ಧತೆಗಳು ಭರದಿಂದ ಸಾಗಿವೆ. ಮತದಾನ ಕೇಂದ್ರದ ಸುತ್ತಮುತ್ತ ಭದ್ರತಾ ಸಿಬ್ಬಂದಿ ಬಿಗು ಪಹರೆ ಹಾಕಲಾಗಿದೆ.

ಅಫ್ಘಾನಿಸ್ತಾನದ ಬಾಗ್ರಾಮ್ ವಾಯುನೆಲೆಗೆ ಪಾಕ್ ದಾಳಿ

ಇಸ್ಲಾಮಾಬಾದ್: ಅಫ್ಘಾನಿಸ್ತಾನದ ಪ್ರಸಿದ್ಧ ಬಾಗ್ರಾಮ್ ವಾಯುನೆಲೆಯ ಮೇಲೆ ಪಾಕಿಸ್ತಾನ ಭಾರಿ ವೈಮಾನಿಕ ದಾಳಿ ನಡೆಸಿದ್ದು, ಈ ಮೂಲಕ ಆಪರೇಷನ್ ರೈಟಿಯಸ್ ಫ್ಯೂರಿ" ಕಾರ್ಯಾಚರಣೆಯನ್ನು ತೀವ್ರಗೊಳಿಸಿದೆ.

ಈ ದಾಳಿಯಲ್ಲಿ ಒಂದು ವಿಮಾನ ನಿಲ್ದಾಣದ ಹ್ಯಾಂಗರ್ ಮತ್ತು ಎರಡು ಗೋದಾಮುಗಳು ಧ್ವಂಸವಾಗಿರುವುದನ್ನು ಉಪಗ್ರಹ ಚಿತ್ರಗಳು ಖಚಿತಪಡಿಸಿವೆ. ಕಳೆದ ಒಂದು ವಾರದಲ್ಲಿ ಅಫ್ಘಾನಿಸ್ತಾನದ ವಿವಿಧ ಮಿಲಿಟರಿ ನೆಲೆಗಳ ಮೇಲೆ ಪಾಕಿಸ್ತಾನ ನಡೆಸಿದ 50ಕ್ಕೂ ಹೆಚ್ಚು ವೈಮಾನಿಕ ದಾಳಿಗಳ ಸರಣಿಯಲ್ಲಿ ಇದು ಪ್ರಮುಖವಾದುದು ಎನ್ನಲಾಗಿದೆ.



ಗಡಿಭಾಗದ 53 ಸ್ಥಳಗಳಲ್ಲಿ ಅಫ್ಘಾನ್ ತಾಲಿಬಾನ್ ನಡೆಸಿದ ಆಕ್ರಮಣಕ್ಕೆ ಪ್ರತಿಯಾಗಿ ಈ ಕಾರ್ಯಾಚರಣೆ ಆರಂಭಿಸಲಾಗಿದ್ದು, ಅಫ್ಘಾನಿಸ್ತಾನದ ಯಾವುದೇ ಭಾಗದಲ್ಲೂ ಸೇನಾ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ತನಗಿದೆ, ಎಂಬ ಸ್ಪಷ್ಟ ಸಂದೇಶವನ್ನು ಬಾಗ್ರಾಮ್ ದಾಳಿಯ ಮೂಲಕ ನೀಡಲಾಗಿದೆ ಎಂದು ಪಾಕಿಸ್ತಾನದ ರಕ್ಷಣಾ ತಜ್ಞರು ತಿಳಿಸಿದ್ದಾರೆ. ತನ್ನ ನೆಲದಲ್ಲಿನ ಭಯೋತ್ಪಾದನೆಯನ್ನು ತಡೆಯುವಲ್ಲಿ ತಾಲಿಬಾನ್ ವಿಫಲವಾಗಿದೆ ಎಂದು ಇಸ್ಲಾಮಾಬಾದ್ ಪ್ರತಿಪಾದಿಸಿದೆ.

ಕಿರುಸುದ್ದಿ

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ : ಮಾ.7ರಂದು 7ನೇ ವರ್ಷದ ವಾರ್ಷಿಕೋತ್ಸವ

ಮಂಗಳೂರು: ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಮಂಗಳೂರು ಇದರ ಪಳ್ಳಿ ನಿಂಜೂರು ಘಟಕದ 7ನೇ ವರ್ಷದ ವಾರ್ಷಿಕೋತ್ಸವ ಹಾಗೂ ಯಕ್ಷ ಮಿತ್ರರು ಪಳ್ಳಿ ನಿಂಜೂರು ಇದರ 9ನೇ ವರ್ಷದ ಯಕ್ಷೋತ್ಸವ ಕಾರ್ಯಕ್ರಮ ಮಾ.7ರಂದು ಕಾರ್ಕಳ ತಾಲೂಕಿನ ಪಳ್ಳಿ ರಾಮಕೃಷ್ಣ ಸಭಾಭವನದಲ್ಲಿ ಯೋಜಿಸಲಾಗಿದೆ. ಅಂದು ಸಂಜೆ 6 ಗಂಟೆಗೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದ್ದು, ಬಹುಮೇಳಗಳ ವ್ಯವಸ್ಥಾಪಕ ಪಳ್ಳಿ ಕಿಶನ್ ಹೆಗ್ಡೆ ಉದ್ಘಾಟನೆ ನೆರವೇರಿಸಲಿದ್ದಾರೆ. ಟ್ರಸ್ಟ್‌ನ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪಳ್ಳಿ ಗ್ರಾ.ಪಂ.ಅಧ್ಯಕ್ಷೆ ಉಷಾ ಯು. ಅಂಚನ್, ಮುನಿಯಾಲು ಉದಯಕೃಷ್ಣ ಚಾರಿಟೆಬಲ್ ಟ್ರಸ್ಟ್‌ನ ಉದಯ ಕುಮಾರ್ ಶೆಟ್ಟಿ ಮುನಿಯಾಲು, ಪಟ್ಲ ಫೌಂಡೇಶನ್ ಟ್ರಸ್ಟ್‌ನ ಪ್ರಧಾನ ಸಂಚಾಲಕ ಶಶಿಧರ ಶೆಟ್ಟಿ ಬರೋಡಾ, ಪ್ರಮುಖರಾದ ಡಾ.ರವೀಂದ್ರ ಶೆಟ್ಟಿ ಬಜಗೋಳಿ, ಗಣೇಶ್ ಶೆಟ್ಟಿ ಇರ್ವತ್ತೂರು, ವಿಜಯೇಂದ್ರ ಶೆಟ್ಟಿ, ವಿಜಯ ಶೆಟ್ಟಿ, ಜಗದೀಶ ಶೆಟ್ಟಿ, ಸಾಯಿನಾಥ್ ಶೆಟ್ಟಿ, ಮನೋಹರ್ ಶೆಟ್ಟಿ, ಶರತ್ ಶೆಟ್ಟಿ, ಪ್ರಶಾಂತ್ ಕುಮಾರ್ ಶೆಟ್ಟಿ, ಚಂದ್ರಶೇಖರ್ ಶೆಟ್ಟಿ, ನವೀನ್ ಶೆಟ್ಟಿ ನಿಂಜೂರು, ಅರುಣ್ ಕುಮಾರ್ ನಿಟ್ಟೆ, ಸುಮಿತ್ ಶೆಟ್ಟಿ ಕೌಡೂರು, ರತ್ನಾಕರ ಅಮೀನ್ ಮತ್ತಿತರು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಮಾ.7 ಕ್ಕೆ ಮಂಗಳೂರು ವಿವಿಯಲ್ಲಿ ಯಕ್ಷಮಂಗಳ ಪ್ರಶಸ್ತಿ ಪ್ರದಾನ ಸಮಾರಂಭ

ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ 2025-26ನೇ ಸಾಲಿನ ಯಕ್ಷಮಂಗಳ ಪ್ರಶಸ್ತಿ ಪ್ರದಾನ ಸಮಾರಂಭವು ಮಾ.7 ರಂದು ಬೆಳಿಗ್ಗೆ 11 ಕ್ಕೆ ಮಂಗಳೂರು ವಿವಿಯ ಯು.ಆರ್.ರಾವ್ ಸಭಾಂಗಣ (ಹಳೆಸೆನೆಟ್ ಹಾಲ್) ನಡೆಯಲಿದೆ. ಯಕ್ಷಗಾನ ಅಧ್ಯಯನ ಕೇಂದ್ರದ ಪ್ರಾಯೋಜಕರಾಗಿರುವ ಡಾ.ದಯಾನಂದ ಪೈ ಅವರು ಯಕ್ಷಗಾನ ರಂಗದ ಹಿರಿಯ ಕಲಾವಿದ ಕಪ್ಪೆಕೆರೆ ಸುಬ್ರಾಯ ಭಾಗವತ, ಯಕ್ಷಗಾನ ಗುರುಗಳಾದ ಮಾಂಬಾಡಿ ಸುಬ್ರಹ್ಮಣ್ಯ ಭಟ್, ಹಿರಿಯ ಯಕ್ಷಗಾನ ಅರ್ಥಧಾರಿ ಜಬ್ಬಾರ್ ಸಮೋ ಅವರಿಗೆ ಯಕ್ಷಮಂಗಳ ಪ್ರಶಸ್ತಿ ಹಾಗೂ ಅಗರಿ ಮಾರ್ಗ ಬಲಿಪ ಮಾರ್ಗ ಕೃತಿಯ ಲೇಖಕರಾದ ಕೃಷ್ಣಪ್ರಕಾಶ್ ಉಳಿತ್ತಾಯ ಅವರಿಗೆ ಯಕ್ಷಮಂಗಳ ಕೃತಿ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿಎಲ್.ಧರ್ಮ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಹಾವೇರಿ ಜಾನಪದ ವಿವಿ ವಿಶ್ರಾಂತ ಕುಲಪತಿಗಳಾದ ಪ್ರೊ.ಚಿನ್ನಪ್ಪ ಗೌಡ ಅವರು ಪ್ರಶಸ್ತಿ ಪುರಸ್ಕೃತರ ಬಗ್ಗೆ ಅಭಿನಂದನಾ ಭಾಷಣ ಮಾಡಲಿದ್ದಾರೆ. ಕುಲಸಚಿವರಾದ ಪ್ರೊ.ಗಣೇಶ್ ಸಂಜೀವ್ ಉಪಸ್ಥಿತರಿರಲಿದ್ದಾರೆ.

ಗೌರವಾಭಿನಂದನೆ: ಇದೇ ಸಂದರ್ಭದಲ್ಲಿ ಮಂಗಳೂರು ವಿವಿಯ ಡಾ.ದಯಾನಂದ ಪೈ ಮತ್ತು ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರಕ್ಕೆ ಹೆಚ್ಚುವರಿಯಾಗಿ ಒಂದು ಕೋಟಿ ಅನುದಾನವನ್ನು ನೀಡುತ್ತಿರುವ ಡಾ. ದಯಾನಂದ ಪೈ ಅವರಿಗೆ ಗೌರವಾಭಿನಂದನೆ ಸಲ್ಲಿಸಲಾಗುವುದು ಎಂದು ಕೇಂದ್ರದ ನಿರ್ದೇಶಕರಾದ ಡಾ.ಧನಂಜಯ ಕುಂಬ್ಳೆ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.


ರಾಷ್ಟ್ರೀಯ ವಾಲಿಬಾಲ್ ಪಂದ್ಯಾಟಕ್ಕೆ ವಿಪುಲ್ ರೈ ಬೂಡು ಆಯ್ಕೆ

ಸುಳ್ಯ: ಒಡಿಸ್ಸಾದಲ್ಲಿ ಮಾರ್ಚ್ ತಿಂಗಳಿನಲ್ಲಿ ನಡೆಯಲಿರುವ 26ರ ವಿಭಾಗದ ಯೂತ್ ನ್ಯಾಷನಲ್ ವಾಲಿಬಾಲ್ ಚಾಂಪಿಯನ್ ಶಿಪ್ ಪಂದ್ಯಾ ಕೂಟಕ್ಕೆ ಕರ್ನಾಟಕ ರಾಜ್ಯ ತಂಡಕ್ಕೆ ಸುಳ್ಯದ ಯುವಕ ವಿಪುಲ್ ರೈ ಬೂಡು ಆಯ್ಕೆಯಾಗಿದ್ದಾರೆ. ಅವರಿಗೆ ರಾಷ್ಟ್ರೀಯ ವಾಲಿಬಾಲ್ ಆಟಗಾರರಾದ ಗಣೇಶ್ ರೈ ಮುಂಡಾಸು ಮತ್ತು ಎನ್. ಜಯಪ್ರಕಾಶ್ ರೈ ಸುಳ್ಯ ಮಾರ್ಗದರ್ಶನ ನೀಡುತ್ತಿದ್ದಾರೆ. ವಿಪುಲ್ ಸುಳ್ಯ ನಗರ ಪಂಚಾಯತ್ ಉದ್ಯೋಗಿ ಸುಧಾಕರ ರೈ ಮತ್ತು ರಾಧಿಕಾ ಎಸ್. ರೈ ದಂಪತಿಯ ಪುತ್ರ. ಪ್ರಸ್ತುತ ಬೆಳಗಾಂನಲ್ಲಿ ಬಿ.ಕಾಂ. ಪದವಿ ವ್ಯಾಸಂಗ ಮಾಡುತ್ತಿದ್ದಾರೆ.



ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನ

ಕುಂದಾಪುರ: 10 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಪ್ರಕರಣದ ಆರೋಪಿ ಸಿದ್ದಾಪುರ ಗ್ರಾಮದ ಅಕ್ಕುಂಜೆ ನಿವಾಸಿ ಶಶಿಕಾಂತ್ ಶೆಟ್ಟಿ (44) ಎಂಬಾತನನ್ನು ಠಾಣೆಯ ಎಎಸ್ಐ ಶಂಕರ್ ಎಸ್. ಹಾಗೂ ಹೆಡ್‌ಕಾನ್‌ಸ್ಟೇಬಲ್ ಅಶೋಕ್ ಶೆಟ್ಟಿ ಅವರು ಪಶ್ಚಿಮ ಬಂಗಾಲದ ಮುರ್ಷಿದಾಬಾದ್ ಜಿಲ್ಲೆಯ ಬಸಿನಾಥಪುರ ಎಂಬಲ್ಲಿ ಪತ್ತೆ ಮಾಡಿ ಬಂಧಿಸಿ, ಕುಂದಾಪುರದ ಎ.ಸಿ.ಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ನ್ಯಾಯಾಧೀಶರು ನ್ಯಾಯಾಂಗ ಬಂಧನ ವಿಧಿಸಿದ್ದಾರೆ.





ಉಜಿರೆಯ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಪ್ರಯುಕ್ತ ನೂತನವಾಗಿ ನಿರ್ಮಾಣಗೊಂಡ ವಿಜಯಗೋಪುರ ಉದ್ಘಾಟನೆಯ ಮೊದಲು ಸಚ್ಚಿದಾನಂದ ಸ್ವಾಮೀಜಿಗಳನ್ನು ಹಾಗೂ ಡಾ. ವೀರೇಂದ್ರ ಹೆಗ್ಗಡೆಯವರನ್ನು ರಥದಲ್ಲಿ ಕುಳ್ಳಿರಿಸಿ ಮೆರವಣಿಗೆಯಲ್ಲಿ ಕರೆತರಲಾಯಿತು

ಉಸ್ತುವಾರಿ ಸಚಿವರಿಂದ ಜೀವನದಿ ನೇತ್ರಾವತಿಗೆ ಬಾಗಿನ ಸಮರ್ಪಣೆ



ಬಂಟ್ವಾಳ: ಮುಂದಿನ 4 ತಿಂಗಳವರೆಗೆ ನೀರಿನ ಶೇಖರಣೆಯನ್ನು ಕಾಯ್ದುಕೊಳ್ಳುವುದರ ಜೊತೆಗೆ ಮಂಗಳೂರು ನಗರಕ್ಕೆ ನೀರಿನ ಕೊರತೆಯಾಗದಂತೆ ನೋಡಿಕೊಳ್ಳುವುದು ಅತೀ ಅವಶ್ಯಕ. ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡುವುದರ ಜೊತೆಗೆ ಮತ್ತೊಮ್ಮೆ ಸಭೆ ನಡೆಸಿ ಚರ್ಚಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ತುಂಬೆ ವೆಂಟೆಡ್ ಡ್ಯಾಂನಲ್ಲಿ ಬುಧವಾರ ನೇತ್ರಾವತಿ ನದಿಗೆ ಬಾಗಿನ ಅರ್ಪಿಸಿ, ಬಳಿಕ ಗಂಗಾಪೂಜೆಯಲ್ಲಿ ಭಾಗವಹಿಸಿ ಅವರ ಮಾತನಾಡಿದರು.

ಈ ವರ್ಷ ಬೇಸಿಗೆ ಅವಧಿ ಹೆಚ್ಚಾಗಿ, ಮಳೆ ತಡವಾಗುವ ಸಾಧ್ಯತೆಯಿರುವುದರಿಂದ ಜೂನ್ ತಿಂಗಳವರೆಗೆ ನೀರಿನ ಲಭ್ಯತೆಯನ್ನು ಕಾಯ್ದಿರಿಸುವುದು ಅತೀ ಮುಖ್ಯವಾಗಿದೆ ಎಂದ ಅವರು

ಪ್ರಸ್ತುತ ತುಂಬೆ ವೆಂಟೆಡ್ ಡ್ಯಾಂ ಮತ್ತು ಎಎಂಆರ್ ಡ್ಯಾಂನಲ್ಲಿ ಸಾಕಷ್ಟು ನೀರಿನ ಸಂಗ್ರಹಣೆಯಿದೆ. ಈ ವರ್ಷ ನೀರಿನ ಹಾಹಾಕಾರ ಬಾರದಿರಲಿ ಎಂದು ಗಂಗಾದೇವಿಗೆ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಲಾಗಿದೆ ಎಂದು ತಿಳಿಸಿದರು.

"ಜಲಸಿರಿ" ಯೋಜನೆಯಡಿ ಮಂಗಳೂರು ನಗರಕ್ಕೆ 24X7 ನೀರು ಸರಬರಾಜು ವ್ಯವಸ್ಥೆಯ ವಿತರಣಾ ಜಾಲದ ಬಲಪಡಿಸುವಿಕೆ ಮತ್ತು 8 ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡ ಕಾಮಗಾರಿ" ಯನ್ನು ಅನುಷ್ಠಾನಗೊಳಿಸಲಾಗಿದ್ದು, ಯೋಜನೆಯು ಪೂರ್ಣಗೊಂಡ ನಂತರ ನಗರದ ಎಲ್ಲಾ ಜನತೆಗೆ ನಿರಂತರವಾಗಿ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭ ವಿಧಾನಪರಿಷತ್ ಸದಸ್ಯರಾದ ಐವನ್ ಡಿಸೋಜಾ, ಮೆಸ್ಕಾಂ ನಿಗಮದ ಅಧ್ಯಕ್ಷ ಹರೀಶ್ ಕುಮಾರ್, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ.,ಮಾಜಿ ಸಚಿವ ಬಿ.ರಮಾನಾಥ ರೈ, ಮನಪಾ ಉಪ ಆಯುಕ್ತ ನರೇಶ್ ಶೆಣೈ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ, ಮಾಜಿ ಕಾರ್ಪೋರೇಟರ್‌ಗಳಾದ ಪ್ರವೀಣ್ ಚಂದ್ರ, ಅನಿಲ್ ಕುಮಾರ್, ವಿನಯ್ ರಾಜ್, ಸಹಾಯಕ ಎಂಜಿನಿಯರ್ ಅಶ್ವಿನ್ ಎಸ್. ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪುನೀತ್ ಮೊದಲಾದವರು ಭಾಗವಹಿಸಿದ್ದರು. ಮನಪಾ ಆಯುಕ್ತರಾದ ರವಿಚಂದ್ರ ನಾಯ್ಕ್ ಸ್ವಾಗತಿಸಿ, ವಂದಿಸಿದರು.



ಕರಾವಳಿ ಜಿಲ್ಲೆಗಳಲ್ಲಿ ದಿನದಿಂದ ದಿನಕ್ಕೆ ಏರಿಕೆ ಕಾಣುತ್ತಿರುವ ತಾಪಮಾನ ಜನತೆಯ ಬೆವರಿಳಿಸುತ್ತಿದೆ. ಉರಿಬಿಸಿಲಿನ ವಾತಾವರಣ ಜಲಮೂಲಗಳಿಗೂ ಬಲವಾದ ಪೆಟ್ಟು ನೀಡುತ್ತಿದ್ದು, ಮಂಗಳೂರು ನಗರದ ಬಹುತೇಕ ಕಡೆಗಳಲ್ಲಿ ಈಗಾಗಲೇ ನೀರಿನ ಸಮಸ್ಯೆ ಎದುರಾಗಲಾರಂಭಿಸಿದೆ. ಮಾರ್ಚ್ ಮೊದಲ ವಾರವೇ ಹೀಗಾದರೆ ಇನ್ನು ಎಪ್ರಿಲ್-ಮೇ ತಿಂಗಳಲ್ಲಿ ಮಂಗಳೂರು ನಗರದ ಸ್ಥಿತಿ ಹೇಗಿರಬಹುದು? ಇದು ನಗರದ ಜನತೆಯನ್ನು ಕಾಡುತ್ತಿರುವ ಪ್ರಶ್ನೆಯಾಗಿದೆ. ಮಂಗಳೂರು ಮಹಾನಗರ ಪಾಲಿಕೆ ಒಟ್ಟು 60 ವಾರ್ಡ್‌ಗಳನ್ನು ಹೊಂದಿದ್ದು, ಈ ವಾರ್ಡ್‌ಗಳ ಸ್ಥಿತಿ ಹೇಗಿದೆ? ಯಾವೆಲ್ಲಾ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿವೆ ಎಂಬುದನ್ನು ಹೊಸ ದಿಗಂತ 'ವಾಟರ್ ಚೆಕ್' ಮೂಲಕ ವಾರ್ಡ್‌ಗಳ ಸ್ಥಿತಿಗತಿಗಳನ್ನು ತೆರೆದಿಡುವ ಪ್ರಯತ್ನ ಮಾಡಲಿದೆ.

ಏರಿಕೆ ಕಾಣುತ್ತಿದೆ ತಾಪಮಾನ | ಬತ್ತುತ್ತಿವೆ ಜಲಮೂಲಗಳು

ಮಂಗಳೂರು ಜನತೆಗೆ ಕುಡಿಯುವ ನೀರಿನದ್ದೇ ತಲೆಬಿಸಿ

ಮಂಗಳೂರು: ಅಬ್ಬಾ ಎಂತಾ ಸೆಖೆ!.

ಇದು, ದಕ್ಷಿಣ ಕನ್ನಡ ಸೇರಿದಂತೆ ಕರಾವಳಿ ಜನತೆಯ ಬಾಯಲ್ಲಿ ಬರುವ ನಿತ್ಯದ ಮಾತು. ದಿನ ಬೆಳಗಾಗುತ್ತಿದ್ದಂತೆ ಉರಿಬಿಸಿಲಿನ ವಾತಾವರಣದಿಂದಾಗಿ ಜನತೆ ತತ್ತರಿಸುವಂತಾಗಿದೆ. ಹೆಚ್ಚುತ್ತಿರುವ ಗಗನಚುಂಬಿ ಕಟ್ಟಡಗಳು ಮತ್ತು ಕಾಂಕ್ರಿಟ್ ರಸ್ತೆಗಳಿಂದಲೇ ತುಂಬಿರುವ ಮಂಗಳೂರು ನಗರವಂತೂ ಸೆಖೆಯಲ್ಲಿ ಬೇಯುತ್ತಿದೆ. ಏರುತ್ತಿರುವ ತಾಪಮಾನದಿಂದಾಗಿ ಅಲ್ಲಲ್ಲಿ ಕುಡಿಯುವ ನೀರಿನ ಸಮಸ್ಯೆಯೂ ಶುರುವಾಗಿದೆ. ಜಿಲ್ಲೆಯ ಜೀವನದಿಗಳಲ್ಲಿ ನೀರಿನ ಹರಿವು ಕಡಿಮೆಯಾಗುತ್ತಿದೆ. ನೇತ್ರಾವತಿ, ಕುಮಾರಧಾರಾ, ಫಲ್ಗುಣಿ ನದಿಗಳಲ್ಲಿ ನೀರಿನ ಹರಿವು ಕಡಿಮೆಯಾಗಿದ್ದು, ತೋಟಗಳಿಗೆ ನೀರಿಲ್ಲದೆ ಕೃಷಿಕರು ಕೂಡ ಕಂಗಾಲಾಗಿದ್ದಾರೆ. ಮಂಗಳೂರು ನಗರಕ್ಕೆ ನೀರು ಪೂರೈಸುವ ತುಂಬೆ ಅಣೆಕಟ್ಟಿನಲ್ಲೂ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ.

ಇದರಿಂದ ನಗರದ ಬಹುತೇಕ ವಾರ್ಡ್‌ಗಳಲ್ಲಿ ಈಗಲೇ ನೀರಿನ ಸಮಸ್ಯೆ ಕಾಡಲಾರಂಭಿಸಿದೆ. ಜನತೆ ವಾಹನ ಶುಚಿಗೊಳಿಸುವುದು ಸೇರಿದಂತೆ ಅನಗತ್ಯವಾಗಿ ಕುಡಿಯುವ ನೀರನ್ನು ಪೋಲು ಮಾಡಿದರೆ ಮತ್ತಷ್ಟು ಸಂಕಷ್ಟಕ್ಕೆ ತಲುಪುವ ಅಪಾಯ ಎದೆ. ಆದ್ದರಿಂದ ಕುಡಿಯುವ ನೀರಿಗಾಗಿ ಈಗಲೇ ಮುಂಜಾಗ್ರತೆ ವಹಿಸಬೇಕಿದೆ.

ನಗರದಲ್ಲಿ ಎಲ್ಲೆಲ್ಲಿ ಇದೆ ನೀರಿನ ಸಮಸ್ಯೆ:

ಮಂಗಳೂರು ನಗರದ ಹಂಪನಕಟ್ಟೆ, ರಥಬೀದಿ, ಬೋಳೂರು, ಬಜಾಲ್, ಮಂಜಲಕಟ್ಟೆ ಕೊಟ್ಟಾರ, ಅಮೃತನಗರ, ಪಾಂಡೇಶ್ವರ, ಗೂಡ್ ಶೆಡ್, ಮಾರುಕಟ್ಟೆ ರಸ್ತೆ ಬಂದರು, ಸುರತ್ಕಲ್, ಕಾನ, ಕಾಟಿಪಳ್ಳ ಸಹಿತ ಸೇರಿದಂತೆ ಹಲವು ಕಡೆಗಳಲ್ಲಿ ಫೆಬ್ರವರಿ ಅಂತ್ಯದ ವೇಳೆಗಾಗಲೇ ನೀರಿನ ಸಮಸ್ಯೆ ಕಾಡಿದೆ.

ಪಚ್ಚನಾಡಿ, ಹಂಪನಕಟ್ಟೆ, ಬಂದರು, ಪಾಂಡೇಶ್ವರ ಸೇರಿದಂತೆ ಹಲವು ವಾರ್ಡ್‌ಗಳಲ್ಲಿ ಈಗಲೇ ಎರಡು ದಿನಗಳಿಗೊಮ್ಮೆ ನೀರು ಪೂರೈಕೆಯಾಗುತ್ತಿದೆ ಎಂಬ ದೂರುಗಳು ಕೇಳಿಬರುತ್ತಿವೆ. ಊರ್ವ ಹಾಗೂ ಆಶೋಕನಗರ, ದಂಬೆಲ್ ಪ್ರದೇಶದ ಕೆಲವು ಮನೆಗಳಿಗೆ ಕಡಿಮೆ ಪ್ರೆಶರ್‌ನಲ್ಲಿ ನೀರು ಬರುತ್ತಿದೆ. ನಗರದ ಹಲವು ಮನೆಗಳ ಮೇಲ್ಭಾಗದಲ್ಲಿರುವ ಟ್ಯಾಂಕ್‌ಗಳಿಗೆ ನೀರು ತಲುಪುತ್ತಿಲ್ಲ. ನೀರಿನ ಪ್ರೆಶರ್ ಕಡಿಮೆ ಇರುವ ಕಾರಣ ಬೋಳೂರು, ಪಚ್ಚನಾಡಿ, ಸುರತ್ಕಲ್, ಕಾಟಿಪಳ್ಳ ಮತ್ತಿತರ ಕಡೆಗಳಲ್ಲಿ ಮನೆ ಮೇಲಿರುವ ಟ್ಯಾಂಕ್‌ಗಳಿಗೆ ನೀರು ಸರಬರಾಜಾಗುತ್ತಿಲ್ಲ.

ನಗರದ ಬೋಳೂರು, ಬಂದರು ಟೌನ್ ಕಂಪೌಂಡ್, ಬಸ್ತಿ ಗಾರ್ಡನ್, ಗೌರಿ ಮಠ, ಟಿಟಿ ರಸ್ತೆ ಸೇರಿದಂತೆ ಹಲವು ಪ್ರದೇಶಗಳು ಡೆಡ್ ಎಂಡ್ ಆಗಿರುವ ಕಾರಣ ಮಳೆಗಾಲದಿಂದಲೂ ಸಮಸ್ಯೆ ಕಾಡುತ್ತಲೇ ಇದೆ. ಇಲ್ಲಿಗೆ ನಿರಂತರವಾಗಿ ನೀರು ಪೂರೈಕೆ ಆಗುವುದೇ ಇಲ್ಲ ಎಂದು ಊರವರ ಅಳಲು.

ಹೀಗೆ ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯ ಪ್ರತಿ ವಾರ್ಡ್‌ನಲ್ಲೂ ಒಂದೊಂದು ಸಮಸ್ಯೆ ಇದೆ. ಬಹುತೇಕ ವಾರ್ಡ್‌ಗಳಲ್ಲಿ ಕುಡಿಯುವ ನೀರಿನದ್ದೇ ಸಮಸ್ಯೆ ಕಂಡುಬರುತ್ತಿರುವುದಾಗಿ ಅಲ್ಲಿನ ನಿವಾಸಿಗಳು ಸಮಸ್ಯೆಯನ್ನು ಮುಂದಿಡುತ್ತಾರೆ.

ನಾಳೆ ವಾರ್ಡ್ 1-ಸುರತ್ಕಲ್ ಪಶ್ಚಿಮದ ಸ್ಥಿತಿಗತಿ



- ನೀರಿನ ಬಗ್ಗೆ ಇರಲಿ ಕಾಳಜಿ
- ಕಾರು, ಬೈಕ್ ಸೇರಿದಂತೆ ವಾಹನಗಳನ್ನು ಶುಚಿಗೊಳಿಸಲು ಕುಡಿಯುವ ನೀರು ಬಳಸುವುದಕ್ಕೆ ಕಡಿವಾಣ ಬೀಳಬೇಕು.
- ಮಿತವಾದ ನೀರಿನ ಬಳಕೆ ಇರಲಿ
- ನೀರು ಪೋಲಾಗದಂತೆ ಸಲ್ಲಿ ಬಗ್ಗೆ ಇರಲಿ ಎಚ್ಚರ

473.1ಮಿ.ಮೀ. ಮಳೆಯಾಗಿತ್ತು

ದ.ಕ. ಜಿಲ್ಲೆಯಲ್ಲಿ 2024ರ ಜೂನ್ ತಿಂಗಳಲ್ಲಿ 242.2 ಮಿ.ಮೀ. ಮಳೆಯಾಗಿ ದ್ದರೆ, 2025ರ ಅದೇ ಅವಧಿಯಲ್ಲಿ 473.1 ಮಿ.ಮೀ. ಮಳೆಯಾಗಿತ್ತು. ಹೆಚ್ಚು ಮಳೆಯಾಗಿದ್ದರೂ ಕೂಡ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಈ ಬಾರಿ ಬಹುಬೇಗನೆ ಕುಸಿತಕಂಡಿದೆ.



ತುಂಬೆಯಲ್ಲಿ 30 ಗೇಟ್ ಬಂದ್

ತಾಪಮಾನ ಹೆಚ್ಚಳ, ಜಲಮೂಲಗಳಿಗೆ ಒಳಹರಿವು ಕ್ಷೀಣಿಸಿರುವ ಹಿನ್ನೆಲೆಯಲ್ಲಿ ಈಗಾಗಲೇ ಮಂಗಳೂರು ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ನೀರು ಪೂರೈಸುವ ತುಂಬೆ ಅಣೆಕಟ್ಟಿನ 30 ಗೇಟ್‌ಗಳನ್ನು ಬಂದ್ ಮಾಡಲಾಗಿದೆ.

ಸುಮಾರು 5 ಲಕ್ಷ ಜನಸಂಖ್ಯೆ

ಮಂಗಳೂರು ನಗರದಲ್ಲಿ ಅಂದಾಜು ಸುಮಾರು 5 ಲಕ್ಷದಷ್ಟು ಜನಸಂಖ್ಯೆ ಇದೆ. ಸುಮಾರು 1.5 ಲಕ್ಷ ಕುಟುಂಬಗಳಿವೆ. ಒಟ್ಟು 93 ಲಕ್ಷ ನೀರಿನ ಸಂಪರ್ಕಗಳಿವೆ. ಪ್ರತಿ ವ್ಯಕ್ತಿಯ ದೈನಂದಿನ ಬಳಕೆಗೆ 135 ಲೀಟರ್‌ಗಳಂತೆ ನಿತ್ಯ 16 ಕೋಟಿ ಲೀಟರ್‌ಗಳಿಂದ 17 ಕೋಟಿ ಲೀಟರ್‌ಗಳಷ್ಟು ನೀರು ನಗರಕ್ಕೆ ಪೂರೈಕೆ ಆಗುತ್ತಿದೆ. ಆದ್ದರಿಂದ ಇರುವ ನೀರನ್ನು ಮಿತವಾಗಿ ಬಳಸಿದರೆ ಮಾತ್ರ ಕುಡಿಯುವ ನೀರಿನ ತತ್ವಾರ ಎದುರಾಗಲಾರದು.

ಪ್ರಾಕೃತಿಕ ವಿಕೋಪ, ದುರಂತ ಸಂದರ್ಭ ಸಮರ್ಥ ಕಾರ್ಯಾಚರಣೆಗೆ ಯೋಜನೆ

ಮೀನು ಕಾರ್ಮಿಕರಿಗೆ ಸೇನಾ ತರಬೇತಿ

ಕಾಸರಗೋಡು: ಜಿಲ್ಲೆಯ ಸಮುದ್ರದಲ್ಲಿ ಯಾವುದೇ ರೀತಿಯ ಪ್ರಾಕೃತಿಕ ವಿಕೋಪಗಳು ಸಂಭವಿಸದಂತೆ ಹಾಗೂ ದುರಂತಗಳು ನಡೆದಾಗ ಸಮರ್ಥ ಕಾರ್ಯಾಚರಣೆಗಾಗಿ ಕೇರಳ ಸೇನೆ ಎಂಬ ರಕ್ಷಣಾ ತಂಡವನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ. ಪ್ರಾಕೃತಿಕ ವಿಕೋಪ ಸಂದರ್ಭದಲ್ಲಿ ರಕ್ಷಣಾ ಕಾರ್ಯಗಳಲ್ಲಿ ತೊಡಗುವ ಮೀನು ಕಾರ್ಮಿಕರು ಪ್ರಸ್ತುತ ಸಮುದ್ರದಲ್ಲಿ ರಕ್ಷಣಾ ಕಾರ್ಯಾಚರಣೆಗೆ ಕೇರಳ ಸೇನೆ ಯೋಜನೆಯಡಿ ತರಬೇತಿ ಪಡೆಯುತ್ತಿದ್ದಾರೆ.

ಈ ಮೂಲಕ ಸಮುದ್ರದಲ್ಲಿ ಯಾವುದೇ ದುರಂತಗಳು ಸಂಭವಿಸದಂತೆ ಗರಿಷ್ಠ ಎಚ್ಚರ ವಹಿಸಲಾಗುವುದು ಮತ್ತು ವಿಪತ್ತುಗಳು ನಡೆದಲ್ಲಿ ತಕ್ಷಣ ರಕ್ಷಣಾ ವ್ಯವಸ್ಥೆಗಳನ್ನು ಜಾರಿಗೊಳಿಸಲು ಸಮಗ್ರ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುವುದು. ಕಾಸರಗೋಡು ಜಿಲ್ಲೆಯೂ ಸೇರಿದಂತೆ ರಾಜ್ಯದಾದ್ಯಂತ ಈ ಯೋಜನೆಯನ್ನು ವಿಸ್ತರಿಸಲು ನಿರ್ಧರಿಸಲಾಗಿದೆ.

ಆಯ್ದ ಮೀನು ಕಾರ್ಮಿಕರು ಗೋವಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವಾಟರ್ ಸ್ಪೋರ್ಟ್ಸ್ (ಎನ್‌ಐಡಬ್ಲ್ಯೂಎಸ್)ನಲ್ಲಿ 15 ದಿನಗಳ ವಿಶೇಷ ತರಬೇತಿ ಹೊಂದಲಿದ್ದಾರೆ. ಸಮುದ್ರದಲ್ಲಿ ಉಂಟಾಗುವ ಪ್ರಾಕೃತಿಕ ವಿಕೋಪಗಳ ನಂತರ ಕೇರಳದ ಮೀನು ಕಾರ್ಮಿಕರಿಗೆ ತರಬೇತಿ ನೀಡುವ ಯೋಜನೆಯನ್ನು ಮೀನುಗಾರಿಕಾ ಇಲಾಖೆಯು ಎನ್‌ಐಡಬ್ಲ್ಯೂಎಸ್ ಸಹಕಾರದೊಂದಿಗೆ ಕಾರ್ಯಗತಗೊಳಿಸಿದೆ.

24 ಬ್ಯಾಚ್‌ಗಳಲ್ಲಾಗಿ 900 ಮಂದಿ ಮೀನು ಕಾರ್ಮಿಕರಿಗೆ ಸಮುದ್ರದಲ್ಲಿ ರಕ್ಷಣಾ ಕಾರ್ಯಾಚರಣೆಗೆ ತರಬೇತಿ ನೀಡಲಾಗುತ್ತಿದೆ. ಈಗಾಗಲೇ ಪ್ರಾಥಮಿಕ ಹಂತದ ತರಬೇತಿ ಮುಕ್ತಾಯಗೊಂಡಿದ್ದು, ಜಿಲ್ಲೆಯ ಕೆಲವು ಮಂದಿಗೆ ಈ ಮೂಲಕ ತರಬೇತಿ ಲಭಿಸಿದೆ. ಮುಂದಿನ ಹಂತಗಳ ತರಬೇತಿ ಇದೀಗ ನಡೆಯುತ್ತಿದೆ. ಎರಡು ಬ್ಯಾಚ್‌ಗಳಿಗೆ ಅಂತಿಮ ಹಂತದ ತರಬೇತಿಯು ಶೀಘ್ರದಲ್ಲೇ ಪೂರ್ತಿಯಾಗಲಿದೆ.

ವಿವಿಧ ಆಯಾಮದಲ್ಲಿ ತರಬೇತಿ

ಸಮುದ್ರದಲ್ಲಿ ಸಿಲುಕಿದವರನ್ನು ಹೇಗೆ ರಕ್ಷಿಸು ವುದು ಎಂಬ ಕುರಿತು ಮುಖ್ಯವಾಗಿ ತರಬೇತಿ ಹಮ್ಮಿಕೊಳ್ಳಲಾಗಿದೆ. ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ವರ ಮೃತದೇಹವನ್ನು ಹೊರತರು ವುದು, ನೀರಿನಲ್ಲಿ ಮುಳುಗಿ ಪ್ರಜ್ಞಾಹೀನ ಸ್ಥಿತಿಯ ಲ್ಲಿರುವವರನ್ನು ದಡಕ್ಕೆ ತರುವುದು, ನೀರಿಗೆ ಬಿದ್ದು ಪ್ರಜ್ಞೆ ಇರುವವರನ್ನು ರಕ್ಷಿಸುವುದು ಹೀಗೆ ಮೂರು ವಿಭಾಗಕೊಳಪಟ್ಟ ವಿಷಯಗಳಲ್ಲಿ ವಿವಿಧ ಆಯಾಯಗಳ ಮೂಲಕ ಸೂಕ್ತ ತರಬೇತಿ ನೀಡಲಾಗುತ್ತಿದೆ.

ಗೌರವಧನ ಇಲಾಖೆಗೆ ಭರಿಸಲಿದೆ

ಈ ರೀತಿಯ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳುವ ಮೀನು ಕಾರ್ಮಿಕರಿಗೆ ಗೌರವಧನವಾಗಿ ದಿನವೊಂದಕ್ಕೆ 700 ರೂಪಾಯಿ ಮೊತ್ತವನ್ನು ಮೀನುಗಾರಿಕಾ ಇಲಾಖೆಯು ನೀಡಲಿದೆ. ಇದರ ಹೊರತಾಗಿ ತರಬೇತಿ ಕಾಲಾವಧಿಯಲ್ಲಿ ಒಬ್ಬರಿಗೆ 50,000 ರೂಪಾಯಿ ತನಕ ವೆಚ್ಚ ತಗುಲುತ್ತದೆ. ಅದನ್ನೂ ಮೀನುಗಾರಿಕಾ ಇಲಾಖೆಯೇ ಭರಿಸಲಿದೆ. ಎನ್.ಮುರುಗೇಶನ್ ಪ್ರಧಾನ ತರಬೇತುದಾರರಾಗಿದ್ದಾರೆ. ಆರ್.ನಿತಿನ್ ಸಹ ತರಬೇತುದಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.







ಅನುಭವದ ಕೊರತೆಯಿಂದಲೂ ಕಡಲಿನಲ್ಲಿ ಅಪಘಾತ

ವರ್ಷಗಳು ಕಳೆದಂತೆ ಸಮುದ್ರದಲ್ಲಿ ಅವಘಡಗಳು ಹೆಚ್ಚೆಚ್ಚು ಸಂಭವಿಸುತ್ತಿವೆ. ಈ ನಿಟ್ಟಿನಲ್ಲಿ ಕಡಿವಾಣದ ಅಗತ್ಯವಿದೆ. ಕೆಲವೊಂದು ಬಾರಿ ಅನುಭವದ ಕೊರತೆಯಿಂದಲೂ ಸಮುದ್ರದಲ್ಲಿ ಅಪಘಾತಗಳು ನಡೆಯುತ್ತಿವೆ. ಮೀನುಗಾರಿಕಾ ದೋಣಿಗಳು ಮೀನುಗಾರಿಕೆ ಸಂದರ್ಭದಲ್ಲಿ ದುರಂತಕ್ಕೊಳಗಾಗುತ್ತಿದ್ದು, ಆದ್ದರಿಂದ ಸಮಗ್ರ ಅಧ್ಯಯನ ಆವಶ್ಯಕವಾಗಿದೆ. ಸಮುದ್ರಯಾನ ವೇಳೆ ಬಹಳಷ್ಟು ತಾಳ್ಮೆ ಜೊತೆಗೆ ಸಮರ್ಪಕ ಅನುಭವದ ಅಗತ್ಯವಿದ್ದು, ಈ ವಿಚಾರದಲ್ಲಿ ತರಬೇತಿ ನೀಡಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ವಿಶೇಷ ತರಗತಿಗಳನ್ನು ಏರ್ಪಡಿಸಲಾಗುವುದು.

■ ಆರ್.ನಿತಿನ್, ಸಹ ತರಬೇತುದಾರ

ತರಬೇತಿ ಪೂರ್ಣಗೊಂಡ ಕೂಡಲೇ ಕಾರ್ಯಾಚರಣೆ ಆರಂಭ

ಈಗಾಗಲೇ ಅನೇಕ ಮಂದಿ ಮೀನು ಕಾರ್ಮಿಕ ವಲಯ ದವರಿಗೆ ತರಬೇತಿ ಆರಂಭಿಸಲಾಗಿದೆ. ತರಬೇತಿ ಪೂರ್ಣಗೊಳಿಸಿದ ವರು ಅತೀ ಶೀಘ್ರದಲ್ಲಿ ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸಲಿದ್ದಾರೆ. ಕಾಸರಗೋಡು ಜಿಲ್ಲೆಯಿಂದ ತೊಡಗಿ ತಿರುವನಂತಪುರ ಜಿಲ್ಲೆ ತನಕ ಪ್ರತೀ ಜಿಲ್ಲೆಗಳ ಪ್ರಾಕೃತಿಕ ವ್ಯವಸ್ಥೆಗಳನ್ನು ಮೊದಲಿಗೆ ಅಧ್ಯಯನ ನಡೆಸಿ ನಂತರ ಆಯಾ ಜಿಲ್ಲೆಗಳಿಗೆ ಆಯಾ ಜಿಲ್ಲೆಗಳ ಕುರಿತು ಅನುಭವ ಹೊಂದಿದವರನ್ನು ನೇಮಕಾತಿಗೊಳಿಸಲು ತೀರ್ಮಾನಿಸಲಾಗಿದೆ. ಈ ಮೂಲಕ ಯಾವುದೇ ರೀತಿಯ ಸಮಸ್ಯೆಗಳಾಗದಂತೆ ಗರಿಷ್ಠ ಎಚ್ಚರ ವಹಿಸಲಾಗುವುದು.

■ ಎನ್.ಮುರುಗೇಶನ್, ಪ್ರಧಾನ ತರಬೇತುದಾರ

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಪ್ರವಾಸ

ಮಂಗಳೂರು: ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಮಾ. 5 ರಿಂದ 7 ರವರೆಗೆ ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಮಾ. 5ರಂದು ಬೆಳಿಗ್ಗೆ 10 ಗಂಟೆಗೆ ನಗರದ ಬಲ್ಮಠ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರೊಂದಿಗೆ ಸಂವಾದ, ಮಧ್ಯಾಹ್ನ 12ಕ್ಕೆ ಸ್ಟೇಟ್‌ಬ್ಯಾಂಕ್ ಮೀನು ಮಾರುಕಟ್ಟೆಗೆ ಭೇಟಿ ನೀಡಿ, ಮೀನುಗಾರ ಮಹಿಳೆಯರೊಂದಿಗೆ ಸಮಸ್ಯೆಗಳ ಕುರಿತು ಚರ್ಚೆ, 1 ಗಂಟೆಗೆ ಬಂಟ್ವಾಳ ಮಹಿಳಾ ಸಾಂತ್ವನ ಕೇಂದ್ರಕ್ಕೆ ಭೇಟಿ, 3 ಗಂಟೆಗೆ ಬಂಟ್ವಾಳ ತಾಲೂಕು ಆಸ್ಪತ್ರೆಗೆ ಭೇಟಿ, ಸಂಜೆ 4.45ಕ್ಕೆ ಪುತ್ತೂರು ತಾರಿಗುಡ್ಡೆಯ ಕೇಪುಳೆಯಲ್ಲಿರುವ ಸಂತ್ರಸ್ತೆ ಪೂಜಾ ಮನೆಗೆ ಭೇಟಿ,

5.30ಕ್ಕೆ ಪುತ್ತೂರು ಮಹಿಳಾ ಪೊಲೀಸ್ ಠಾಣೆ ಭೇಟಿ, ಮಂಗಳೂರಿನಲ್ಲಿ ವಾಸ್ತವ್ಯ. ಮಾ. 6 ರಂದು ಬೆಳಿಗ್ಗೆ 9 ಗಂಟೆಗೆ ಸರಕಾರಿ ಲೇಡಿಗೋಶನ್ ಆಸ್ಪತ್ರೆಗೆ ಭೇಟಿ, 11 ಗಂಟೆಗೆ ಮಂಗಳೂರಿನ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿರುವ ತರಬೇತಿ ಹಾಗೂ ಅರಿವು ಕಾರ್ಯಕ್ರಮ ಉದ್ಘಾಟನೆ, ಮಧ್ಯಾಹ್ನ 12 ಗಂಟೆಗೆ ಪಾಂಡೇಶ್ವರ ಮಹಿಳಾ ಪೊಲೀಸ್ ಠಾಣೆ ಭೇಟಿ, ಮಧ್ಯಾಹ್ನ 2.30ಕ್ಕೆ ಮಣಿಪಾಲ ಡಾ.ಟಿ.ಎಂ.ಪೈ ಆಡಿಟೋರಿಯಂನಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಹಮ್ಮಿಕೊಂಡಿರುವ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಸಂಜೆ 6.30ಕ್ಕೆ ಮಂಗಳೂರು ದೇರಳಕಟ್ಟೆಯಲ್ಲಿರುವ ಹಿಂದುಳಿದ ಕಲ್ಯಾಣ ಇಲಾಖೆಯಡಿ ದೇವರಾಜ ಅರಸು ಅವರ ಮಹಿಳಾ ನರ್ಸಿಂಗ್ ವಿದ್ಯಾರ್ಥಿನಿಲಯಕ್ಕೆ ಭೇಟಿ, ನಗರದಲ್ಲಿ ವಾಸ್ತವ್ಯ.

ಮಾ. 7 ರಂದು ಬೆಳಿಗ್ಗೆ 9 ಗಂಟೆಗೆ ಮಂಗಳೂರು ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ ಭೇಟಿ, ಬೆಳಿಗ್ಗೆ 11 ಗಂಟೆಗೆ ಮಂಗಳೂರಿನ ನೇತ್ರಾವತಿ ಸಭಾಂಗಣದಲ್ಲಿ ಮಹಿಳಾ ಸ್ಪಂದನ ಕಾರ್ಯಕ್ರಮ ಹಾಗೂ ಮಹಿಳಾ ಪ್ರಗತಿ ಪರಿಶೀಲನಾ ಸಭೆ, 3 ಗಂಟೆಗೆ ಪತ್ರಿಕಾಗೋಷ್ಠಿ , ಸಂಜೆ 5.50 ಗಂಟೆಗೆ ಡಾ. ನಾಗಲಕ್ಷ್ಮಿ ಚೌಧರಿ ಅವರು ಮಂಗಳೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.



ಬಲ್ಮಠ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರೊಂದಿಗೆ ಸಂವಾದ

ಮಂಗಳೂರು ವಿ.ವಿ ಪದವಿ ತರಗತಿಗಳ ಪರೀಕ್ಷಾ ಫಲಿತಾಂಶ

ಕುಂದಾಪುರದ ಡಾ. ಬಿ. ಬಿ.ಹೆಗ್ಡೆ ಕಾಲೇಜಿಗೆ 4 ರ್‍ಯಾಂಕ್



ಕುಂದಾಪುರ : ಮಂಗಳೂರು ವಿಶ್ವ ವಿದ್ಯಾನಿಲಯ ನಡೆಸಿದ ಅಂತಿಮ ಪದವಿ ಪರೀಕ್ಷೆಯಲ್ಲಿ ಕುಂದಾಪುರದ ಡಾ. ಬಿ. ಬಿ.ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಬಿ.ಕಾಂ., ಬಿ.ಬಿ.ಎ. ಮತ್ತು ಬಿ.ಸಿ.ಎ. ಪದವಿಯಲ್ಲಿ ಒಟ್ಟು 4 ರ್‍ಯಾಂಕ್‌ಗಳನ್ನು ಗಳಿಸುವ ಮೂಲಕ ಉತ್ಕೃಷ್ಟ ಸಾಧನೆಗೈದಿದ್ದಾರೆ. ಕೊಲ್ಲೂರು ಸಮೀಪದ ಮುದೂರಿನ ಶೀನ ಪೂಜಾರಿ ಹಾಗೂ ವಿಶಾಲು ದಂಪತಿಯ ಪುತ್ರಿ ಶ್ರೇಯಾ ಬಿ.ಕಾಂ.ಪದವಿಯಲ್ಲಿ 2ನೇ ರ್‍ಯಾಂಕ್, ಕೋಣಿಯ ಶಂಕರ ಮೊಗವೀರ ಹಾಗೂ ಶಾಂತಾ ದಂಪತಿಯ ಪುತ್ರಿ ಸುಹಾನಿ ಅವರು ಬಿ.ಬಿ.ಎ. ಪದವಿಯಲ್ಲಿ 3ನೇ ರ್‍ಯಾಂಕ್, ಅಂಪಾರು ನೆಲ್ಲಿಕಟ್ಟೆಯ ಪ್ರಭಾಕರ ಪಂಗಡಗಾರ ಹಾಗೂ ಶೋಭಾ ದಂಪತಿಯ ಪುತ್ರಿ ನಿಖಿತಾ ಬಿ.ಸಿ.ಎ. ಪದವಿಯಲ್ಲಿ 6ನೇ ರ್‍ಯಾಂಕ್ ಮತ್ತು ಕೋಣಿಯ ರಮೇಶ ಮೊಗವೀರ ಹಾಗೂ ವನಜಾ ದಂಪತಿಯ ಪುತ್ರಿ ಶ್ರದ್ಧಾ ಆರ್. ಬಿ.ಬಿ.ಎ. ಪದವಿಯಲ್ಲಿ 8ನೇ ರ್‍ಯಾಂಕ್ ಗಳಿಸಿದ್ದಾರೆ. ಇವರಿಗೆ ಸಂಸ್ಥೆಯ ಅಧ್ಯಕ್ಷ ಬಿ.ಎಂ. ಸುಕುಮಾರ ಶೆಟ್ಟಿ, ಕಾಲೇಜು ಆಡಳಿತ ಮಂಡಳಿ, ಪ್ರಾಂಶುಪಾಲ ಪ್ರೊ. ಡಾ. ಕೆ.ಉಮೇಶ ಶೆಟ್ಟಿ ಹಾಗೂ ಕಾಲೇಜಿನ ಬೋಧಕ-ಬೋಧಕೇತರ ವೃಂದ ಹಾಗೂ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಶ್ರೀ ಭುವನೇಂದ್ರ ಕಾಲೇಜಿಗೆ ಎರಡು ರ್‍ಯಾಂಕ್

ಕಾರ್ಕಳ: ಮಂಗಳೂರು ವಿಶ್ವವಿದ್ಯಾನಿಲಯದ 2024-25 ನೇ ಸಾಲಿನ ಪದವಿ ತರಗತಿಗಳ ಪರೀಕ್ಷೆಯಲ್ಲಿ ಕಾರ್ಕಳದ ಪ್ರತಿಷ್ಠಿತ ಶ್ರೀ ಭುವನೇಂದ್ರ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ರ್‍ಯಾಂಕ್ ಪಡೆದುಕೊಂಡಿದ್ದಾರೆ. ಬಿ.ಎ. ವಿಭಾಗದಲ್ಲಿ ಶ್ವೇತಾ ಪ್ರಥಮ ರ್‍ಯಾಂಕ್ ಹಾಗೂ ಬಿ. ಎಸ್ಸಿ ವಿಭಾಗದಲ್ಲಿ ಶ್ರೇಯಾ ಐದನೇ ರ್‍ಯಾಂಕ್ ಪಡೆದಿದ್ದಾರೆಂದು ಕಾಲೇಜಿನ ಪ್ರಾಂಶುಪಾಲ ಡಾ. ಮಂಜುನಾಥ ಎ. ಕೋಟ್ಯಾನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿಗೆ ಮೂರು ರ್‍ಯಾಂಕು



ಕುಂದಾಪುರ: ಮಂಗಳೂರು ವಿಶ್ವವಿದ್ಯಾಲಯವು 2025ರಲ್ಲಿ ನಡೆಸಿದ ಅಂತಿಮ ಪದವಿ ಪರೀಕ್ಷೆಯಲ್ಲಿ ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿಗೆ ಮೂರು ರ್‍ಯಾಂಕುಗಳು ದೊರಕಿವೆ. ಬಿ.ಬಿ.ಎ ಪದವಿ ವಿಭಾಗದಲ್ಲಿ ಕೋಟೇಶ್ವರದ ಸೂರ್ಯನಾರಾಯಣ ಅಡಿಗ ಅವರ ಪುತ್ರಿ ಶ್ರಾವ್ಯ ಎಸ್.ಅಡಿಗ ಅವರಿಗೆ ಆರನೇ ರ್‍ಯಾಂಕ್, ಬಿ.ಸಿ.ಎ. ವಿಭಾಗದಲ್ಲಿ ಮರವಂತೆಯ ಮೋಹನದಾಸ ಶೆಣೈ ಅವರ ಪುತ್ರಿ ಶ್ರಾವ್ಯ ಶೆಣೈ ಅವರಿಗೆ ಎಂಟನೇ ರ್‍ಯಾಂಕ್ ಮತ್ತು ತೆಕ್ಕಟ್ಟೆಯ ರಾಘು ಅವರ ಪುತ್ರಿ ರಕ್ಷಿತಾ ಅವರಿಗೆ ಒಂಬತ್ತನೇ ರ್‍ಯಾಂಕ್ ದೊರೆತಿದೆ.

ಎಸ್ಸಿ, ಎಸ್ಟಿಗಳಿಗೆ ಉದ್ಯೋಗ ನೀಡಿ

ಪುಟ ೧➡ಮುಖ್ಯಮಂತ್ರಿಗಳೇ ಪದೇಪದೇ ಈ ಸಮುದಾಯಗಳಿಗೆ ಅನ್ಯಾಯ ಮಾಡುತ್ತಿದ್ದೀರಿ. ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ- ಪಂಗಡಗಳ ಯುವಜನತೆ ಸೇರಿ ಎಲ್ಲ ವರ್ಗಗಳ ಜನರಿಗೆ ನ್ಯಾಯ ಕೊಡುವ ಕೆಲಸ ಮಾಡಿ.

ನೀವು 50 ಸಾವಿರ ಖಾಲಿ ಹುದ್ದೆ ಭರ್ತಿ ಮಾಡುತ್ತೀರಾ ಅಥವಾ 1 ಲಕ್ಷ ಹುದ್ದೆ ಭರ್ತಿ ಮಾಡುವಿರಾ ಎಂಬುದು ನಿಮಗೆ ಬಿಟ್ಟದ್ದು. ಎಲ್ಲ ಖಾಲಿ ಹುದ್ದೆ ಭರ್ತಿ ಮಾಡಿ ಎಂಬ ಆಗ್ರಹ ನಮ್ಮದು. ಹಳೆಯ ಮೀಸಲಾತಿ ಪ್ರಮಾಣದಲ್ಲಿ ನೇಮಕಾತಿ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರವು ರಾಜ್ಯದಲ್ಲಿ ಬೆಂಕಿ ಹಚ್ಚಲು ಹೊರಟಂತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಆಹಿಂದ ಸಮುದಾಯದ ಹೆಸರು ಹೇಳಿ ಅಧಿಕಾರ ಹಿಡಿದ ಮುಖ್ಯಮಂತ್ರಿಗಳೇ ಆ ಸಮುದಾಯದ ತಾಳ್ಮೆ ಪರೀಕ್ಷೆ ಮಾಡದಿರಿ. ಶೋಷಿತ- ಪೀಡಿತ ಸಮುದಾಯಗಳನ್ನು ಕೆಣಕದಿರಿ. ಒಳ ಮೀಸಲಾತಿ ಜಾರಿ ಮಾಡದೆ ಖಾಲಿ ಹುದ್ದೆ ಭರ್ತಿ ಮಾಡುವ ಕೆಲಸ ಮಾಡಿದರೆ, ರಾಜ್ಯದಲ್ಲಿ ಮುಂದೆ ಆಗುವ ಘಟನೆಗಳಿಗೆ ತಾವೇ ಹೊಣೆ ಹೊರಬೇಕಾಗುತ್ತದೆ. ಇದೆಲ್ಲವನ್ನು ಪರಿಗಣಿಸಿ ಸಮರ್ಪಕ ನಿರ್ಧಾರವನ್ನು ಮುಖ್ಯಮಂತ್ರಿಗಳು ಮಾಡಬೇಕೆಂದು ಮನವಿ ಮಾಡಿದರು. ಯುವಜನರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ವಯೋಮಿತಿ ಮೀರುತ್ತಿದೆ. ಅವರ ಸಹನೆಯ ಕಟ್ಟೆ ಒಡೆದುಹೋಗಿದೆ. ಇದನ್ನು ಪರಿಗಣಿಸಿ ನ್ಯಾಯ ಕೊಡುವ ಸ್ಥಾನದಲ್ಲಿರುವ ಮುಖ್ಯಮಂತ್ರಿಗಳು ತಮ್ಮ ಗೌರವ ಉಳಿಸಿಕೊಳ್ಳಬೇಕೆಂದು ಒತ್ತಾಯಿಸಿದರು.

ನಾಳೆಯಿಂದ ಸರಣಿ ಪ್ರತಿಭಟನೆ

ಪುಟ ೧➡108 ಆಂಬುಲೆನ್ಸ್ ನೌಕರರು, ಸಣ್ಣಪುಟ್ಟ ಗುತ್ತಿಗೆದಾರರು, ಪೌರಕಾರ್ಮಿಕರ ಹೋರಾಟವೂ ನಡೆಯಲಿದ್ದು, ಸರಣಿ ಹೋರಾಟಗಳು ಆರಂಭವಾಗಲಿವೆ ಎಂದು ವಿಜಯೇಂದ್ರ ತಿಳಿಸಿದರು.

ಕೈ ಸರ್ಕಾರಕ್ಕೆ ಬದ್ಧತೆಯೇ ಇಲ್ಲ: ಛಲವಾದಿ ನಾರಾಯಣಸ್ವಾಮಿ



ಬೆಂಗಳೂರು: ಮೀಸಲಾತಿ ಮತ್ತು ಒಳಮೀಸಲಾತಿ ಜಾರಿಯಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ಬದ್ಧತೆಯೇ ಇಲ್ಲ. ಘೋಷಣೆ ಮಾಡು ವಾಗ ಗೊಂದಲ ಸೃಷ್ಟಿಸಿ ಅನ್ಯಾಯ ಮಾಡಿದೆ ಎಂದು ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಾಧ್ಯಮಗಳ ಜತೆ ಮಾತನಾಡಿ, ಮೀಸಲಾತಿ, ಒಳಮೀಸಲಾತಿಯಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರ ಕಳ್ಳಾಟ ಆಡುತ್ತಿದೆ. ಯಾರಾದರೂ ಕೋರ್ಟಿಗೆ ಹೋಗಲಿ, ಪ್ರಶ್ನೆ ಮಾಡಲಿ, ಹೇಗಾದರೂ ನಿಂತು ಹೋಗಲಿ ಎಂಬ ಮನಸ್ಥಿತಿಯಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಂತಿದೆ. ಇದರ ವಿರುದ್ಧ ಜನರ ಆಕ್ರೋಶವಿದೆ. ಅದನ್ನು ಆಂದೋಲನವಾಗಿ ಪರಿವರ್ತಿಸುತ್ತೇವೆ. ಇಡೀ ರಾಜ್ಯದಲ್ಲಿ ದೊಡ್ಡ ಹೋರಾಟ ಆರಂಭವಾಗಲಿದೆ. ಇದರ ರೂಪರೇಷೆ ಚರ್ಚೆ ಮಾಡುತ್ತೇವೆ ಎಂದರು. ಮೀಸಲಾತಿ ಜಾರಿಯಲ್ಲಿ ಕಾಂಗ್ರೆಸ್ ಜನರನ್ನು ವಂಚನೆ ಮಾಡುತ್ತಾ ಬರುತ್ತಿದೆ ಎಂಬುದನ್ನು ಜನರಿಗೆ ತಿಳಿಸುತ್ತೇವೆ. ಬಿಜೆಪಿ ಕಾಲದಲ್ಲಿ ಯಾವ ರೀತಿ ನ್ಯಾಯ ಕೊಟ್ಟಿದ್ದೆವು ಎಂಬುದನ್ನೂ ತಿಳಿಸುತ್ತೇವೆ. ರಾಜ್ಯ ಮತ್ತು ಕೇಂದ್ರದ ಮುಖಂಡರು ಸೇರಿ ಚರ್ಚಿಸಿ ಆಂದೋಲನದ ರೂಪರೇಷೆ ಸಿದ್ಧಪಡಿಸುತ್ತೇವೆ ಎಂದು ಹೇಳಿದರು.

ಯಡೂರಲ್ಲಿಂದು ರಾಜಗೋಪುರ ಲೋಕಾರ್ಪಣೆ ಕಾರ್ಯಕ್ರಮ

ಪುಟ ೧➡ಮಾ.5ರಂದು ಚಿಕ್ಕೋಡಿ ತಾಲೂಕಿನ ಯಡೂರ ಮಾರ್ಗದಲ್ಲಿ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇದ್ದು, ಈ ಹಿನ್ನೆಲೆಯಲ್ಲಿ ಚಿಕ್ಕೋಡಿಯಿಂದ ಯಡೂರ ಮಾರ್ಗದಲ್ಲಿನ ಪಿಯುಸಿ. ಪರೀಕ್ಷಾ ಕೇಂದ್ರಗಳಲ್ಲಿನ ಪರೀಕ್ಷಾರ್ಥಿಗಳು ಬೇಗನೆ ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಲು ಚಿಕ್ಕೋಡಿ ಉಪವಿಭಾಗಾಧಿಕಾರಿಗಳು ಮನವಿ ಮಾಡಿರುತ್ತಾರೆ.

ಬುಧವಾರ ಸಂಜೆಯಿಂದಲೇ ಮಾಂಜರಿ, ಯಡೂರು ಸುಕ್ಷೇತ್ರದಲ್ಲಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಂದೋಬಸ್ತ್ ಮಾಡಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಬುಧವಾರ ಸಂಜೆ ಬೆಂಗಳೂರಿನಿಂದ ನೇರವಾಗಿ ಹೈದರಾಬಾದ್‌ಗೆ ತೆರಳಿದ್ದು, ಹೈದರಾಬಾದ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ವಿಕ್ರ ಮಾರ್ಕ ಮಲ್ಲು ಅವರ ಪುತ್ರನ ವಿವಾಹ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಗುರುವಾರ ಬೆಳಗ್ಗೆ 11.30ಕ್ಕೆ ಹೈದರಾಬಾದ್‌ನಿಂದ ವಿಶೇಷ ವಿಮಾನದ ಮೂಲಕ ಕೊಲ್ಹಾಪುರ ವಿಮಾನ ನಿಲ್ದಾಣಕ್ಕೆ ಆಗಮಿಸಿ, ಅಲ್ಲಿಂದ ರಸ್ತೆ ಮೂಲಕವಾಗಿ ಮಧ್ಯಾಹ್ನ 1.15ಕ್ಕೆ ಚಿಕ್ಕೋಡಿ ತಾಲೂಕಿನ ಯಡೂರು ಕಾಡದೇವರ ಮಠದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಆಯೋಜಿಸಲಾಗಿರುವ ವೀರಶೈವ ಲಿಂಗಾಯತ ಧರ್ಮ ಸಮ್ಮೇಳನದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಠದ ರಾಜಗೋಪುರ ಉದ್ಘಾಟನೆಯಲ್ಲಿ ಭಾಗಿಯಾಗಲಿದ್ದಾರೆ. ಗುರುವಾರ ಸಂಜೆ 4 ಗಂಟೆಗೆ ರಸ್ತೆ ಮೂಲಕ ಕೊಲ್ಹಾಪುರಕ್ಕೆ ತೆರಳಿ ಅಲ್ಲಿಂದ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ವಾಪಸ್ ತೆರಳಲಿದ್ದಾರೆ.

ಆಧುನಿಕ ಯುದ್ಧ

ಪುಟ ೧➡**ಟರ್ಕಿ ಮೇಲೂ ಇರಾನ್ ದಾಳಿ:** ಇರಾನ್‌ನಿಂದ ಉಡಾಯಿಸಲಾದ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ನ್ಯಾಟೋ ರಕ್ಷಣಾ ವ್ಯವಸ್ಥೆಗಳು ಟರ್ಕಿ ವಾಯುಪ್ರದೇಶಕ್ಕೆ ಪ್ರವೇಶಿಸುವ ಮೊದಲು ತಡೆದವು ಎಂದು ಟರ್ಕಿಯ ರಕ್ಷಣಾ ಸಚಿವಾಲಯ ಹೇಳಿದೆ.

ಇರಾನ್ ನೌಕಾಪಡೆಗೆ ದುಃಸ್ವಪ್ನ: ಶ್ರೀಲಂಕಾ ಕರಾವಳಿಯ ಬಳಿ ಅಮೆರಿಕ ಜಲಂತರ್ಗಾಮಿ ನಡೆಸಿದ ದಾಳಿಗೆ ಇರಾನ್‌ನ ಐಆರ್‌ಐಎಸ್ ದೇನಾ ನೌಕೆ ಮುಳುಗಿದ್ದು, 80 ಸಿಬ್ಬಂದಿ ಮೃತಪಟ್ಟಿದ್ದಾರೆ. 32 ಮಂದಿಯನ್ನು ರಕ್ಷಿಸಲಾಗಿದೆ. ಅಮೆರಿಕ ಸೇನೆ ಈಗಾಗಲೇ 17 ಇರಾನ್ ನೌಕೆಗಳನ್ನು ನಾಶಮಾಡಿದೆ ಮತ್ತು ಇರಾನ್ ನೌಕಾಪಡೆಯನ್ನೇ ಸಂಪೂರ್ಣವಾಗಿ ಮುಳುಗಿಸುವುದು ಗುರಿಯಾಗಿದೆ ಎಂದು ಎಚ್ಚರಿಕೆ ನೀಡಿದೆ.

ರಾಯಭಾರ ಕಚೇರಿಗಳ ಮೇಲೆ ದಾಳಿ: ಸೌದಿ ಅರೇಬಿಯಾದ ಅಮೆರಿಕ ರಾಯಭಾರ ಕಚೇರಿ ಮತ್ತು ಯುಎಇಯಲ್ಲಿನ ಅಮೆರಿಕ ಕಾನ್ಸುಲೇಟ್ ಮೇಲೆ ಡ್ರೋನ್ ದಾಳಿ ನಡೆದಿದ್ದು, ಅಮೆರಿಕ ಸ್ಟೇಟ್ ಡಿಪಾರ್ಟ್‌ಮೆಂಟ್ ತನ್ನ ರಾಯಭಾರ ಕಚೇರಿಗಳಲ್ಲಿ ಅಗತ್ಯವಿಲ್ಲದ ಸಿಬ್ಬಂದಿ ಹಿಂತೆಗೆದುಕೊಳ್ಳಲು ಅನುಮತಿಸಿದೆ. ಅಮೆರಿಕ ಸೆಂಟ್ರಲ್ ಕಮಾಂಡ್ ಮುಖ್ಯಸ್ಥ ಅಡ್ಮಿರಲ್ ಬ್ರಾಡ್ ಕೂಪರ್, ಇರಾನ್ ಇದುವರೆಗೆ 500ಕ್ಕೂ ಹೆಚ್ಚು ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು 2,000 ಡ್ರೋನ್‌ಗಳನ್ನು ಉಡಾಯಿಸಿದೆ ಎಂದು ಹೇಳಿದ್ದಾರೆ. ಐದು ದಿನಗಳ ಯುದ್ಧದಲ್ಲಿ ಇರಾನ್‌ನಲ್ಲಿ 1,000ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ.

ಎರಡೂ ಕಡೆಯಿಂದ ನಿರಂತರ ದಾಳಿ: ಬಹ್ರೇನ್ ಮತ್ತು ಕತಾರ್ ಪ್ರದೇಶಗಳಲ್ಲಿ ವಾಯುಸೈರನ್‌ಗಳು ಮೊಳಗಿದವು. ಲೆಬನಾನ್‌ನಲ್ಲಿ 50ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, 300ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇಸ್ರೇಲ್ ತನ್ನ ವಾಯುದಾಳಿಯಲ್ಲಿ ಇಸ್ಫಹಾನ್‌ನ ಕ್ಷಿಪಣಿ ಸಂಗ್ರಹ ಮತ್ತು ಉತ್ಪಾದನಾ ಘಟಕವನ್ನು ನಾಶಮಾಡಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಶ್ರೀಮಂತರು ಸ್ವಯಂಪ್ರೇರಿತರಾಗಿ ಉಚಿತ ಯೋಜನೆಗಳ ಲಾಭವನ್ನು ಬಿಟ್ಟುಕೊಡಬೇಕು
– ಬಿ.ಕೆ.ಹರಿಪ್ರಸಾದ್

– ನಿಜ ಹೇಳಬೇಕೆಂದರೆ ಉಚಿತ ಯೋಜನೆಗಳ ಮೊದಲ ಫಲಾನುಭವಿ ಕಾಂಗ್ರೆಸ್ಸೇ ಆಗಿದೆ. ಅದರಿಂದಾಗಿ ತಾನೆ ಅದು ಅಧಿಕಾರಕ್ಕೆ ಬಂದಿರೋದು?

ದಿನ ಭವಿಷ್ಯ

ಮೇಷ
ಹೊಸ ಪಾಲುದಾರಿಕೆ ಲಾಭ ತಂದೀತು. ಆದರೆ ನಂಬಿಗಸ್ಥರ ಜತೆ ವ್ಯವಹಾರ ನಡೆಸಿ. ಸಂಬಂಧದಲ್ಲಿ ಉದ್ವಿಗ್ನತೆ. ಹೊಂದಾಣಿಕೆ ಮುಖ್ಯ.

ವೃಷಭ
ಸಾಧನೆಯ ದಿನ. ವ್ಯವಹಾರದಲ್ಲಿ ಸಫಲತೆ. ಕೆಲಕಾಲದಿಂದ ಕಾಡುತ್ತಿದ್ದ ಚಿಂತೆ ಪರಿಹಾರ. ವಿದ್ಯಾರ್ಥಿಗಳಿಗೆ ಶುಭ ಬೆಳವಣಿಗೆ.

ಮಿಥುನ
ಸಂಗಾತಿ ಜತೆ ಸಂಘರ್ಷ ನಡೆದೀತು. ಅವರ ದೃಷ್ಟಿಕೋನ ಕೂಡಾ ಪರಾಮರ್ಶಿಸಿ. ಸ್ನೇಹಿತರ ಜತೆ ಆತ್ಮೀಯ ಕಾಲಕ್ಷೇಪ. ಆರ್ಥಿಕ ಒತ್ತಡ.

ಕಟಕ
ನಿಮ್ಮ ಭಾವನೆ, ಮನಸ್ಥಿತಿ ಆಪ್ತರ ಜತೆ ಹಂಚಿಕೊಳ್ಳಿ. ಇದರಿಂದ ಮನಸ್ಸು ಹಗುರ. ಸುಮ್ಮನೇ ಕೊರಗುತ್ತಾ ಕೂರಬೇಡಿ.

ಸಿಂಹ
ಅಡ್ಡಿಗಳನ್ನು ನಿವಾರಿಸಿಕೊಂಡು ವಿಳಂಬವಿಲ್ಲದೆ ಕಾರ್ಯ ಎಸಗುವಿರಿ. ಆರ್ಥಿಕ ಸ್ಥಿರತೆ. ವೃತ್ತಿ ಒತ್ತಡ ನಿವಾರಣೆಯಾಗಲಿದೆ.

ಕನ್ಯಾ
ಸಣ್ಣಪುಟ್ಟ ಜಗಳದಲ್ಲಿ ತೊಡಗಿಕೊಳ್ಳಬೇಡಿ. ಆದರಿಂದ ಮನಸ್ಸಿನ ನೆಮ್ಮದಿ ಹಾಳು. ವೃತ್ತಿಯಲ್ಲಿ ಹೊಸ ಅವಕಾಶ. ಸ್ನೇಹದಲ್ಲಿ ಬಿರುಕು.

ತುಲಾ
ಹೆಚ್ಚುವರಿ ಹೊಣೆಗಾರಿಕೆ ಒತ್ತಡ ಸೃಷ್ಟಿಸಲಿದೆ. ದುಡುಕಿನ ನಿರ್ಧಾರ ತಾಳದಿರಿ. ಖರೀದಿಯ ಉತ್ಸಾಹಕ್ಕೆ ಕಡಿವಾಣ ಹಾಕಿ.

ವೃಶ್ಚಿಕ
ಕುಟುಂಬ ಸದಸ್ಯರ ಜತೆ ಹೆಚ್ಚು ಕಾಲ ಕಳೆಯಿರಿ. ಆರೋಗ್ಯದ ಕುರಿತು ಕಾಳಜಿ ವಹಿಸಿರಿ. ವಿದ್ಯಾರ್ಥಿಗಳಿಗೆ ಯಶ. ಸಾಧನೆಯ ತೃಪ್ತಿ.

ಧನು
ಮನೆಯವರ ಜತೆ ಉತ್ತಮ ಹೊಂದಾಣಿಕೆ. ಭಿನ್ನಮತ ನಿವಾರಣೆ. ವದಂತಿಗಳಿಗೆ ಹೆಚ್ಚು ಕಿವಿಗೊಡಬೇಡಿ. ನಿಮ್ಮ ಕೆಲಸ ಮಾಡುತ್ತಿರಿ.

ಮಕರ
ಕಾಲಮಿತಿಯಲ್ಲಿ ನಿಮ್ಮ ಗುರಿ ಸಾಧಿಸುವಿರಿ. ಯಾವುದೇ ವಿಘ್ನ ಬಾಧಿಸದು. ಕೌಟುಂಬಿಕ ಸಂತೃಪ್ತಿ. ವಿದ್ಯಾರ್ಥಿಗಳ ಆಶಯ ಪೂರೈಸಲಿದೆ.

ಕುಂಭ
ನಿಶ್ಚಿತ ಸಮಯದಲ್ಲಿ ಕೆಲಸ ಪೂರೈಸಲು ವಿಫಲ. ಇದರಿಂದ ಒತ್ತಡ ಹೆಚ್ಚಳ. ವಿದ್ಯಾರ್ಥಿಗಳಿಗೆ ಈ ದಿನ ಕಠಿಣವಾದೀತು. ಹೆಚ್ಚು ಪರಿಶ್ರಮ ಅಗತ್ಯ.

ಮೀನ
ಆಸ್ತಿ ಅಥವಾ ವಸ್ತು ಮಾರಾಟಕ್ಕೆ ಉದ್ದೇಶಿಸಿದ್ದರೆ ನೀವು ಇಚ್ಛಿಸಿದ ಬೆಲೆ ದೊರಕದು. ಕೌಟುಂಬಿಕ ಪರಿಸರ ಶಾಂತ. ಮಕ್ಕಳ ಸಾಧನೆಯಿಂದ ತೃಪ್ತಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ: 2,7,4,9

ಆಂಧ್ರದಲ್ಲಿ ರಸ್ತೆ ಅಪಘಾತ: ಬೆಂಗಳೂರಿನ ಐವರ ಸಾವು

ಪಲಮನೇರು: ಬೆಂಗಳೂರಿನಿಂದ ತಿರುಪತಿಗೆ ಸಾಗುತ್ತಿದ್ದ ಕಾರೊಂದು, ಚಿತ್ತೂರು ಜಿಲ್ಲೆಯ ಪಲಮನೇರುಗೆ ಸಮೀಪ ಚತುಷ್ಪಥ ಹೆದ್ದಾರಿಯಲ್ಲಿ ಸ್ಟೇಷನರಿ ಟ್ರಕ್‌ಗೆ ಡಿಕ್ಕಿ ಹೊಡೆದ ದುರಂತದಲ್ಲಿ, ಒಂದೇ ಕುಟುಂಬದ ಐವರು ಸದಸ್ಯರು ಸಾವಿಗೀಡಾಗಿದ್ದಾರೆ. ಬುಧವಾರ ಬೆಳಗ್ಗೆ 8.45ಕ್ಕೆ ದುರಂತ ಸಂಭವಿಸಿದೆ. ಮೃತರಲ್ಲಿ ಮೂವರು ಮಹಿಳೆಯರು ಎಂದು ಪೊಲೀಸರು ತಿಳಿಸಿದ್ದಾರೆ. ಕಾರು ಚಾಲಕನ ಮಿತಿಮೀರಿದ ವೇಗದ ಚಾಲನೆಯೇ ದುರ್ಘಟನೆಗೆ ಕಾರಣವೆಂದು ಪೊಲೀಸರು ಶಂಕಿಸಿದ್ದಾರೆ. ಮೃತರು ಬೆಂಗಳೂರು ಮೂಲದವರು. ಇವರ ಬಂಧುಗಳಿಗೆ ಮಾಹಿತಿ ನೀಡಲಾಗಿದ್ದು, ಅವರು ದುರಂತ ಜಾಗಕ್ಕೆ ಶೀಘ್ರ ತಲುಪಲಿದ್ದಾರೆಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ನದಿಗೆ ಕಾಲು ಜಾರಿ ಬಿದ್ದು ಬಾಲಕರಿಬ್ಬರ ಸಾವು

ಗಂಗಾವತಿ: ತಾಲೂಕಿನ ತುಂಗಾಭದ್ರಾ ನದಿಯಲ್ಲಿ ಹೋಳಿ ಹಬ್ಬದ ನಿಮಿತ್ತ ಈಜಲು ಹೋಗಿದ್ದ ಇಬ್ಬರು ಬಾಲಕರು ಕಾಲು ಜಾರಿ ಬಿದ್ದು ಮೃತಪಟ್ಟ ಘಟನೆ ಬುಧವಾರ ಸಾಯಂಕಾಲ ನಡೆದಿದೆ. ಮೃತರು ಗಾಂಧಿ ನಗರ ನಿವಾಸಿಗಳಾಗಿದ್ದಾರೆ. ಸೂರ್ಯ(17) ಮತ್ತು ಅಭಿಷೇಕ (17) ಎಂದು ತಿಳಿದು ಬಂದಿದೆ. ಘಟನೆಯ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಪೊಲೀಸ್ ಆಗಮಿಸಿ ಸ್ಥಳೀಯರ ಸಹಕಾರದಿಂದ ಶವವನ್ನು ದಂಡಕ್ಕೆ ತರಲಾಗಿದೆ.

ಅಂಬೇಡ್ಕರರನ್ನು ಅಸ್ಮಿತೆ ರಾಜಕಾರಣಕ್ಕೆ ಸೀಮಿತಗೊಳಿಸಿದ ಅನುಯಾಯಿಗಳು

ಅಂಬೇಡ್ಕರ್ ದೂರದೃಷ್ಟಿ ಚಿಂತಕ

ಬೆಂಗಳೂರು: ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಕೇವಲ ಒಬ್ಬ ದಲಿತ ನಾಯಕ ಅಥವಾ ಒಂದು ವರ್ಗದ ಪ್ರತಿನಿಧಿಯಲ್ಲ. ಅವರು ಈ ದೇಶ ಕಂಡ ಅಪ್ರತಿಮ ಆರ್ಥಿಕ ತಜ್ಞ ಹಾಗೂ ದೂರದೃಷ್ಟಿಯ ಚಿಂತಕ. ಆದರೆ ದುರದೃಷ್ಟವಶಾತ್ ಅವರ ಅನುಯಾಯಿಗಳು ಎಂದು ಹೇಳಿಕೊಳ್ಳುವವರು ಅವರನ್ನು ಸರಿಯಾಗಿ ಓದದೆ, ಕೇವಲ ಅಸ್ಮಿತೆಯ ರಾಜಕಾರಣಕ್ಕೆ ಸೀಮಿತಗೊಳಿಸಿರುವುದು ವಿಷಾದನೀಯ ಎಂದು ರಂಗಕರ್ಮಿ ಪ್ರಕಾಶ್ ಬೆಳವಾಡಿ ಹೇಳಿದರು.

ನಗರದ ಸುಚಿತ್ರಾ ಸಭಾಂಗಣದಲ್ಲಿ ಸ್ವರಾಷ್ಟ್ರ ಪ್ರಕಾಶನದ ವತಿಯಿಂದ ನಡೆದ ಡಾ.ಸುಧಾಕರ ಹೊಸಳ್ಳಿಯವರ ನಾನೂ ಕಾಫಿರ(ಬಾಬಾ ಸಾಹೇಬರ ಹಿಂದುತ್ವ ಕಥನ) ಪುಸ್ತಕ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಧರ್ಮದ ಒಳಗಿದ್ದುಕೊಂಡೇ ದೋಷಗಳನ್ನು ಎತ್ತಿ ತೋರಿಸಿದ ಒಳಗಿನ ಚಿಂತಕರು. ರವೀಂದ್ರನಾಥ ಟ್ಯಾಗೋರರ ಗೋರಾ ಕಾದಂಬರಿಯ ಪಾತ್ರಗಳಂತೆ, ಅವರು ವ್ಯವಸ್ಥೆಯ ಒಳಗಿನಿಂದಲೇ ಸುಧಾರಣೆಯ ಧ್ವನಿ ಎತ್ತಿದರು. ಹಿಂದು ಧರ್ಮದಲ್ಲಿದ್ದ ಬಾಲ್ಯ ವಿವಾಹ, ಸತಿ ಪದ್ಧತಿಯಂತಹ ಕಪಿಮುಷ್ಟಿಯಿಂದ ಸಮಾಜವನ್ನು ಮುಕ್ತಗೊಳಿಸಲು ಕಾನೂನಾತ್ಮಕ ಹೋರಾಟ ನಡೆಸಿದರು ಎಂದು ತಿಳಿಸಿದರು.

ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯ ಹಿಂದೆ ಅಂಬೇಡ್ಕರ್ ಶ್ರಮವಿದೆ ಎಂಬುದು ಇಂದಿನ ಪೀಳಿಗೆಗೆ ತಿಳಿದಿಲ್ಲ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್‌ನಲ್ಲಿ ಅವರು ಮಂಡಿಸಿದ ರೂಪಾಯಿ ಮೌಲ್ಯದ ಕುಸಿತದ ಪ್ರಬಂಧ ಹಾಗೂ ಹ್ಯಾಮಿಲ್ಟನ್ ಕಮಿಷನ್‌ಗೆ ನೀಡಿದ ಸಲಹೆಗಳೇ ಇಂದಿನ ನಮ್ಮ ಬ್ಯಾಂಕಿಂಗ್ ವ್ಯವಸ್ಥೆಗೆ ಭದ್ರ ಬುನಾದಿ, ಎಂದು ಸ್ಮರಿಸಿದರು.

ರಾಜ್ಯಗಳ ವಿಭಜನೆಯ ಕುರಿತು ಅಂಬೇಡ್ಕರ್ ಅವರ ಭಿನ್ನ ನಿಲುವನ್ನು ಬೆಳವಾಡಿ ಈ ಸಂದರ್ಭದಲ್ಲಿ ನೆನಪಿಸಿದರು. ಅಂಬೇಡ್ಕರ್ ಅವರು ಭಾಷೆಯ ಆಧಾರದ ಮೇಲೆ ರಾಜ್ಯಗಳ ವಿಂಗಡಣೆಯನ್ನು ವಿರೋಧಿಸಿದ್ದರು. ಬದಲಿಗೆ ಆಡಳಿತಾತ್ಮಕ ಅನುಕೂಲಕ್ಕಾಗಿ ಸಣ್ಣ ರಾಜ್ಯಗಳಾಗಬೇಕು ಎಂಬುದು ಅವರ ಆಶಯವಾಗಿತ್ತು ಎಂದರು. ಅಂಬೇಡ್ಕರ್ ಅವರನ್ನು ಬೇರೊಂದು ರೀತಿಯಲ್ಲಿ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದ್ದು, ಸುಧಾಕರ್ ಅವರು ನಾನೂ ಕಾಫಿರ ಪುಸ್ತಕದ ಮೂಲಕ ಅವಕಾಶ ನೀಡಿದ್ದಾರೆ ಎಂದರು. ಕಾರ್ಯಕ್ರಮವನ್ನು ದಿವ್ಯಾ ಹೆಗಡೆ ಕಬ್ಬಿನಗದ್ದೆ ನಿರೂಪಿಸಿದರು.



ಹಿಂದುತ್ವದ ಬಗ್ಗೆ ಅಂಬೇಡ್ಕರ್ ನಿಲುವು

ಡಾ. ಸುಧಾಕರ ಹೊಸಳ್ಳಿ ಅವರು ರಚಿಸಿರುವ ನಾನೂ ಕಾಫಿರ(ಬಾಬಾಸಾಹೇಬರ ಹಿಂದುತ್ವ ಕಥನ) ಕೃತಿ ಗಮನ ಸೆಳೆಯುತ್ತಿದೆ. ಅಂಬೇಡ್ಕರ್ ಅವರು ಇಸ್ಲಾಂ ಧರ್ಮದ ಬಗ್ಗೆ ಹೊಂದಿದ್ದ ವಿಮರ್ಶಾತ್ಮಕ ದೃಷ್ಟಿಕೋನ ಹಾಗೂ ಅವರು ರಚಿಸಿದ ಥಾಟ್ಸ್ ಆನ್ ಪಾಕಿಸ್ತಾನ್ ಪುಸ್ತಕದ ಮಹತ್ವವನ್ನು ಕೃತಿಯ ಮೊದಲ ಭಾಗವಾದ ಇಸ್ಲಾಂ ಒಪ್ಪದ ಅಂಬೇಡ್ಕರ್ ವಿವರಿಸುತ್ತದೆ. ಹಿಂದು ಧರ್ಮದ ಸತ್ವ ಮತ್ತು ಸನಾತನ ಸಂಸ್ಕೃತಿಯ ಬಗ್ಗೆ ಅಂಬೇಡ್ಕರ್ ಅವರ ಮೆಚ್ಚುಗೆಯ ಮಾತುಗಳನ್ನು ಈ ಪುಸ್ತಕ ಒಳಗೊಂಡಿದೆ. ಅಂಬೇಡ್ಕರ್ ಅವರ ಅಪ್ರಕಟಿತ ಅಥವಾ ಜನಸಾಮಾನ್ಯರಿಗೆ ತಲುಪದ ವಿಚಾರಗಳನ್ನು ಜನರಿಗೆ ತಲುಪಿಸುವಲ್ಲಿ ಪುಸ್ತಕ ಸಹಕಾರಿ ಎಂದು ವಿಮರ್ಶಕ ಡಾ.ಜಿ.ಬಿ.ಹರೀಶ್ ಹೇಳಿದರು.

> ಡಾ. ಬಿ.ಆರ್. ಅಂಬೇಡ್ಕರ್ ವಿಚಾರಧಾರೆಗಳನ್ನು ಬೇಕಾದಂತೆ ಬಳಸಿಕೊಳ್ಳಲಾಗುತ್ತಿದೆ. ಅವರ ವ್ಯಕ್ತಿತ್ವ ಮತ್ತು ವಿಚಾರಗಳ ಬಗ್ಗೆ ಯಾವ ಸಂಗತಿಗಳನ್ನು ಹೇಳಬೇಕು ಮತ್ತು ಯಾವುದನ್ನು ಮರೆಮಾಚಬೇಕು ಎಂಬುದು ಮೊದಲೇ ನಿರ್ಧಾರವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸತ್ಯವನ್ನು ಶೋಧಿಸಿ, ಅಭಿವ್ಯಕ್ತಪಡಿಸುವುದು ಸವಾಲಿನ ಕೆಲಸವಾಗಿದೆ.
> ■ **ನಾರಾಯಣ ಶೇವಿರೆ,** ಅಭಾಸಾಪ ರಾಜ್ಯ ಸಂಘಟನಾ ಕಾರ್ಯದರ್ಶಿ

> ದೇಶದ ಸ್ವಾತಂತ್ರ್ಯ ಮತ್ತು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸಮಾಜವನ್ನು ಜಾಗೃತಗೊಳಿಸಲು ಸಾಹಿತ್ಯ ಮತ್ತು ಪತ್ರಿಕೋದ್ಯಮ ಪ್ರಬಲ ಅಸ್ತ್ರಗಳಾಗಿದ್ದವು. ಆದರೆ ಇಂದು ಅಕ್ಷರವನ್ನೇ ಮಾರುವ ದಲ್ಲಾಳಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇವರ ವಿರುದ್ಧ ರಾಷ್ಟ್ರೀಯ ಸಾಹಿತ್ಯದ ಮೂಲಕ ಸಮಾಜವನ್ನು ಸಂಘಟಿಸುವ ಅನಿವಾರ್ಯತೆ ಇದೆ.
> ■ **ಸುಧಾಕರ ಹೊಸಳ್ಳಿ,** ಲೇಖಕ

ನಿರೀಕ್ಷೆಗಳನ್ನು ಹೆಚ್ಚಿಸಿದ ಸಿದ್ದರಾಮಯ್ಯ ಬಜೆಟ್

ಪುಟ ೧➡ಕೇಂದ್ರ ಸರ್ಕಾರ ಜಿಎಸ್‌ಟಿ ಪ್ರಮಾಣವನ್ನು ಕಡಿಮೆ ಮಾಡಿರುವುದರಿಂದ ಈ ಬಾಬ್ತಿನಲ್ಲಿ ರಾಜ್ಯಕ್ಕೆ ಬರುತ್ತಿದ್ದ ತೆರಿಗೆಯ ಪಾಲು ಕಡಿಮೆಯಾಗಲಿದೆ.

ಇದೇ ಕಾರಣಕ್ಕಾಗಿ ಹಲವು ಸಾವಿರ ಕೋಟಿ ರೂಪಾಯಿಗಳ ಹೊರೆಯನ್ನು ಹೊರುವುದು ಸಿಎಂ ಸಿದ್ದರಾಮಯ್ಯ ಸರ್ಕಾರಕ್ಕೆ ಅನಿವಾರ್ಯವಾಗಿದೆ. ಬಜೆಟ್‌ಗೆ ಹೊಸ ಸಂಪನ್ಮೂಲಗಳನ್ನು ಶೋಧಿಸಲು ಆರ್ಥಿಕ ತಜ್ಞರಾದ ಕೃಷ್ಣನ್ ನೇತೃತ್ವದ ತಂಡ ರಚಿಸಿ ವರದಿ ಪಡೆದಿದ್ದು, ಗ್ಯಾರಂಟಿ ಯೋಜನೆಗಳಿಗೆ 52 ಸಾವಿರ ಕೋಟಿ ರೂ. ಸೇರಿದಂತೆ ವಿವಿಧ ವಲಯಗಳಿಗೆ ಅನುದಾನ ಒದಗಿಸಬೇಕಿದೆ. ಅಲ್ಲದೆ, ರಾಜ್ಯದ ಜನತೆಗೆ ಜನಪರ ಬಜೆಟ್ ಅನಿವಾರ್ಯತೆ ಇದೆ.

ದಾಖಲೆಯ 17ನೇ ಬಜೆಟ್ ಮಂಡಿಸಲು ಸಿದ್ಧತೆ: ಹಣಕಾಸು ಸಚಿವರೂ ಆಗಿರುವ ಸಿಎಂ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಲಿರುವ ಐತಿಹಾಸಿಕ 17ನೇ ಬಜೆಟ್‌ನಲ್ಲಿ ಜನಪರ ಯೋಜನೆಗಳನ್ನು ಘೋಷಣೆ ಮಾಡುವ ಮೂಲಕ ಅಸ್ತಿತ್ವದಲ್ಲಿರುವ ಯೋಜನೆಗಳಿಗೂ ಹಣಕಾಸಿನ ನೆರವು ಒದಗಿಸಬೇಕಿದೆ. ಒಂದು ಅಂದಾಜಿನ ಪ್ರಕಾರ, ಈ ಬಜೆಟ್‌ಗೆ 18 ಸಾವಿರ ಕೋಟಿ ರೂ. ಆದಾಯ ಕೊರತೆ ಸಾಧ್ಯತೆ ಇದ್ದು, ಇದನ್ನು ಸರಿದೂಗಿಸಲು ಸಾಕಷ್ಟು ಶ್ರಮ ವಹಿಸಿರುವ ಸಿದ್ದರಾಮಯ್ಯ ಅವರ ಲೆಕ್ಕಾಚಾರ ಹೇಗಿದೆ ಎಂದು ಶುಕ್ರವಾರ ಗೊತ್ತಾಗಲಿದೆ.

ಪ್ರಮುಖ ಆದ್ಯತೆಗಳು

ನೀರಾವರಿ ಯೋಜನೆಗಳು ಕೃಷಿ ಮತ್ತು ಗ್ರಾಮೀಣಾ ಭಿವೃದ್ಧಿಗೆ ಹೆಚ್ಚಿನ ಒತ್ತು. ಕಲ್ಯಾಣ ಕರ್ನಾಟಕ ಸೇರಿದಂತೆ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಅನುದಾನ, ಕೃಷಿ, ಕೈಗಾರಿಕೆ, ಪ್ರವಾಸೋದ್ಯಮ, ಶಿಕ್ಷಣ, ಹೈನುಗಾರಿಕೆ, ಆರೋಗ್ಯ, ವೈದ್ಯಕೀಯ, ಪ್ರವಾಸೋದ್ಯಮ, ಸಾರಿಗೆ ಸೇರಿದಂತೆ ಪ್ರಮುಖ ನೀರಾವರಿ ಯೋಜನೆಗಳಿಗೆ ಅನುದಾನ, ಬೆಂಗಳೂರಿಗೆ ಮೂಲಸೌಕರ್ಯ ಕಲ್ಪಿಸಲು ಹೆಚ್ಚು ಆದ್ಯತೆ, ಜಿಬಿಎಗೆ ಅನುದಾನ ಮತ್ತು ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳಿಗೆ ಬಜೆಟ್‌ನಲ್ಲಿ ಆದ್ಯತೆ ಸಿಗುವ ಸಾಧ್ಯತೆ ಹೆಚ್ಚಿದೆ.

ಬಜೆಟ್ ಗಾತ್ರ ಹೆಚ್ಚುತ್ತಾ, ಇಳಿಯುತ್ತಾ?

ಕಳೆದ ವರ್ಷ 4.09 ಲಕ್ಷ ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದ ಸಿದ್ದರಾಮಯ್ಯ ಅವರು ಈ ಬಾರಿ 4.30 ಲಕ್ಷ ಕೋಟಿ ಗಾತ್ರದ ಬಜೆಟ್ ಮಂಡಿಸುವ ಲೆಕ್ಕಾಚಾರದಲ್ಲಿದ್ದರು. ಆದರೆ ಬಜೆಟ್‌ಗೆ ಹೊರಗಿನಿಂದ ಬರುವ ಆದಾಯ ಕುಗ್ಗಿದ್ದು, ಇದನ್ನು ಸರಿದೂಗಿಸಿ ಸಮೃದ್ಧ ಬಜೆಟ್ ನೀಡಲು ಬಜೆಟ್ ಗಾತ್ರವನ್ನು 3.9 ಲಕ್ಷ ಕೋಟಿ ಇಳಿಸಬಹುದು ಎಂದು ಹೇಳಲಾಗುತ್ತಿದೆ.

> ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಎಂಎಸ್‌ಎಂಇ ವಲಯಕ್ಕೆ ಹೆಚ್ಚು ಆದ್ಯತೆ ನೀಡಿದ್ದು, ಅದೇ ರೀತಿಯಲ್ಲಿ ರಾಜ್ಯ ಬಜೆಟ್‌ನಲ್ಲೂ ಎಂಎಸ್‌ಎಂಇಗೆ ಆದ್ಯತೆ ನೀಡಬೇಕು. ಎಂಎಸ್‌ಎಂಇಗೆ ವಿಶೇಷ ನೀತಿ ತರಬೇಕು. ವಿದ್ಯುತ್ ದರ ಹೆಚ್ಚಳವು ಸಣ್ಣ ಕೈಗಾರಿಕೆಗಳಿಗೆ ಹೊರೆಯಾಗಲಿದ್ದು, ಕೈಗಾರಿಕೆಗಳಿಗೆ ಬೆಂಬಲ ನೀಡುವಂತಹ ಯೋಜನೆ ರೂಪಿಸಬೇಕು.
> ■ **ಉಮಾರೆಡ್ಡಿ,** ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯ ಮಂಡಳಿ

ಕೈಗಾರಿಕಾ ವಿದ್ಯುತ್ ದರ ಹೆಚ್ಚಿಸಿದ ಕೆಇಆರ್‌ಸಿ

ಪುಟ ೧➡**ಕೈಗಾರಿಕೆ, ಉದ್ಯಮ ವಲಯದಲ್ಲಿ ವಿರೋಧ:** ವಿದ್ಯುತ್ ದರ ಹೆಚ್ಚಳ ಸಂಬಂಧ ಕೈಗಾರಿಕೆ ಮತ್ತು ಉದ್ಯಮವಲಯದಲ್ಲಿ ಭಾರೀ ಆಕ್ರೋಶ ವ್ಯಕ್ತವಾಗುತ್ತಿದೆ. ಬೆಲೆ ಏರಿಕೆ ಮಾಡುವುದಿಲ್ಲ ಎಂದು ಭರವಸೆ ನೀಡಿದ್ದರೂ, ಈಗ ಏರಿಕೆ ಮಾಡಲಾಗಿದೆ ಎಂದು ತೀವ್ರ ಅಸಮಾಧಾನ ವ್ಯಕ್ತವಾಗಿದೆ. ಅಲ್ಪಾವಧಿಯಲ್ಲೇ ದರ ಮರು ಪರಿಷ್ಕರಣೆ ನಡೆಯುತ್ತಿರುವುದು ವ್ಯವಹಾರ ಯೋಜನೆಗೆ ಅನಿಶ್ಚಿತತೆಯನ್ನುಂಟು ಮಾಡಿದೆ. ಕರ್ನಾಟಕದ ವ್ಯವಹಾರ ಸುಗಮತೆ ಮೇಲೆಯೂ ಪ್ರತಿಕೂಲ ಪರಿಣಾಮ ಬೀರುತ್ತದೆ. ಬೆಲೆ ಏರಿಕೆ ಮೂಲಕ ಕೈಗಾರಿಕೆ ಮತ್ತು ವಾಣಿಜ್ಯ ವಲಯಗಳಿಂದ ಹೆಚ್ಚಿನ ಕ್ರಾಸ್-ಸಬ್ಸಿಡಿ ವಸೂಲಿ ಮಾಡಲು ಮುಂದಾಗಿರುವುದು ದುರದೃಷ್ಟಕರ. ಇದರಿಂದ ರಾಜ್ಯದ ಉತ್ಪಾದಕ ವಲಯಗಳ ಮೇಲೆ ಹೆಚ್ಚುವರಿ ಆರ್ಥಿಕ ಭಾರ ಉಂಟಾಗಲಿದೆ. ಕೆಇಆರ್‌ಸಿ ಹೊರಡಿಸಿರುವ ಆದೇಶದಲ್ಲಿ ಸ್ಪಷ್ಟತೆಯ ಕೊರತೆಯಿದ್ದು, ಜಾರಿಗೆ ಸಂಬಂಧಿಸಿದ ಪ್ರಮುಖ ಅಂಶಗಳು ಅಸ್ಪಷ್ಟವಾಗಿವೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕ ಮಹಾ ಸಂಸ್ಥೆ(ಎಫ್‌ಕೆಸಿಸಿಐ) ಆಕ್ರೋಶ ಹೊರಹಾಕಿದೆ.

> ದರ ಏರಿಸುವುದರಲ್ಲಿ ರಾಜ್ಯ ಸರ್ಕಾರ ಹಾಫ್ ಸೆಂಚುರಿ ಬಾರಿಸಿದೆ. ಇದುವರೆಗೆ 50ಕ್ಕೂ ಹೆಚ್ಚು ವಸ್ತುಗಳು, ಸೇವೆಗಳ ದರ ಹೆಚ್ಚಿಸಿದ್ದಾರೆ. ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ದರ ಹೆಚ್ಚಳಕ್ಕೆ ತೀರ್ಮಾನಿಸಿದ್ದು, ಕೈಗಾರಿಕೆಗಳು ಕರ್ನಾಟಕ ತೊರೆಯುವಂತೆ ಮಾಡುತ್ತಿದ್ದಾರೆ.
> ■ **ಪ್ರಲ್ಹಾದ್ ಜೋಶಿ,** ಕೇಂದ್ರ ಸಚಿವ

> ಕೈಗಾರಿಕಾ ವಲಯವು ಉದ್ಯೋಗ ಸೃಷ್ಟಿ, ಆರ್ಥಿಕ ಬೆಳವಣಿಗೆಯ ಮುಖ್ಯ ಆಧಾರವಾಗಿದೆ ಎಂಬ ಧೋರಣೆಯನ್ನು ಸರ್ಕಾರ ಹಾಗೂ ಕೆಇಆರ್‌ಸಿ ಮರೆತಂತಿದೆ.
> ■ **ಉಮಾ ರೆಡ್ಡಿ,** ಎಫ್‌ಕೆಸಿಸಿಐ ಅಧ್ಯಕ್ಷೆ

ವಿದ್ಯುತ್ ದರ ಏರಿಕೆ ವಿವರ

- ಎಲ್‌ಟಿ(ಕಡಿಮೆ ಒತ್ತಡ)-3(ಎ)-ವಾಣಿಜ್ಯ ಬಳಕೆ ವಿದ್ಯುತ್ 7 ರೂ.ನಿಂದ 7.10 ಕ್ಕೆ ಏರಿಕೆ
- ಎಲ್‌ಟಿ(ಕಡಿಮೆ ಒತ್ತಡ)-5- ಕೈಗಾರಿಕೆಗೆ ಬಳಸುವ ವಿದ್ಯುತ್ 4.50 ರೂ.ನಿಂದ 5.20 ಕ್ಕೆ ಏರಿಕೆ
- ಎಚ್‌ಟಿ(ಹೆಚ್ಚಿನ ಒತ್ತಡ)-2(ಎ)- ಮೆಟ್ರೋ, ರೈಲ್ವೆ ಇತರೆ ವಿದ್ಯುತ್ 6.60 ರೂ.ನಿಂದ 6.70ಕ್ಕೆ ಏರಿಕೆ
- ಎಚ್‌ಟಿ(ಹೆಚ್ಚಿನ ಒತ್ತಡ)-2(ಬಿ)-ಕಾಂಪ್ಲೆಕ್ಸ್, ಥಿಯೇಟರ್, ಹೋಟೆಲ್‌ಗೆ ಬಳಸುವ ವಿದ್ಯುತ್ 5.95 ರೂ.ನಿಂದ 6.90ಕ್ಕೆ ಏರಿಕೆ

ಯುಗ ಧರ್ಮಕ್ಕಾಗಿ ರಾಷ್ಟ್ರೀಯ ಸಂಗೋಷ್ಠಿ

ಬೆಂಗಳೂರು: ವೇದ ವಿಜ್ಞಾನ ಶೋಧ ಸಂಸ್ಥಾನವು ದಿಲ್ಲಿ ಕೇಂದ್ರೀಯ ಸಂಸ್ಕೃತ ವಿವಿ, ಕರ್ನಾಟಕ ಸಂಸ್ಕೃತ ವಿವಿಗಳ ಸಹಯೋಗದಲ್ಲಿ ಚನ್ನೇನಹಳ್ಳಿಯ ವೇದ ವಿಜ್ಞಾನ ಗುರುಕುಲದಲ್ಲಿ 2 ದಿನಗಳ ಯುಗಧರ್ಮಕ್ಕಾಗಿ ನವದೃಷ್ಟಿ ಎಂಬ ವಿಷಯದ ಮೇಲೆ ರಾಷ್ಟ್ರೀಯ ಸಂಗೋಷ್ಠಿ ಆಯೋಜಿಸಿತ್ತು.

ಈ ಸಂಗೋಷ್ಠಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ ಸುರೇಶ ಸೋನಿ, ವೇದವಿಜ್ಞಾನ ಶೋಧ ಸಂಸ್ಥಾನದ ಅಧ್ಯಕ್ಷ ಪ್ರೊ.ರಾಮಚಂದ್ರ ಭಟ್ಟ ಕೋಟೆಮನೆ, ಕೇಂದ್ರೀಯ ಸಂಸ್ಕೃತ ವಿವಿ ಕುಲಪತಿ ಪ್ರೊ. ಶ್ರೀನಿವಾಸ ವರಖೇಡಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ. ಅಹಲ್ಯಾ ಶರ್ಮಾ, ಪದ್ಮ ಭೂಷಣ ಶತಾವಧಾನಿ ಡಾ. ಆರ್.ಗಣೇಶ್ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಬಂದ 40ಕ್ಕೂ ಹೆಚ್ಚು ವಿದ್ವಾಂಸರು ಭಾಗವಹಿಸಿ ಗಂಭೀರವಾದ ಚರ್ಚೆಗಳನ್ನು ನಡೆಸಿದರು.



ವ್ಯಷ್ಟಿಧರ್ಮವು ಸಮಷ್ಟಿಗೆ ಪೂರಕವಾಗುವ ರೀತಿಗಳು ಹಾಗೂ ಋಷಿಸದೃಶ ಮಹಾತ್ಮರಿಂದ ಪ್ರವರ್ಧಮಾನಗೊಂಡ ಸಿಖ್, ಜೈನ, ಬೌದ್ಧ ದರ್ಶನಗಳ ವೀಕ್ಷಣೆ ಈ ವಿಷಯಗಳ ಕುರಿತು ಸಂವಾದ ಸಂಗೋಷ್ಠಿ ನಡೆಯಿತು.

ಮುಳುಗಿದ ಇರಾನ್ ಯುದ್ಧನೌಕೆ, 90 ಸಾವು

ಪುಟ ೧➡ಅಮೆರಿಕದ ಜಲಾಂತರ್ಗಾಮಿಯು ಶ್ರೀಲಂಕಾದ ದಕ್ಷಿಣ ಕರಾವಳಿಯ ಬಳಿ ಇರಾನಿನ ಹಡಗಿನ ಮೇಲೆ ದಾಳಿ ನಡೆಸಿದೆ ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ದೃಢಪಡಿಸಿದ ಬೆನ್ನಲ್ಲೇ ಈ ಹೇಳಿಕೆ ಬಿಡುಗಡೆಯಾಗಿದೆ. ಈ ಹಡಗು ಇರಾನಿನ ನೌಕಾಪಡೆಯ ಯುದ್ಧನೌಕೆಯಾಗಿದ್ದು, ಫೆಬ್ರವರಿ ಮಧ್ಯದಲ್ಲಿ ವಿಶಾಖಪಟ್ಟಣದಲ್ಲಿ ನಡೆದ ಭಾರತೀಯ ನೌಕಾಪಡೆಯ ಅಂತಾರಾಷ್ಟ್ರೀಯ ಫ್ಲೀಟ್ ರಿವ್ಯೂ ಮತ್ತು ಬಹುರಾಷ್ಟ್ರೀಯ ಕಾರ್ಯಾಚರಣೆ ಮಿಲನ್‌ನಲ್ಲಿ ಭಾಗವಹಿಸಿತ್ತು.

30 ಜನರನ್ನು ರಕ್ಷಿಸಿದ ಲಂಕಾ ಸೇನೆ

ಪುಟ ೧➡ಮತ್ತು ನಾವು ಖಚಿತವಾಗುವವರೆಗೆ ಕಾರ್ಯಾಚರಣೆಯನ್ನು ಮುಂದುವರಿಸುತ್ತೇವೆ ಎಂದು ಶ್ರೀಲಂಕಾದ ನೌಕಾಪಡೆಯ ವಕ್ತಾರೆ ಕಮಾಂಡರ್ ಬುದ್ಧಿಕಾ ಸಂಪತ್ ಹೇಳಿದರು.

ಹೋಳಿ ಹಬ್ಬದ ದಿನ ಎಂಇಎಸ್ ಪುಂಡಾಟಿಕೆ

ಬೆಳಗಾವಿ: ಹೋಳಿ ಹಬ್ಬದ ಆಚರಣೆ ವೇಳೆ ಎಂಇಎಸ್ ಪುಂಡಾಟಿಕೆ ಮೆರೆದಿದ್ದು, ಮಹಾರಾಷ್ಟ್ರ ನಾಡಗೀತೆ ಹಾಡಿಗೆ ಯುವಕರು ಡ್ಯಾನ್ಸ್ ಮಾಡುವ ಮೂಲಕ ಮತ್ತೆ ಕಿರಿಕ್ ಮಾಡಿಕೊಂಡಿದ್ದಾರೆ. ಇದರಿಂದಾಗಿ ಕನ್ನಡಿಗರ ಕೆಂಗಣ್ಣಿಗೆ ಮತ್ತೆ ಗುರಿಯಾಗಿರುವ ಘಟನೆ ಮಂಗಳವಾರ ಬೆಳಕಿಗೆ ಬಂದಿದೆ.

ಜೈ ಮಹಾರಾಷ್ಟ್ರ ಪೋಸ್ಟರ್ ಪ್ರದರ್ಶನ
ಮಹಾರಾಷ್ಟ್ರ ಗೀತೆಗೆ ನೃತ್ಯ

ಬೆಳಗಾವಿ ನಗರದ ಅನಗೋಳದ ರಾಜಹಂಸ ಗಲ್ಲಿಯಲ್ಲಿ ಹೋಳಿ ಹಬ್ಬದ ನಿಮಿತ್ತ ಬಣ್ಣ ಆಡಲು ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಈ ವೇಳೆ ಜೈ ಮಹಾರಾಷ್ಟ್ರ ಎಂದು ಪೋಸ್ಟರ್ ಪ್ರದರ್ಶನ ಮಾಡುವುದರ ಮೂಲಕ ಜೊತೆಗೆ ಬೆಳಗಾವಿ ಮಹಾರಾಷ್ಟ್ರ ರಾಜ್ಯಕ್ಕೆ ಸೇರಬೇಕು ಮಹಾ ಪರ ಘೋಷಣೆ ಹಾಕಿ ಮಹಾರಾಷ್ಟ್ರ ನಾಡಗೀತೆಗೆ ಡ್ಯಾನ್ಸ್ ಮಾಡಿದ್ದಾರೆ. ಈ ಘಟನೆಯಿಂದ ಮತ್ತೆ ಬೆಳಗಾವಿ ನಗರದಲ್ಲಿ ಅಶಾಂತಿಯನ್ನುಂಟು ಮಾಡಿದ್ದಲ್ಲದೆ. ಕನ್ನಡಿಗರ ಕೆಂಗಣ್ಣಿಗೆ ಗುರಿಯಾಗಿರುವ ಘಟನೆಯು ಬೆಳಕಿಗೆ ಬಂದಿದೆ. ಟಿಳಕವಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಹೋಳಿ ಹಬ್ಬ ಆಯೋಜಕರು ಹಾಗೂ ಹಾಡು ಹಾಕಿದವರ ವಿರುದ್ಧ ಮಹಾರಾಷ್ಟ್ರದ ಗೀತೆಗೆ ಡ್ಯಾನ್ಸ್ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕನ್ನಡಪರ ಸಂಘಟನೆಗಳು ಆಗ್ರಹಿಸಿವೆ ಹಾಗೂ ಪೊಲೀಸರು ಈ ಘಟನೆಯ ಕುರಿತು ಪರಿಶೀಲನೆ ನಡೆಸಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಒಂದೇ ಕೊಠಡಿಯಲ್ಲಿದ್ದ 10ಕ್ಕೂ ಹೆಚ್ಚು ಮಂದಿ ಪಾಸ್!

ಪುಟ ೧➡ಒಂದು ಕೊಠಡಿಯಲ್ಲಿ 24 ಅಭ್ಯರ್ಥಿಗಳು ಇರುತ್ತಾರೆ. ಕೆಪಿಎಸ್‌ಸಿ ಇತಿಹಾಸದಲ್ಲಿ ಒಂದೇ ಕೊಠಡಿಯಲ್ಲಿ ಇಷ್ಟು ಸಂಖ್ಯೆಯ ಅಭ್ಯರ್ಥಿಗಳು ಪಾಸ್ ಆಗಿರುವುದು ಇದೇ ಮೊದಲು ಎನ್ನುವ ಮಾತುಗಳು ಕೇಳಿಬಂದಿವೆ.

ವ್ಯಕ್ತಿತ್ವ ಪರೀಕ್ಷೆಗೆ ಆರೇ ಮಂದಿ ಆಯ್ಕೆ! ಕಳೆದ ವರ್ಷದ (2025) ಮೇ 3, 5, 7 ಮತ್ತು 9ರಂದು ನಡೆದಿತ್ತು ನಡೆದಿದ್ದ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ ಎ' ಮತ್ತು ಗ್ರೂಪ್ ಬಿ' ವೃಂದದ 384 ಹುದ್ದೆಗಳಿಗೆ ನೇಮಕಾತಿಗೆ ನಡೆದ ಮುಖ್ಯ ಪರೀಕ್ಷೆಯಿಂದ 1:3 ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನ) ಅರ್ಹತೆ ಪಡೆದ ಅಭ್ಯರ್ಥಿಗಳ ಪಟ್ಟಿಯನ್ನು ಕೆಪಿಎಸ್‌ಸಿ ಸೋಮವಾರ(ಮಾ.2ರಂದು) ಪ್ರಕಟಿಸಿದೆ. ಈ ಹುದ್ದೆಗಳ ನೇಮಕಾತಿಯ ಪೂರ್ವಭಾವಿ ಪರೀಕ್ಷೆಯಲ್ಲಿ ಅರ್ಹತೆ ಪಡೆಯದೆ, ಹೈಕೋರ್ಟ್ ಮತ್ತು ಕರ್ನಾಟಕ ಆಡಳಿತ ನ್ಯಾಯಮಂಡಳಿ ಮೆಟ್ಟಿಲೇರಿ ಷರತ್ತುಬದ್ಧ ಅನುಮತಿ ಪಡೆದು ಮುಖ್ಯ ಪರೀಕ್ಷೆ ಬರೆದ 300ಕ್ಕೂ ಹೆಚ್ಚು ಅಭ್ಯರ್ಥಿಗಳಲ್ಲಿ ಆರು ಮಂದಿ ವ್ಯಕ್ತಿತ್ವ ಪರೀಕ್ಷೆಗೆ ಆಯ್ಕೆಯಾಗಿದ್ದರು.

ಸದನದಲ್ಲಿ ಪ್ರಸ್ತಾಪಿಸಲು ಬಿಜೆಪಿ ನಿರ್ಧಾರ: ಕೆಪಿಎಸ್‌ಸಿ ಕರ್ಮಕಾಂಡವನ್ನು ಬಿಜೆಪಿ ಮುಂಬರುವ ಬಜೆಟ್ ಅಧಿವೇಶನದಲ್ಲಿ ಪ್ರಸ್ತಾಪಿಸಲು ನಿರ್ಧರಿಸಿದ್ದು, ತನಿಖೆ ಮುಗಿಯುವವರೆಗೆ ಫಲಿತಾಂಶ ತಡೆಹಿಡಿಯಲು ಒತ್ತಾಯಿಸಿದೆ. ಕೆಪಿಎಸ್‌ಸಿ ಹಾಗೂ ಸರ್ಕಾರ ಈ ಹಿಂದೆ ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳನ್ನು ತಳ್ಳಿಹಾಕಿತ್ತು. ಆದರೆ, ಈ ಬಾರಿಯ ಫಲಿತಾಂಶದ ಅಕ್ರಮದ ಬಗ್ಗೆ ತನಿಖೆ ನಡೆಯಬೇಕೆಂದು ಒತ್ತಾಯಿಸಿದೆ.

ಪ್ರಧಾನಿ ಮಧ್ಯಸ್ಥಿಕೆಗೆ ಮನವಿ: ಕೆಪಿಎಸ್‌ಸಿ ಅಕ್ರಮ ಆರೋಪ ಹಿನ್ನೆಲೆ ಅಭ್ಯರ್ಥಿಗಳು ಈಗಾಗಲೇ ದೊಡ್ಡ ಮಟ್ಟದ ಕ್ಯಾಂಪೇನ್ ಆರಂಭಿಸಿದ್ದಾರೆ. ನೇಮಕಾತಿಯಲ್ಲಿ ಮಧ್ಯ ಪ್ರವೇಶಿಸಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಭ್ಯರ್ಥಿಗಳು ಮನವಿ ಮಾಡಿಕೊಂಡಿದ್ದಾರೆ. ಎಕ್ಸ್‌ನಲ್ಲಿ ಫಲಿತಾಂಶದ ಪ್ರತಿಯೊಂದನ್ನು ಪೋಸ್ಟ್ ಹಂಚಿಕೊಂಡಿದ್ದಾರೆ. ಕೆಲವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಟ್ಯಾಗ್ ಮಾಡಿ ಮಧ್ಯ ಪ್ರವೇಶಿಸಲು ಮನವಿ ಮಾಡಿದ್ದಾರೆ. ಇನ್ನೂ ಕೆಲವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಟ್ಯಾಗ್ ಮಾಡಿ ನ್ಯಾಯ ಒದಗಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ

> ಒಂದೇ ಕೊಠಡಿಯಲ್ಲಿ ಪರೀಕ್ಷೆ ಬರೆದ 15 ಮಂದಿ ವ್ಯಕ್ತಿತ್ವ ಪರೀಕ್ಷೆಗೆ ಆಯ್ಕೆ ಆಗಿದ್ದಾರೆ. ಸರಣಿ ಅನುಕ್ರಮದಲ್ಲಿ ಸಾಲಾಗಿ ಆಯ್ಕೆ ಹೇಗೆ ಸಾಧ್ಯ. ಈ ಪೈಕಿ ಒಂದೇ ಕುಟುಂಬದ ಮೂವರು ಆಯ್ಕೆಯಾಗಿದ್ದಾರೆ. ಪ್ರಭಾವಿಗಳ ಮಕ್ಕಳಿಗೆ ಸೀಟ್ ಕೊಡಿಸಲು ಈ ಕುತಂತ್ರ ನಡೆದಿದೆ.
> ■ **ಕಾಂತಕುಮಾರ್,** ಅಖಿಲ ಭಾರತ ವಿದ್ಯಾರ್ಥಿ ಸಂಘದ ಅಧ್ಯಕ್ಷ

ಭ್ರಷ್ಟಾಚಾರ ನಡೆದಿಲ್ಲ, ಇದು ಪಾರದರ್ಶಕ ಫಲಿತಾಂಶ: ಕೆಪಿಎಸ್‌ಸಿ

ಆಯೋಗದ ನಡೆಸಿದ ಪರೀಕ್ಷೆ ಫಲಿತಾಂಶದ ಬಗ್ಗೆ ಕೇಳಿಬರುತ್ತಿರುವ ಆರೋಪಗಳಿಗೆ ಪ್ರತಿಕ್ರಿಯಿಸಿದ ಕೆಪಿಎಸ್‌ಸಿ ಕಾರ್ಯದರ್ಶಿ ಜ್ಯೋತಿ, ಕೆಪಿಎಸ್‌ಸಿ ಫಲಿತಾಂಶದಲ್ಲಿ ಯಾವುದೇ ರೀತಿಯ ಭ್ರಷ್ಟಾಚಾರ ನಡೆದಿಲ್ಲ. ಅತ್ಯಂತ ಪಾರದರ್ಶಕವಾಗಿ ಪರೀಕ್ಷೆ ನಡೆಸಿ ಫಲಿತಾಂಶ ಬಿಡುಗಡೆ ಮಾಡಲಾಗಿದೆ. ಯಾವುದೇ ಆಧಾರವಿಲ್ಲದೆ ಭ್ರಷ್ಟಾಚಾರದ ಆರೋಪ ಮಾಡುವುದು ಸರಿಯಲ್ಲ ಎಂದು ಸಮರ್ಥಿಸಿಕೊಂಡರು. ಈ ಆರೋಪದ ಬಗ್ಗೆ ನಾನು ಖುದ್ದಾಗಿ ತನಿಖೆ ನಡೆಸುತ್ತಿದ್ದೇನೆ. ಇದಕ್ಕಾಗಿ ಯಾವುದೇ ಪ್ರತ್ಯೇಕ ಸಮಿತಿ ರಚಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

10 ವಿಭಾಗಗಳಿಗೆ ಪ್ರಭಾರಿ, ಸಹ ಪ್ರಭಾರಿಗಳ ನಿಯುಕ್ತಿ: ಬಿವೈವಿ

ಬೆಂಗಳೂರು: ಭಾರತೀಯ ಜನತಾ ಪಾರ್ಟಿಯ ಸಂಘಟನೆಯ ದೃಷ್ಟಿಯಿಂದ ಪಕ್ಷದ 10 ವಿಭಾಗಗಳಿಗೆ ಪ್ರಭಾರಿ ಹಾಗೂ ಸಹ-ಪ್ರಭಾರಿಗಳನ್ನು ನಿಯುಕ್ತಿ ಮಾಡಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಬುಧವಾರ ಆದೇಶ ಹೊರಡಿಸಿದ್ದಾರೆ.



ಮೈಸೂರು ವಿಭಾಗಕ್ಕೆ ಪ್ರಭಾರಿಯಾಗಿ ಸ್ವಾಮಿ ಮರುಳಾಪುರ, ಸಹ ಪ್ರಭಾರಿಯಾಗಿ ಇ.ಸಿ.ನಿಂಗರಾಜುಗೌಡ, ಮಂಗಳೂರು ವಿಭಾಗಕ್ಕೆ ಪ್ರಭಾರಿಯಾಗಿ ಬಿ.ಬಿ.ಭಾರತೀಶ್ ಮತ್ತು ಸಹ ಪ್ರಭಾರಿಯಾಗಿ ಜಯಂತ್ ಕೋಟ್ಯಾನ್, ಶಿವಮೊಗ್ಗ ವಿಭಾಗಕ್ಕೆ ಪ್ರಭಾರಿಯಾಗಿ ಆರ್.ಕೆ.ಸಿದ್ರಾಮಣ್ಣ ಮತ್ತು ಸಹ ಪ್ರಭಾರಿಯಾಗಿ ಆರ್.ಡಿ.ಹೆಗಡೆ, ಧಾರವಾಡ ವಿಭಾಗಕ್ಕೆ ಪ್ರಭಾರಿಯಾಗಿ ಜಯ ತೀರ್ಥ ಕಟ್ಟಿ ಮತ್ತು ಸಹ ಪ್ರಭಾರಿಯಾಗಿ ಭೋಜರಾಜ ಕರೂದಿ ಹಾಗೂ ಬೆಳಗಾವಿ ವಿಭಾಗಕ್ಕೆ ಪ್ರಭಾರಿಯಾಗಿ ಸಂಜಯ್ ಪಾಟೀಲ್, ಸಹ ಪ್ರಭಾರಿಯಾಗಿ ಬಸವರಾಜ ಯಂಕಂಚಿ ನಿಯುಕ್ತರಾಗಿದ್ದಾರೆ.

» ಮೈಸೂರು ವಿಭಾಗಕ್ಕೆ ಪ್ರಭಾರಿಯಾಗಿ ಸ್ವಾಮಿ ಮರುಳಾಪುರ ನಿಯೋಜನೆ

ಕಲಬುರಗಿ ವಿಭಾಗಕ್ಕೆ ಪ್ರಭಾರಿಯಾಗಿ ಅರುಣ್ ಶಹಾಪುರ ಮತ್ತು ಸಹ ಪ್ರಭಾರಿಯಾಗಿ ಶರಣಪ್ಪ ತಳವಾರ, ಬಳ್ಳಾರಿ ವಿಭಾಗಕ್ಕೆ ಪ್ರಭಾರಿಯಾಗಿ ಅಮರನಾಥ ಪಾಟೀಲ್ ಮತ್ತು ಸಹ ಪ್ರಭಾರಿಯಾಗಿ ಚನ್ನಬಸವನಗೌಡ ಪಾಟೀಲ್, ದಾವಣಗೆರೆ ವಿಭಾಗಕ್ಕೆ ಪ್ರಭಾರಿ ಯಾಗಿ ಟಿ.ಡಿ.ಮೇಘರಾಜ್ ಮತ್ತು ಸಹ ಪ್ರಭಾರಿಯಾಗಿ ಎ.ಮುರಳಿ, ಬೆಂಗಳೂರು ಗ್ರಾಮಾಂತರ ವಿಭಾಗಕ್ಕೆ ಪ್ರಭಾರಿಯಾಗಿ ಬ್ಯಾಟರಂಗೇಗೌಡ ಮತ್ತು ಸಹ ಪ್ರಭಾರಿಯಾಗಿ ಎಂ.ಕೆ. ವಾಸುದೇವ, ಬೆಂಗಳೂರು ವಿಭಾಗಕ್ಕೆ ಪ್ರಭಾರಿಯಾಗಿ ಎಸ್.ಎನ್.ರಾಜಣ್ಣ ಮತ್ತು ಸಹ ಪ್ರಭಾರಿಯಾಗಿ ಚಂದ್ರಶೇಖರ ರಾಜು ಹಾಗೂ ಕಿರಣ್ ಬಾಬು ನಿಯುಕ್ತಿಗೊಂಡಿದ್ದಾರೆ.



ಧಾರವಾಡ ನಗರದಲ್ಲಿ ಬುಧವಾರ ಹೋಳಿ ಹಬ್ಬವನ್ನು ಜನರು ಸಂಭ್ರಮದಿಂದ ಆಚರಿಸಿದರು.

ಮೀಸಲಾತಿಯಲ್ಲಿ ಪರಿಶಿಷ್ಟರಿಗೆ ಅನ್ಯಾಯ: ಬಿ. ಶ್ರೀರಾಮುಲು

ಬೆಂಗಳೂರು: ರಾಜ್ಯ ಸರ್ಕಾರವು ಮೀಸಲಾತಿಯನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸದೇ ಗೊಂದಲ ಸೃಷ್ಟಿಸಿ ಎಸ್‌ಸಿ-ಎಸ್‌ಟಿ ಹಾಗೂ ಹಿಂದುಳಿದ ಸಮುದಾಯಕ್ಕೆ ಅನ್ಯಾಯ ಮಾಡುತ್ತಿದೆ. ಇದನ್ನು ಖಂಡಿಸಿ ಬಿಜೆಪಿ ಮುಂದಿನ ದಿನಗಳಲ್ಲಿ ಹೋರಾಟ ಮಾಡಲಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಎಚ್ಚರಿಕೆ ಕೊಟ್ಟರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತ ಮೊದಲು ನೀಡಿದ ಭರವಸೆ, ಆಶ್ವಾಸನೆಗಳನ್ನು ಜಾರಿ ಮಾಡಲಿಲ್ಲ. ಒಂದು ವರ್ಷದಲ್ಲಿ ಒಂದು ಲಕ್ಷ ಹುದ್ದೆ ಭರ್ತಿ ಮಾಡುತ್ತೇವೆ ಎಂದಿದ್ದರು. ಆದರೆ, ಇಷ್ಟು ಸಮಯವಾದರೂ ಹುದ್ದೆ ಭರ್ತಿಗೆ ಕ್ರಮ ಕೈಗೊಳ್ಳಲಿಲ್ಲ. ರಾಜ್ಯದಲ್ಲಿ ಸುಮಾರು 2.85 ಲಕ್ಷ ಹುದ್ದೆ ಖಾಲಿಯಿದೆ. ಈ ಬಗ್ಗೆ ಕ್ರಮ ಕೈಗೊಳ್ಳದೆ ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದು ಆರೋಪಿಸಿದರು.

ಮೀಸಲಾತಿ ಎಂಬುದು ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ನೀಡಿದ ಹಕ್ಕು. ಅವರು ಎಸ್‌ಸಿ-ಎಸ್‌ಟಿ ಹಾಗೂ ಹಿಂದುಳಿದ ವರ್ಗಕ್ಕೆ ಶೇ.50 ಮೀಸಲು ನೀಡಿದ್ದರು. ಆಗಿನ ಸಿಎಂ ಬಸವರಾಜ ಬೊಮ್ಮಾಯಿ ಅಧಿಕಾರಾವಧಿಯಲ್ಲಿ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ಕೊಡಬೇಕೆಂದು ತೀರ್ಮಾನಿಸಿದ್ದೆವು. ಮೀಸಲಾತಿಯನ್ನು ಸರಿಯಾಗಿ ಅನುಷ್ಠಾನಿಸದೇ ಯುವಕರಿಗೆ ಮಹಾದ್ರೋಹವನ್ನು ಈಗಿನ ಸರ್ಕಾರ ಮಾಡುತ್ತಿದೆ. ಅಂಬೇಡ್ಕರ್ ನೀಡಿದ್ದನ್ನೇ ಕಾಂಗ್ರೆಸ್ ಕಸಿಯುತ್ತಿದೆ. ಇದರ ವಿರುದ್ಧ ಬಿಜೆಪಿ ಹೋರಾಟ ನಡೆಸಲಿದೆ. ಬಿಜೆಪಿಯ ಎಲ್ಲಾ ಸಂಸದರು, ಶಾಸಕರು, ಮಾಜಿ ಸಚಿವರು ಈ ಕುರಿತು ತೀರ್ಮಾನ ಕೈಗೊಂಡಿದ್ದೇವೆ ಎಂದರು. ಈ ಸರ್ಕಾರ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಹಣವನ್ನೂ ಬೇರೆ ಉದ್ದೇಶಗಳಿಗೆ ಬಳಸಿಕೊಂಡು ಅನ್ಯಾಯ ಮಾಡಿದೆ. ಈಗ ಮೀಸಲಾತಿಯಲ್ಲೂ ಸರಿಯಾದ ಸ್ಪಷ್ಟತೆ ನೀಡದೆ ಗೊಂದಲ ಸೃಷ್ಟಿಸಿದೆ ಎಂದು ಆರೋಪಿಸಿದರು.

ಕಿರುಸುದ್ದಿ

ಜಿಲ್ಲೆ ವಿಭಜನೆ ನಿರ್ಧಾರ ಸಿಎಂಗೆ ಬಿಟ್ಟದ್ದು: ಜಾರಕಿಹೊಳಿ

ಬೆಳಗಾವಿ: ಜಿಲ್ಲೆ ವಿಭಜಿಸಿ ಚಿಕ್ಕೋಡಿಯನ್ನು ಹೊಸ ಜಿಲ್ಲೆಯನ್ನಾಗಿ ಘೋಷಿಸುವ ಬೇಡಿಕೆ ದಶಕಗಳಿಂದ ಬಾಕಿ ಇದೆ. ಜಿಲ್ಲೆಯ ಶಾಸಕರೆಲ್ಲರೂ ಸೇರಿ ಚಿಕ್ಕೋಡಿ ಜಿಲ್ಲೆಯನ್ನು ಘೋಷಿಸಿ ಎಂದು ಸಿಎಂ ಸಿದ್ದರಾಮಯ್ಯನವರಿಗೆ ಹೇಳಿದ್ದೇವೆ. ಆದರೆ, ಅಂತಿಮ ನಿರ್ಧಾರವನ್ನು ಸಿಎಂ, ಸರ್ಕಾರವೇ ಕೈಗೊಳ್ಳಬೇಕೆಂದು ಸಚಿವ ಸತೀಶ ಜಾರಕಿಹೊಳಿ ಅವರು ಹೇಳಿದರು. ಬುಧವಾರ ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬೆಳಗಾವಿ ಜಿಲ್ಲೆಯು ಭೌಗೋಳಿಕವಾಗಿ ದೊಡ್ಡದಾಗಿರುವುದರಿಂದ ಆಡಳಿತಾತ್ಮಕ ಅನುಕೂಲಕ್ಕಾಗಿ ಚಿಕ್ಕೋಡಿಯನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲೇಬೇಕು. ಬಜೆಟ್‌ನಲ್ಲಿಯೇ ಜಿಲ್ಲೆಯನ್ನು ವಿಭಜಿಸಬೇಕು ಎಂಬ ನಿಯಮವಿಲ್ಲ. ಸರ್ಕಾರ ನಿರ್ಧಾರಿಸಿದರೆ, ಬಜೆಟ್ ನಂತರವೂ ಜಿಲ್ಲಾ ಕೇಂದ್ರವನ್ನು ಘೋಷಿಸಬಹುದು ಎಂದು ಹೇಳಿದರು.




ಸುಸೂತ್ರವಾಗಿ ನಡೆದ ಪಿಯುಸಿ ಪರೀಕ್ಷೆ

ಬೆಂಗಳೂರು: ಬುಧವಾರ ದ್ವಿತೀಯ ಪಿಯುಸಿ ಪರೀಕ್ಷೆ-1ರ ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ ಮತ್ತು ಫ್ರೆಂಚ್ ಭಾಷೆ ಪರೀಕ್ಷೆ ಸುಸೂತ್ರವಾಗಿ ನಡೆದಿದೆ. ಒಟ್ಟು 43,673 ಮಂದಿ ಈ ವಿಷಯಗಳಿಗೆ ನೋಂದಣಿ ಮಾಡಿಕೊಂಡಿದ್ದು 42,747 ಮಂದಿ ಪರೀಕ್ಷೆಗೆ ಹಾಜರಾಗಿದ್ದಾರೆ. ಈ ಮೂಲಕ ಶೇ.97.88 ಹಾಜರಾತಿ ದಾಖಲಾಗಿದೆ. ಗುರುವಾರ ಇತಿಹಾಸ ವಿಷಯದ ಪರೀಕ್ಷೆ ನಡೆಯಲಿದೆ.

ಏ.1ರವರೆಗೆ ಸಿಇಇ ಆನ್‌ಲೈನ್ ನೋಂದಣಿಗೆ ಅವಕಾಶ

ಬೆಂಗಳೂರು: ಭಾರತೀಯ ಸೇನೆಯು 2027ರ ನೇಮಕಾತಿ ವರ್ಷಕ್ಕಾಗಿ ಅಗ್ನಿಪಥ್ ಯೋಜನೆಯಡಿ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಇ) ಆನ್‌ಲೈನ್ ನೋಂದಣಿಯನ್ನು ಅಧಿಕೃತವಾಗಿ ಘೋಷಿಸಿದೆ. ಕರ್ನಾಟಕದ ಎಲ್ಲಾ ಜಿಲ್ಲೆಗಳ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಈ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ. ನೋಂದಣಿಯು ಏಪ್ರಿಲ್ 1ರವರೆಗೆ ನಡೆಯಲಿದೆ. ಅಗ್ನಿವೀರ್ ಜನರಲ್ ಡ್ಯೂಟಿ, ಅಗ್ನಿವೀರ್ ಟೆಕ್ನಿಕಲ್, ಅಗ್ನಿವೀರ್ ಆಫೀಸ್ ಅಸಿಸ್ಟೆಂಟ್/ಸ್ಟೋರ್ ಕೀಪರ್ ಟೆಕ್ನಿಕಲ್, ಅಗ್ನಿವೀರ್ ಟ್ರೇಡ್ಸ್‌ಮನ್ (10ನೇ ಮತ್ತು 8ನೇ ತೇರ್ಗಡೆ), ಅಗ್ನಿವೀರ್ ಜನರಲ್ ಡ್ಯೂಟಿ (ಮಹಿಳಾ ಮಿಲಿಟರಿ ಪೊಲೀಸ್), ನರ್ಸಿಂಗ್ ಅಸಿಸ್ಟೆಂಟ್ ಮತ್ತು ನರ್ಸಿಂಗ್ ಅಸಿಸ್ಟೆಂಟ್ ವೆಟರಿನರಿ, ಸಿಪಾಯಿ ಫಾರ್ಮಾ ವಿಭಾಗಗಳು ಲಭ್ಯವಿವೆ. ಆಸಕ್ತ ಅಭ್ಯರ್ಥಿಗಳು ಭಾರತೀಯ ಸೇನೆಯ ಅಧಿಕೃತ ವೆಬ್‌ಸೈಟ್ www.joinindianarmy.nic.in ನಲ್ಲಿ ನೋಂದಾಯಿಸಿಕೊಳ್ಳಬಹುದು. ವಯೋಮಿತಿ, ಶೈಕ್ಷಣಿಕ ಅರ್ಹತೆ ಮತ್ತು ಇತರ ಮಾನದಂಡಗಳ ಬಗ್ಗೆ ವಿವರವಾದ ಮಾಹಿತಿಯು ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ನೋಂದಣಿ ಪ್ರಕ್ರಿಯೆಯಲ್ಲಿ ಯಾವುದೇ ತೊಂದರೆಗಳಿದ್ದಲ್ಲಿ, ಅಭ್ಯರ್ಥಿಗಳು ನೇಮಕಾತಿ ಕಚೇರಿ ಬೆಂಗಳೂರು: 080-29516517 / 7996672666, ಪ್ರಾದೇಶಿಕ ನೇಮಕಾತಿ ಕಚೇರಿ ಮಂಗಳೂರು: 082-42951276 / 7411497644, ಪ್ರಾದೇಶಿಕ ನೇಮಕಾತಿ ಕಚೇರಿ ಬೆಳಗಾವಿ: 0831-2950001 / 7411048362 ಕಚೇರಿಗಳನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಕೇಂದ್ರ ಸಚಿವ ಜೋಶಿ ಹೇಳಿಕೆ | ವಿದ್ಯುತ್ ದರ ಏರಿಕೆ ಹಿಂಪಡೆಯಲು ಆಗ್ರಹ

ಕೈ ಆರ್ಥಿಕ ದಿವಾಳಿ: ಜೋಶಿ

ಹುಬ್ಬಳ್ಳಿ: ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ಆದ್ದರಿಂದ ವಿದ್ಯುತ್ ದರ ಹೆಚ್ಚಿಸಿ ಗ್ರಾಹಕರ ಮೇಲೆ ಹೊರೆ ಹಾಕುತ್ತಿದೆ. ರಾಜ್ಯದಲ್ಲಿರುವ ಸಿದ್ದರಾಮಯ್ಯ ಅವರ ಸರ್ಕಾರ ದುರಾಡಳಿತದಿಂದ ಕೂಡಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯುತ್ ದರ 95 ಪೈಸೆ ಹೆಚ್ಚಿಸಿದೆ. ಇದೇ ರೀತಿ ಜನನ, ಮರಣ ಪ್ರಮಾಣ ಪತ್ರ, ರಸ್ತೆ ತೆರಿಗೆ, ಅಬಕಾರಿ ತೆರಿಗೆ, ಆಸ್ತಿ ತೆರಿಗೆ ಹಾಗೂ ಆಸ್ತಿ ನೋಂದಣಿ ದರ ಹೆಚ್ಚಿಸಿದೆ. ಇದು ದುರಾಡಳಿತದ ಪರಮಾವಧಿಯಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳು ಆರ್ಥಿಕ ಹೊರೆ ಅನುಭವಿಸುತ್ತಿವೆ. ಸುಧಾರಿಸಿಲು ಗ್ರಾಹಕರ ಮೇಲೆ ಹೊರೆ ಹಾಕುತ್ತಿದ್ದು, ಇದು ನಾಚಿಕೆಗೇಡಿನ ಸಂಗತಿ. ರಾಜ್ಯ ಸರ್ಕಾರ ವಿದ್ಯುತ್ ದರ ಏರಿಕೆ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಭಾರತದ ಜಿಡಿಪಿ 4 ಟ್ರಿಲಿಯನ್‌ಗಿಂತ ಜಾಸ್ತಿಯಾಗಿದೆ. ದೇಶದ ಸಂಪತ್ತೂ ಹೆಚ್ಚಳವಾಗಿದೆ. ಆದರೆ, ರಾಜ್ಯದ ದುರ್ಬಲ ಆರ್ಥಿಕ ನೀತಿಯಿಂದ ಗೂಗಲ್ ಕಂಪನಿ ರಾಜ್ಯದಿಂದ ಹೊರಹೋಗಿದೆ. ಮುಂದಿನ ದಿನಗಳಲ್ಲಿ ಉಳಿದ ಕೈಗಾರಿಕಾ ಕಂಪನಿ ಬಿಟ್ಟು ಹೋಗಲಿವೆ. ರಾಜ್ಯ ಸರ್ಕಾರ 8.4ಲಕ್ಷ ಕೋಟಿ ಸಾಲ ಮಾಡಿಕೊಂಡಿದೆ. ಆದರೆ, ಸ್ಥಳೀಯ ಸಚಿವರಿಗೆ ಭಾರತದ ಜಿಡಿಪಿ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಪರಿಸ್ಥಿತಿ ಹೀಗೆ ಮುಂದುವರಿದರೆ ರಾಜ್ಯ ಅಂತ್ಯತ ಗಂಭೀರ ಸ್ಥಿತಿ ತಲುಪಲಿದೆ ಎಂದು ಎಚ್ಚರಿಕೆ ನೀಡಿದರು.

ಹಾಲು ಜೇನು ಅಲ್ಲ, ಆಲ್ಕೋಹಾಲ್: ಸಿಎಂ ಸಿದ್ದರಾಮಯ್ಯ ಅವರು ನಾನು ಹಾಗೂ ಡಿ.ಕೆ. ಶಿವಕುಮಾರ ಹಾಲು-ಜೇನಿನಂತೆ ಎಂದು ಹೇಳಿಕೊಂಡಿದ್ದಾರೆ. ಈ ವಿಷಯ ಹೇಳಿದಂತೆ ಮಾಡಿದವರು ನಿಮ್ಮ ಚೇಲಾಗಳು. ನೀವು ಹಾಲು-ಜೇನಿನಂತೆ ಅಲ್ಲ, ಆಲ್ಕೋಹಾಲ್ ಜೇನಿನಂತೆ ಎಂದು ವ್ಯಂಗ್ಯವಾಡಿದರು.

ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ನೈತಿಕತೆ ಕಾಂಗ್ರೆಸ್‌ಗೆ ಇಲ್ಲ. ಗಾಂಧಿ ಕುಟುಂಬದಲ್ಲಿ ಮೂವರು ಸಂಸದರಿದ್ದಾರೆ. ರಾಜ್ಯ ನಾಯಕರು ರಾಹುಲ್ ಗಾಂಧಿ ಭೇಟಿಯಾಗಲು ಮೂರು ದಿನ ಕಾಯಬೇಕು. ನಾಮಕಾವಸ್ತೆ ರಾಷ್ಟ್ರೀಯ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಇದ್ದಾರೆ. ರಾಜ್ಯ ನಾಯಕರು ಬಡದಾಡುತ್ತಿರುವುದರಿಂದ ಕಾಂಗ್ರೆಸ್ ರಾಜ್ಯ ಉಸ್ತುವಾರಿ ಸುರ್ಜೇವಾಲ್ ರಾಜ್ಯಕ್ಕೆ ಬರುತ್ತಿಲ್ಲ. ಸರ್ಕಾರ ಕೆಲಸ ರಾಜ್ಯದ ಜನರ ದಾರಿ ತಪ್ಪಿಸುವುದಾಗಿದ್ದು, ಇದನ್ನು ಸರ್ಕಾರದ ಬ್ರ್ಯಾಂಡ್ ಇಮೇಜ್ ಮಾಡಿಕೊಂಡಿದ್ದಾರೆ ಎಂದರು. ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಸಾವಿನ ಬಗ್ಗೆ ಮೋದಿ ಪ್ರತಿಕ್ರಿಯೆ ನೀಡಿಲ್ಲ ಎಂಬ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹೇಳಿಕೆಗೆ ಪ್ರತಿಕ್ರಿಯಿಸಿ, ಪ್ರಧಾನಿ ಮೋದಿ ಅವರು ಅಂತಾರಾಷ್ಟ್ರೀಯ ಸಂಬಂಧ ಮೇಲೆ ಪರಿಣಾಮ ಬೀರುವುದರಿಂದ ಕಳೆದ 10 ವರ್ಷಗಳಿಂದ ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಳ್ಳುತ್ತಿದ್ದಾರೆ. ಮೋದಿ ಅವರ ವಿರೋಧಿಸುವ ಭರದಲ್ಲಿ ದೇಶದ ಹಿತಾಸಕ್ತಿ ಹಾಳು ಮಾಡುತ್ತಿದ್ದಾರೆ. ಈಗಾಗಲೇ 37 ದೇಶಗಳ ಜೊತೆ ಹಲವು ಒಪ್ಪಂದ ಮಾಡಿಕೊಂಡಿದ್ದು, ಮೂರ್ಖರಿಗೆ ಉತ್ತರ ನೀಡುವ ಅವಶ್ಯಕತೆ ಇಲ್ಲ ಎಂದು ಕಿಡಿಕಾರಿದರು.

ದೇಶದಲ್ಲಿ 70 ದಿನದ ತೈಲ ಸಂಗ್ರಹ: ಮಧ್ಯಪ್ರಾಚ್ಯದಲ್ಲಿ ಯುದ್ಧ ನಡೆಯುತ್ತಿರುವುದರಿಂದ ದೇಶದಲ್ಲಿ ತೈಲದ ಸಮಸ್ಯೆಯಾಗದು. ನಮ್ಮಲ್ಲಿ 70 ದಿನಗಳ ಸ್ಟಾಕ್ ಇದೆ. ಮುಂದೆಯೂ ಸರ್ಕಾರ ಸೂಕ್ತವಾಗಿ ನಿಭಾಯಿಸಲಿದೆ ಎಂದು ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ಫೋನ್ ಕದ್ದಾಲಿಕೆ ಕುರಿತು ಸೂಕ್ತ ತನಿಖೆಯಾಗಲಿ

ಫೋನ್ ಕದ್ದಾಲಿಕೆ ಕುರಿತು ಪ್ರತಿಕ್ರಿಯಿಸಿ, ಜನಪ್ರತಿನಿಧಿಗಳ ಫೋನ್ ಕದ್ದಾಲಿಕೆ ಕುರಿತು ಸೂಕ್ತ ತನಿಖೆ ನಡೆಸಬೇಕು. ಇದು ಮಹತ್ವದ ತನಿಖೆಯಾಗಿದೆ. ಕುಮಾರಸ್ವಾಮಿ ಮೇಲೆ ಆರೋಪ ಮಾಡುವ ಸಿದ್ದರಾಮಯ್ಯ ಅವರು ಹಿಂದೆ ಅವರೊಂದಿಗೆ ಸರ್ಕಾರ ಭಾಗವಾಗಿದ್ದರು. ಆಗ ಸಿದ್ದರಾಮಯ್ಯ ಕತ್ತೆ ಕಾಯುತ್ತಿದ್ದರಾ? ಮಕ್ಕಳಂತೆ ಮಾತನಾಡುವ ರಾಹುಲ್ ಗಾಂಧಿಯಂತೆ ಸಿದ್ದರಾಮಯ್ಯ ನಡೆದುಕೊಳ್ಳುತ್ತಿದ್ದಾರೆ. ಕೇಂದ್ರ ಸರ್ಕಾರ ಹೊಸ ನಿಯಮ ಜಾರಿಗೆ ತಂದಿದೆ. ಪ್ರಮುಖ ನಗರಗಳನ್ನು ಬಿಟ್ಟರೆ ಟೈಯರ್ 2 ಹಾಗೂ 3 ಸಿಟಿ ಅಭಿವೃದ್ಧಿ ಮಾಡುವುದು ಅವಶ್ಯಕವಾಗಿದೆ. ಅದರಂತೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಅಭಿವೃದ್ಧಿ ಆಗಬೇಕು. ಪಾಲಿಕೆ ದೊಡ್ಡದಿದ್ದಷ್ಟು ಆರ್ಥಿಕತೆ ಸದೃಢವಾಗಲಿದೆ. ಪ್ರತ್ಯೇಕ ಪಾಲಿಕೆ ಕುರಿತು ಸುದೀರ್ಘ ಚರ್ಚೆ ನಡೆಯಬೇಕು. ಇದನ್ನು ಭಾವನಾತ್ಮಕವಾಗಿ ತೆಗೆದುಕೊಳ್ಳದೆ ಅಭಿವೃದ್ಧಿ ದೃಷ್ಟಿಯಿಂದ ನೋಡಬೇಕು ಎಂದು ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.



ಡಿಸಿಎಂ ಡಿ.ಕೆ.ಶಿವಕುಮಾರ್ ಅಭಿಮತ

ನೀರು ಹರಿಸಲು ಟೆಂಡರ್

ರಾಮನಗರ: ಮಾಗಡಿ ಜನರಿಗೆ ಕಾವೇರಿ, ಹೇಮಾವತಿ, ಎತ್ತಿನಹೊಳೆ ಯಿಂದಲೂ ನೀರು ಬರುತ್ತಿದ್ದು, ನೀರಿನ ಅದೃಷ್ಟವಿದೆ. ಇದಕ್ಕೆ ಅಗತ್ಯವಿರುವ ಟೆಂಡರ್‌ಗಳನ್ನು ಈಗಾಗಲೇ ಕರೆಯಲಾಗಿದೆ ಎಂದು ತಿಳಿಸಿದರು.



ಅವರು ಬುಧವಾರ ಮಾಗಡಿಯಲ್ಲಿ ನಡೆದ ವೈ.ಜಿ. ಗುಡ್ಡ ಏತ ನೀರಾವರಿ ಯೋಜನೆ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಸತ್ತೇಗಾಲದಿಂದ ಇಗ್ಗಲೂರಿಗೆ 26 ಕಿ.ಮೀ, ಇಗ್ಗಲೂರಿನಿಂದ ಮೋಗೇನಹಳ್ಳಿಗೆ 58 ಕಿ.ಮೀ., ಮೋಗೇನ ಹಳ್ಳಿಯಿಂದ ಕಣ್ವಕ್ಕೆ 6 ಕಿ.ಮೀ, ಕಣ್ವದಿಂದ ವೈ.ಜಿ.ಗುಡ್ಡಕ್ಕೆ 25 ಕಿ.ಮೀ ಸೇರಿ ಒಟ್ಟು 115 ಕಿ.ಮೀ ಮಾರ್ಗದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ನೀರನ್ನು ಪಂಪ್ ಮಾಡಿ ಹರಿಸಲಾಗುವುದು. ನಾವು ಅಂತರ್ಜಲ ಹೆಚ್ಚಳ ಮಾಡಲು ಈ ನೀರು ತರುತ್ತಿದ್ದೇವೆ. ಇದಕ್ಕೆ 160 ಎಚ್.ಪಿ ಪಂಪ್ ಮೂಲಕ 115 ಕಿ.ಮೀ ದೂರಕ್ಕೆ ಲಿಫ್ಟ್ ಮಾಡಲಾಗುತ್ತಿದೆ. ಆ ಮೂಲಕ ಈ ಭಾಗದ ಕೆರೆಗಳನ್ನು ತುಂಬಿಸುವ ಕೆಲಸ ಮಾಡುತ್ತಿದ್ದೇವೆ. ಇದರಿಂದ ರೈತರಿಗೆ ಶಕ್ತಿ ತುಂಬುವಂತಾಗುತ್ತದೆ. ಜನರ ಬದುಕಿನಲ್ಲಿ ಬದಲಾವಣೆ ತರಲು ನಾವು ನಮ್ಮ ಕರ್ತವ್ಯ ಮಾಡುತ್ತಿದ್ದೇವೆ ಎಂದರು.

ರೈತರ ಪಂಪ್ ಸೆಟ್‌ಗಳಿಗೆ 10 ಹೆಚ್.ಪಿ ಉಚಿತ ವಿದ್ಯುತ್ ನೀಡಿದ್ದು ನಮ್ಮ ಸರ್ಕಾರ. ಇಲ್ಲಿ ಬಂದಿದ್ದ ಕೆಲವು ಮಹಿಳಾ ಫಲಾನುಭವಿಗಳಿಗೆ ಪಟ್ಟಾ ದಾಖಲೆ ಕೊಟ್ಟಿದ್ದೇವೆ. ಆದರಲ್ಲಿ ಫೋಟೋ, ಅವರ ಮನೆ ಫೋಟೋ, ಇ ಖಾತಾ ನೀಡಿದ್ದೇವೆ. ಇದೇ ರೀತಿ 2.20 ಲಕ್ಷ ಜನರಿಗೆ ಆಸ್ತಿ ದಾಖಲೆ ನೀಡುವ ಮೂಲಕ ಭೂಮಿ ಗ್ಯಾರಂಟಿ ನೀಡಿದ್ದೇವೆ. ಉಳುವವನಿಗೆ ಭೂಮಿ, ಬಗರ್ ಹುಕ್ಕುಂ, ಅರಣ್ಯ ಭಾಗದ ರೈತರಿಗೆ ಜಮೀನು ಸೇರಿದಂತೆ ರೈತರ ಪರವಾಗಿ ದೆಹಲಿಯಲ್ಲಾದರೂ ಸರಿ, ರಾಜ್ಯದಲ್ಲಾದರೂ ಸರಿ ಯೋಜನೆ ರೂಪಿಸಿದ್ದರೆ ಅದು ನಮ್ಮ ಸರ್ಕಾರ ಮಾತ್ರ ಎಂದರು.

ನಮ್ಮ ಕೆಲಸ, ತೀರ್ಮಾನಗಳಿಂದ ಈ ಭಾಗದ ಜನರ ಆಸ್ತಿ ಮೌಲ್ಯ ಹೆಚ್ಚಾ ಗಿದೆ. ಬಿಡದಿ ಟೌನ್‌ಶಿಪ್ ಯೋಜನೆ ಭೂಸಂತ್ರಸ್ತರಿಗೆ ಎಕರೆಗೆ 2.50 ಕೋಟಿ ಪರಿಹಾರ ನಿಗದಿ ಮಾಡಲಾಗಿದೆ ಎಂದರು.

ನಮ್ಮದು ಇಂದೇ ಎನ್ನುವ ಸರ್ಕಾರ

ಟಿವಿಯಲ್ಲಿ ಹೀಗೂ ಉಂಟೆ ಎಂಬ ಕಾರ್ಯಕ್ರಮವನ್ನು ಎಲ್ಲರೂ ನೋಡಿರುತ್ತೀರಿ. ನಾನು ಇಲ್ಲಿ ನಮ್ಮ ಕೆಲಸವನ್ನು ತೋರಿಸಲು ನಿಂತಿದ್ದೇನೆ ಹೊರತು, ಮುಂದೆ ಇಂತಹ ಕೆಲಸ ಮಾಡುತ್ತೇನೆ ಎಂದು ಹೇಳಲು ನಿಂತಿಲ್ಲ. ನಾಳೆ ಕೆಲಸ ಮಾಡುತ್ತೇವೆ ಎಂಬುದು ಶತೃತ್ವ, ಇವತ್ತೇ ಕೆಲಸ ಮಾಡುತ್ತೇವೆ ಎಂಬುದು ಮಿತ್ರತ್ವ. ನಾಳೆ ಯಾರು ಇರುತ್ತಾರೋ ಇರುವುದಿಲ್ಲವೋ ಗೊತ್ತಿಲ್ಲ. ಅಧಿಕಾರ ಇದ್ದಾಗ ನಾವು ಏನು ಮಾಡಿದೆವು ಎಂಬುದು ಮುಖ್ಯ. ನಮ್ಮದು ನಾಳೆ ಎನ್ನುವ ಸರ್ಕಾರವಲ್ಲ, ಇಂದೇ ಎನ್ನುವ ಸರ್ಕಾರ ಎಂದರು.

ವೈದ್ಯರ ಸಮಸ್ಯೆ ಇತ್ಯರ್ಥಪಡಿಸಲು ಒತ್ತು: ಸಚಿವ

ಮಂಗಳೂರು: ವೈದ್ಯಾಧಿಕಾರಿಗಳೊಂದಿಗೆ ಮಾತುಕತೆ ನಡೆಸುವ ಮೂಲಕ ಸಮಸ್ಯೆಗಳನ್ನು ಇತ್ಯರ್ಥಪಡಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ.



ರಾಜ್ಯದಲ್ಲಿ ವೈದ್ಯಾಧಿಕಾರಿಗಳು ಮುಷ್ಕರ ನಡೆಸಲು ನಿರ್ಧರಿಸುವ ಕುರಿತ ಸುದ್ದಿಗಾರರ ಪ್ರಶ್ನೆಗೆ ಬುಧವಾರ ಮಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಆರೋಗ್ಯ ಸೇವೆ ಜನರಿಗೆ ಅತ್ಯಂತ ಅಗತ್ಯ ಸೇವೆಯಾಗಿದ್ದು, ಇದನ್ನು ಸ್ಥಗಿತಗೊಳಿಸುತ್ತೇವೆ ಎಂದು ಹೇಳುವುದು ಪಾಪದ ಕೆಲಸ. ಈಗಾಗಲೇ ವೈದ್ಯರ ಬಹುತೇಕ ಬೇಡಿಕೆಗಳನ್ನು ಸರ್ಕಾರ ಈಡೇರಿಸಿದೆ. ಈ ಹಿಂದಿನಿಂದಲೂ ಹಲವು ಬೇಡಿಕೆಗಳನ್ನು ವೈದ್ಯರು ಇಟ್ಟಿದ್ದು, ನಮ್ಮ ಸರ್ಕಾರ ಆಡಳಿತಕ್ಕೆ ಬಂದ ಬಳಿಕ ಹೆಚ್ಚಿನ ಬೇಡಿಕೆಗಳು ಈಡೇರಿವೆ ಎಂದರು. ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷ ಸ್ಥಾನ ಬಿಟ್ಟುಕೊಡುವ ಕುರಿತ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಾನು ಊಹೆಗಳಿಗೆ ಉತ್ತರ ಕೊಡುವುದಿಲ್ಲ. ಸಿಎಂ ಸ್ಥಾನಕ್ಕೂ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬಿಟ್ಟು ಕೊಡುವುದಕ್ಕೂ ಯಾವುದೇ ಸಂಬಂಧವಿಲ್ಲ. ಡಿಕೆಶಿಯವರು ಉತ್ತಮವಾಗಿ ಕೆಲಸ ಮಾಡಿ ದ್ದಾರೆ. ಅವರ ನೇತೃತ್ವದಲ್ಲಿ ಚುನಾವಣೆ ಗೆದ್ದಿದ್ದೇವೆ ಎಂದರು.

ಸಿಬಿಐ ತನಿಖೆಗೆ ಜೀವರಾಜ್ ಆಗ್ರಹ

ಬೆಂಗಳೂರು: ಜಲಜೀವನ್ ಮಿಷನ್ ಸ್ಟಾಂಪ್ ಪೇಪರ್ ವಿಚಾರದಲ್ಲಿ ಕ್ರಿಮಿನಲ್ ಚಟುವಟಿಕೆ ನಡೆದಿದ್ದು, ಸರ್ಕಾರವು ಇದರ ಸಿಬಿಐ ತನಿಖೆ ಮಾಡಿಸ ಬೇಕೆಂದು ಮಾಜಿ ಸಚಿವ ಡಿ.ಎನ್.ಜೀವರಾಜ್ ಆಗ್ರಹಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ಶೃಂಗೇರಿ ಕ್ಷೇತ್ರದಲ್ಲಿ ಜೆಜೆಎಂ ಎಂಬುದು ಜಲಜೀವನ್ ಕಮಿಷನ್ ಆಗಿದೆ ಎಂದು ದಾಖಲೆಗಳ ಜೊತೆ ಆರೋಪಿಸಿದರು. 150 ಕೋಟಿ ರೂ.ಗಿಂತ ಹೆಚ್ಚು ಹಣವನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಆದರೆ, ಒಂದೇ ಒಂದು ಮನೆಗೆ ನೀರು ಲಭಿಸಿಲ್ಲ ಎಂದು ದೂರಿದರು. ಇದು ಜೆಜೆಎಂ ಸಂಬಂಧ ಸರ್ಕಾರದ ಜತೆ ಅಂದರೆ ಜಿ.ಪಂ. ಜತೆ ಆದ ಒಪ್ಪಂದದ ಸ್ಟಾಂಪ್ ಪೇಪರ್ ಎಂದು ಪ್ರದರ್ಶಿಸಿದರು. ಐಎನ್‌ಕೆಎ 76845429815984 ಡಬ್ಲ್ಯು ನಂಬರಿನಲ್ಲಿ 2024ರಲ್ಲಿ ಒಂದೇ ದಿನ ಒಂದೇ ಸಮಯಕ್ಕೆ ಸ್ಟಾಂಪ್ ಪೇಪರ್ ಪಡೆದಂತೆ ಕಾಣುತ್ತಿದ್ದು, ಎನ್‌ಆರ್ ಪುರ, ಕೊಪ್ಪ ತಾಲೂಕಿನಲ್ಲಿ 9 ಒಪ್ಪಂದಗಳು ಆಗಿವೆ. ಇನ್ನೊಂದು ಸಂಖ್ಯೆಯ ಸ್ಟಾಂಪ್ ಪೇಪರಿನಲ್ಲಿ ಕೊಳವೆ ಕೊರೆಸಲು 11 ಒಪ್ಪಂದಗಳಾಗಿವೆ. ಇದು ಸರ್ಕಾರದ ಜತೆಗಿನ ಒಪ್ಪಂದ. ಪ್ರಿಯಾಂಕ್ ಖರ್ಗೆ ಅವರ ಖಾತೆಯ ಕೆಳಗೆ ಬರುವ ಇಲಾಖೆ ಇದು ಎಂದು ವಿವರಿಸಿದರು. ಇನ್ನೊಂದು ಸ್ಟಾಂಪ್ ಪೇಪರ್ ಸ್ಕ್ಯಾನ್ ಮಾಡಿದರೆ ಇದು ಅಸಲಿ ಅಲ್ಲ ಎಂಬ ಅರ್ಥದ ಮಾಹಿತಿ ಬರುತ್ತಿದೆ. ಇದು ನಕಲಿಯೇ, ಅಸಲಿಯೇ ಎಂದು ತಿಳಿದಿಲ್ಲ ಎಂದರು.

ಲೋಕಾ ಬಲೆಗೆ ಬಿದ್ದ ಪಿಎಸ್‌ಐ, ಎಎಸ್‌ಐ

ಚಿಕ್ಕಬಳ್ಳಾಪುರ: ಗ್ರಾಮಾಂತರ ಠಾಣೆಯ ಪಿಎಸ್‌ಐ ಶರಣಪ್ಪ, ಎಎಸ್‌ಐ ವೆಂಕಟೇಶಪ್ಪ ಮಂಗಳವಾರ ಸಂಜೆ ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಪ್ರಕರಣ ಒಂದರ ಬಿ ರಿಪೋರ್ಟ್ ಸಲ್ಲಿಕೆ ಮಾಡಲು 1 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ ಇವರು 70 ಸಾವಿರ ಹಣ ಪಡೆಯುವಾಗ ಲೋಕಾ ಬಲೆಗೆ ಸಿಲುಕಿದ್ದಾರೆ. ಚಿಕ್ಕಬಳ್ಳಾಪುರ ನಗರದ ಕನ್ನಡ ಭವನದ ಬಳಿ ಮೊಟ್ಲೂರು ಗ್ರಾಮದ ರಘು ಎಂಬಾತನಿಂದ ಲಂಚ ಪಡೆಯುವಾಗ ಚಿಕ್ಕಬಳ್ಳಾಪುರ ಲೋಕಾಯುಕ್ತ ಪೊಲೀಸರ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ.

ಹಳೆ ಮೀಸಲಾತಿ ಮುಂದುವರಿಕೆಗೆ ಸ್ವಾಗತ



ಬೆಂಗಳೂರು: ಹಳೆಯ ಮೀಸಲಾತಿಯ ನಿಯಮ ಶೇ.50 ರ ಅನ್ವಯ ನೇಮಕಾತಿ, ಶೈಕ್ಷಣಿಕ ಪ್ರವೇಶ ಪ್ರಕ್ರಿಯೆ ಮುಂದುವರಿಸುವುದಾಗಿ ರಾಜ್ಯ ಸರ್ಕಾರ ಪ್ರಕಟಣೆ ಮಾಡಿರುವುದು ಸ್ವಾಗತಾರ್ಹ. ಇದನ್ನು ತ್ವರಿತವಾಗಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕು ಎಂದು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಒತ್ತಾಯಿಸಿತು.

ಹಳೆಯ ಮೀಸಲಾತಿ ನಿಯಮದಂತೆ ನೇಮಕಾತಿ ನಡೆಸಲು ರಾಜ್ಯ ಸರ್ಕಾರ ಆದೇಶ ಮಾಡಿರುವ ಕುರಿತು ಚರ್ಚಿಸಲು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ನೇತೃತ್ವದಲ್ಲಿ ಗಾಂಧಿ ಭವನದಲ್ಲಿ ಬಲಗೈ, (ಛಲವಾದಿ) ಬಂಜಾರ, ಭೋವಿ, ಕೊರಮ, ಕೊರಚ, ಸಮಗಾರ, ಸರ್ಮಕಾರ, ಅಲೆಮಾರಿ ಸೂಕ್ಷ್ಮ ಸಮುದಾಯಗಳ ಮುಖಂಡರ ಸಭೆ ನಡೆಸಲಾಯಿತು. ಈ ಹಿಂದೆ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಶೇ.17 ರಷ್ಟು ಮತ್ತು ಪರಿಶಿಷ್ಟ ಪಂಗಡಗಳ ಶೇ.7 ರಷ್ಟು ಮೀಸಲಾತಿ ಹೆಚ್ಚಳ ಮಾಡಿರುವ ಆದೇಶ ವನ್ನು ಸಂವಿಧಾನದ 9ನೇ ಷೆಡ್ಯೂಲ್ ನಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಪ್ರಧಾನಿಗಳ ಬಳಿ ನಿಯೋಗ ಹೋಗಬೇಕು ಎಂಬ ಒತ್ತಡ ಹೇರಬೇಕು ಎಂದು ನಿರ್ಧಾರಿಸಲಾಯಿತು.

ರಾಜ್ಯದಲ್ಲಿ ಒಳ ಮೀಸಲಾತಿಯ ಪ್ರಕ್ರಿಯೆಯ ನಡೆಸುವ ಮುನ್ನ ನಮ್ಮ ಸಮುದಾಯಗಳ ಮುಖಂಡರ ಜೊತೆಗೆ ಸಮಾಲೋಚನೆ ಮಾಡಬೇಕು. ಶಿಕ್ಷಣ ಪ್ರವೇಶ, ಹಾಸ್ಟೆಲ್ ಪ್ರವೇಶ ಮತ್ತು ಉದ್ಯೋಗ ನೇಮಕಾತಿ ರೋಸ್ಟರ್ ಹಂಚಿಕೆ ಮಾಡಿ ಈ ಹಿಂದೆ ಸರ್ಕಾರ ಹೊರಡಿಸಿರುವ ಎಲ್ಲಾ ಆದೇಶ, ಸುತ್ತೋಲೆ ಗಳನ್ನು ಹಿಂಪಡೆಯಬೇಕು ಹಾಗೂ ಶೇ.24 ರಷ್ಟು ಹಣವನ್ನು ಎಸ್‌ಸಿ, ಎಸ್‌ಟಿ ಸಮುದಾಯಗಳ ಅಭಿವೃದ್ಧಿಗೆ ಮೀಸಲಿಡಬೇಕು ಎಂಬ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು. ಸಭೆಯಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ, ಮಾಜಿ ಸಚಿವೆ ಬಿ.ಟಿ ಲಲಿತಾನಾಯಕ್, ವಕೀಲರಾದ ಅನಂತ ನಾಯ್ಕ ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರು ಭಾಗವಹಿಸಿದ್ದರು.

> ನಮ್ಮ ಜನಪ್ರತಿನಿಧಿಗಳು ಎಲೆ ಮರೆಯಾಗಿ ಕೆಲಸ ಮಾಡಲು ಕಾರಣ ಇದೆ, ಆದರೆ ಸಮುದಾಯವನ್ನು ಬಲಿ ಕೊಡುವ ಕೆಲಸವನ್ನುಯಾವತ್ತೂ ಮಾಡಿಲ್ಲ. ಈ ಒಕ್ಕೂಟದಿಂದ ತಜ್ಞರ ಸಮಿತಿ, ಜನಪ್ರತಿನಿಧಿಗಳ ಸಮಿತಿ ಮತ್ತು ಸಾಮಾಜಿ ಹೋರಾಟ ಸಮಿತಿಯನ್ನು ರಚಿಸಲು ಚಾಲನೆ ನೀಡಿದ್ದು, ಈ ಸಮಿತಿಗಳು ಕಾಲ ಕಾಲಕ್ಕೆ ಸಲಹೆ ಸೂಚನೆ ನೀಡಲಿವೆ.
>
> ■ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮಿ

ಐತಿಹಾಸಿಕ ಹಂಪಿಯಲ್ಲಿ ಹೋಳಿ ಹಬ್ಬದ ಸಂಭ್ರಮ

ಬಣ್ಣಗಳಲ್ಲಿ ಮಿಂದೆದ್ದ ವಿದೇಶಿಗರು





ವಿಜಯನಗರ: ವಿಶ್ವವಿಖ್ಯಾತ ಹಂಪಿಯಲ್ಲಿ ಹೋಳಿ ಹಬ್ಬದ ಸಂಭ್ರಮ ಕಳೆಗಟ್ಟಿತ್ತು. ಸ್ಥಳೀಯರು ಸೇರಿದಂತೆ ದೇಶ- ವಿದೇಶದಿಂದ ಆಗಮಿಸಿದ್ದ ಸಾವಿರಾರು ಪ್ರವಾಸಿಗರು ಬಣ್ಣ ಬಣ್ಣದ ಹೋಕಳಿಯಲ್ಲಿ ಮಿಂದೆದ್ದು ಸಂಭ್ರಮಿಸಿದರು. ಹೋಳಿ ಹುಣ್ಣಿಮೆ ನಿಮಿತ್ತ ತಾಲೂಕಿನ ಐತಿಹಾಸಿಕ ಹಂಪಿಯ ರಥ ಬೀದಿಯಲ್ಲಿ ಮಂಗಳವಾರ ತಡರಾತ್ರಿ ಕಾಮ ದಹನ ಮಾಡಲಾಯಿತು.

ಬುಧವಾರ ಬೆಳಗ್ಗೆ ಸ್ಥಳೀಯರೊಂದಿಗೆ ವಿದೇಶಿಗರು ಹೋಲಿ ಆಚರಿಸಿದರು. ಒಬ್ಬರಿಗೊಬ್ಬರು ಬಣ್ಣ ಎರಚಿಕೊಂಡು, ಹ್ಯಾಪಿ ಹೋಲಿ ಎಂದು ಹರ್ಷೋದ್ಘಾರ ಮೊಳಗಿಸಿದರು. ಡ್ರಮ್ಸ್, ಹಲಗೆ ಸದ್ದಿಗೆ ಕುಣಿದು ಕುಪ್ಪಳಿಸಿದರು. ನೆದರ್‌ಲ್ಯಾಂಡ್, ಇಂಗ್ಲೆಂಡ್, ಇಸ್ರೇಲ್, ಫ್ರಾನ್ಸ್ ಸೇರಿದಂತೆ ವಿಶ್ವದ ನಾನಾ ದೇಶಗಳಿಂದ ಆಗಮಿಸಿದ್ದ ಪ್ರವಾಸಿಗರು, ಬಣ್ಣದ ಓಕಳಿಯಲ್ಲಿ ಮಿಂದೆದ್ದರು.

ಇದಕ್ಕೂ ಮುನ್ನ ಮಂಗಳವಾರ ತಡ ರಾತ್ರಿ ದೇವಸ್ಥಾನದ ರಥ ಬೀದಿಯಲ್ಲಿ ಹಮ್ಮಿಕೊಂಡಿದ್ದ ಕಾಮ ದಹನವನ್ನು ಸ್ಥಳೀಯರೊಂದಿಗೆ ಪ್ರವಾಸಿಗರೂ ಕಣ್ತುಂಬಿಕೊಂಡರು. ಮನಷ್ಯನಲ್ಲಿರುವ ಕಾಮ, ಕ್ರೋದ, ಮದ, ಮತ್ಸರ್ಯವನ್ನು ದಹಿಸುವುದೇ ಕಾಮ ದಹನದ ಮೂಲ ತಿರುಳು ಎಂಬುದನ್ನು ಅರಿತು ವಿದೇಶಿಗರು, ಹಿಂದು ಧರ್ಮದ ಮಹೋನ್ನತ ತತ್ವಕ್ಕೆ ತಲೆದೂಗಿದರು.

ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಆರೋಪ

ಜಿ ರಾಮ್ ಜಿನಿಂದ ಅಧಿಕಾರ ವಿಕೇಂದ್ರೀಕರಣ ಅಸಾಧ್ಯ

ಬೆಂಗಳೂರು: ಮನರೇಗಾ ಯೋಜನೆ ಕೋಟ್ಯಂತರ ಗ್ರಾಮೀಣ ಬಡಜನರ ಬದುಕಿಗೆ ನೆರವಾಗಿದೆ. ಕೇಂದ್ರ ಸರ್ಕಾರ ಅದರ ಸ್ವರೂಪ ಬದಲಾಯಿಸಿ ಹೊಸ ಕಾಯ್ದೆ ಜಾರಿಗೆ ಮುಂದಾಗಿರುವುದು ಗಾಂಧೀಜಿ ಅವರ ಗ್ರಾಮ ಸ್ವರಾಜ್ಯ ಕಲ್ಪನೆ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಗೆ ವಿರುದ್ಧವಾಗಿದೆ ಎಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಆರೋಪಿಸಿದರು.

ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದಿಂದ ಬುಧವಾರ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ ಉದ್ಯೋಗ ಖಾತ್ರಿ ಯೋಜನೆ ಬದಲಾವಣೆ ಸಾಧಕ-ಬಾಧಕ ಕುರಿತ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮನರೇಗಾ ಕಾಯ್ದೆ ರದ್ದು ಮಾಡಿ ವಿಬಿ ಜಿ ರಾಮ್ ಜಿ ಕಾಯ್ದೆ ರೂಪಿಸುವ ಮೂಲಕ ಕೇಂದ್ರ ಸರ್ಕಾರ ಬಡವರ ಹೊಟ್ಟೆಯ ಮೇಲೆ ಹೊಡೆಯುವ ಕೆಲಸ ಮಾಡುತ್ತಿದೆ. ಮನರೇಗಾ ಕಾಯ್ದೆ ಮೂಲಕ ಕೂಲಿ ಕಾರ್ಮಿಕರು, ರೈತರಿಗೆ ದೇಶದ ಸಂಪತ್ತಿನಲ್ಲಿ ಪಾಲುಗಾರಿಕೆ ದೊರೆಯುವಂತಾಗುತ್ತಿತ್ತು. ಆದರೆ, ಇದೀಗ ಅದನ್ನು ಕಿತ್ತುಕೊಳ್ಳಲಾಗಿದೆ. ಮನರೇಗಾ ರದ್ದತಿಯಿಂದ ಕೂಲಿ ಕಾರ್ಮಿಕರು, ರೈತರಲ್ಲಿ ಆತಂಕ ನಿರ್ಮಾಣವಾಗಿದೆ. ಇದರ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು ಎಂದರು.

ಎಲ್ಲಾ ಕಡೆ ಭ್ರಷ್ಟಾಚಾರವಿದೆ: ಈವರೆಗೆ ಇದ್ದ ಬೇಡಿಕೆಗನುಗುಣವಾದ ಪ್ರಗತಿ, ಇನ್ನು ಮುಂದೆ ಕೇಂದ್ರ ಸರ್ಕಾರದ ಅಣತಿಯಂತೆ ಆಗಲಿದೆ. ವಿಕೇಂದ್ರೀಕರಣ ವ್ಯವಸ್ಥೆ ವಿರುದ್ಧವಾಗಿ ಜನ ವಿರೋಧಿ, ಬಡವರ ವಿರೋಧಿಯಾದ ವಿಬಿ ಜಿ ರಾಮ್ ಜಿ ಕಾಯ್ದೆ ಜಾರಿಗೊಳಿಸುತ್ತಿದೆ. ಭ್ರಷ್ಟಾಚಾರದ ಕಾರಣದಿಂದಾಗಿ ಮನರೇಗಾ ರದ್ದು ಮಾಡಲಾಗಿದೆ ಎಂದು ಕೇಂದ್ರ ಹೇಳುತ್ತಿದೆ. ಕೇವಲ ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಭ್ರಷ್ಟಾಚಾರವಿರುವುದಲ್ಲ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಲ್ಲೂ ಭ್ರಷ್ಟಾಚಾರವಿದೆ. ಅದನ್ನೂ ತಡೆಯಲಿ ಎಂದು ಹೇಳಿದರು.

ಮನರೇಗಾದಿಂದ ಸಂಪೂರ್ಣವಾಗಿ ಜನರ ಬದುಕು ಬದಲಾಗಿದೆ ಎಂದಲ್ಲ. ಆದರೆ, ಅವರು ನೆಮ್ಮದಿಯಾಗಿ ಜೀವನ ನಡೆಸಲು ಅದು ಆಧಾರವಾಗಿತ್ತು. ಮನರೇಗಾ ನಂಬಿಕೊಂಡಿದ್ದವರಲ್ಲಿ ಇದೀಗ ಆತಂಕ ಸೃಷ್ಟಿಯಾಗಿದೆ. ಮನರೇಗಾದಲ್ಲಿ ಏನಾದರೂ ಲೋಪ ದೋಷಗಳಿದ್ದರೆ, ಅದನ್ನು ಸುಧಾರಣೆ ಮಾಡಬಹುದಿತ್ತು. ಅದನ್ನು ಬಿಟ್ಟು ಏಕಾಏಕಿ ಕಾಯ್ದೆ ರದ್ದು ಮಾಡಿದ್ದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ್, ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಕಾರ್ಯದರ್ಶಿ ರಮಣ್‌ದೀಪ್ ಚೌಧರಿ, ಸದಸ್ಯರಾದ ಡಾ.ನಿರಂಜನಾರಾಧ್ಯ ಇದ್ದರು.

ವಿಬಿ ಜಿ ರಾಮ್ ಜಿ ಕಾಯ್ದೆ ಹಿಂಪಡೆಯಲು ಒತ್ತಾಯ

ವಿಬಿ ಜಿ ರಾಮ್ ಜಿ ಕಾಯ್ದೆ ರೂಪಿಸುವ ಮೂಲಕ ಮಹಾತ್ಮ ಗಾಂಧಿ ಅವರ ಗ್ರಾಮ ಸ್ವರಾಜ್ ಕನಸಿಗೆ ಧಕ್ಕೆ ತರಲಾಗಿದೆ. ಕೇಂದ್ರೀಕೃತ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ. ಈವರೆಗೆ ಮನರೇಗಾ ಯೋಜನೆಗೆ ರಾಜ್ಯ ಸರ್ಕಾರಗಳು ತಮ್ಮ ಪಾಲಾಗಿ ಶೇ.10ರಷ್ಟು ಅನುದಾನ ನೀಡುತ್ತಿದ್ದವು. ಈಗ ರಾಜ್ಯಗಳು ಶೇ.40ರಷ್ಟು ಅನುದಾನ ನೀಡಬೇಕಿದೆ. ಇಷ್ಟು ದೊಡ್ಡ ಪ್ರಮಾಣದ ಹಣ ನೀಡಲು ದೇಶದ ಯಾವುದೇ ರಾಜ್ಯ ಸರ್ಕಾರಗಳಲ್ಲೂ ಶಕ್ತಿಯಿಲ್ಲ. ಇದೆಲ್ಲವನ್ನು ಅರಿತು ವಿಬಿ ಜಿ ರಾಮ್ ಜಿ ಕಾಯ್ದೆ ಹಿಂಪಡೆಯಲು ಕೇಂದ್ರ ಮುಂದಾಗಬೇಕು ಎಂದು ಬಿ.ಆರ್. ಪಾಟೀಲ್ ಹೇಳಿದರು.



ಸಂಪಾದಕೀಯ

ತಿಳಿಗೊಂಡ ಬಾಂಧವ್ಯ

ಕಳೆದ ಎರಡು ವರ್ಷಗಳಿಂದ ಹದಗೆಟ್ಟಿದ್ದ ಭಾರತ ಮತ್ತು ಕೆನಡಾ ನಡುವಿನ ಬಾಂಧವ್ಯವು ಈಗ ಒಮ್ಮೆಗೆ ತಿಳಿಗೊಂಡಿದೆ. ಕೆನಡಾ ಪ್ರಧಾನಿಯಾಗಿದ್ದ ಜಸ್ಟಿನ್ ಟ್ರೂಡೋ ಕಾಲಾವಧಿಯಲ್ಲಿ ಮೂಡಿದ್ದ ಬಿರುಕುಗಳನ್ನು ಮುಚ್ಚಿ ಹಾಕಿ, ಭಾರತದೊಂದಿಗೆ ಸೌಹಾರ್ದ ಸಂಬಂಧ ಬೆಳೆಸಿಕೊಳ್ಳಲು ಮತ್ತು ವ್ಯಾವಹಾರಿಕ ಪಾಲುದಾರಿಕೆಯಲ್ಲಿ ಪಾಲ್ಗೊಳ್ಳಲು ನೂತನ ಪ್ರಧಾನಿ ಮಾರ್ಕ್ ಕಾರ್ನಿ ನೇತೃತ್ವದ ಸರಕಾರವು ತೀರ್ಮಾನಿಸಿದೆ. ಕಾರ್ನಿಯವರು ಮೊನ್ನೆಮೊನ್ನೆಯಷ್ಟೆ ಭಾರತಕ್ಕೆ ಭೇಟಿ ನೀಡಿದ್ದು ಇದೇ ಉದ್ದೇಶದಿಂದಾಗಿಯೆ. ಇದು ಭಾರತದೊಂದಿಗಿನ ಸಂಬಂಧವನ್ನು ಸರಿಪಡಿಸುವ ರಾಜತಾಂತ್ರಿಕ ಹೆಜ್ಜೆಯೂ ಹೌದು. ಅಮೆರಿಕದ ಅಧ್ಯಕ್ಷ ಟ್ರಂಪ್ ಅವರ ಎಡಬಿಡಂಗಿ ವಿದೇಶಾಂಗ ನೀತಿಯ ಪ್ರತಿಕೂಲ ಪರಿಣಾಮವನ್ನು ಕೆನಡಾ ಕೂಡಾ ಅನುಭವಿಸಲಾರಂಭಿಸಿದ್ದು, ಈ ಹಿನ್ನೆಲೆಯಲ್ಲಿ ಬೇರೆ ದೇಶಗಳ ಜತೆ ಪಾಲುದಾರಿಕೆಗೆ ಕೈಹಚ್ಚುವುದೇ ಸೂಕ್ತ ಹಾಗೂ ಈ



ನಿಟ್ಟಿನಲ್ಲಿ ಭಾರತಕ್ಕಿಂತ ಸೂಕ್ತ ದೇಶ ಬೇರೆಯಿಲ್ಲ ಎಂಬ ತೀರ್ಮಾನಕ್ಕೆ ಕಾರ್ನಿ ಸರಕಾರ ಬಂದಿದೆ.

ಕಾರ್ನಿಯವರು ಭಾರತಕ್ಕೆ ಭೇಟಿ ನೀಡುವುದಕ್ಕೆ ಮುನ್ನವೇ ಉಭಯದೇಶಗಳ ನಡುವಿನ ಕೊಸರಿಗೆ ಕಾರಣವಾಗಿದ್ದ ಕೆಲವಾರು ವಿಷಯಗಳನ್ನು ಕೆನಡಾ ಸರಕಾರ ನಿವಾರಿಸಿಕೊಂಡುದು ಭಾರತದೊಂದಿಗಿನ ಸಂಬಂಧ ವೃದ್ಧಿಗೆ ಅವರು ನೀಡಿದ ಮಹತ್ವಕ್ಕೆ ಸಾಕ್ಷಿ. ಈ ಹಿನ್ನೆಲೆಯಲ್ಲಿ, ಖಲಿಸ್ಥಾನ ಮುಖಂಡನ ಹತ್ಯೆಗೆ ಭಾರತವೇ ಸಂಚು ಹೂಡಿತ್ತು ಎಂಬ ಹಿಂದಿನ ಸರಕಾರದ ಆರೋಪವನ್ನು ಕಡತದಿಂದಲೇ ತೆಗೆಯಲಾಯಿತು.

ದಿಲ್ಲಿಯಲ್ಲಿ ಭಾರತ ಮತ್ತು ಕೆನಡಾಗಳು ಮಾಡಿಕೊಂಡ ಒಪ್ಪಂದಗಳು ಕೂಡಾ ಮಹತ್ವದ್ದೆ. ಕಳೆದೊಂದು ವರ್ಷದಲ್ಲಿ ಐರೋಪ್ಯ ಒಕ್ಕೂಟ, ಅಮೆರಿಕ ಸೇರಿದಂತೆ ಐದು ಪ್ರಮುಖ ಒಪ್ಪಂದಗಳನ್ನು ರೂಪಿಸಿಕೊಂಡ ಭಾರತವು ಕೆನಡಾದ ಜತೆಗೂ ಅಂತಹುದೇ ಮಹತ್ವದ ಒಪ್ಪಂದ ರೂಪಿಸಿಕೊಂಡಿದೆ. ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ (ಸಿಇಪಿಇ)ವನ್ನು ಈ ವರ್ಷಾಂತ್ಯದೊಳಗೆ ಪೂರ್ಣಗೊಳಿಸುವ ನಿರ್ಧಾರ ತಾಳಲಾಗಿದ್ದು, 2030ರ ವೇಳೆಗೆ ವಾರ್ಷಿಕ ವ್ಯಾಪಾರ ವಹಿವಾಟನ್ನು 50 ಬಿಲಿಯ ಡಾಲರ್‌ಗೇರಿಸಲು ತೀರ್ಮಾನಿಸಲಾಗಿದೆ. ಕೆನಡಾದೊಂದಿಗೆ ಮಾಡಿಕೊಂಡಿರುವ ಹತ್ತು ವರ್ಷಗಳ ಯುರೇನಿಯಂ ಪೂರೈಕೆಯ ಒಪ್ಪಂದವಂತೂ ಭಾರತದ ನಾಗರಿಕ ಪರಮಾಣು ಯೋಜನೆಯ ವಿಸ್ತರಣೆಗೆ ಪ್ರಮುಖ ಕೊಡುಗೆಯಾಗಬಲ್ಲುದು. ಒಟ್ಟಿನಲ್ಲಿ ಟ್ರೂಡೋ ಅಧಿಕಾರಾವಧಿಯಲ್ಲಿ ಹದಗೆಟ್ಟಿದ್ದ ಭಾರತ ಮತ್ತು ಕೆನಡಾ ನಡುವಿನ ಬಾಂಧವ್ಯವು ಮತ್ತೆ ಹಳಿಗೆ ಬಂದಿರುವುದು ಸ್ವಾಗತಾರ್ಹ ಬೆಳವಣಿಗೆ.

ಕೈಯ ಆಯುಧವೂ, ಸುಡುವ ಬೆಂಕಿಯೂ

ಸಂಯಮವೂ ವಿವೇಕವೂ ಇಲ್ಲದ ದುಡುಕಿನ ವ್ಯಕ್ತಿಗಳ ಕೈಯಲ್ಲಿರುವ ಮಾರಕಾಸ್ತ್ರಗಳು ಪ್ರಪಂಚಕ್ಕೆ ಸದಾ ಬೆದರಿಕೆಯೇ.

ಆ-ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ರಾಮಾಯಣದ ಆರಣ್ಯ ಕಾಂಡದಲ್ಲಿ ಒಂದು ಸಂದರ್ಭವಿದೆ. ಆ ಸಂದರ್ಭದ ವಿಶೇಷವೆಂದರೆ ರಾಮನಿಗೆ ಸೀತೆ ನೀತಿಯ ಉಪದೇಶವನ್ನು ಮಾಡುವುದು. ಅದು ಹೀಗಿದೆ.

ಅಯೋಧ್ಯೆಯನ್ನು ಬಿಟ್ಟು, ಸೀತಾ ಲಕ್ಷ್ಮಣ ಸಮೇತನಾಗಿ ರಾಮನು ದಂಡಕಾರಣ್ಯದಲ್ಲಿದ್ದಾಗ ನಡೆಯುವ ಪ್ರಕರಣ. ಅಲ್ಲಿದ್ದ ಋಷಿಗಳು ರಾಮನಲ್ಲಿಗೆ ಬಂದು ರಾಕ್ಷಸರ ಉಪಟಳದ ಕುರಿತು ದೂರಿಕೊಳ್ಳುತ್ತಾರೆ. ರಾಮನು ಆ ರಾಕ್ಷಸರನ್ನು ನಿಗ್ರಹಿಸುತ್ತೇನೆ ಎಂಬ ಅಭಯವನ್ನು ಕೊಟ್ಟು ಕಳುಹಿಸಿದ. ಆ ಮೇಲೆ ಸೀತೆ ರಾಮನನ್ನು ಉದ್ದೇಶಿಸಿ,

"ಕ್ಷತ್ರಿಯಾಣಾಂ ಚ ಹಿ ಧನುಃ ಹುತಾಶಸ್ಯೇಂಧನಾನಿಚ
ಸಮೀಪತಃ ಸ್ಥಿತಂ ತೇಜೋ ಬಲಮುಚ್ಚ್ರಯತೇ ಭೃಶಮ್" ಎನ್ನುತ್ತಾಳೆ. ಕ್ಷತ್ರಿಯನ ಬಳಿ ಧನುಸ್ಸೂ ಅಂದರೆ ಆಯುಧವೂ, ಬೆಂಕಿಯ ಬಳಿ ಇಂಧನ ಅಥವಾ ಕಟ್ಟಿಗೆಯೂ ಇದ್ದರೆ ಅವು ಕ್ಷತ್ರಿಯನ ಮತ್ತು ಬೆಂಕಿಯ ತೇಜೋ ಬಲಗಳನ್ನು ಹೆಚ್ಚಿಸುತ್ತವೆ ಎಂದು ಅರ್ಥ.

ಯಾಕೆ ಹಾಗೆ ಹೇಳಿದಳು ಅನ್ನುವುದಕ್ಕೆ ವಿವರಣೆಯನ್ನೂ ಕೊಡುತ್ತಾಳೆ. "ನೀನಾದರೋ ತಮ್ಮನೊಡನೆ ಧನುರ್ಬಾಣಗಳನ್ನು ಹಿಡಿದು ಕಾಡಿಗೆ ಬಂದಿದ್ದೀಯೆ. ಇಲ್ಲಿ ಸಂಚರಿಸುವ ರಾಕ್ಷಸರನ್ನು ಕಂಡಾಗ ನೀನು ಬಾಣವನ್ನು ಪ್ರಯೋಗಿಸುವ ಸಂದರ್ಭವು ಬರಬಹುದು. ಶ್ರೀರಾಮ, ಹಿಂದೆ ಒಂದು ಪುಣ್ಯಾರಣ್ಯದಲ್ಲಿ ಋಷಿಯೊಬ್ಬನಿದ್ದನಂತೆ. ಅಲ್ಲಿ ಮೃಗ ಪಕ್ಷಿಗಳು ವಿಹರಿಸುತ್ತಿದ್ದವು. ಆ ತಪಸ್ವಿಯು ಸತ್ಯಸಂಧನಾಗಿ ಶುಚಿಯಾಗಿದ್ದನು. ಶಚೀಪತಿಯಾದ ಇಂದ್ರನು ಆ ಋಷಿಯ ತಪಸ್ಸಿಗೆ ವಿಘ್ನವನ್ನು ತರಬೇಕೆಂದು ಉದ್ದೇಶಿಸಿ, ಒಬ್ಬ ಭಟನ ವೇಷದಲ್ಲಿ ಖಡ್ಗಪಾಣಿಯಾಗಿ ಆಶ್ರಮಕ್ಕೆ ಬಂದನು. ಅಲ್ಲಿ ತಪಸ್ಸು ಮಾಡುತ್ತಿದ್ದ ಆ ಋಷಿಗೆ ತನ್ನ ಹರಿತವಾದ ಖಡ್ಗವನ್ನು ಕೆಲವು ಕಾಲ ಇಟ್ಟುಕೊಂಡಿರುವಂತೆ ನ್ಯಾಸವಾಗಿ ಒಪ್ಪಿಸಿದನು. ತನ್ನಲ್ಲಿ ಆ ಭಟನು ಇಟ್ಟ ವಿಶ್ವಾಸವನ್ನು ಕಾಪಾಡಿಕೊಳ್ಳಬೇಕೆಂದು, ಆ ತಪಸ್ವಿಯು ಖಡ್ಗವನ್ನು ಜೋಪಾನವಾಗಿ ನೋಡಿಕೊಳ್ಳುತ್ತಿದ್ದನು. ಅವನು ಅದನ್ನು ಎಷ್ಟು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದನೆಂದರೆ– ಫಲಮೂಲಗಳನ್ನು ತರುವುದಕ್ಕೆ ಹೊರಗೆ ಹೊರಟಾಗ ಖಡ್ಗವನ್ನು ತನ್ನೊಡನೇ ಒಯ್ಯುತ್ತಿದ್ದನು. ಹೀಗೆ ಆ ತಪಸ್ವಿಯು ಸದಾ ಶಸ್ತ್ರಧಾರಿಯಾದ್ದರಿಂದ ತಪಸ್ಸಿನಲ್ಲಿ ಆಸಕ್ತಿಯು ಕಡಮೆಯಾಯಿತು. ಅವನ ಬುದ್ಧಿಯಲ್ಲಿ ಭಯಂಕರವಾದ ರಜೋಗುಣವು ಮನೆಮಾಡಿತು. ಅವನು ವಿವೇಕವನ್ನು ಕಳೆದುಕೊಂಡು ಹಿಂಸಾ ಕಾರ್ಯದಲ್ಲಿ ನಿರತನಾದನು. ಪರಿಣಾಮವಾಗಿ ನರಕಕ್ಕೆ ಹೋದನು. ನೀನು ರಾಕ್ಷಸರನ್ನು ಕೊಲ್ಲಬೇಕಾಗಿಲ್ಲ" (ವನವಾಸದಲ್ಲಿ ಕ್ಷಾತ್ರ ಧರ್ಮಕ್ಕೆ ಬದ್ಧನಾಗಿ ವ್ಯವಹರಿಸುವ ಅನಿವಾರ್ಯವಿಲ್ಲ ಎಂಬುದು ಧ್ವನಿ).

ಇಲ್ಲಿ ರಾಮನು ಮಾಡಿದ್ದು ಸರಿಯೋ ಅಲ್ಲವೋ ಎನ್ನುವುದು ನಮ್ಮ ಲಕ್ಷ್ಯವಲ್ಲ. ಆಯುಧಗಳು ಹೇಗೆ ಮನಸ್ಸನ್ನು ಹಿಂಸಾಪರವಾಗಿ ಮಾಡುತ್ತವೆ ಎನ್ನುವುದು ಮುಖ್ಯ. ಅದು ಕೈಯಲ್ಲಿರುವ ಬೆಂಕಿಯ ಕೊಳ್ಳಿಯ ಹಾಗೆ. ಅದನ್ನು ಹಿಡಿದವನಿಗೆ ಎಲ್ಲ ಕಡೆಯೂ ಸುಡುವಂತಹ ವಸ್ತುಗಳೇ ಕಾಣುವವು! ಅಂತೆಯೇ ಮಹತ್ತರವಾದ ಅಸ್ತ್ರಗಳು ಪ್ರಾಜ್ಞರೂ ವಿವೇಚನೆ ಕಳೆದುಕೊಳ್ಳುವಂತೆ ಮಾಡಿದ ದೃಷ್ಟಾಂತಗಳು ಪುರಾಣಗಳಲ್ಲಿ ಸಿಗುತ್ತವೆ.

ಮಹಾಭಾರತದಲ್ಲಿ ಬರುವ ಅರ್ಜುನನಂತಹ ವಿವೇಕಿಯೂ ಹುಡುಗಾಟವಾಡಿ ಭಯಂಕರ ಅಸ್ತ್ರಗಳನ್ನು ಪ್ರಯೋಗಿಸಿದ ಪ್ರಕರಣವೊಂದಿದೆ. ಪಾಂಡವರು ವನವಾಸದಲ್ಲಿದ್ದಾಗ ವ್ಯಾಸರ ಮಾತಿನಂತೆ ಅರ್ಜುನ, ಇಂದ್ರಕೀಲಕ್ಕೆ ಹೋಗಿ, ಅಲ್ಲಿ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡು ಅವನಿಂದ ಪಾಶುಪತವೆಂಬ ಮಹಾಭಯಂಕರ ಅಸ್ತ್ರವನ್ನು ಪಡೆದ. ಆ ಬಳಿಕ ಅಲ್ಲಿಗೆ ಬಂದ ದೇವೇಂದ್ರಾದಿ ದೇವತೆಗಳೆಲ್ಲ ಅವನಿಗೆ ತಮ್ಮ ತಮ್ಮ ಸತ್ತ್ವಭೂಯಿಷ್ಠವಾದ ಮಹಾಸ್ತ್ರಗಳನ್ನು ಅನುಗ್ರಹಿಸಿದರು. ಅವುಗಳನ್ನೆಲ್ಲ ಪಡೆದುಕೊಂಡ ಅರ್ಜುನ ಅಸ್ತ್ರ ಸಂಪನ್ನನಾಗಿ ಮರಳಿದ. ಹಾಗೆ ಬಂದ ಅರ್ಜುನನಲ್ಲಿ ಯುಧಿಷ್ಠಿರ, ಅವನು ಸಂಪಾದಿಸಿದ ಅಸ್ತ್ರಗಳ ಮಹಿಮೆಯನ್ನು ನೋಡಬೇಕು ಅಂತ ಅಪೇಕ್ಷಿಸಿದ.

ವಿಚಿತ್ರ ಇದು. ಧರ್ಮರಾಯನಂತಹ ವಿವೇಕಿಗೂ ಈ ವಿಪರೀತ ಬಯಕೆ ಯಾಕೆ ಬಂತೋ ಏನೋ. ಅಸ್ತ್ರಗಳ ಸಾಮಿಪ್ಯ ಒದಗಿದ್ದೇ ಕಾರಣವಿರಬಹುದು. ಅಂತೂ ಅವನ ಹಂಬಲದಂತೆ ಅರ್ಜುನ ತಾನು ಪಡೆದ ಮಂತ್ರಾಸ್ತ್ರಗಳು, ದಿವ್ಯಾಸ್ತ್ರಗಳನ್ನು ಒಂದೊಂದಾಗಿ ಪ್ರಯೋಗಿಸಿ, ಅದರ ಪರಿಣಾಮಗಳನ್ನು ತೋರಿಸುವುದಕ್ಕೆ ಮುಂದಾದ. ಇದರಿಂದಾಗಿ ಆ ಪ್ರದೇಶವೆಲ್ಲ ಪ್ರಕ್ಷುಬ್ಧವಾಯಿತು.ಆಗ ಆಕಾಶದಿಂದ ಇಳಿದು ಬಂದ ನಾರದರು, "ಈ ಮಹಾಸ್ತ್ರಗಳ ಪ್ರಯೋಗ ಸಾಧುವಲ್ಲ, ಇದರಿಂದಾಗಿ ಲೋಕವು ಕ್ಷೋಭೆಗೊಳಗಾಗುತ್ತದೆ. ಹಾಗಾಗಿ ಇದನ್ನು ನಿಲ್ಲಿಸು" ಎಂದು ಅನಾಹುತವನ್ನು ತಪ್ಪಿಸಿದರು.

ಇದರಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶ ಉಂಟು. ದೇವತೆಗಳಿಂದ ಅಸ್ತ್ರಗಳ ಉಪದೇಶವನ್ನು ಪಡೆದ ಅರ್ಜುನ, ಅವುಗಳನ್ನು ಇಟ್ಟುಕೊಳ್ಳುವ ಯೋಗ್ಯತೆ ಇದ್ದವನೇ. ಅಷ್ಟು ಧಾರಣಾ ಶಕ್ತಿಯಿಲ್ಲದವನಿಗೆ ದೇವತೆಗಳಾಗಲಿ, ಪರಮೇಶ್ವರನಾಗಲಿ ಅಪಾಯಕಾರಿಯಾದ ಆ ಅಸ್ತ್ರಗಳನ್ನು ಕೊಡುವುದಕ್ಕಿದೆಯೆ? ಅಲ್ಲದೆ ಅರ್ಜುನನದು ಪರಾಕ್ರಮ ಮತ್ತು ಧರ್ಮಗಳ ಸಂಮ್ಮಿಳಿತವಾದ ವ್ಯಕ್ತಿತ್ವ. ಅವನ ಅಸ್ತ್ರಗಳ ಈ ಅನುಚಿತ ಪ್ರದರ್ಶನವನ್ನು ಬಯಸಿದವನು ಧರ್ಮರಾಯನೆಂಬ ಹೆಸರನ್ನು ಗಳಿಸಿದ ಯುಧಿಷ್ಠಿರ.

ಇಂತಹ ಉನ್ನತ ವ್ಯಕ್ತಿತ್ವ ಇದ್ದವರು ಹೀಗೆ ಮಾಡಬಹುದೆ? ಯಾಕೆ ಹಾಗೆ ಮಾಡಿದರು?

ಬಹುಶಃ ಅವರ ಕೈಸೇರಿದ್ದ ಅಸ್ತ್ರಗಳ ಪರಿಣಾಮವೇ ಇರಬೇಕು. ಕೈಯಲ್ಲಿ ಮಾರಕಾಸ್ತ್ರಗಳಿದ್ದಾಗ, ಅವುಗಳು ಹಿಡಿದುಕೊಂಡವನಿಗೆ ಪ್ರಚೋದನೆ ಕೊಡುತ್ತವಲ್ಲ. ಪ್ರಯೋಗಿಸುವ ಚಾಪಲ್ಯವನ್ನು ಹುಟ್ಟಿಸುತ್ತವಲ್ಲ. ಅದೇ ಇವರಿಗೂ ಆಗಿರಬೇಕು. ಪುಣ್ಯಕ್ಕೆ ನಾರದರ ಮಾತಿಗೆ ಬೆಲೆ ಕೊಟ್ಟು ಅರ್ಜುನ ಪ್ರದರ್ಶನ ನಿಲ್ಲಿಸಿದ. ಈಗ ಬಲಿಷ್ಠ ರಾಷ್ಟ್ರಗಳು ಅಣ್ವಸ್ತ್ರದ ಪರೀಕ್ಷೆಗೆ ಮುಂದಾಗಿ, ಬಲಪ್ರದರ್ಶನಕ್ಕೆ ಹೊರಡುವಾಗ ಬೇರೆ ರಾಷ್ಟ್ರಗಳ ವಿನಂತಿಯ ಮೇರೆಗೆ ಅದನ್ನು ನಿಲ್ಲಿಸುತ್ತವಲ್ಲ, ಹಾಗೆ ಇರಬಹುದು.

ಇರಲಿ, ಇಂತಹ ಅರ್ಜುನ ಗೋಗ್ರಹಣ ಪ್ರಕರಣದಲ್ಲಿ ಇದಕ್ಕಿಂತ ತೀರ ಭಿನ್ನವಾಗಿ ವರ್ತಿಸಿದ. ಮತ್ಸ್ಯದೇಶದ ವಿರಾಟರಾಜನ ಅರಮನೆಯಲ್ಲಿ ಅಜ್ಞಾತವಾಸದಲ್ಲಿ ಪಾಂಡವರಿದ್ದಾಗ, ಅವರನ್ನು ಕಂಡುಹಿಡಿಯುವುದಕ್ಕೆ ಕೌರವರು ಗೋಗ್ರಹಣ ಮಾಡಿದರು. ಬಿಡಿಸಿಕೊಳ್ಳುವುದಕ್ಕೆ ಅರ್ಜುನ ಬಂದ. ಹಸುಗಳನ್ನು ಬಿಡಿಸಿದ. ಅವನಿಗೂ, ಕೌರವರಿಗೂ ಯುದ್ಧ ಆರಂಭವಾಯಿತು. ಅರ್ಜುನನ ಎದುರು ನಿಲ್ಲಲಾರದೆ ಕೌರವರು ತತ್ತರಿಸಿದರು. ಕೊನೆಗೆ ಅವರೆಲ್ಲರೂ ಒಟ್ಟಿಗೇ ಅರ್ಜುನನ ಮೇಲೆ ಬಿದ್ದರು.

ಭೀಷ್ಮ ದ್ರೋಣ ಕರ್ಣಾದಿ ಮಹಾವೀರರು ಒಂದಾಗಿ ಎದುರಿಗೆ ಬಂದರೆ ಗೆಲ್ಲುವುದು ಸುಲಭವೆ? ಅರ್ಜುನನಲ್ಲಿ ಪಾಶುಪತದಂತಹ ಲೋಕಮಾರಕ ಶಕ್ತಿಯಿತ್ತು. ಅದನ್ನು ಪ್ರಯೋಗಿಸುತ್ತಿದ್ದರೆ ಕ್ಷಣಾರ್ಧದಲ್ಲಿ ಕೌರವರು ಧೂಳೀಪಟವಾಗುತ್ತಿದ್ದರು. (ಅದನ್ನು ಪ್ರಯೋಗಿಸುವುದಕ್ಕೆ ನಿರ್ಬಂಧಗಳೂ ಇದ್ದವೆನ್ನಿ) ಅರ್ಜುನ ಅಂತಹ ಅಸ್ತ್ರಗಳಿಗೆ ಕೈಹಾಕದೆ, ಸಂಮೋಹನಾಸ್ತ್ರವನ್ನು ಪ್ರಯೋಗಿಸಿದ. ಅದರ ಪರಿಣಾಮದಿಂದ ಕೌರವರೂ, ಅವರ ಸಮಸ್ತ ಸೇನೆಯೂ ನಿದ್ರಾವಶರಾಗಿ ಯುದ್ಧರಂಗದಲ್ಲಿ ಮಲಗಿಬಿಟ್ಟರು. ಅರ್ಜುನ ಗೆದ್ದ. ಈ ಸಂಮೋಹನಾಸ್ತ್ರದ ಪರಿಣಾಮವು ಭಯಾನಕವಲ್ಲ. ಬಹುಶಃ ಹಿಂದಿನ ಅನುಭವವು ಅರ್ಜುನನಲ್ಲಿ ಸಂಯಮವನ್ನು ಮೂಡಿಸಿದ್ದಿರಬೇಕು. ರಾಮನಾದರೂ ಅಷ್ಟೇ. ವಿಶ್ವಾಮಿತ್ರರು ಉಪದೇಶಿಸಿದ ಸಜೀವ ಶರಗಳು (ವಿಜೃಂಭಕಾಸ್ತ್ರಗಳು) ಬತ್ತಳಿಕೆಯಲ್ಲಿದ್ದಾಗಲೂ ದುಡುಕಿನಿಂದ ಪ್ರಯೋಗಿಸಲಿಲ್ಲ. ಸಂಯಮವೂ ವಿವೇಕವೂ ಯಾರಲ್ಲಿ ಇದೆಯೋ ಅವರ ಸಂಗ್ರಹದಲ್ಲಿ ಮಾರಕಾಯುಧಗಳು ಇದ್ದರೂ, ಅವುಗಳಿಂದ ವಿಧ್ವಂಸ ನಡೆಯಲಾರದು. ಅದಿಲ್ಲದ ದುಡುಕಿನ ವ್ಯಕ್ತಿಗಳ ಕೈಯ ಮಾರಕಾಸ್ತ್ರಗಳು ಪ್ರಪಂಚಕ್ಕೆ ಸದಾ ಬೆದರಿಕೆಯೇ.

ಸದ್ಯದ ಜಾಗತಿಕ ಬೆಳವಣಿಗೆಗಳನ್ನು ಕಾಣುವಾಗ, ಪುರಾಣದ ಈ ಪ್ರಕರಣಗಳು ನೆನಪಾದವು. ಅಣ್ವಸ್ತ್ರಗಳನ್ನು ಇಟ್ಟುಕೊಂಡು, "ಈಗ ಪ್ರಯೋಗಿಸುತ್ತೇನೆ" ಎನ್ನುವ ಉನ್ಮಾದ ಮನಸ್ಥಿತಿಯ ದೇಶನಾಯಕರು ಎಂತೆಂತಹ ವಿಪರೀತಗಳಿಗೆ ಕಾರಣರಾಗುತ್ತಾರೋ. ಅದಕ್ಕೆ ಪ್ರತಿಯಾಗಿ ಹಟಕ್ಕೆ ಬಿದ್ದ ಇನ್ನೊಂದು ದೇಶ ಇನ್ನೆಂತಹ ಪ್ರಚಂಡ ಸ್ಫೋಟಕವನ್ನು ಬಳಸುತ್ತದೋ ಯಾರು ಬಲ್ಲರು? ಅವರನ್ನು ತಿಳಿಹೇಳಿ ತಿದ್ದಬಲ್ಲ, ಶಸ್ತ್ರ ಸಂನ್ಯಾಸ ಮಾಡಿಸಬಲ್ಲ ನಾರದನನ್ನು ಎಲ್ಲಿ ಹುಡುಕೋಣ? ಅಥವಾ ಕಾಂತಾ ಸಂಮಿತದಿಂದ ಮನಸ್ಸನ್ನು ಪರಿವರ್ತಿಸಬಲ್ಲ ಸೀತೆಯರನ್ನು?

ಕೆಲಸವನ್ನು ಆರಂಭಿಸಬೇಕಾದರೆ

ಹೃದಯಜ್ಞೈಃ ಸಮವಸಮಾಪ್ತಾನ್ಯಪಿ ಯಥಾ ಸುಖಯಂತಿ ।
ಕಾರ್ಯಾಣಿ ಮನ್ಯೇ ನ ತಥಾ ಇತರೈಃ ಸಮಾಪಿತಾನ್ಯಪಿ ॥ –ಗಾಥಾಸಪ್ತಶತಿ

ಸಹೃದಯರೊಡನೆ/ಇಂಗಿತವನ್ನು ಅರಿತವರೊಡನೆ ಒಂದು ಕೆಲಸವನ್ನು ಆರಂಭಿಸಿ. ಅದು ಅಪೂರ್ಣವಾದರೂ ಅದರಿಂದ ಸುಖವೇ ಲಭಿಸುತ್ತದೆ. ಆದರೆ ಹೃದಯವನ್ನು ಅರಿಯದವರೊಡಗೂಡಿ ಮಾಡಿದ ಕೆಲಸವು ಪೂರ್ಣವಾದರೂ ಅದರಿಂದ ಸುಖ ಸಿಗಲಾರದು – ಎಂಬುದು ಶ್ಲೋಕಾರ್ಥ.



ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

'ನಿಯತಂ ಕುರು ಕರ್ಮತ್ವಮ್' ಎಂಬ ಮಾತಿದೆ. ಮನುಷ್ಯನಾದವನು ಯಾವಾಗಲೂ ಒಂದಲ್ಲ ಒಂದು ಕೆಲಸದಲ್ಲಿ ತೊಡಗಿಕೊಳ್ಳಬೇಕು ಎಂಬುದು ಇದರ ಅರ್ಥ. ಕೆಲಸ ಮಾಡುವುದು ಮನುಷ್ಯನ ಲಕ್ಷ್ಯಗಳಲ್ಲಿ ಒಂದು.

ಕೆಲಸವನ್ನು ಮಾಡುವಾಗ ತಾನೊಬ್ಬನೇ ಮಾಡಬಹುದು ಅಥವಾ ಎಲ್ಲರೊಂದಿಗೆ ಸೇರಿ ಮಾಡಬಹುದು. ತಾನೊಬ್ಬನೆ ಮಾಡುವಾಗ ಚೆನ್ನಾಗಿ ಯೋಚಿಸಿ ತೊಡಗಿದರೆ ಸಾಕಾದೀತು. ಈ ಚಿಂತನೆ ಎಲ್ಲರೊಡನೆ ಮಾಡುವಾಗ ಪ್ರಯೋಜನಕ್ಕೆ ಬರುವುದು ತೀರಾ ಕಮ್ಮಿ. ಎಲ್ಲರೂ ಹೇಳುವ ಮಾತನ್ನು ಕೇಳಿ ಸಮಷ್ಟಿಯ ಅಭಿಪ್ರಾಯದಂತೆ ತೊಡಗಿಕೊಳ್ಳಬೇಕಾಗುತ್ತದೆ.

ಒಂದು ಸಮೂಹದ ಜತೆಗೆ ತೊಡಗಿಕೊಳ್ಳುವಾಗಲೂ ಅದರ ಗುಣಮಟ್ಟವನ್ನು ಮೊದಲು ತಿಳಿದುಕೊಳ್ಳಬೇಕು. ಅಲ್ಲಿರುವವರು ಸಹೃದಯರೇ, ಸಾಮಾಜಿಕ ಕಳಕಳಿಯುಳ್ಳವರೇ, ಸ್ವಾರ್ಥಿಗಳೆ, ನಾಮಕಾಮಿಗಳೆ... ಇತ್ಯಾದಿಗಳನ್ನೂ ತಿಳಿದುಕೊಳ್ಳಬೇಕು. ವೈಯಕ್ತಿಕ ಲಾಭಕ್ಕೆ ತೊಡಗಿಕೊಳ್ಳುವವರ ಜತೆ ಸೇರುವುದು ಸುತಾರಾಂ ಒಳ್ಳೆಯದಲ್ಲ. ಏಕೆಂದರೆ ಅವರಿಗೆ ಯಾವ ಉದಾತ್ತ ಉದ್ದೇಶ ಇರುವುದಿಲ್ಲ. ತಮ್ಮ ಕೆಲಸವಾದ ಮೇಲೆ ಅವರೆಂದೂ ಸಿಗುವುದಿಲ್ಲ.

ಆದ್ದರಿಂದ ಇಂಥವರ ಜತೆಯಾಗುವುದನ್ನು ಬಿಟ್ಟು ಸಹೃದಯರು, ಸಾಮಾಜಿಕ ಕಳಕಳಿಯುಳ್ಳವರು ನಡೆಸುವ ಸಮಾಜ ನಿರ್ಮಾಣ ಕಾರ್ಯದಲ್ಲಿ ಜೊತೆಯಾಗಬೇಕು. ಅದರಲ್ಲಿ ನೆಮ್ಮದಿಯಿದೆ. ಒಂದೊಮ್ಮೆ ಕೈಗೊಂಡ ಕೆಲಸ ಪೂರ್ಣವಾಗದಿದ್ದರೂ ಮಾಡಿದ ಕೆಲಸದಲ್ಲಿ ಮೋಸವಿರುವುದಿಲ್ಲ. ಇರುವವರೆಲ್ಲರೂ ಮೌಲ್ಯಕ್ಕಾಗಿ ದುಡಿಯುವವರಾದ್ದರಿಂದ ಸಂತೋಷವಿದೆ. ಕೈಗೊಂಡ ಕೆಲಸವೂ ಲೋಕಹಿತದ ಕಾಯಕವಾದುದರಿಂದ ಬೇಸರ ಪಟ್ಟುಕೊಳ್ಳಬೇಕಾಗಿಲ್ಲ. ಉತ್ತಮ ಕೆಲಸವನ್ನು ಉದಾರಚರಿತರು ನಿಂದಿಸುವುದಿಲ್ಲ. ಮಾಡಿದ ಕೆಲಸದಿಂದಾಗಿ ಲೋಕಾನಂದವೇ ಸಿಗುತ್ತದೆ. ಇಂದಲ್ಲ, ನಾಳೆ ಅದನ್ನು ಪೂರ್ತಿಗೊಳಿಸುವ ಹಂಬಲದ ಉತ್ಸಾಹಿಗಳು ಮುಂದುವರಿಸುತ್ತಾರೆ. ಏಕೆಂದರೆ ಉದ್ದೇಶವೇ ಉದಾರವಾಗಿದೆ.

ಹೃದಯವನ್ನು ಅರಿಯದವರ, ಔದಾರ್ಯವಿಲ್ಲದವರ ಜತೆ ಸೇರಿ ಕೆಲಸದಲ್ಲಿ ತೊಡಗಿದರೆ ಅದು ಪೂರ್ತಿಯಾಗಲೂ ಬಹುದು. ಆದರೆ ಅದಕ್ಕೆ ಔದಾರ್ಯದ ಸ್ಪರ್ಶ, ಲೋಕಹಿತದ ಕಲ್ಪನೆ ಇಲ್ಲದ ಕಾರಣ ಕೆಲಸ ಪೂರ್ಣವಾದರೂ ಅದರಿಂದ ಸುಖ ಸಿಗದು. ಇಂತಹ ಕೆಲಸಕ್ಕೆ ನನ್ನ ಶ್ರಮ ವಿನಿಯೋಗವಾಯಿತಲ್ಲ ಎಂಬ ಭಾವ ಅಂಕುರಿಸದಿರದು.

ಹೃದಯವಂತರು ಆರಂಭಿಸುವ ಕೆಲಸದಲ್ಲಿ ಲೋಕಹೃದಯರ ಮೆಚ್ಚುಗೆಯಿರುತ್ತದೆ. ಸಹಕಾರವಿರುತ್ತದೆ. ಕಾಳಜಿಯಿರುತ್ತದೆ. ಇವರು ಕೈಗೊಳ್ಳುವ ಕಾಯಕದಲ್ಲಿ ಸಮಷ್ಟಿಯ ಹಿತವಡಗಿರುತ್ತದೆ. ಆದ್ದರಿಂದ ನಿಜವಾದ ಕಳಕಳಿಯಿಂದ ಸಮಾಜಮುಖೀ ಕೆಲಸದಲ್ಲಿ ತೊಡಗಿಕೊಳ್ಳುವವರು ಕೆಲಸದ ಮಹತ್ವ, ಮುಂದಾಳುಗಳ ಕಳಕಳಿ ಇವುಗಳನ್ನು ಅರಿತು ಯೋಗದಾನ ಮಾಡಬೇಕು. ಚೆನ್ನಾಗಿ ಯೋಚಿಸಿ ತೊಡಗಿಕೊಳ್ಳಬೇಕು.

'ಇಲ್ಲಿನ' ರಾಷ್ಟ್ರವಿರೋಧಿಗಳ ಬಣ್ಣ ಬಯಲಾಗಿಸಿದ ಇರಾನ್ ಸಮರ

▸ ಚಾಂದಿನಿ ಸೇನ್‌ಗುಪ್ತಾ

ಇರಾನ್‌ನ ನಿರಂಕುಶ ಸರ್ವೋಚ್ಚ ನಾಯಕ ಖಮೇನಿಯ ಹತ್ಯೆಯಾದ ಬಳಿಕ ಕರ್ನಾಟಕವೂ ಸೇರಿದಂತೆ ಭಾರತದ ಹಲವಾರು ರಾಜ್ಯಗಳಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಮುಸ್ಲಿಮರ ಸಂಖ್ಯೆ ಹೆಚ್ಚಿಲ್ಲದ ಪಂಜಾಬಿನಲ್ಲೂ ಪ್ರತಿಭಟನೆ ನಡೆದಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಸುದ್ದಿವಾಹಿನಿಗಳಲ್ಲಿ ಇಸ್ಲಾಮೋ–ಮಾರ್ಕ್ಸಿಸ್ಟ್ ಮಂದಿಯ ಗೋಳಾಟವಂತೂ ಹೇಳತೀರದಾಗಿದೆ. ಅದು ಹಾಸ್ಯಾಸ್ಪದವಾಗಿಯೂ ಕಂಡುಬರುತ್ತಿದೆ.

ಇಂಥ ಸಂದರ್ಭದಲ್ಲಿ ಕೆಲವು ಪ್ರಮುಖ ಪ್ರಶ್ನೆಗಳನ್ನು ಕೇಳಬೇಕಾಗಿದೆ. ಭಾರತದಾದ್ಯಂತದ ಮುಸ್ಲಿಮರು, ಅದರಲ್ಲೂ ಮುಖ್ಯವಾಗಿ ಶಿಯಾ ಮುಸ್ಲಿಮರು 2000 ಮೈಲುಗಳಷ್ಟು ದೂರದಲ್ಲಿರುವ ರಾಷ್ಟ್ರವೊಂದರ ನಾಯಕನ ಹತ್ಯೆಗೆ ಇಷ್ಟೊಂದು ಪ್ರತಿಭಟನೆ ನಡೆಸುತ್ತಿರುವುದೇಕೆ? ಭಾರತದಲ್ಲಿ ಪ್ರಮುಖ ಮುಖಂಡನೊಬ್ಬನ ಸಾವಿಗೆ ಅಥವಾ ಭಯೋತ್ಪಾದನೆಗೆ ತುತ್ತಾದ ಅಮಾಯಕರ ಸಾವಿಗೆ ಅವರು ಕಣ್ಣೀರು ಸುರಿಸುವುದಿಲ್ಲವೇಕೆ? ಇಷ್ಟಕ್ಕೂ ಭಾರತವು ಅವರ ಜನ್ಮಸ್ಥಳ. ಪ್ರಜಾತಂತ್ರ, ಜಾತ್ಯತೀತತೆ ಮತ್ತು ಮಹಿಳಾ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಆ್ಯಕ್ಟಿವಿಸ್ಟ್‌ಗಳು, ಮಾಧ್ಯಮ ಮಂದಿ ಹಾಗೂ ಶಿಕ್ಷಣವೇತ್ತರರು ಕೂಡಾ ಖಮೇನಿ ಸಾವಿಗೆ ಇಲ್ಲಿ ಗೋಳಾಡುವುದೇಕೆ? ಇವರು ಪ್ರತಿಪಾದಿಸುವ ಜಾತ್ಯತೀತತೆ , ಮಹಿಳಾ ಸ್ವಾತಂತ್ರ್ಯ ಮತ್ತು ಪ್ರಜಾತಂತ್ರವನ್ನು ದಮನಿಸಿದವರು ಖಮೇನಿ ಎಂಬುದು ಅವರಿಗೆ ತಿಳಿದಿಲ್ಲವೆ?

ಮೊದಲ ಪ್ರಶ್ನೆಗೆ ಬಹುಶಃ ಆಯಾತೊಲ್ಲಾ ಖಮೇನಿ ಜಾಗತಿಕವಾಗಿ ಶಿಯಾ ಮುಸ್ಲಿಮರ ಪಾಲಿಗೆ ಧಾರ್ಮಿಕ ಗುರುವಾಗಿ ಪರಿಗಣಿಸಲ್ಪಡುತ್ತಾರೆ ಎಂಬುದು ಉತ್ತರವಾಗಿರಬಹುದು. ಹಾಗಾಗಿ ಖಮೇನಿಯ ಹತ್ಯೆ ಶಿಯಾಗಳಿಗೆ ದೊಡ್ಡ ಆಘಾತ ತಂದಿರಬಹುದು. ಒಬ್ಬರಿಗೆ ಗೌರವ ಸೂಚಿಸುವುದಾಗಲಿ, ಆರಾಧಿಸುವುದಾಗಲಿ ಅವರವರ ವೈಯಕ್ತಿಕ ವಿಚಾರ. ಆದರೆ ಪ್ರತಿಭಟನೆ, ಮೆರವಣಿಗೆ, ಸಾಮೂಹಿಕ ಪ್ರಾರ್ಥನೆ ಮುಂತಾದ ರೀತಿಗಳಿಂದ ಭಾವನೆಯನ್ನು ಹಿಂಸಾತ್ಮಕವಾಗಿ ಅಭಿವ್ಯಕ್ತಿಸುವುದು ಅತಿರೇಕವಾಗಿ ಕಂಡುಬರುತ್ತದೆ. ಬಹುಮಂದಿ ಪ್ರತಿಭಟನೆಗಾರರು, ಇನ್ನೂ ಹರಯಕ್ಕೆ ಬಾರದ ಮಕ್ಕಳು ಕೂಡಾ ಇರಾನಿನ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಗೆ ಪ್ರಧಾನಿ ಮೋದಿಯವರನ್ನು ದೂರುತ್ತಿರುವುದನ್ನು ಕಾಣುತ್ತಿದ್ದೇವೆ.

ಬಾಲಕನೊಬ್ಬ ಖಮೇನಿ ಹತ್ಯೆಗೆ ಮೋದಿಯೇ ಕಾರಣ ಎಂದು ಹೇಳುತ್ತಿರುವ ವಿಡಿಯೋವೊಂದು ವೈರಲ್ ಆಗಿದೆ. ಮೋದಿಯವರ ಕಾರಣದಿಂದಾಗಿಯೇ ಖಮೇನಿ ಹತ್ಯೆಯಾಯಿತು ಎಂದು ಹೇಳುವ ಆತ, ಕೆಲವೇ ದಿನಗಳ ಹಿಂದೆ ಮೋದಿಯವರು ಇಸ್ರೇಲಿಗೆ ಭೇಟಿ ನೀಡಿದ್ದೇ ಇದಕ್ಕೆ ಪುರಾವೆ ಎಂದು ಹೇಳುತ್ತಾನೆ. ತನ್ನ ಗಳಹುವಿಕೆಯನ್ನು ಆತ ಅಷ್ಟಕ್ಕೇ ನಿಲ್ಲಿಸುವುದಿಲ್ಲ. ಪ್ರಧಾನಿ ಮೋದಿಯವರಿಗೆ ಏನಾದರೂ ಆದರೆ ಎಂದು ಕೇಳಿದಾಗ ಅದಕ್ಕೂ ತನಗೂ ಸಂಬಂಧವಿಲ್ಲ ಎಂದು ಹೇಳುತ್ತಾನೆ. ಎದೆಬಡಿದುಕೊಂಡು ಅಳುತ್ತಿದ್ದ ಇನ್ನೊಬ್ಬ ಪ್ರತಿಭಟನೆಕಾರನ ಬಳಿ ಟಿವಿ ವಾಹಿನಿಯು ಪ್ರತಿಕ್ರಿಯೆ ಕೇಳಿದಾಗ ಆತ "ನಾವು ನಮ್ಮ ತಂದೆಯನ್ನು ಕಳಕೊಂಡಿದ್ದೇವೆ ಎಂದು ಉತ್ತರಿಸುತ್ತಾನೆ.

ಮಹಿಳೆಯರೂ ಹಿಂದೆ ಬಿದ್ದಿಲ್ಲ. ಬುರ್ಖಾ ಧರಿಸಿದ ಸಣ್ಣ ಹುಡುಗಿಯರು, ಯುವತಿಯರು ಕೂಡಾ ಖಮೇನಿ ಭಿತ್ತಿಚಿತ್ರ ಹಿಡಿದುಕೊಂಡು ಅವರ ಹೆಸರನ್ನು ಜಪಿಸುತ್ತಾ ಪ್ರದರ್ಶನ ನಡೆಸುವುದು ಕಂಡುಬರುತ್ತಿದೆ. ಯಹೂದಿಗಳು ಮತ್ತು ಅಮೆರಿಕದ ವಿರುದ್ಧ ಇರಾನಿನ ಪರವಾಗಿ ಹೋರಾಡುವುದಕ್ಕಾಗಿ ತಾವು ಕೆಲವು ಮಕ್ಕಳನ್ನು ಹೆತ್ತು ಕೊಡಲೂ ಸಿದ್ಧ ಎಂದು ಕೆಲವು ಮಹಿಳೆಯರು ಘೋಷಿಸುತ್ತಾರೆ. ಒಬ್ಬ ಬುರ್ಖಾಧಾರಿ ಯುವತಿಯಂತೂ "ನಾವು ಭಾರತದ ಬಗ್ಗೆ ಕಾಳಜಿ ಹೊಂದಿಲ್ಲ.



ನಾವು ಇರಾನಿಗಳು. ಆದರೆ ಭಾರತದಲ್ಲಿ ನೆಲೆಸಿದ್ದೇವಷ್ಟೆ" ಎಂದು ಘೋಷಿಸುತ್ತಾಳೆ.

ಇದರ ಮಧ್ಯೆಯೇ ವಿರೋಧ ಪಕ್ಷ ಕಾಂಗ್ರೆಸಿನ ಹೇಳಿಕೆ ನಿರೀಕ್ಷೆಯಂತೆಯೇ ಬಂದಿದೆ. ಇರಾನಿನ ಮೇಲೆ ಸಮರ ಸಾರುವುದರಲ್ಲಿ ಮೋದಿಯವರ ಕೈವಾಡ ಇದೆ ಎಂದು ಕಾಂಗ್ರೆಸ್ ಪಕ್ಷವು ಆರೋಪಿಸಿದೆ. ಮೋದಿಯವರು ಇಸ್ರೇಲಿಗೆ ಭೇಟಿ ನೀಡಿ ಇಸ್ರೇಲ್ ಜತೆ ಉತ್ತಮ ಬಾಂಧವ್ಯಕ್ಕೆ ಒತ್ತು ನೀಡಿದ್ದೇ ಕಾಂಗ್ರೆಸಿಗೆ ಈ ಆರೋಪ ಹೊರಿಸಲು ಪುರಾವೆ ಸಾಕಾಯಿತು.

ಇಸ್ರೇಲ್ ಹಲವಾರು ದಶಕಗಳಿಂದಲೇ ಭಾರತದ ಸ್ನೇಹಿತ ರಾಷ್ಟ್ರ. ವ್ಯಾಪಾರ ಮತ್ತು ರಕ್ಷಣಾ ಸಹಕಾರಕ್ಕಿಂತಲೂ ಮಿಗಿಲಾದ ಬಾಂಧವ್ಯವದು. ಜ್ಞಾನ ವಿನಿಮಯ, ಸಂಶೋಧನಾ ಸಹಕಾರ, ಸಾಂಸ್ಕೃತಿಕ ವಿನಿಮಯ, ಪ್ರವಾಸೋದ್ದಿಮೆ, ಮುಂತಾದ ಕ್ಷೇತ್ರಗಳಿಗೂ ಈ ಸಹಕಾರ ವಿಸ್ತರಿಸಿದೆ. ಭಾರತದಲ್ಲಿ ನಡೆಯುವ ಯಾವುದೇ ಬಗೆಯ ಭಯೋತ್ಪಾದನೆಯನ್ನು ಮೊತ್ತಮೊದಲಾಗಿ ವಿರೋಧಿಸಿ ಹೇಳಿಕೆ ನೀಡುವುದು ಇಸ್ರೇಲ್. ಇರಾನ್ ಭಾರತದ ಪಾಲಿಗೆ ವ್ಯಾಪಾರ ಪಾಲುದಾರನಷ್ಟೆ. ಉಳಿದಂತೆ ಅದು ಪಾಕಿಸ್ತಾನದ ಸ್ನೇಹಿತ. ಕಾಶ್ಮೀರಕ್ಕೆ ಸಂಬಂಧಿಸಿ ಇರಾನ್ ಎಂದಿಗೂ ಭಾರತದ ನಿಲುವನ್ನು ಬೆಂಬಲಿಸಿಲ್ಲ. ಮುಂಬೈ ಮೇಲೆ ಭಯೋತ್ಪಾದಕರ ದಾಳಿ ನಡೆದಾಗ ಇರಾನ್ ಪಾಕಿಸ್ತಾನವನ್ನು ಬೆಂಬಲಿಸಿ ಹೇಳಿಕೆ ನೀಡಿತ್ತು. ಅದರಲ್ಲಿ ಪಾಕಿಸ್ತಾನದ ಪಾತ್ರವಿಲ್ಲವೆಂದೂ, ಪಾಕಿಸ್ತಾನವೇ ಭಯೋತ್ಪಾದನೆಯ ಬಲಿಪಶುವೆಂದೂ ನುಡಿದಿತ್ತು. 2017ರಲ್ಲಿ ಖಮೇನಿ "ಜಗತ್ತಿನೆಲ್ಲ ಮುಸ್ಲಿಮರು ಕಾಶ್ಮೀರದ ಮುಸ್ಲಿಮರ ನೆರವಿಗೆ ಧಾವಿಸಬೇಕು" ಎಂದು ಕರೆ ನೀಡಿದ್ದರು. 2019ರಲ್ಲಿ ಭಾರತವು ಸಂವಿಧಾನದ 370ನೇ ವಿಧಿ ರದ್ದುಪಡಿಸಿದಾಗ ಇರಾನಿನ ವಿದೇಶಾಂಗ ಸಚಿವ "ಕಾಶ್ಮೀರದಲ್ಲಿ ಮಾನವ ಹಕ್ಕುಗಳ ಪರಿಸ್ಥಿತಿ ಶೋಚನೀಯವಾಗಿದೆ' ಎಂದು ಕಳವಳ ವ್ಯಕ್ತಪಡಿಸಿದ್ದ. 2020ರಲ್ಲಿ ದಿಲ್ಲಿ ದೊಂಬಿಯ ವೇಳೆ ಖಮೇನಿ "ಭಾರತದಲ್ಲಿ ಮುಸ್ಲಿಮರ ಮಾರಣಹೋಮ ನಡೆಯುತ್ತಿದೆ" ಎಂದು ಆರೋಪಿಸಿದ್ದರು. ಇವೆಲ್ಲ ಭಾರತಸ್ನೇಹಿ ಹೇಳಿಕೆಗಳು ಖಂಡಿತಾ ಅಲ್ಲ.

ಖಮೇನಿ ನೇತೃತ್ವ ಹೊಂದಿದ್ದ ಇರಾನ್ ಯಾವತ್ತೂ ಭಾರತವನ್ನು ಬೆಂಬಲಿಸುವ ನಿಲುವು ಪ್ರಕಟಿಸದಿರುವಾಗ, ಇಲ್ಲಿ ಭಾರತೀಯ ಮುಸ್ಲಿಮರು ಮಾತ್ರ ಅವರ ಸಾವನ್ನು ದುಃಖಿಸುತ್ತಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಇರಾನಿ ಪ್ರಜೆಗಳನ್ನೇ ಮಾರಣಹೋಮ ಮಾಡಿದ, ಅಲ್ಲಿನ ಮಹಿಳೆಯರ ವಿರುದ್ಧ ದಮನಕಾರಿ ಕಾನೂನುಗಳನ್ನು ಜಾರಿಗೆ ತಂದ ಇರಾನಿನ ಮುಖಂಡನ ಪರವಾಗಿ ನಮ್ಮಲ್ಲಿನ ತಥಾಕಥಿತ ಲಿಬರಲ್‌ಗಳು, ಎಡಪಂಥೀಯರು, ಕಾಂಗ್ರೆಸಿಗರು ಸಂತಾಪ ಸೂಚಿಸುತ್ತಿದ್ದಾರೆ.

ತಮ್ಮ ದೇಶದ ಪ್ರಧಾನಿಗಿಂತಲೂ ಇಲ್ಲಿನ ಪ್ರತಿಭಟನೆಗಾರರಿಗೆ ದೂರದ ಖಮೇನಿಯೇ ಪ್ರಿಯ. ಅವರ ದೇಶನಿಷ್ಠೆಯ ಕುರಿತು ಪ್ರಶ್ನಿಸಿದರೆ ಅವರು ಬೊಬ್ಬಿಡುತ್ತಾರೆ. ಇಲ್ಲಿನ ಯಾರಾದರೂ ಮುಖಂಡರ ಸಾವಿನ ಬಗ್ಗೆ, ಭಯೋತ್ಪಾದನೆಯಲ್ಲಿ ಮೃತ ಪಟ್ಟವರ ಬಗ್ಗೆ ಇವರೇಕೆ ಅಳುವುದಿಲ್ಲ, ಏಕೆ ಸಂತಾಪ ಸೂಚಿಸುವುದಿಲ್ಲ?

ಇದಕ್ಕೆ ಉತ್ತರ ಸಾವರ್ಕರ್ ಅವರ ಹೇಳಿಕೆಯೊಂದರಲ್ಲಿದೆ. ಕೆಲವು ದಶಕಗಳ ಹಿಂದೆಯೇ ಅವರು "ಭಾರತವನ್ನು ತಮ್ಮ ಪಿತೃಭೂಮಿ ಮತ್ತು ಪುಣ್ಯಭೂಮಿ ಎಂದು ಯಾರು ಭಾವಿಸುವುದಿಲ್ಲವೋ ಅವರು ಎಂದಿಗೂ ದೇಶಕ್ಕೆ ಪೂರ್ಣ ನಿಷ್ಠೆಯಿಂದಿರಲಾರರು" ಎಂದು ಹೇಳಿದ್ದರು.

ಪಾಕಿಸ್ತಾನದ ಮಾಜಿ ಪ್ರಧಾನಿ ಬೆನಜೀರ್ ಭುಟ್ಟೋ ಹತ್ಯೆಯಾದಾಗಲೂ ಭಾರತದಲ್ಲಿ ಸಂತಾಪ ಸೂಚಕ ಮೆರವಣಿಗೆಗಳು ನಡೆದಿದ್ದವು. ಹೇಳಿಕೇಳಿ ಆಕೆ, ಭಾರತ ವಿರೋಧಿ ನಿಲುವು ಹೊಂದಿದ್ದ ಪಾಕಿಸ್ತಾನಿ ನಾಯಕಿ. ಆಕೆಯ ತಂದೆ ಜುಲ್ಫಿಕರ್ ಅಲಿ ಭುಟ್ಟೋ ಅಂತೂ "ಭಾರತವನ್ನು ಸಾವಿರಾರು ಗಾಯಗಳಿಂದ ಜರ್ಜರಿತಗೊಳಿಸುವ" ನೀತಿಯನ್ನು ಅನುಷ್ಠಾನಿಸಿದ್ದವನು. ಇದರೊಂದಿಗೆ ಕಂದಹಾರ್ ವಿಮಾನ ಅಪಹರಣ ಪ್ರಸಂಗವನ್ನು ತುಲನೆ ಮಾಡಿ. 1999ರಲ್ಲಿ ಐಎಸ್ಐ ಬೆಂಬಲಿತ ಭಯೋತ್ಪಾದಕರು ಭಾರತದ ವಿಮಾನವನ್ನು ಅಪಹರಿಸಿ ಕಂದಹಾರ್‌ಗೆ ಕೊಂಡೊಯ್ದಿದ್ದರು. ಅದರಲ್ಲಿ 191 ಪ್ರಯಾಣಿಕರಿದ್ದರು. ಆದರೆ ಯಾವೊಬ್ಬ ಮುಸ್ಲಿಮನೂ ಅದನ್ನು ಪ್ರತಿಭಟಿಸಲಿಲ್ಲ. 2008ಲ್ಲಿ ಮುಂಬೈ ಮೇಲೆ ದಾಳಿಯಾದಾಗ, ಪುಲ್ವಾಮಾದಲ್ಲಿ 40 ಸಿಆರ್‌ಪಿಎಫ್ ಸಿಬ್ಬಂದಿಗಳ ಮಾರಣಹೋಮವಾದಾಗ, ಪಹಲ್ಗಾಮ್‌ನಲ್ಲಿ 26 ಅಮಾಯಕ ಪ್ರವಾಸಿಗರನ್ನು ಕೊಂದಾಗ ಯಾರೂ ರೋಧಿಸಲಿಲ್ಲ. ಕಣ್ಣೀರು ಮಿಡಿಯಲಿಲ್ಲ. ಪ್ರದರ್ಶನ ನಡೆಸಲಿಲ್ಲ. 2025ರ ನವೆಂಬರ್ 10ರಂದು ಕೆಂಪುಕೋಟೆ ಬಳಿ ಬಾಂಬು ಸ್ಫೋಟಿಸಿದ ಬಳಿಕವಂತೂ ಇವರದು ದಿವ್ಯ ಮೌನ. ಇಂತಹ ಭಯೋತ್ಪಾದಕ ಕೃತ್ಯಗಳು ನಡೆದಾಗ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸಿದ ಒಂದಾದರೂ ಉದಾಹರಣೆ ಇದೆಯೆ? ಭಯೋತ್ಪಾದನೆಯನ್ನು ಖಂಡಿಸಿದ್ದಿದೆಯೆ? ಅವರ ಹೃದಯ ಮಿಡಿಯುವುದು ಖಮೇನಿ, ಬೆನಜೀರ್ ಭುಟ್ಟೋ... ಮುಂತಾದವರಿಗೆ.

ಮಾಧ್ಯಮಗಳಲ್ಲಿ ಖಮೇನಿ ಸಾವಿಗೆ ರೋಧಿಸುತ್ತಾ ಪ್ರಕಟವಾಗುತ್ತಿರುವ ಬರಹಗಳನ್ನು ವಿಶ್ಲೇಷಿಸಿದಾಗ ಸ್ಪಷ್ಟವಾಗುವ ಅಂಶವೆಂದರೆ: ಇವರಾರೂ ಪ್ರಜಾತಂತ್ರವಾದಿಗಳಲ್ಲ, ಜಾತ್ಯತೀತತೆಯ ಪ್ರತಿಪಾದಕರಲ್ಲ, ಮಹಿಳಾ ಸ್ವಾತಂತ್ರ್ಯದ ಪರವಾಗಿರುವವರೂ ಅಲ್ಲ. ಇವರೆಲ್ಲ ಹಿಂದು ವಿರೋಧಿಗಳು. ಇಸ್ಲಾಮೋ–ಮಾರ್ಕ್ಸಿಸ್ಟ್‌ಗಳು. ಬಿಜೆಪಿ ಸರಕಾರದ ವಿರುದ್ಧ ಸಂಕಥನ ಹರಡಲು ಇವರು ಯಾವ ಮಟ್ಟಕ್ಕೂ ಇಳಿಯಬಲ್ಲರು. ಇದಕ್ಕಾಗಿ ಅವರು 32,000 ಜನರ ಸಾವಿಗೆ ಕಾರಣನಾಗಿರುವನೆಂದು ಹೇಳಲಾದ ನಿರಂಕುಶ ಅಧಿಕಾರಿಯೊಬ್ಬನ್ನು ಕೂಡಾ ಬೆಂಬಲಿಸಿಯಾರು. (2025ರ ಡಿಸೆಂಬರ್–2026ರ ಜನವರಿಯಲ್ಲಿ ಇರಾನಿನಲ್ಲಿ ನಡೆದ ಪ್ರತಿಭಟನೆಯಲ್ಲಿ 32000 ಜನರು ಸಾವಿಗೀಡಾಗಿದ್ದಾರೆಂದು ಹೇಳಲಾಗಿದೆ.)

ಖಮೇನಿಗಾಗಿ ಎದೆಬಡಿದುಕೊಂಡು ರೋಧಿಸುವ ಮಂದಿ ಭಾರತೀಯರ ಕಣ್ಣೀರಿಗೆ ಒಂದಿನಿತೂ ಸ್ಪಂದಿಸಿದವರಲ್ಲ. ಇನ್ನೀಗ ಇರಾನಿನಲ್ಲಿ ನಡೆಯುತ್ತಿರುವ ಸಮರದ ಫಲಿತಾಂಶ ಏನಾದೀತೆಂದು ಹೇಳಲಾಗದು. ಆದರೆ ಈ ಸಮರವು ಇಲ್ಲಿ ಭಾರತದಲ್ಲಿ ನಮ್ಮ ದೇಶದ ಪರವಾಗಿರುವವರು ಯಾರು ಹಾಗೂ ದೇಶದ ವಿರುದ್ಧವಾಗಿರುವವರು ಯಾರು ಎಂಬುದನ್ನಂತೂ ಬಯಲುಗೊಳಿಸಿದೆ.

ನ್ಯಾಯಾಂಗದ ಭ್ರಷ್ಟಾಚಾರದ ಬಗ್ಗೆ ಚರ್ಚೆ ನಡೆಯಬೇಡವೆ?

▸ ದಿನೇಶ

ಕೆಲವು ದಿನಗಳ ಹಿಂದೆ ಸರ್ವೋಚ್ಚ ನ್ಯಾಯಾಲಯವು ಎನ್‌ಸಿಇಆರ್‌ಟಿ ಪಠ್ಯಪುಸ್ತಕದಲ್ಲಿ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಎಂಬ ಪಠ್ಯವನ್ನು ಸೇರಿಸಿದ್ದಕ್ಕಾಗಿ ಉರಿದು ಬಿದ್ದಿತು. ಇಡೀ ಪಠ್ಯಪುಸ್ತಕವನ್ನೇ ನಿಷೇಧಿಸಲು ಆದೇಶಿಸಿತು.

ಇಂತಹ ವಿಷಯವನ್ನು ಪಠ್ಯದಲ್ಲಿ ಸೇರಿಸಿದ್ದಕ್ಕಾಗಿ ಕೆಂಡ ಕಾರಿದ ದೇಶದ ಮುಖ್ಯ ನ್ಯಾಯಾಧೀಶ ಸೂರ್ಯಕಾಂತ್ ನೇತೃತ್ವದ ನ್ಯಾಯಪೀಠವು ಸರ್ಕಾರ ಮತ್ತು ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮಂಡಳಿಯನ್ನು ತರಾಟೆಗೆ ತೆಗೆದುಕೊಂಡಿತು. ಇಂತಹ ಪಠ್ಯವನ್ನು ಸೇರಿಸಲು ಕಾರಣರಾದವರು ಯಾರು ಎಂಬುದು ನಮಗೆ ತಿಳಿಯಬೇಕು ಹಾಗೂ ಅವರ ತಲೆದಂಡವಾಗಬೇಕು ಎಂದೂ ನ್ಯಾಯಾಲಯ ಆದೇಶಿಸಿತು. ವಿಪರ್ಯಾಸವೆಂದರೆ ನ್ಯಾಯಾಲಯದ ಈ ಆದೇಶವು ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ವಿಷಯ ಹಾಗೂ ಅದನ್ನು ನ್ಯಾಯಾಲಯಗಳು ನಿಭಾಯಿಸುವ ರೀತಿಯನ್ನು ಮತ್ತೆ ಮುನ್ನೆಲೆಗೆ ತಂದಿತು.

ನ್ಯಾಯಾಲಯದಲ್ಲಿ ಕೂಡಾ ಭ್ರಷ್ಟಾಚಾರವಿದೆ ಎಂಬುದನ್ನು ಈಗ ಯಾರೂ ನಿರಾಕರಿಸಲಾರರು. ನ್ಯಾಯಾಧೀಶರ ವಿರುದ್ಧ ಆಗಾಗ ಭ್ರಷ್ಟಾಚಾರದ ಆರೋಪ ಕೇಳಿಬರುತ್ತಿರುತ್ತದೆ. ಅದನ್ನು ಪರಾಮರ್ಶಿಸುವ ಬದಲಾಗಿ ಅದರ ಕುರಿತಂತೆ ಚರ್ಚೆಯೇ ನಡೆಯಬಾರದು ಎಂಬಂತೆ ವರ್ತಿಸುವುದು ಎಷ್ಟು ಸರಿ?

ಕಳೆದ ವರ್ಷವಷ್ಟೇ ದಿಲ್ಲಿ ಹೈಕೋರ್ಟ್‌ನ ನ್ಯಾಯಾಧೀಶ ಯಶವಂತ್ ವರ್ಮಾ ಅವರ ಮನೆಯಿಂದ ಕೋಟಿಗಟ್ಟಲೆ ಹಣವನ್ನು ವಶಪಡಿಸಿಕೊಂಡ ಘಟನೆ ಎಲ್ಲರ ಮನದಲ್ಲಿ ಹಸಿರಾಗಿದೆ. ಇದು ದೇಶಾದ್ಯಂತ ಸಂಚಲನ ಸೃಷ್ಟಿಸಿತ್ತು. ಈ ಕುರಿತಾದ ತನಿಖೆಯನ್ನು ನಡೆಸಲು ಸುಪ್ರೀಂಕೋರ್ಟ್ ಮೂವರು ಸದಸ್ಯರ ಸಮಿತಿಯೊಂದನ್ನು ನೇಮಿಸಿತ್ತು.

ಇದಷ್ಟೇ ಅಲ್ಲ. ನ್ಯಾಯಾಂಗದ ವಿರುದ್ಧ ಭ್ರಷ್ಟಾಚಾರದ ದೂರುಗಳ ಸಂಖ್ಯೆ ಏರುತ್ತಲೇ ಇದೆ. ಫೆಬ್ರವರಿಯಲ್ಲಿ ಲೋಕಸಭೆಯಲ್ಲಿ ಮಂಡಿಸಲಾದ ಮಾಹಿತಿಯೊಂದರ ಪ್ರಕಾರ ಕಳೆದೊಂದು ದಶಕದಲ್ಲಿ ಹಾಲಿ ನ್ಯಾಯಾಧೀಶರ ವಿರುದ್ಧ ಸಲ್ಲಿಸಲಾದ ದೂರುಗಳ ಸಂಖ್ಯೆ 8,600. ಈ ಸಂಖ್ಯೆ 2024ರಲ್ಲಿ ಗರಿಷ್ಠವಾಗಿತ್ತು. ಒಟ್ಟು 1,170 ದೂರುಗಳನ್ನು ನ್ಯಾಯಾಧೀಶರ ವಿರುದ್ಧ ಸಲ್ಲಿಸಲಾಗಿತ್ತು. 2025ರಲ್ಲಿ 1102 ದೂರುಗಳು ಸಲ್ಲಿಕೆಯಾಗಿದ್ದವು.

ವಿಶೇಷವೆಂದರೆ ನ್ಯಾಯಾಧೀಶರ ವಿರುದ್ಧದ ದೂರುಗಳನ್ನು ನ್ಯಾಯಾಲಯವೇ ಇತ್ಯರ್ಥ ಪಡಿಸುವುದು. ಆರೋಪಿತ ನ್ಯಾಯಾಧೀಶರ ಮೇಲಿನ ಹಂತದ ನ್ಯಾಯಾಧೀಶರು ದೂರುಗಳನ್ನು ಸ್ವೀಕರಿಸುತ್ತಾರೆ. ಹೈಕೋರ್ಟ್‌ಗಳ ನ್ಯಾಯಾಧೀಶರ ಮೇಲಿನ ದೂರುಗಳನ್ನು ಸುಪ್ರೀಂಕೋರ್ಟ್ ನ್ಯಾಯಾಧೀಶರು ಸ್ವೀಕರಿಸುತ್ತಾರೆ. ಹೈಕೋರ್ಟ್ ಮತ್ತು ಸುಪ್ರೀಂಕೋರ್ಟಿನ ನ್ಯಾಯಾಧೀಶರ ವಿರುದ್ಧ ಕೇಳಿಬರುವ ದೂರುಗಳನ್ನು ನ್ಯಾಯಾಲಯವೇ ನೇಮಿಸಿದ ಸಮಿತಿಯೊಂದರ ಮೂಲಕ ವಿಚಾರಣೆ ಮಾಡಲಾಗುತ್ತದೆ. ಕೆಳ ನ್ಯಾಯಾಲಯಗಳ ನ್ಯಾಯಾಧೀಶರ ವಿರುದ್ಧದ ದೂರುಗಳನ್ನು ಹೈಕೋರ್ಟ್ ವಿಚಾರಣೆಗೊಳಪಡಿಸುತ್ತದೆ.



ಯಾವುದಾದರೂ ನ್ಯಾಯಾಧೀಶರ ವಿರುದ್ಧ ದೂರು ಸಲ್ಲಿಕೆಯಾದಲ್ಲಿ ಮೊದಲಿಗೆ ಅಂತಹ ನ್ಯಾಯಾಧೀಶರಿಂದ ಉತ್ತರವನ್ನು ಅಪೇಕ್ಷಿಸಲಾಗುತ್ತದೆ. ಅವರ ಉತ್ತರವು ತೃಪ್ತಿಕರವಾಗಿರದಿದ್ದಲ್ಲಿ ಆ ಕುರಿತಂತೆ ತನಿಖೆಗೆ ಆದೇಶಿಸಲಾಗುತ್ತದೆ. ತನಿಖೆಗೆ ಆಂತರಿಕ ಸಮಿತಿಯೊಂದನ್ನು ನೇಮಿಸಲಾಗುತ್ತದೆ. ನ್ಯಾಯಾಧೀಶ ತಪ್ಪು ಎಸಗಿರುವುದು ನಿಜವೆಂದು ಸಮಿತಿಗೆ ಅನ್ನಿಸಿದಲ್ಲಿ ನ್ಯಾಯಾಧೀಶರು ರಾಜೀನಾಮೆ ನೀಡಬೇಕೆಂದು ಕೋರಲಾಗುತ್ತದೆ.

ಮಾಹಿತಿಯೊಂದರ ಪ್ರಕಾರ ಕಳೆದೊಂದು ದಶಕದಲ್ಲಿ ಹಾಲಿ ನ್ಯಾಯಾಧೀಶರ ವಿರುದ್ಧ ಸಲ್ಲಿಸಲಾದ ದೂರುಗಳ ಸಂಖ್ಯೆ 8,600.

ನ್ಯಾಯಮೂರ್ತಿ ವರ್ಮಾ ಪ್ರಕರಣದಲ್ಲೂ ಹೀಗೇ ಆಗಿತ್ತು. ಅವರ ಮನೆಯಲ್ಲಿ ಬೆಂಕಿ ಹತ್ತಿಕೊಂಡಾಗ ಅದನ್ನು ಆರಿಸಲು ಹೋದ ಅಗ್ನಿಶಾಮಕ ದಳದವರಿಗೆ ಕೋಟ್ಯಂತರ ರೂಪಾಯಿ ಸುಟ್ಟ ನೋಟುಗಳು ಪತ್ತೆಯಾಗಿದ್ದವು. ಅದಕ್ಕೂ ತನಗೂ ಸಂಬಂಧವಿಲ್ಲವೆಂದು ವರ್ಮಾ ಹೇಳಿದ್ದರು. ಈ ಕುರಿತಂತೆ ಸುಪ್ರೀಂಕೋರ್ಟ್ ಸಮಿತಿಯೊಂದನ್ನು ರಚಿಸಿ ತನಿಖೆಗೆ ಆದೇಶಿಸಿತ್ತು. ವರ್ಮಾ ಅವರ ಅಪರಾಧವನ್ನು ದೃಢಪಡಿಸಿದ ಸಮಿತಿಯು ಅವರ ವಾಗ್ದಂಡನೆಗೆ ಶಿಫಾರಸು ಮಾಡಿತ್ತು. ಪ್ರಸ್ತುತ ಇದು ಸರಕಾರದ ಮುಂದೆ ಬಾಕಿಯಿದೆ.

ಬೈಜೂಸ್ ಸ್ಥಾಪಕ ರವೀಂದ್ರನ್ ವಿರುದ್ಧ ಪ್ರಕರಣವೊಂದರ ತನಿಖೆ ನಡೆಸುತ್ತಿದ್ದ ರಾಷ್ಟ್ರೀಯ ಕಂಪೆನಿ ಕಾನೂನು ನ್ಯಾಯ ಮಂಡಳಿಯ ನ್ಯಾಯಮೂರ್ತಿ ಶರದ್ ಕುಮಾರ್ ಅವರು ತನ್ನ ಮೇಲೆಹಿರಿಯನ್ಯಾಯಾಧೀಶರೊಬ್ಬರುಒತ್ತಡಹೇರುತ್ತಿದ್ದಾರೆಂದು ಆರೋಪಿಸಿ ನ್ಯಾಯಮಂಡಳಿಯಿಂದ ಹೊರಬಂದಿದ್ದರು. ಈ ವಿಷಯವು ವ್ಯಾಪಕ ಚರ್ಚೆಗೆ ಕಾರಣವಾಗಿತ್ತು. ನ್ಯಾಯಾಂಗದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ಬಹಿರಂಗಗೊಳಿಸಿತ್ತು.

2018ರಲ್ಲಿ ನ್ಯಾಯಮಂಡಳಿಯೊಂದರ ನ್ಯಾಯಾಧೀಶರಾದ ಆರ್.ಕೆ. ಮಿತ್ತಲ್‌ರವರು ಪರಿಹಾರಧನವಾಗಿ ನೀಡಲ್ಪಟ್ಟ 50 ಕೋಟಿ ರೂ.ಗಳನ್ನು ಅಕ್ರಮವಾಗಿ ತಮಗೆ ವರ್ಗಾಯಿಸಿಕೊಂಡ ಆರೋಪಕ್ಕೆ ಗುರಿಯಾಗಿದ್ದರು.ಈ ನ್ಯಾಯಾಧೀಶರು ಐವರು ವಕೀಲರೊಂದಿಗೆ ಸೇರಿಕೊಂಡು ಅಪಘಾತಕ್ಕೀಡಾದ ಕುಟುಂಬಗಳಿಗೆ ಸಿಗಬೇಕಾದ ಪರಿಹಾರ ಧನವನ್ನು ತಾವೇ ಲಪಟಾಯಿಸುತ್ತಿದ್ದರು ಎಂದು ಕಂಡುಬಂದಿತ್ತು. ಬಳಿಕ ಮಿತ್ತಲ್‌ರನ್ನು ವಜಾಗೊಳಿಸಲಾಗಿತ್ತು.

2011ರಲ್ಲಿಸೌಮಿತ್ರಸೇನ್‌ಎಂಬನ್ಯಾಯಾಧೀಶರುಭ್ರಷ್ಟಾಚಾರದ ಕಾರಣಕ್ಕಾಗಿ ರಾಜ್ಯಸಭೆಯಲ್ಲಿ ವಾಗ್ದಂಡನೆಗೆ ಗುರಿಯಾಗಿದ್ದರು. ಕೊಲ್ಕತ್ತಾದ ಹೈಕೋರ್ಟ್‌ನ ನ್ಯಾಯಾಧೀಶರಾಗಿದ್ದ ಸೌಮಿತ್ರ ಸೇನ್ 33 ಲಕ್ಷ ರೂ.ಗಳನ್ನು ಭ್ರಷ್ಟ ಮಾರ್ಗದಿಂದ ಸಂಪಾದಿಸಿದ್ದರು.

ನ್ಯಾಯಾಂಗದ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ವಿಷಯವನ್ನು ಪಠ್ಯದಲ್ಲಿ ಸೇರಿಸಿದ್ದಕ್ಕೆ ನ್ಯಾಯಾಂಗವು ಪ್ರತಿಕ್ರಿಯಿಸಿದ ರೀತಿ ಅತಿರೇಕದ್ದಾಯಿತೇನೋ ಎಂಬುದು ಕೆಲವರ ಅಭಿಪ್ರಾಯ. ನ್ಯಾಯಾಂಗ ಕೂಡಾ ತನ್ನ ಕ್ಷೇತ್ರದಲ್ಲಿನ ಭ್ರಷ್ಟಾಚಾರದ ಕುರಿತಂತೆ ಮುಕ್ತ ಪರಾಮರ್ಶೆ ನಡೆಸಬೇಕು ಎಂಬುದು ಅವರ ಸಲಹೆಯಾಗಿದೆ.

ಕಿರುಸುದ್ದಿ

ಮಾ.8: ಉಚಿತ ವೈದ್ಯಕೀಯ ತಪಾಸಣಾ ಶಿಬಿರದ ಆಮಂತ್ರಣ ಪತ್ರ ಬಿಡುಗಡೆ

ನಿಡ್ಪಳ್ಳಿ: ಪುತ್ತಿಲ ಪರಿವಾರ ಸೇವಾ ಟ್ರಸ್ಟ್‌ನ ಇರ್ದೆ, ಬೆಟ್ಟಂಪಾಡಿ, ಪಾಣಾಜೆ, ನಿಡ್ಪಳ್ಳಿ ಘಟಕದ ಆಶ್ರಯದಲ್ಲಿ ಶ್ರೀ ಸತ್ಯಸಾಯಿ ಸೇವಾ ಸಮಿತಿ ಈಶ್ವರಾಂಭ ಟ್ರಸ್ಟ್ ಮತ್ತು ದೇರಳಕಟ್ಟೆಯ ಜಸ್ಟಿಸ್ ಕೆ.ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆ ಸಹಯೋಗದೊಂದಿಗೆ ಅಂಬುಲೆನ್ಸ್ ಸೇವೆಯ 3ನೇ ವರ್ಷದ ಪಾದಾರ್ಪಣೆ ಪ್ರಯುಕ್ತ 29ನೇ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಮಾ.8ರಂದು ಬೆಟ್ಟಂಪಾಡಿ ಗ್ರಾಮ ಪಂಚಾಯತ್ ಸಭಾಭವನದಲ್ಲಿ ನಡೆಯಲಿದ್ದು ಅದರ ಆಮಂತ್ರಣ ಪತ್ರ ಬಿಡುಗಡೆ ಕಾರ್ಯಕ್ರಮ ಮಂಗಳವಾರ ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಕಚೇರಿಯಲ್ಲಿ ನಡೆಯಿತು.

ಪುತ್ತಿಲ ಪರಿವಾರ ಟ್ರಸ್ಟ್ ಸ್ಥಾಪಕ ಅರುಣ್ ಕುಮಾರ್ ಪುತ್ತಿಲ, ಪುತ್ತೂರು ತಾಲೂಕು ಸಮಿತಿ ಅಧ್ಯಕ್ಷ ಶ್ರೀರಾಮ ಭಟ್ ಪಾತಾಳ, ಪ್ರಧಾನ ಕಾರ್ಯದರ್ಶಿ ಪ್ರೇಮ್ ರಾಜ್ ಆರ್ಲಪದವು, ಇರ್ದೆ ಬೆಟ್ಟಂಪಾಡಿ ಘಟಕದ ಅಧ್ಯಕ್ಷ ಸುಜಿತ್ ಕಜೆ ಮತ್ತಿತರರು ಉಪಸ್ಥಿತರಿದ್ದರು

ಬೈಕ್-ಬೈಕ್ ಡಿಕ್ಕಿ: ಮೂವರಿಗೆ ಗಾಯ

ಕುಂದಾಪುರ: ಬೈಕ್‌ಗೆ ಮತ್ತೊಂದು ಬೈಕ್ ಡಿಕ್ಕಿಯಾದ ಪರಿಣಾಮ ಮೂವರು ಗಾಯಗೊಂಡ ಘಟನೆ ನಡೆದಿದೆ.

ಕಿರಿಮಂಜೇಶ್ವರ ಗ್ರಾಮದ ಅರೆಹೊಳೆ ಕ್ರಾಸ್ ನಿವಾಸಿ ಕಾವೇರಿ ಎಂಬವರು ಸಹಸವಾರೆಯಾಗಿ ಶಿವರಾಜ್ ಅವರೊಂದಿಗೆ ಬೈಕಿನಲ್ಲಿ ರಾ.ಹೆ. 66ರಲ್ಲಿ ಹೆಮ್ಮಾಡಿ ಕಡೆಯಿಂದ ಬೈಂದೂರು ಕಡೆಗೆ ಹೋಗುತ್ತಿದ್ದ ಸಂದರ್ಭ ಹೆಮ್ಮಾಡಿ ಗ್ರಾಮದ ಕನ್ನಡಕುದ್ರು ಎಂಬಲ್ಲಿ ರಾ.ಹೆ.66ರ ಅರಾಟೆ ಸೇತುವೆಯಿಂದ ಸ್ವಲ್ಪ ದೂರದಲ್ಲಿ ಕುಂದಾಪುರ ಕಡೆಗೆ ಬರುತ್ತಿದ್ದ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ಶಿವರಾಜ್ ಗಂಭೀರವಾಗಿ ಗಾಯಗೊಂಡಿದ್ದರೆ, ಸಹಸವಾರೆ ಕಾವೇರಿ ಮತ್ತು ಇನ್ನೋರ್ವ ಬೈಕ್ ಸವಾರ ಕಾರ್ತಿಕೇಯ ಗಾಯಗೊಂಡಿದ್ದಾರೆ. ಕುಂದಾಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರ ಬಿದ್ದು ಕಾರ್ಮಿಕ ಸಾವು

ಮಡಿಕೇರಿ: ಮರ ಕಪಾತ್ ಮಾಡುತ್ತಿದ್ದ ವೇಳೆ ಮರ ಬಿದ್ದು, ಕಾರ್ಮಿಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಚೆಟ್ಟಳ್ಳಿ ಸಮೀಪದ ಕಾಫಿ ಬೋರ್ಡ್ ಸಮೀಪದಲ್ಲಿರುವ ಕೊಂಗೇಟ್ಟಿರ ತೋಟದಲ್ಲಿ ನಡೆದಿದೆ. ಮೈಸೂರು ಜಿಲ್ಲೆಯ ನಂಜನಗೂಡಿನ ಕಾರ್ಮಿಕ ಮಣಿ ಎಂಬವರೇ ಸಾವಿಗೀಡಾದವರು.

ಚೆಟ್ಟಳ್ಳಿಯ ಕೊಂಗೇಟ್ಟಿರ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಬೇರೆ ಕಾರ್ಮಿಕರು ಕಪಾತು ಮಾಡುತ್ತಿದ್ದ ಮರ ತುಂಡಾಗಿ ಬಿದ್ದಿದ್ದು, ಅದರ ಹೊಡೆತಕ್ಕೆ ಸಿಲುಕಿ ಮಣಿ ಸಾವಿಗೀಡಾಗಿರುವುದಾಗಿ ಹೇಳಲಾಗಿದೆ.

ವಿದ್ಯುತ್ ಕಂಬಕ್ಕೆ ಜೆಪ್ಸಿ ಡಿಕ್ಕಿ

ಮಡಿಕೇರಿ: ದಕ್ಷಿಣ ಕೊಡಗಿನ ನಾಲ್ಕೇರಿ ಗ್ರಾಮದ ಕಾರ್ತಿಕ್ ಸೋಮಣ್ಣ ಎಂಬವರು ಚಾಲಿಸುತ್ತಿದ್ದ ಜಿಪ್ಸಿ ವಾಹನ ಮಡಿಕೇರಿ-ಸಿದ್ದಾಪುರ ರಸ್ತೆಯ ನೆಲ್ಲಿಹುದಿಕೇರಿಯಲ್ಲಿ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದೆ. ಈ ಸಂದರ್ಭ ವಿದ್ಯುತ್ ಕಂಬ ತುಂಡಾಗಿದ್ದು, ಅದೃಷ್ಟವಶಾತ್ ಯಾರಿಗೂ ಯಾವುದೇ ಹಾನಿಯಾಗಿಲ್ಲ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕಗಾನ ಮೇಳ

1. ಭಾರತಿ ಮತ್ತು ಮಕ್ಕಳು, ಅಳಿಯ, ಮಲ್ಲಿಗುಡ್ಡೆ, ಮೇಲೆಕ್ಕಾರು, ಪೆರ್ಮುದೆ ವಯಾ ಬಜಪೆ.
2. ಅಥರ್ವ ಫ್ರೆಂಡ್ಸ್, ದೇರೆಬೈಲು, ಮಾಲೆಮಾರ್, ಕೊಂಚಾಡಿ, ಮಂಗಳೂರು (ತಾ).
3. ಸುಬ್ರಹ್ಮಣ್ಯ ನಾಯ್ಕ, ಅರ್ಬಿ ಹೌಸ್, ಉರುವಾಲು ವಯಾ ಉಪ್ಪಿನಂಗಡಿ.
4. ಸುಬ್ರಹ್ಮಣ್ಯ ಆಚಾರ್, 'ಶ್ರೀ ಸ್ಕಂದ', ಬೊಮ್ಮರಬೆಟ್ಟು, ಹಿರಿಯಡ್ಕ, ಉಡುಪಿ (ತಾ).
5. ಶ್ರೀ ರವಳನಾಥ ಭೈರವ ಶ್ರೀ ಭುವನೇಶ್ವರೀ ದೇವಿ ಟ್ರಸ್ಟ್, ಕೊರಕೋಡು, ಕಾಸರಗೋಡು.
6. ಪದ್ಮಾವತಿ ವಿಜಯಕುಮಾರ್, ಅರಹಂತಬೈಲು, ನಾಲ್ಕೂರು, ಬಳೆಂಜ, ಬೆಳ್ತಂಗಡಿ (ತಾ).
7. ದಿ। ಕೂಸು ದೂಮಣ್ಣ ಕುಂದರ್ ಸ್ಮರಣಾರ್ಥ ಸುಗಂಧಿ ದಿನೇಶ್ ಕೊಂಡಾಣ, ಕಂಬ್ಳಬೆಟ್ಟು, ತೋಕೂರು.

ಶ್ರೀ ಧರ್ಮಸ್ಥಳ ಮೇಳ
ಬ್ರಹ್ಮಾವರ -ಕುಮ್ರಗೋಡುನಲ್ಲಿ
ದಿ. ಸೀತಮ್ಮ ಶೆಡ್ತಿ , ಬಡಿಯ ಶೆಟ್ಟಿ ಸ್ಮರಣಾರ್ಥ-ಮಕ್ಕಳು ಮತ್ತು ಅಳಿಯಂದಿರು ಪಡುಬೆಟ್ಟು ಬೀಡು

ಶ್ರೀ ಸಾಲಿಗ್ರಾಮ ಮೇಳ
ಕೋಡೂರುನಲ್ಲಿ- ಸ್ವಪ್ನ ಮಂಟಪ

ಶ್ರೀ ಪೆರ್ಡೂರು ಮೇಳ
ಅಡ್ವೇರಿಯಲ್ಲಿ
ಪಾಪಣ್ಣ ವಿಜಯ, ಗುಣಸುಂದರಿ

ಶ್ರೀ ಹನುಮಗಿರಿ ಮೇಳ
ಉಳಿಯಲ್ಲಿ

ಶ್ರೀ ಪಾವಂಜೆ ಮೇಳ
ಕೊರಗತನಿಯ ಸೇವಾ ಟ್ರಸ್ಟ್(ರಿ.) ಸೇವಂತಿಗುಡ್ಡೆ, ಪೆರ್ಮನ್ನೂರು, ಮಂಗಳೂರು
ಶ್ರೀ ದೇವಿ ಮಹಾತ್ಮೆ



ಆಶಾ ಕಾರ್ಯಕರ್ತೆಯರ ಸ್ಥಾನಗಳನ್ನು ಜನಸಂಖ್ಯೆಗೆ ಅನುಗುಣವಾಗಿ ಶರ್ತಬದ್ಧಗೊಳಿಸಿ ಹೆಚ್ಚುವರಿ ಆಶಾ ಕಾರ್ಯಕರ್ತೆಯನ್ನು ಕರ್ತವ್ಯದಿಂದ ವಜಾಗೊಳಿಸುವ ಕ್ರಮವನ್ನು ನಿಲ್ಲಿಸಲು ಸರಕಾರಕ್ಕೆ ಒತ್ತಾಯಿಸುವಂತೆ ಜಿಲ್ಲೆಯ ಆಶಾ ಕಾರ್ಯಕರ್ತೆಯರು ಪುತ್ತೂರು ಶಾಸಕ ಅಶೋಕ್ ರೈ ಅವರಿಗೆ ಬುಧವಾರ ಕಚೇರಿಯಲ್ಲಿ ಮನವಿ ಸಲ್ಲಿಸಿದ್ದಾರೆ. ಮಂಗಳೂರು, ಪುತ್ತೂರು, ಬಂಟ್ವಾಳ, ಸುಳ್ಯ ಹಾಗೂ ಬೆಳ್ತಂಗಡಿ ತಾಲೂಕುಗಳ ಕಾರ್ಯಕರ್ತರು ಆಯಾ ಘಟಕಗಳ ಮುಖಂಡರ ಜತೆ ಮನವಿ ನೀಡುವ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಹಳೆಯಂಗಡಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಹು ಮಹಡಿ ಕಟ್ಟಡದ ತ್ಯಾಜ್ಯ ನೀರಿನಿಂದ ದುರ್ವಾಸನೆ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಹಳೆಯಂಗಡಿ ಬಳಿ ಕಾರ್ಯಾಚರಿಸುತ್ತಿರುವ ಬಹು ಮಹಡಿ ಕಟ್ಟಡದ ತ್ಯಾಜ್ಯ ನೀರನ್ನು, ರಾತ್ರೋರಾತ್ರಿ ಹೆದ್ದಾರಿ ಬದಿಯಲ್ಲಿ ಬಿಡುತ್ತಿದ್ದು ಪರಿಸರ ದುರ್ವಾಸನೆಯುಕ್ತ ವಾತಾವರಣ ಸೃಷ್ಟಿಯಾಗಿ ರೋಗಗಳ ಭೀತಿ ಎದುರಾಗಿದೆ

ಹಳೆಯಂಗಡಿ, ಜಂಕ್ಷನ್ ಬಳಿ ಕಾರ್ಯಾಚರಿಸುತ್ತಿರುವ ಬಹು ಮಹಡಿ ಕಟ್ಟಡದ ತ್ಯಾಜ್ಯ ನೀರು ನೇಕಾರ ಮಹಲ್ ಬಳಿಯ ತೆರೆದ ಚರಂಡಿಯಲ್ಲಿ ಹರಿದು ಹೋಗುತ್ತಿರುವುದರಿಂದ ಪರಿಸರದ ಅಂಗಡಿ ಮಾಲಕರಿಗೆ ಹಾಗೂ ಗ್ರಾಮಸ್ಥರಿಗೆ ತೀವ್ರ ತೊಂದರೆಯಾಗಿರುವುದೇ ಅಲ್ಲದೆ ಪರಿಸರದ ಬಾವಿಗಳಿಗೆ ತ್ಯಾಜ್ಯ ನೀರು ಹರಿದು ಬಾವಿಗಳ ನೀರು ಮಲಿನಗೊಂಡಿತ್ತು. ಇದರಿಂದ ಆಕ್ರೋಶ ದಿಂದ ಸ್ಥಳೀಯರು ಚರಂಡಿಗೆ ಮಣ್ಣು ಹಾಕಿ ಮುಚ್ಚಿದ್ದರು.

ಇದರಿಂದಾಗಿ ಇದೀಗ ಬಹುಮಹಡಿ ಕಟ್ಟಡದ ತ್ಯಾಜ್ಯ ನೀರು ಕಳೆದ ಕೆಲ ದಿನಗಳಿಂದ ಹೆದ್ದಾರಿ ಬದಿಯಲ್ಲಿ ಹರಿಯುತ್ತಿದ್ದು ಪರಿಸರ ದುರ್ವಾಸನೆಯುಕ್ತ ವಾತಾವರಣ ಸೃಷ್ಟಿಯಾಗಿದೆ. ಹೆದ್ದಾರಿ ಬದಿ ನಡೆದುಕೊಂಡು ಹೋಗುತ್ತಿರುವ ಪಾದಾಚಾರಿಗಳು ಹಾಗೂ ವಾಹನ ಸವಾರರು ಗಲೀಜು ನೀರಿನಲ್ಲಿ ನಡೆದುಕೊಂಡು ಹಾಗೂ ಸಂಚರಿಸಬೇಕಾದ ಪರಿಸ್ಥಿತಿ ಉಂಟಾಗಿದೆ

ಶಾಸಕರ ಮಧ್ಯಸ್ಥಿಕೆಯಿಂದ ವಿವಾದ ಬಗೆಹರಿದಿತ್ತು

ಕಳೆದ ಹಲವಾರು ವರ್ಷಗಳಿಂದ ಬಹು ಮಹಡಿ ಕಟ್ಟಡದ ತ್ಯಾಜ್ಯ ನೀರಿನ ಸಮಸ್ಯೆ ಇದ್ದು, ಶಾಸಕ ಹಾಗೂ ಹಳೆಯಂಗಡಿ ಗ್ರಾಮ ಪಂಚಾಯತ್ ವತಿಯಿಂದ ಸಮಸ್ಯೆ ನಿವಾರಣೆಗೆ ಪ್ರಯತ್ನಿಸಿ ಕೊನೆಗೆ ಶಾಸಕರು ಮಧ್ಯಸ್ಥಿಕೆ ವಹಿಸಿ ತ್ಯಾಜ್ಯ ನೀರು ಭರ್ತಿಯಾದ ಕೂಡಲೇ ವಾಹನದಲ್ಲಿ ತುಂಬಿಸಿ ವಿಲೇವಾರಿ ಮಾಡುವ ವ್ಯವಸ್ಥೆ ಕಲ್ಪಿಸಲಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ತ್ಯಾಜ್ಯ ನೀರು ವಿಲೇವಾರಿ ಸಮರ್ಪಕವಾಗಿ ನಡೆಯದೇ ಇರುವುದು ಸಮಸ್ಯೆ ಉಲ್ಬಣ ಕ್ಕೆ ಕಾರಣವಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೂಡಲೇ ಬಹು ಮಹಡಿ ಕಟ್ಟಡದ ತ್ಯಾಜ್ಯ ನೀರು ವಿಲೇವಾರಿಗೆ ಕಟ್ಟಡದ ಮಾಲೀಕರು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ಇಲ್ಲದಿದ್ದರೆ ಕಟ್ಟಡದ ಎದುರು ಭಾಗದಲ್ಲಿ ನಾಗರಿಕರೊಂದಿಗೆ ಪ್ರತಿಭಟನೆ ನಡೆಸಲಾಗುವುದು ಎಂದು ಸ್ಥಳೀಯರು ಎಚ್ಚರಿಸಿದ್ದಾರೆ.

'ಮುಕ್ಕಾಟಿರ ಕ್ರಿಕೆಟ್ ನಮ್ಮೆ'ಯ ವೆಬ್‌ಸೈಟ್ ಬಿಡುಗಡೆ, ತಂಡಗಳ ನೋಂದಣಿ ಪ್ರಕ್ರಿಯೆ ಉದ್ಘಾಟನೆ

ಕೊಡಗಿನಲ್ಲಿ ಅಮೋಘ ಕ್ರೀಡಾಸ್ಫೂರ್ತಿ

ಮಡಿಕೇರಿ : ಸ್ತ್ರೀ-ಪುರುಷ ಎಂಬ ಭೇದ ಭಾವವಿಲ್ಲದೆ ಎಲ್ಲರೂ ಒಂದು ತಂಡವಾಗಿ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವುದನ್ನು ಮತ್ತು ಅಮೋಘವಾದ ಕ್ರೀಡಾಸ್ಫೂರ್ತಿಯನ್ನು ಕೇವಲ ಕೊಡಗು ಜಿಲ್ಲೆಯಲ್ಲಿ ಮಾತ್ರ ಕಾಣಲು ಸಾಧ್ಯವೆಂದು ಅಂತಾರಾಷ್ಟ್ರೀಯ ಬಾಸ್ಕೆಟ್‌ಬಾಲ್ ಕ್ರೀಡಾಪಟು ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್‌ನ ನಿವೃತ್ತ ಪ್ರಾಂಶುಪಾಲ ಡಾ.ಮಂಡೇಪಂಡ ಪುಷ್ಪ ಕುಟ್ಟಣ್ಣ ಅಭಿಪ್ರಾಯಪಟ್ಟಿದ್ದಾರೆ.

ಮೂರ್ನಾಡು ಕೊಡವ ಸಮಾಜದಲ್ಲಿ ನಡೆದ ಬೇತ್ರಿ ಮುಕ್ಕಾಟಿರ ಕುಟುಂಬಸ್ಥರು ಕೊಡವ ಕುಟುಂಬಗಳ ನಡುವೆ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಮೂರ್ನಾಡು ಹಾಗೂ ಅರಮೇರಿಯಲ್ಲಿ ನಡೆಸಲಿರುವ 24ನೇ ವರ್ಷದ 'ಮುಕ್ಕಾಟಿರ ಕ್ರಿಕೆಟ್ ನಮ್ಮೆ-2026'ರ ವೆಬ್ ಸೈಟ್ ಬಿಡುಗಡೆ ಮತ್ತು ತಂಡಗಳ ನೋಂದಣಿ ಪ್ರಕ್ರಿಯೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿಶಿಷ್ಟ ಮತ್ತು ಹೊಂದಾಣಿಕೆಯ ಕ್ರೀಡಾಕೂಟಗಳು ಕೊಡಗು ಹೊರತು ಪಡಿಸಿದರೆ ದೇಶದ ಬೇರೆ ಯಾವ ಭಾಗದಲ್ಲಿಯೂ ಕಾಣಲು ಸಾಧ್ಯವಿಲ್ಲ. ದೇಶ ಸೇರಿದಂತೆ ಪ್ರಪಂಚದ ಎಲ್ಲಾ ಕಡೆಗಳಲ್ಲಿ ನಡೆಯುವ ಪಂದ್ಯಾವಳಿಗಳಲ್ಲಿ ಮಹಿಳೆಯರು ಹಾಗೂ ಪುರುಷರ ಪ್ರತ್ಯೇಕ ತಂಡಗಳಿರುತ್ತವೆ. ಒಂದಾಗಿ ಪಾಲ್ಗೊಳ್ಳಲು ಯಾವುದೇ ಕ್ರೀಡೆಯಲ್ಲಿಯೂ ಅವಕಾಶ ಇರುವುದಿಲ್ಲ. ಆದರೆ ಕೊಡಗಿನಲ್ಲಿ ಆಯೋಜಿಸುವ ಹಾಕಿ, ಕ್ರಿಕೆಟ್ ಸೇರಿದಂತೆ ಇತರ ಕ್ರೀಡಾಕೂಟಗಳಲ್ಲಿ ಒಂದು ತಂಡವಾಗಿ ಪುರುಷರು ಹಾಗೂ ಮಹಿಳೆಯರು ಜೊತೆಯಾಗಿ ಪಾಲ್ಗೊಳ್ಳುತ್ತಾರೆ. ಇದು ಹೆಮ್ಮೆಯ ಬೆಳವಣಿಗೆ ಎಂದು ತಿಳಿಸಿದರು.



ಕೆಲವು ಸಮಯದ ಹಿಂದೆ ಬೇತ್ರಿ ಮುಕ್ಕಾಟಿರ ಕುಟುಂಬಸ್ಥರು ಫುಟ್ಬಾಲ್ ಪಂದ್ಯಾವಳಿ ಆಯೋಜಿಸಿದ್ದರು. ಇದೀಗ ಕ್ರಿಕೆಟ್ ನಮ್ಮೆಯ ಆತಿಥ್ಯ ವಹಿಸಿರುವುದು ಕುಟುಂಬದ ಸಂಘಟನಾ ಶಕ್ತಿ ಮತ್ತು ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಕ್ರೀಡಾಕೂಟಗಳ ಆಯೋಜನೆ ಅಷ್ಟು ಸುಲಭ ಸಾಧ್ಯವಲ್ಲ. ಅದರ ಹಿಂದೆ ಸಾಕಷ್ಟು ಪರಿಶ್ರಮ ಮತ್ತು ಒಗ್ಗಟ್ಟು ಇರುತ್ತದೆ ಎಂದು ಹೇಳಿದರು.

ಶೈಕ್ಷಣಿಕ ಸಂಸ್ಥೆಗಳು, ಕ್ರೀಡಾಶಾಲೆಗಳು ಇಲ್ಲದ ಕಾಲಘಟ್ಟದಲ್ಲಿ ಜಿಲ್ಲೆಯ ಕ್ರೀಡಾಪಟುಗಳು ರಾಷ್ಟ್ರ ಮತ್ತು ಅಂತರ್ ರಾಷ್ಟ್ರೀಯ ಮಟ್ಟಕ್ಕೇರಿರುವುದು ಒಂದು ದೊಡ್ಡ ಸಾಧನೆಯೇ ಸರಿ. ಕ್ರೀಡಾಕೂಟಗಳನ್ನು ಆಯೋಜನೆ ಮಾಡುವ ಮೂಲಕ ಯುವ ಪ್ರತಿಭೆಗಳಿಗೆ ವೇದಿಕೆ ಒದಗಿಸುವುದು ಉತ್ತಮ ಕಾರ್ಯವಾಗಿದೆ ಎಂದು ಡಾ.ಪುಷ್ಪಾ ಕುಟ್ಟಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು.

ಫುಟ್ಬಾಲ್ ಪಂದ್ಯಾವಳಿಯ ಬಳಿಕ ಇದೀಗ ಕ್ರಿಕೆಟ್ ಕ್ರೀಡಾಕೂಟ ಆಯೋಜನೆ ಮಾಡುತ್ತಿರುವುದು ಬೇತ್ರಿ ಮುಕ್ಕಾಟಿರ ಕುಟುಂಬದ ಒಗ್ಗಟ್ಟಿನ ಪ್ರತೀಕ ಎಂದು ಶ್ಲಾಘಿಸಿದರು.

ಪೋಷಕರು ತಮ್ಮ ಮಕ್ಕಳ ಕ್ರೀಡಾ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿದಾಗ ಮಾತ್ರ ಉತ್ತಮ ಕ್ರೀಡಾಪಟು ರೂಪುಗೊಳ್ಳಲು ಸಾಧ್ಯವಾಗುತ್ತದೆ. ಕಳೆದ ಅನೇಕ ವರ್ಷಗಳಿಂದ ಕೊಡವ ಕೌಟುಂಬಿಕ ಕ್ರಿಕೆಟ್ ಪಂದ್ಯಾವಳಿಯನ್ನು ಕೂಡ ಆಯೋಜಿಸಿಕೊಂಡು ಬರುತ್ತಿರುವುದು ದೊಡ್ಡ ಸಾಧನೆಯಾಗಿದೆ. ಎಲ್ಲಾ ಕೊಡವ ಕುಟುಂಬಗಳು ಕ್ರಿಕೆಟ್ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲು ಹೆಸರು ನೋಂದಾಯಿಸಿಕೊಳ್ಳಬೇಕು. ಸೋಲು, ಗೆಲುವಿನ ಲೆಕ್ಕಾಚಾರ ಇಲ್ಲದೆಯೇ ಕ್ರೀಡೆಯಲ್ಲಿ ಒಂದಾಗಬೇಕು ಎಂದು ಮಾದಂಡ ತಿಮ್ಮಯ್ಯ ಕರೆ ನೀಡಿದರು.

ಕ್ರಿಕೆಟ್ ಪಂದ್ಯಾಟದ ವೆಬ್‌ಸೈಟ್ ಬಿಡುಗಡೆ ಮಾಡುತ್ತಿರುವುದು ಜಿಲ್ಲೆಯ ಮಟ್ಟಿಗೆ ಹೊಸ ವಿಚಾರ ಎಂದು ಅಭಿಪ್ರಾಯಪಟ್ಟರು.

ವೆಬ್‌ಸೈಟ್ ಮತ್ತು ತಂಡಗಳ ನೋಂದಣಿ ಪ್ರಕ್ರಿಯೆಗಳ ಕುರಿತು ಅಜ್ಜೇಟಿರ ವಿಕ್ರಮ್ ಉತ್ತಪ್ಪ ಅವರು ವಿವರಿಸಿದರು. ಇದೇ ಸಂದರ್ಭ ಕ್ರಿಕೆಟ್ ನಮ್ಮೆಯ ಕುರಿತು ಮುಕ್ಕಾಟಿರ ಮೌನಿ ಅವರು ಬರೆದಿರುವ ಸಣ್ಣುವಂಡ ನಿಶ್ಮಾ ಅವರ ಕಂಠದಲ್ಲಿ ಮೂಡಿ ಬಂದಿರುವ ಹಾಡಿನ ವಿಡಿಯೋವನ್ನು ಬಿಡುಗಡೆ ಮಾಡಲಾಯಿತು. ಮುಕ್ಕಾಟಿರ ರವಿ ಚೀಯಣ್ಣ ಸ್ವಾಗತಿಸಿ, ಕ್ರಿಕೆಟ್ ಪಂದ್ಯಾವಳಿಗೆ ಎಲ್ಲರ ಬೆಂಬಲ ಕೋರಿದರು. ಮುಕ್ಕಾಟಿರ ಸರಸು ನವೀನ್ ಪ್ರಾರ್ಥಿಸಿ, ಮೂಕಚಂಡ ಬೊಳ್ಳಮ್ಮ ಕಾರ್ಯಕ್ರಮ ನಿರೂಪಿಸಿದರು.

ಮುಕ್ಕಾಟಿರ ಕ್ರಿಕೆಟ್ ನಮ್ಮೆಯ ಅಧ್ಯಕ್ಷ ಸುರೇಶ್ ಪೆಮ್ಮಯ್ಯ, ಪಂದ್ಯಾವಳಿಯ ಕಾರ್ಯದರ್ಶಿ ಮುಕ್ಕಾಟಿರ ಪೊನ್ನಣ್ಣ, ಖಜಾಂಚಿ ಮುಕ್ಕಾಟಿರ ಗಣಪತಿ, ಕೊಡವ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಕೀತಿಯಂಡ ಎನ್.ಕಾರ್ಸನ್ ಕಾರ್ಯಪ್ಪ, ಪ್ರಧಾನ ಕಾರ್ಯದರ್ಶಿ ಕುಂಡ್ರಂಡ ಎಂ.ಬೋಪಣ್ಣ, ಕಾಂತಮೂರ್ನಾಡು ನಾಡು ತಕ್ಕರಾದ ಪಳಂಗಂಡ ಮೇದಪ್ಪ, ಕೋಟೇರ ಮುತ್ತಣ್ಣ, ಮಡೆಯಂಡ ಚಂಗಪ್ಪ, ಕೊಡವ ಕ್ರಿಕೆಟ್ ಅಕಾಡೆಮಿಯ ನಿರ್ದೇಶಕರುಗಳು ಸೇರಿದಂತೆ ತಕ್ಕರು, ತಾಮನೆ ಪೊಮ್ಮಕ್ಕರು, ಮುಕ್ಕಾಟಿರ ಹಾಗೂ ವಿವಿಧ ಕೊಡವ ಕುಟುಂಬಗಳ ಸದಸ್ಯರು ಉಪಸ್ಥಿತರಿದ್ದರು.

ನೆರವು ಅಗತ್ಯ

ಅಂತಾರಾಷ್ಟ್ರೀಯ ರೆಗ್ಬಿ ಆಟಗಾರ ಮಾದಂಡ ತಿಮ್ಮಯ್ಯ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಹಾಕಿ ಕ್ರೀಡೆಗೆ ಮೊದಲ ಆದ್ಯತೆ ನೀಡಲಾಗುತ್ತಿದೆ. ಕ್ರೀಡಾಕೂಟಗಳ ಆಯೋಜನೆ ಸಂದರ್ಭ ಹಣಕಾಸಿನ ಸಾಕಷ್ಟು ಸವಾಲುಗಳು ಎದುರಾಗುತ್ತವೆ. ಕೊಡವ ಕುಟುಂಬಗಳ ಹಲವು ಮಂದಿ ಇಂದು ಹೊರ ಜಿಲ್ಲೆ ಮತ್ತು ರಾಜ್ಯಗಳಲ್ಲಿ ಯಶಸ್ವಿ ಉದ್ಯಮಿಗಳಾಗಿ ಗುರುತಿಸಿಕೊಂಡಿದ್ದಾರೆ. ಪಂದ್ಯಾವಳಿ ಆಯೋಜಿಸುವ ಕುಟುಂಬಕ್ಕೆ ಕೊಡವ ಉದ್ಯಮಿಗಳು ಆರ್ಥಿಕ ನೆರವು ನೀಡಲು ಮುಂದೆ ಬರಬೇಕು ಎಂದು ಮನವಿ ಮಾಡಿದರು.

ಕದ್ರಿ ದೇವಸ್ಥಾನದ ಪ್ರವೇಶ ದ್ವಾರ ಉದ್ಘಾಟನೆ



ಮಂಗಳೂರು: ಲಯನ್ಸ್ ಜಿಲ್ಲೆ 317 ಡಿಯ ಪ್ರಾಂತ್ಯ 2ರ ಪ್ರಾಂತೀಯ ಸಮ್ಮೇಳನ-2026 'ಗ್ರಂಥ' ಇದರ ಶಾಶ್ವತ ಸೇವಾ ಯೋಜನೆಗಳ ಅಂಗವಾಗಿ ಕದ್ರಿ ಶ್ರೀ ಮಂಜುನಾಥ ದೇವಸ್ಥಾನಕ್ಕೆ ಕದ್ರಿ ಪಾರ್ಕ್ ಬಳಿ ಪ್ರವೇಶ ದ್ವಾರ ಉದ್ಘಾಟನಾ ಕಾರ್ಯಕ್ರಮ ಭಾನುವಾರ ನಡೆಯಿತು.

ದ್ವಾರ ಉದ್ಘಾಟಿಸಿದ ಕದ್ರಿ ಮಂಜುನಾಥ ದೇವಸ್ಥಾನದ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಎ.ಜೆ.ಆಸ್ಪತ್ರೆ ಮ್ಯಾನೇಜಿಂಗ್ ಡೈರೆಕ್ಟರ್ ಡಾ. ಎ.ಜೆ.ಶೆಟ್ಟಿ ಅವರು ಶುಭ ಹಾರೈಸಿದರು. ಲಯನ್ಸ್ ಜಿಲ್ಲಾ ಗವರ್ನರ್ ಕುಡ್ಪಿ ಅರವಿಂದ್ ಶೆಣೈ, ಪ್ರಾಂತ್ಯಾಧ್ಯಕ್ಷ ಚರಣ್ ಆಳ್ವ ಚಿಪ್ಪಾರ್‌ಗುತ್ತು, ಎರಡನೇ ಉಪ ಜಿಲ್ಲಾ ಗವರ್ನರ್ ಗೋವರ್ಧನ್ ಶೆಟ್ಟಿ, ಪ್ರಾಂತ್ಯ ಸಮ್ಮೇಳನ ಸಮಿತಿ ಅಧ್ಯಕ್ಷ ಲೋಕೇಶ್ ಉಳ್ಳಾಲ್, ಕಾರ್ಯದರ್ಶಿ ಮನೋಜ್ ಶೆಟ್ಟಿ, ಖಜಾಂಜಿ ಕುಸುಮ ಯು.ರಾವ್, ರೀಜನ್-1 ರ ವಲಯಾಧ್ಯಕ್ಷ ನರೇಶ್ ಶೆಟ್ಟಿ, ರೀಜನ್-2 ರ ವಲಯಾಧ್ಯಕ್ಷ ಸುನೀಲ್ ಕುಮಾರ್, ಲಯನ್ಸ್ ಕ್ಲಬ್ ಅಶೋಕನಗರ ಇದರ ಅಧ್ಯಕ್ಷ ಪ್ರಶಾಂತ್ ಶೆಟ್ಟಿ, ಕಾರ್ಯದರ್ಶಿ ಬ್ರಿಜೇಶ್ ಶೆಟ್ಟಿ, ಖಜಾಂಜಿ ನಿಖಿಲ್ ಶೆಟ್ಟಿ, ಸ್ಥಳೀಯ ಮಾಜಿ ಕಾರ್ಪೋರೇಟರ್ ಶಕಿಲಾ ಕಾವ, ಅಶೋಕ್‌ನಗರ ಲಯನ್ಸ್ ಕ್ಲಬ್ ಚಾರಿಟೇಬಲ್ ಟ್ರಸ್ಟ್ ಚೇರ್ ಮ್ಯಾನ್ ನವೀನ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಸಂಜೆ ಪಿಲಿಕುಳದ ಸ್ಕೌಟ್ಸ್ ಭವನದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಕದ್ರಿ ದೇವಸ್ಥಾನದ ಅರ್ಚಕ ಕೃಷ್ಣ ಅಡಿಗ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ವಾಗ್ಮಿ ದಾಮೋದರ ಶರ್ಮಾ ಮುಖ್ಯ ಭಾಷಣಕಾರರಾಗಿದ್ದರು. ಮೊಂಟೆಪದವು ಸೇವಾ ಭಾರತಿಯ ಮಾಧವವನ ಕ್ಯಾಂಪಸ್‌ನಲ್ಲಿ ವಿಶೇಷ ಚೇತನಾ ಮಕ್ಕಳಿಗೆ ಅಗತ್ಯವಿರುವ ಆಟೋಪಕರಣಗಳನ್ನು ಒದಗಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು.

ಕೊಂಬೆಟ್ಟು ಪ್ರೌಢ ಶಾಲೆಗೆ ವಿವಿಧ ಸೌಲಭ್ಯಗಳ ಅರ್ಪಣೆ



ಪುತ್ತೂರು: ಅಂತಾರಾಷ್ಟ್ರೀಯ ಶರ್ವಿನ್ ವಿಲಿಯಮ್ಸ್ ಕಂಪನಿಯ ಅಂಗ ಸಂಸ್ಥೆಯಾದ ಬೆಂಗಳೂರಿನ ವಾಲ್ಪೋರ್ ಇಂಡಿಯಾ ಕೋಟಿಂಗ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಪ್ರಾಯೋಜಿಸಲ್ಪಟ್ಟ ವಿವಿಧ ಸೌಲಭ್ಯಗಳ ಶಾಲಾರ್ಪಣೆ ಕಾರ್ಯಕ್ರಮ ಕೊಂಬೆಟ್ಟು ಪ್ರೌಢ ಶಾಲೆಯಲ್ಲಿ ನೆರವೇರಿತು.

ವಾಲ್ಪೋರ್ ಕೋಟಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯ ಹಿರಿಯ ಅಧಿಕಾರಿ ರತನ್ ರೈ ಅವರು 15 ಕಂಪ್ಯೂಟರ್‌ಗಳ ಸುಸಜ್ಜಿತ ಕಂಪ್ಯೂಟರ್ ಪ್ರಯೋಗಾಲಯ, ಗ್ರೀನ್ ಬೋರ್ಡ್ ಗಳು, ಟೇಬಲ್, ಚೇರ್, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಉದ್ಘಾಟಿಸಿ ಶಾಲೆಗೆ ಅರ್ಪಿಸಿದರು. ಈ ಸಂದರ್ಭ ಮಾತನಾಡಿದ ರತನ್ ರೈ, ಕಂಪೆನಿಯ ಸಾಮಾಜಿಕ ಸೇವೆಯ ಜವಾಬ್ದಾರಿಯ ನೆಲೆಯಲ್ಲಿ ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಸಂಸ್ಥೆ ಹೊಂದಿದ್ದು, ಇದುವರೆಗೆ ನೂರಕ್ಕಿಂತಲೂ ಹೆಚ್ಚು ಸರಕಾರಿ ಶಾಲೆಗಳಿಗೆ ಕೊಡುಗೆಗಳನ್ನು ನೀಡಲಾಗಿದೆ. ಗ್ರಾಮೀಣ ಭಾಗದ ಶಾಲೆಗಳನ್ನು ಸಮೃದ್ಧಗೊಳಿಸುವುದು ಕಂಪನಿಯ ಮುಖ್ಯ ಉದ್ದೇಶ ಎಂದು ತಿಳಿಸಿದರು.

ಗ್ರಾಮೀಣ ಭಾಗದ ಶಾಲೆಗಳನ್ನು ಸಮೃದ್ಧಗೊಳಿಸುವುದು ಕಂಪನಿಯ ಮುಖ್ಯ ಉದ್ದೇಶ

ಈ ಸಂದರ್ಭ ಸಂಸ್ಥೆಯ ಪರವಾಗಿ ರತನ್ ರೈ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಉದ್ಯಮಿ ಜನಾರ್ದನ ರೈ ಪಡ್ಡಂಬೈಲು, ಎಸ್.ಡಿ.ಎಂ.ಸಿ. ಅಧ್ಯಕ್ಷ ಸುರೇಶ್ ರೈ ಪಡ್ಡಂಬೈಲು ಹಾಗೂ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು. ಉಪ ಪ್ರಾಂಶುಪಾಲರಾದ ವಸಂತ ಮೂಲ್ಯ ಸ್ವಾಗತಿಸಿ, ಹಿರಿಯ ಶಿಕ್ಷಕ ನಾಗರಾಜ ಭಟ್ ವಂದಿಸಿದರು. ಶಿಕ್ಷಕ ಪ್ರಶಾಂತ್ ಅನಂತಾಡಿ ಕಾರ್ಯಕ್ರಮ ನಿರ್ವಹಿಸಿದರು.

ಹಾಕಿ ಸಂಸ್ಥೆಗಳೊಂದಿಗೆ ಚೇನಂಡ ಕುಟುಂಬದ ಸಭೆ



ಮಡಿಕೇರಿ: ಕೊಡವ ಹಾಕಿ ಅಕಾಡೆಮಿ, ಹಾಕಿ ಕರ್ನಾಟಕ, ಹಾಕಿ ಕೂರ್ಗ್ ಹಾಗೂ ಈ ಬಾರಿಯ ಹಾಕಿ ಉತ್ಸವ ಆಯೋಜಕ ಚೇನಂಡ ಕುಟುಂಬ ಸಂಯುಕ್ತವಾಗಿ ಸಭೆ ನಡೆಸಿ ಪ್ರಮುಖ ನಿರ್ಣಯಗಳನ್ನು ಕೈಗೊಂಡಿವೆ. ವೀರಾಜಪೇಟೆ ಕೊಡವ ಸಮಾಜದ ಆವರಣದಲ್ಲಿ ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಬೋಪಣ್ಣ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ನಾಪೋಕ್ಲುವಿನಲ್ಲಿ ನಡೆಯುವ ಚೇನಂಡ ಕಪ್ ಕೊಡವ ಹಾಕಿ ಉತ್ಸವಕ್ಕೆ ಸಂಪೂರ್ಣ ಬೆಂಬಲ ಮತ್ತು ಸಹಕಾರವನ್ನು ಘೋಷಿಸಲಾಯಿತು.

ಹಾಕಿ ಕೂರ್ಗ್ ಸಂಸ್ಥೆ ತಾಂತ್ರಿಕ ಸಹಕಾರ ನೀಡಲು ಒಪ್ಪಿಗೆ ಸೂಚಿಸಿತು. ಹಾಕಿ ಅಂಪೈರ್‌ಗಳಿಗೆ ನೀಡಲಾಗುವ ವೃತ್ತಿಪರ ಶುಲ್ಕಗಳು ಮತ್ತು ತಾಂತ್ರಿಕತೆಯ ಕುರಿತು ಚರ್ಚಿಸಲಾಯಿತಲ್ಲದೆ, ತಾಂತ್ರಿಕ ಸಿಬ್ಬಂದಿಯ ಪ್ರಯಾಣ ಭತ್ಯೆಯ ಬಗ್ಗೆ ನಿರ್ಧರಿಸಲಾಯಿತು.

ಕಳೆದ ಬಾರಿ ಮುದ್ದಂಡ ಕಪ್ ಹಾಕಿ ಉತ್ಸವ ಸಮಿತಿ ಪರಿಚಯಿಸಿದಂತೆ ಮಹಿಳಾ ಹಾಕಿ 5ಎ ತಂಡವನ್ನು ಮುಂದುವರಿಸಲಾಗುವುದು ಎಂದು ಪ್ರಮುಖರು ತಿಳಿಸಿದರು. ಇದೇ ಸಂದರ್ಭ ನಾಯಕಂಡ ದೀಪಕ್ ಚೆಂಗಪ್ಪ ಅವರನ್ನು ಪಂದ್ಯಾವಳಿಯ ನಿರ್ದೇಶಕರನ್ನಾಗಿ ನೇಮಿಸಲಾಯಿತು.

ಹಾಕಿ ಕರ್ನಾಟಕದ ಎ.ಬಿ.ಸುಬ್ಬಯ್ಯ, ಕೂತಂಡ ಪೂಣಚ್ಚ, ಹಾಕಿ ಕೂರ್ಗ್‌ನ ಪಳಂಗಂಡ ಲವ, ಅಮ್ಮಂಡೀರ ಚೇತನ್, ಯಮುನಾ ಚೆಂಗಪ್ಪ, ಬಡಕಡ ದೀನ, ಅಂಜಪರವಂಡ ಕುಶ, ಕೊಡವ ಹಾಕಿ ಅಕಾಡೆಮಿಯ ಚೆಪುಡಿರ ಪೂಣಚ್ಚ, ಕೂತಂಡ ಸುರೇಶ್ ಅಪ್ಪಯ್ಯ, ಬಾಚಿನಾಡಂಡ ಪ್ರದೀಪ್, ಕುಲ್ಲೇಟಿರ ಅರುಣ್ ಬೇಬ, ನಾಯಕಂಡ ದೀಪಕ್ ಚೆಂಗಪ್ಪ, ಕಂಬೀರಂಡ ರಾಖಿ, ಮುಕ್ಕಾಟಿರ ಸೋಮಯ್ಯ, ಸುಳ್ಳಿಮಾಡ ದೀಪಕ್, ಮಂಡೇಪಂಡ ಮುಖೇಶ್, ಕಲಿಯಂಡ ಸಂಪನ್, ಮುದ್ದಂಡ ರಶಿನ್ ಸುಬ್ಬಯ್ಯ ಹಾಗೂ ಚೇನಂಡ ಕುಟುಂಬದ ಪ್ರಮುಖರು ಉಪಸ್ಥಿತರಿದ್ದರು.

ಮಂಗಳೂರು ವಿಶ್ವವಿದ್ಯಾಲಯ: ವಿಚಾರಸಂಕಿರಣ ಉದ್ಘಾಟನೆ

ಅಂಬೇಡ್ಕರ್‌ರದ್ದು ಸಮಾಜದ ಅಭಿವೃದ್ಧಿಯ ಪರಿಕಲ್ಪನೆಯಾಗಿತ್ತು

ಕೊಣಾಜೆ: ಸಮಾನತೆಯಿಂದ ಮಾತ್ರ ಸಾಮಾಜಿಕ ಅಭಿವೃದ್ಧಿ ಸಾಧ್ಯ ಜೊತೆಗೆ ಸಮಸಮಾಜದ ಚಿಂತನೆಯೊಂದಿಗೆ ಯುವ ಸಮುದಾಯ ಶಿಕ್ಷಣ, ಜ್ಞಾನ, ಕೌಶಲದೊಂದಿಗೆ ಮುನ್ನಡೆದರೆ ದೇಶವು ನೈಜ ಪ್ರಗತಿಯತ್ತ ಹೆಜ್ಜೆ ಇಡಬಲ್ಲುದು ಎಂಬುದು ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿಕಲ್ಪನೆಯಾಗಿತ್ತು ಎಂದು ದಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎ. ಎಂ. ಖಾನ್ ಅವರು ಹೇಳಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಹಾಗೂ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣ ಕೇಂದ್ರದ ಸಹಯೋಗದೊಂದಿಗೆ, 'ಡಾ. ಬಿ.ಆರ್. ಅಂಬೇಡ್ಕರ್ ಅವರ ದೃಷ್ಟಿಕೋನದಲ್ಲಿ ಅಭಿವೃದ್ಧಿಯ ಭಾರತ್' ಎಂಬ ವಿಷಯದಲ್ಲಿ ಎರಡು ದಿನಗಳ ಕಾಲ ನಡೆಯಲಿರುವ ವಿಚಾರ ಸಂಕಿರಣವನ್ನು ವಿವಿಯ ಮಂಗಳ ಸಭಾಂಗಣದಲ್ಲಿ ಮಂಗಳವಾರ ಉದ್ಘಾಟಿಸಿ ಮಾತನಾಡಿದರು.

ಸಾಮಾಜಿಕ ಪ್ರಜಾಪ್ರಭುತ್ವ ಇದ್ದರೆ ಮಾತ್ರ ರಾಜಕೀಯ ಪ್ರಜಾಪ್ರಭುತ್ವ ವ್ಯವಸ್ಥೆಯು ಸರಿಯಾದ ಹಾದಿಯಲ್ಲಿ ಸಾಗಲು ಸಾಧ್ಯ ಎಂಬುದು ಅಂಬೇಡ್ಕರ್ ಅವರ ಪರಿಕಲ್ಪನೆಯಾಗಿತ್ತು ಹಾಗೂ ಯುವ ಸಮುದಾಯ, ಮಹಿಳೆ, ರೈತರು ವಿಕಸಿತ ಭಾರತದ ಆಧಾರ ಸ್ಥಂಬ ಎಂದು ಬಣ್ಣಿಸಿದ್ದರು ಎಂದರು.



ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣ ಕೇಂದ್ರದ ನಿರ್ದೇಶಕ ಡಾ. ಸಾಬೀರ್ ಅಹ್ಮದ್ ಮುಲ್ಲಾ ಅವರು ಅಂಬೇಡ್ಕರ್ ಪ್ರತಿಮೆಗಳು ಮಾತ್ರವಲ್ಲ ಅವರ ವಿಚಾರಧಾರೆಗಳು ಜನಸಾಮ್ಯರೆಡೆಗೆ ತಲುಪಬೇಕಿದೆ. ಆದ್ದರಿಂದ ಇಂತಹ ಮಹತ್ವದ ವಿಚಾರ ಸಂಕಿರಣಗಳನ್ನು ಆಯೋಜಿಸಿಕೊಳ್ಳಲಾಗಿದೆ ಎಂದರು. ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್. ಧರ್ಮ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಮಂಗಳೂರು ವಿವಿ ಹಣಕಾಸು ಅಧಿಕಾರಿ ಪಂಚಲಿಂಗ ಸ್ವಾಮಿ, ಪರೀಕ್ಷಾಂಗ ಕುಲಸಚಿವ ಪ್ರೊ. ದೇವೇಂದ್ರಪ್ಪ ಉಪಸ್ಥಿತರಿದ್ದರು. ಮಂಗಳೂರು ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ಪ್ರೊ. ರಾಜು ಕೃಷ್ಣ ಚಳನ್ನವರ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಯಶುಕುಮಾರ್ ಅವರು ಕಾರ್ಯಕ್ರಮ ನಿರೂಪಿಸಿದರು.

ಬಳಿಕ ವಿವಿಧ ಗೋಷ್ಠಿಗಳು ನಡೆಯಿತು.

ಪಂಜ ಸೀಮೆಯ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇಗುಲದ ಆದಿ ಬೈದೆರುಗಳ ಗರಡಿಯಲ್ಲಿ

ಭಕ್ತಿ ಸಡಗರದ ಆದಿ ಬೈದೇರುಗಳ ನೇಮೋತ್ಸವ

ಸುಬ್ರಹ್ಮಣ್ಯ: ಪಂಜ ಸೀಮೆಯ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇಗುಲದ ಆದಿ ಬೈದೆರುಗಳ ಗರಡಿಯಲ್ಲಿ ಸೋಮವಾರ ರಾತ್ರಿ ಆದಿ ಬೈದೇರುಗಳ ನೇಮೋತ್ಸವ ಭಕ್ತಿ ಸಡಗರದಿಂದ ನಡೆಯಿತು.

ಸಂಜೆ ಮುಹೂರ್ತ ತೋರಣ, ಬೈದೇರುಗಳು ಗರಡಿ ಇಳಿದು ದೇವಳಕ್ಕೆ ಹೋಗಿ ಕಾಣಿಕೆ ಅರ್ಪಿಸಿ ರಂಗ ಪ್ರವೇಶ ನಡೆಯಿತು. ರಾತ್ರಿ ಕಿನ್ನಿದಾರು ಗರಡಿ ಇಳಿದು ರಂಗ ಪ್ರವೇಶ, ನರ್ತನ ಸೇವೆ ನಡೆಯಿತು.

ಶ್ರೀ ದೇವಳದಲ್ಲಿ ರಂಗಪೂಜೆ, ಬಳಿಕ ಶ್ರೀ ಕಾಚು ಕುಜುಂಬ ದೈವದ ನರ್ತನ ಸೇವೆ ನೆರವೇರಿತು. ವಿಶೇಷವಾಗಿ ಉಳ್ಳಾಕುಲು ದೈವದ ನರ್ತನ ಸೇವೆ, ಮಹಿಷಂತಾಯ, ವ್ಯಾಘ್ರ ಚಾಮುಂಡಿ, ಕುಪ್ಪೆ ಪಂಜುರ್ಲಿ, ವರ್ಣಾರ ಪಂಜುರ್ಲಿ, ಪುರುಷ ದೈವ, ಪೊಟ್ಟ ಭೂತ ಹಾಗೂ ಗುಳಿಗ ದೈವಗಳ ನೇಮೋತ್ಸವ ನಡೆಯಿತು.

ಈ ಸಂದರ್ಭ ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಧರ್ಮಣ್ಣ ನಾಯ್ಕ ಗರಡಿ, ಧರ್ಮಪಾಲ ಗೌಡ ಮರಕ್ಕಡ, ಮಾಯಿಲಪ್ಪ ಗೌಡ ಎಟ್ಟೂರು ಪಟ್ಟೆ, ಸಂತೋಷ್ ಕುಮಾರ್ ರೈ ಪಲ್ಲತ್ತಡ್ಕ ಬಳ್ಳ, ರಾಮಚಂದ್ರ ಭಟ್, ಸತ್ಯ ನಾರಾಯಣ ಭಟ್ ಕಾಯಂಬಾಡಿ, ಮಾಲಿನಿ ಕುದ್ದ, ಪವಿತ್ರ ಮಲ್ಲೆಟಿ, ಗೌರವ ಸಲಹೆಗಾರರಾದ ಉಮೇಶ್ ಬುಡೆಂಗಿ ಬಳ್ಪ ಪೈಂದೋಡಿ ಸುಬ್ರಾಯ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೇಶವ ಗೌಡ ಕುದ್ವ ಮತ್ತಿತರರು ಉಪಸ್ಥಿತರಿದ್ದರು.



ಕಳೆದು ಹೋಗಿದೆ

ಬಂಟ್ವಾಳ ತಾಲೂಕು ವಿಟ್ಲ ಸ.ರಿ.ಆಫೀಸಿನ 1ನೇ ಪುಸ್ತಕದ ದ.ನಂ. ವಿಟಿಎಲ್-1-00909-2012-13ರಂತೆ ದಿ:16-07-2012ರಂದು ನೋಂದಾವಣೆಗೊಂಡ ಹಕ್ಕು ಖುಲಾಸು ಪತ್ರದ ಮೂಲಪ್ರತಿಯು ನನ್ನ ಸುಪರ್ದಿಯಿಂದ ಕಳೆದುಹೋಗಿರುತ್ತದೆ. ಸಿಕ್ಕಿದವರು ಕೂಡಲೇ ನನ್ನ ದೂರವಾಣಿ ಸಂಖ್ಯೆ: 9741234158ಗೆ/ಈ ಕೆಳಗೆ ವಿವರಿಸಿದ ವಿಳಾಸಕ್ಕೆ ಸಂಪರ್ಕಿಸಬೇಕಾಗಿ ವಿನಂತಿ.

ಸಂಪರ್ಕಿಸಬೇಕಾದ ವಿಳಾಸ:
ಮೋಹಿನಿ, ಬಿನ್. ದಿ. ಹೂವಯ್ಯ ಗೌಡ
ನಿಡ್ಯಾರ ಮನೆ, ಅನಂತಾಡಿ ಗ್ರಾಮ
ಬಂಟ್ವಾಳ ತಾಲೂಕು, ದ.ಕ. ಜಿಲ್ಲೆ

IN THE COURT OF PRINCIPAL CIVIL JUDGE AND JMFC BANTWAL
P & SC NO: 08/2026

BETWEEN:
1. MR. GURUPRASAD
S/o. LATE SHANKAR SHETTY AND LATE SHIVANI SHETTY AGED 51 YEARS, R/AT, 1-252, HOIGE GADDE, KARINGANA, AMTOOR VILLAGE, BANTWAL TALUK-574222.
2. SMT. THRIVENI SHETTY
D/o. LATE SHANKAR SHETTY AND LATE SHIVANI SHETTY W/O, SHASHIDHAR SHETTY AGED 48 YEARS R/AT, 17-7, SARASWATHI NILAYA, ODARIBETTU ROAD, KARINJE VILLAGE, MOODABIDRI TALUK-574227
...PETITIONERS
AND
NIL ...RESPONDENT

TO WHOM SO EVER IT MAY CONCERN

Whereas the above named petitioners have made an application to before this Hon'ble court, seeking an order, for grant of succession certificate in respect assets of the deceased Late. Shivani Shetty. Take notice that the above petition has been posted to **24th day of March 2026** for hearing at **11:00 AM** persons desiring to oppose the same may appear before this Hon'ble court and file objection if any on the said date and time, filing which the matter will be heard and decided exparte.

Given under my hand and seal of the court on this 04th day of March 2026.

(BY ORDER OF THE COURT)
Sd/- Chief Ministerial Officer
Principal Civil Judge & JMFC, Bantwal, D.K.
Sd/- ADVOCATE FOR PETITIONERS

PUBLIC NOTICE

That, my client **MR. VINCENT SANTHOSH REGO,** son of Late Fredrick Rego, residing at No. 4/288/A39, Flat No. B-54, Vasant Vistas, Shetyewado Mapusa Bardez, Bardez North Goa, Goa 403 507, has purchased a Non Agricultural immovable property situated at Katipalla Village (old Iddya village) of Mangalore Taluk and within the limit of Mangalore City Corporation in Survey No. 118/2 (old), 80/2 (New) a Converted land, admeasuring an extent of 0.32.50 acres, from one Mr. Francis Dsouza, son of Pascal Dsouza, resident of Site No. 631, 3rd Block, Katipalla, Mangalore for a valid consideration and the same was Registered as Document No. MGT-1-06305-2010-11 in CD No. MGTD133 dated 27.12.2010 on the file of Sub Registrar of Mangalore Taluk and has obtained all the parent documents to his custody.

As of now my client is intend to dispose it off to any prosperous buyer/s, and hence when setting the documents, my client made understood that, **Original Single Site Approval Order along with Sketch issued from MUDA, document bearing reference No.Manapra:Nayosa: Vinyasa:1191/2010-11 dated 08.12.20210 is MISSING** form the docket.

As of now, my client requesting the General Public, that Whomsoever if found the aforesaid document, please handover the same to my custody to enable my client to have smooth transaction of his property.

Sd/- CHANDRAHAS KADRI
Advocate & Notary
"KADRI & ASSOCIATES"
Ist Floor, Somayaji House
Opp: Hotel Woodlands,
Bunts Hostel Road,
Mangalore 575 002.
Cell: 9886438694, 9591238738

ಮಾನ್ಯ ಪುತ್ತೂರು ಹಿರಿಯ ಸಿವಿಲ್ ಜಡ್ಜ್ ಮತ್ತು ಎ ಸಿ ಜೆ ಯಂ ಇವರ ನ್ಯಾಯಾಲಯದಲ್ಲಿ
ಕ್ರಿ.ಮಿಸ್.ಕೇಸ್.ನಂ. 40/2026

ಇವರೊಳಗೆ,
ವಿಜಯ ಎಮ್. ಶೆಟ್ಟಿ
ಕೋಂ. ಮಹಾಬಲ ಶೆಟ್ಟಿ
ಎ.ಯಂ. ಶೆಟ್ಟಿ ಕಂಪೌಂಡ್
ಕೆಮ್ಮಿಂಜೆ ಗ್ರಾಮ ಮತ್ತು ಅಂಚೆ
ಪುತ್ತೂರು ತಾಲೂಕು ದ.ಕ.
...ಅರ್ಜಿದಾರಳು

ಮತ್ತು

ಪೌರಾಯುಕ್ತರು, ನಗರ ಸಭೆ ಪುತ್ತೂರು
ಪುತ್ತೂರು ದ.ಕ.
(ಜನನ ಮತ್ತು ಮರಣ ನೋಂದಣಾಧಿಕಾರಿಗಳು)
...ಪ್ರತಿವಾದಿ

ಸಾರ್ವಜನಿಕ ಪ್ರಕಟಣೆ

ಮೇಲಿನ ಪ್ರಕರಣದಲ್ಲಿ ಅರ್ಜಿದಾರರು ಅವರ ತಾಯಿ **ಸಂಜೀವಿ ಶೆಟ್ಟಿ** ಎಂಬವರು **ದಿನಾಂಕ 27.04.2016** ರಂದು ಪುತ್ತೂರು ತಾಲೂಕು ಕೆಮ್ಮಿಂಜೆ ಗ್ರಾಮದ ಮೊಟ್ಟೆತ್ತಡ್ಕ ಮನೆಯಲ್ಲಿ ಮೃತಪಟ್ಟಿರುವುದಾಗಿಯೂ, ಅರ್ಜಿದಾರರು ಈ ಬಾಬ್ತು ಪೌರಾಯುಕ್ತರು, ನಗರ ಸಭೆ ಪುತ್ತೂರು ಕಛೇರಿಯ ಮರಣ ನೋಂದಣಿ ವಹಿಯಲ್ಲಿ ದಾಖಲೆ ಇಲ್ಲದಿರುವುದರಿಂದ ಸದ್ರಿ ಕಛೇರಿಯಿಂದ ಅಲಭ್ಯ ಪ್ರಮಾಣಪತ್ರ ಪಡಕೊಂಡು ಮಾನ್ಯ ನ್ಯಾಯಾಲಯಕ್ಕೆ ಈ ಮೇಲಿನಂತೆ ಜನನ ಮರಣ ನೋಂದಣಿ ಕಾಯ್ದೆ ಕಲಂ 13(3) ಪ್ರಕಾರ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಯಾರಿಗಾದರೂ ಆಕ್ಷೇಪಗಳಿದ್ದರೆ ಮಾನ್ಯ ನ್ಯಾಯಾಲಯಕ್ಕೆ **ದಿನಾಂಕ: 15.04.2026 ರಂದು ಬೆಳಿಗ್ಗೆ 11 ಗಂಟೆಗೆ** ಖುದ್ದು ಅಥವಾ ತಮ್ಮ ವಕೀಲರ ಮೂಲಕ ಹಾಜರಾಗತಕ್ಕದ್ದು.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಮಾನ್ಯ ಪುತ್ತೂರು ಹಿರಿಯ ಸಿವಿಲ್ ಜಡ್ಜ್ ಮತ್ತು ಎ.ಸಿ.ಜೆ.ಯಂ ಇವರ ನ್ಯಾಯಾಲಯದಲ್ಲಿ ಪುತ್ತೂರು, ದ.ಕ.
ಸಹಿ/- ಅರ್ಜಿದಾರರ ಪರ ವಕೀಲರು

IN THE COURT OF THE PRINCIPAL SENIOR CIVIL JUDGE AND ACJM AT PUTTUR DK
Cril MC.No:150/2025

Between,
ALEES
Aged about 61 years
W/o. Late. A J Antony
R/at 2-118, Padambala House
Shirady Village Kadaba Tq, DK
...Petitioners
And
The Tahasildar,
The Register of birth and death
Kadaba D.K.
...Respondent

PUBLIC NOTICE

Whereas above Petitioner has filed petition U/S 13(3) of the registration of birth and deaths act in respect of death of Manoj died on 11.06.2006 at Padambale House Shirady Village Kadaba Tq DK D.K If anyone has any claim Right/ Title etc, can file their objection before the Hon'ble Principal civil Judge and ACJM at Puttur On **10.04.2026 at 11.00 am,** either in person or through a counsel to answer the same, failing which, the petitioner will be disposed off.

(By order of court)
Sd/- Shirastedar
Prl. Senior Civil Judge & ACJM Puttur
Sd/- Advocate for Petitioner

ಪುತ್ತೂರು ಮಾರುಕಟ್ಟೆ ಧಾರಣೆ

4-03-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 470
ಚೋಲ್ ಅಡಿಕೆ	505 - 530
ಡಬಲ್ ಚೋಲ್	505 - 530
ಹೊಸ ಪಟೋರ	365 - 415
ಹಳೆ ಪಟೋರ	400 - 430
ಹೊಸ ಉಳ್ಳಿ	115 - 300
ಹಳೆ ಉಳ್ಳಿ	105 - 305
ಹೊಸ ಕೋಕಾ	330 - 350
ಹಳೆ ಕೋಕಾ	355 - 375
ಹೊಸ ಕರಿಗೋಟು	240 - 270
ಹಳೆ ಕರಿಗೋಟು	240 - 270
ಹಸಿ ಕೊಕ್ಕೋ	80 - 110
ಒಣ ಕೊಕ್ಕೋ	350 - 380

ಕಾಳುಮೆಣಸು ಧಾರಣೆ

ಕಾಳುಮೆಣಸು	465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	214.50
ಆರ್‌ಎಸ್‌ಎಸ್ 2	197.00
ಸ್ಕ್ರಾಪ್ 1	137.00
ಸ್ಕ್ರಾಪ್ 2	130.00

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ-1 /ವಿ.ಲೆ.ಶೀ /ಟೆಂಡರು /2025-26/2057
ದಿನಾಂಕ 03-03-2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025-26 ನೇ ಸಾಲಿನ ಸಿ.ಎಮ್.ಐ.ಡಿ.ಪಿ ಯೋಜನೆ, 2024-25 ಕೆ.ಕೆ.ಆರ್.ಡಿ.ಬಿ ಯೋಜನೆ ಮತ್ತು 2019-20 ನೇ ಸಾಲಿನ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ ಒಟ್ಟು 03 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ-
1.RDPR/2025-26/IND13618
2.RDPR/2025-26/BD/WORK_INDENT22289/CALL-3
3.RDPR/2025-26/RD/WORK_INDENT25325

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 03-03-2026** ರಿಂದ **ದಿನಾಂಕ 10-03-2026** ರಂದು **ಸಂಜೆ 4.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 10-03-2026** ರ **16.30** ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 11-03-2026** ರಂದು **17.30** ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/1082/ಕೆಎಸ್‌ಎಂಸಿಎ/2025-26

ಸೋಮೇಶ್ವರ ಪುರಸಭೆ, ದ.ಕ.

ನಂಬ್ರ: ಸೋ.ಪು.ಸ/ಜೆ.ಇ/ಪುನಿ/ಟೆಂಡರ್/ಸಿಆರ್/12/2025-26 ದಿನಾಂಕ: 02-03-2026

ಟೆಂಡರ್ ಪ್ರಕಟಣೆ

(ಕರ್ನಾಟಕ ಸರಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಸೋಮೇಶ್ವರ ಪುರಸಭೆಯ 2026-27 ನೇ ಸಾಲಿನ ಪುರಸಭಾ ನಿದಿಯಲ್ಲಿ ಈ ಕೆಳಗಿನ ವಾರ್ಷಿಕ ನಿರ್ವಹಣೆಯ ಕಾಮಗಾರಿಗಳಿಗೆ ಟೆಂಡರುಗಳನ್ನು ಮುಖ್ಯಾಧಿಕಾರಿ ಸೋಮೇಶ್ವರ ಪುರಸಭೆ, ಇವರಿಂದ ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 1999 ಮತ್ತು 2000ರ ಅನ್ವಯ ದರಗಳನ್ನು ಅರ್ಹ ಸಿವಿಲ್ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರು ಡಾಕ್ಯುಮೆಂಟ್ KW1 ಪ್ರಕಾರ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರುಗಳ ಸಂಪೂರ್ಣ ವಿವರಗಳನ್ನು ಪುರಸಭೆಯ ವೆಬ್‌ಸೈಟ್ www.someshwaratown.mrc.gov.in ನಲ್ಲಿ www.kppp.karnataka.gov.in ಹಾಗೂ ಸೋಮೇಶ್ವರ ಪುರಸಭೆ ಕಚೇರಿ ನಾಮಫಲಕದಲ್ಲಿ ನೋಡಬಹುದು. ಇನ್ನು ಹೆಚ್ಚಿನ ಮಾಹಿತಿ ಬೇಕಾದ್ದಲ್ಲಿ ಪುರಸಭಾ ಕಚೇರಿಯಲ್ಲಿ ಕಚೇರಿಯ ಸಮಯದಲ್ಲಿ ಪಡೆದುಕೊಳ್ಳಬಹುದು.

ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16-03-2026 ಅಪರಾಹ್ನ 4.00 ಗಂಟೆಗೆ
ಟೆಂಡರುಗಳನ್ನು ತೆರೆಯುವ ದಿನಾಂಕ: 18-03-2026 ಪೂರ್ವಾಹ್ನ 4.30 ಗಂಟೆಗೆ

(1) DMA/2025-26/OW/WORKINDENT_55598 – 19.00
(2) DMA/2025-26/OW/WORKINDENT_55606 – 19.20
(3) DMA/2025-26/OW/ WORKINDENT_55587 – 14.00
(4) DMA/2025-26/OW/ WORKINDENT_55593 – 5.00

ಸಹಿ/- ಅಧ್ಯಕ್ಷರು, ಸೋಮೇಶ್ವರ ಪುರಸಭೆ
ಸಹಿ/- ಮುಖ್ಯಾಧಿಕಾರಿ, ಸೋಮೇಶ್ವರ ಪುರಸಭೆ
DIPR/DK/KSMCA/1693/25-26 dt: 04.03.2026

ಕರ್ನಾಟಕ ಸರ್ಕಾರ
ಹೆಬ್ರಿ ತಾಲೂಕು ಪಂಚಾಯತ್ ಕಾರ್ಯಾಲಯ
ಹೆಬ್ರಿ ತಾಲೂಕು, ಉಡುಪಿ ಜಿಲ್ಲೆ-576112
Email: tphebri@gmail.com, Phone: 08253-295226

ಸಂ:ತಾಪಂಹೆ:ಇ-ಟೆಂಡರ್:ಸಿಆರ್:02/2025-26 ದಿನಾಂಕ ::03.03.2026

ಟೆಂಡರ್ ಪ್ರಕಟಣೆ

ಹೆಬ್ರಿ ತಾಲೂಕು ಪಂಚಾಯತ್ ಕಛೇರಿಗೆ ಮಾನವ ಸಂಪನ್ಮೂಲ ಸೇವೆಯನ್ನು ಬಾಹ್ಯ ಮೂಲ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಕ್ರ. ಸಂ.	ವಿಷಯ	ಟೆಂಡರ್ ಸಂಖ್ಯೆ	ಇ.ಎಂ.ಡಿ. ಮೊತ್ತ
1.	ಹೆಬ್ರಿ ತಾಲೂಕು ಪಂಚಾಯತ್ ಕಛೇರಿಗೆ ಬಾಹ್ಯಮೂಲ ಸಂಸ್ಥೆಯಿಂದ ಹೊರಗುತ್ತಿಗೆ ಸಿಬ್ಬಂದಿಯನ್ನು ಪಡೆಯುವ ಕುರಿತು	RDPR/2025-26/SE3542	29,000.00

1. ಟೆಂಡರ್ ಅನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ:18.03.2026.
2. ತಾಂತ್ರಿಕ ಬಿಡುತೆರೆಯುವ ದಿನಾಂಕ:19.03.2025 ಅಪರಾಹ್ನ 4.00 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಪಡೆಯಬಹುದು. **ಕಛೇರಿ ದೂರವಾಣಿ ಸಂಖ್ಯೆ: 08253-295226. ಇ-ಮೇಲ್:tphebri@gmail.com**

ಸಹಿ/-ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲೂಕು ಪಂಚಾಯತ್, ಹೆಬ್ರಿ

ಕರ್ನಾಟಕ ಸರಕಾರ
ಪಟ್ಟಣ ಪಂಚಾಯತಿ ಕಾರ್ಯಾಲಯ ಖಾನಾಪೂರ
ತಾ॥ಖಾನಾಪೂರ ಜಿ॥ಬೆಳಗಾವಿ
Town Panchayat, KHANAPUR
Tal : Khanapur & Dist : Belagavi
ಕಚೇರಿ ದೂರವಾಣಿ ಸಂಖ್ಯೆ: 08336-222240 E Mail:itstaff_ulb_khanapur@yahoo.com

ಕ್ರಸಂ/ಪಪಂಖಾ/SBM 2.0/Labour ಟೆಂಡರ್/2025-26/ ದಿನಾಂಕ:04.03.2026

ಟೆಂಡರ್ ಪ್ರಕಟಣೆ
(Karnataka Public Procurement Portal)

ಸನ್ 2025-26 ಸಾಲಿನ ಪಟ್ಟಣ ಪಂಚಾಯತಿ ಅನುದಾನ ಸನ್ 2025-26 ಸಾಲಿನ ಸ್ವಚ್ಛ ಭಾರತ ಮಿಷನ್ (ನಗರ) 2.0 ಅಡಿಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಅನುದಾನದಡಿ ಕಾಮಗಾರಿ **1) DMA/2025-26/SE7418 2) DMA/2025-26/SE7419 3) DMA/2025-26/SE7420 4)DMA/2025-26/BD/WORK_INDENT55883,** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧ್ಯಾದೇಶ 1999 ಮತ್ತು 2000 ರಂತೆ KC-6& KW-1 ಪ್ರಕಾರ (ಕನಿಷ್ಠ **ಮೊತ್ತ ರೂ.2.16 ಲಕ್ಷ** ಮತ್ತು **ಗರಿಷ್ಠ ಮೊತ್ತ ರೂ 58.97 ಲಕ್ಷ**) ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು (Karnataka Public Procurement Portal) ಮುಖಾಂತರ ಕಾಮಗಾರಿ ಟೆಂಡರ್‌ಗಾಗಿ ಭಾಗವಹಿಸಬಹುದು. ಈ ಟೆಂಡರ್‌ಗೆ ಸಂಬಂದಪಟ್ಟ ಎಲ್ಲಾ ದಾಖಲೆಗಳನ್ನು ಭರ್ತಿಮಾಡಿ ಸಲ್ಲಿಸುವ **ದಿನಾಂಕ: 18.03.2026 ಸಂಜೆ 5-00 ಗಂಟೆಯವರೆಗೆ** ಹಾಗೂ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ :20.03.2026 ರಂದು ಬೆಳಿಗ್ಗೆ 11.00 ಗಂಟೆಗೆ.**

ಸಹಿ/-
ಶ್ರೀ.ಸಂತೋಷ ಕುರಬೇಟ (ಕೆ.ಎಂ.ಎ.ಎಸ್)
ಮುಖ್ಯಾಧಿಕಾರಿ
ಪಟ್ಟಣ ಪಂಚಾಯತಿ,ಖಾನಾಪೂರ

ಸಹಿ/-
ಶ್ರೀ.ದುಂಡಪ್ಪಾ ಕೋಮಾರ
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯತಿ, ಖಾನಾಪೂರ

ವಾ.ಸಾ.ಇ/ಬೆಳಗಾವಿ/1985/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರು ಗದಗ ಮೃಗಾಲಯ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಉಪವಿಭಾಗ ಗದಗರವರ ಕಛೇರಿ ಹುಬ್ಬಳ್ಳಿ ರಸ್ತೆ ಬಿಂಕದಕಟ್ಟಿ-582103 ತಾಲೂಕು/ಜಿಲ್ಲೆ : ಗದಗ
ದೂರವಾಣಿ : 08372-200978 ಇ-ಮೇಲ್ : acfgadag@gmail.com

ನಂ: ಸಅಸಂ/ಗದಗ/ಟೆಂಡರ್/ಸಿವಿಲ್ ಕಾಮಗಾರಿ/2025-26, ದಿನಾಂಕ: 04-03-2026

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2025-26ನೇ ಸಾಲಿನಲ್ಲಿ ಗದಗ ಮೃಗಾಲಯದಲ್ಲಿ ಈ ಕೆಳಕಾಣಿಸಿದ ಸಿವಿಲ್ ಕಾಮಗಾರಿಯನ್ನು ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ (ಇ-ಪ್ರೊಕ್ಯೂರ್‌ಮೆಂಟ್) ಪೋರ್ಟಲ್‌ನಲ್ಲಿ **(http://kppp.karnataka.gov.in)** ನೋಂದಾಯಿತ ಗುತ್ತಿಗೆದಾರರಿಂದ ಪಾರದರ್ಶಕತೆ ನಿಯಮ ಹಾಗೂ ಅಧಿನಿಯಮಗಳನ್ವಯ ಇ-ಟೆಂಡರ ಕರೆಯಲಾಗಿದೆ.

ಅ. ನಂ.	ಇಂಡೆಂಟ್ ನಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	**ZAK/2025-26/OW/ WORK_INDENT146**	**Repair work for Walk-Through Aviary Mesh at Gadag Zoo**	**14.530**

ಷರತ್ತುಗಳು: (1) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: **03-03-2026** (2) ಬಿಡ್‌ಗಳನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **10-03-2026** ರ ಅಪರಾಹ್ನ 4.00 ಘಂಟೆಗೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **12-03-2026** ರ ಮುಂಜಾನೆ 11.00 ಘಂಟೆಗೆ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **16-03-2026** ರ ಮುಂಜಾನೆ 11.00 ಘಂಟೆಗೆ (5) ಇ.ಎಂ.ಡಿ.ಗಳು ಇ-ಪೋರ್ಟಾಲ್‌ನಲ್ಲಿ ತಿಳಿಸಿರುವ ಯಾವುದಾದರೂ ಒಂದು ರೀತಿಯಲ್ಲಿರತಕ್ಕದ್ದು ಮತ್ತು ಅವುಗಳ ಚಲಾವಣೆ ಟೆಂಡರ್ ತೆರೆಯುವ ದಿನಾಂಕದಿಂದ ಕನಿಷ್ಠ 90 ದಿನಗಳವರೆಗೆ ಇರತಕ್ಕದ್ದು. (6) ಯಾವುದೇ ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಹಾಗೂ ಆಡಳಿತಾತ್ಮಕ ಕಾರಣಗಳಿಂದ ಷರತ್ತುಗಳನ್ನು ಸೇರಿಸುವ, ಪರಿಷ್ಕರಿಸುವ, ಕೈಬಿಡುವ ಅಧಿಕಾರ ಈ ಕೆಳ ಸಹಿದಾರರಿಗೆ ಇರುತ್ತದೆ. (7) ಹೆಚ್ಚಿನ ವಿವರಗಳನ್ನು **http://kppp.karnataka.gov.in** ಇ-ಪೋರ್ಟಾಲ್ ಮುಖಾಂತರ ಪಡೆಯಬಹುದು.

ಸಹಿ/- ಉಪ ನಿರ್ದೇಶಕರು ಗದಗ ಮೃಗಾಲಯ & ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು,
ಗದಗ ಉಪ ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/691/2025-26

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವಕ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: (080) 22215601, 22211246 ಫ್ಯಾಕ್ಸ್: 080-22215602

ಸಂ: ಡಿವೈಇಎಸ್/ತಾಂಶಾ/ಕ್ರೀಯೋ/173/2025-26 ದಿನಾಂಕ:03.03.2026

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560 001 ಕರ್ನಾಟಕ, ಭಾರತ, ಕರ್ನಾಟಕದ ರಾಯಚೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್ ಆಹ್ವಾನಿಸಿದೆ.

ಕ್ರ ಸಂ.	ಕಾಮಗಾರಿಗಳ ವಿವರ	ಟೆಂಡರ್‌ಗೆ ಇಟ್ಟ ಮೊತ್ತ	ಇ.ಎಂ.ಡಿ ಮೊತ್ತ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ರಾಯಚೂರು ಜಿಲ್ಲೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಹಾಕಿ ಟರ್ಫ್ ಅಳವಡಿಕೆ	ರೂ.28.16 ಲಕ್ಷಗಳು	ರೂ.56,320	09-03-2026 ಸಮಯ 16:00 ಗಂಟೆ	10-03-2026 ಸಮಯ 16:30 ಗಂಟೆ
2	ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣ	ರೂ.394.51 ಲಕ್ಷಗಳು	ರೂ.5,91,767	20-03-2026 ಸಮಯ 16:30 ಗಂಟೆ	23-03-2026 ಸಮಯ 11:30 ಗಂಟೆ
3	ದಾವಣಗೆರೆ ಜಿಲ್ಲೆ ಜಗಳೂರು ತಾಲೂಕಿನಲ್ಲಿ, ತಾಲೂಕು ಒಳಾಂಗಣ ಕ್ರೀಡಾಂಗಣ ನಿರ್ಮಾಣ	ರೂ.158.84 ಲಕ್ಷಗಳು	ರೂ.2,38,267	17-03-2026 ಸಮಯ 16:00 ಗಂಟೆ	18-03-2026 ಸಮಯ 16:30 ಗಂಟೆ
4	ಶಿವಮೊಗ್ಗ ಜಿಲ್ಲಾ ಕ್ರೀಡಾಂಗಣದಲ್ಲಿ ವಾಕರ್ಸ್ ಪಾತ್ ವೇ ಅಭಿವೃದ್ಧಿ	ರೂ.38.53 ಲಕ್ಷಗಳು	ರೂ.77,070	18-03-2026 ಸಮಯ 17:00 ಗಂಟೆ	20-03-2026 ಸಮಯ 11:30 ಗಂಟೆ

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/-
ಸಹಾಯಕ ಕಾರ್ಯಪಾಲಕ ಅಭಿಯಂತರರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
ಡಿಐಪಿಆರ್/ಸಿಪಿ/5985/ಸಿಸಿಎಲ್/2025-26

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಕಾರ್ಯದರ್ಶಿಯವರ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು-570010
ದೂರವಾಣಿ ಸಂಖ್ಯೆ : 0821-2590027, ಫ್ಯಾಕ್ಸ್: 0821/2590082, ಇ-ಮೇಲ್: eochamunditemple@gmail.com

ಪತ್ರ ಸಂಖ್ಯೆ: ಶ್ರೀಚಾಕ್ಷೇಅಪ್ರಾ(5)ಸಿಆರ್:12/2025-26 ದಿನಾಂಕ: 28.02.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕಛೇರಿಯಿಂದ ಸೂಚಿತ ಅವಧಿಗೆ ಈ ಕೆಳಕಂಡ ವಿವಿಧ ಬಾಬ್ತುಗಳಿಗೆ ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ನಮೂನೆಗಳನ್ನು ಇ-ಪ್ರಕ್ಯೂರ್‌ಮೆಂಟ್ (https://kppp.karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರು ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು, ಇ.ಎಂ.ಡಿ.ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ Validity period) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಕ್ರ ಸಂ	ಟೆಂಡರ್ ಹೆಸರು	ಅಂದಾಜು ಮೊತ್ತ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ನಿತ್ಯ ಅನ್ನದಾಸೋಹ ಹಾಗೂ ದೇವಸ್ಥಾನದ ದಿನ ನಿತ್ಯದ ಬಳಕೆಗೆ ಅಗತ್ಯವಾಗಿ ಬೇಕಾದ ದಿನಸಿ ಸಾಮಾಗ್ರಿಗಳ ಸರಬರಾಜು. (12 ತಿಂಗಳ ಅವಧಿಗೆ)	1,49,63,064	3,00,000
2	ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಲಾಡು ಪ್ರಸಾದ ತಯಾರಿಕೆಗೆ ಅಗತ್ಯವಾಗಿ ಬೇಕಾದ ದಿನಸಿ ಸಾಮಾಗ್ರಿಗಳ ಸರಬರಾಜು. (12 ತಿಂಗಳ ಅವಧಿಗೆ)	3,99,27,300	8,00,000

ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

(1)ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ ಮತ್ತು ಸಮಯ **ದಿ:04.03.2026 ರ ಬೆಳಿಗ್ಗೆ 11.00 ಗಂಟೆ** ನಂತರ (2)ಪ್ರೀ ಬಿಡ್ಡಿಂಗ್ ಕಾರ್ಯದರ್ಶಿಗಳ ಕಛೇರಿ **ದಿ: 20.03.2026 ರ ಮಧ್ಯಾಹ್ನ 12 ಗಂಟೆಗೆ** (3)ಟೆಂಡರ್‌ಗೆ ಸಂಬಂಧಿಸಿದ ವಿಚಾರಣೆಗೆ **ದಿ: 21.03.2026 ಸಂಜೆ 5.00** ಗಂಟೆಯವರೆಗೆ (4) ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ **ದಿ: 24.03.2026 ರ ಸಂಜೆ 5.00** ಗಂಟೆಯವರೆಗೆ (5) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ **25.03.2026 ರ ಬೆಳಿಗ್ಗೆ 11.00** ಗಂಟೆ ನಂತರ (6) ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿನಾಂಕ: **27.03.2026 ರ ಬೆಳಿಗ್ಗೆ 11.00** ಗಂಟೆ ನಂತರ

ಸಹಿ/- ಕಾರ್ಯದರ್ಶಿ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಚಾಮುಂಡಿಬೆಟ್ಟ
ವಾಸಾಸಂಇ/ಮೈಸೂರು/1770/ಶಿರಡಿ ಸಾಯಿ/2025-26

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ:ಉನಸ ಬಿ4.ಸಿಆರ್:2025-26 ದಿನಾಂಕ: 04.03.2026

ಟೆಂಡರು ಪ್ರಕಟಣೆ

ಕೇಂದ್ರ ಪುರಸ್ಕೃತ ಅಮೃತ್ 2.00 ಯೋಜನೆಯ ಘಟಕವಾದ 'ಜಲ್‌ಹಿ ಅಮೃತ್' ಉಪಕ್ರಮದಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standart Bid Document K.W.-3ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

1) **ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 18.03.2026 ಸಂಜೆ 5.00 ಗಂಟೆಗೆ**
2) **ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 20.03.2026 ಪೂರ್ವಾಹ್ನ 11.00 ಗಂಟೆಗೆ**
3) **ಆರ್ಥಿಕ ಬಿಡ್ಡು ತೆರೆಯುವ ದಿನಾಂಕ ಅರ್ಹ ಬಿಡ್ಡುದಾರರಿಗೆ ಪ್ರತ್ಯೇಕ ತಿಳಿಸಲಾಗುವುದು.**


ಕ್ರ.ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ	ಕಾಮಗಾರಿ ಪೂರ್ತಿಗೊಳಿಸುವ ಅವಧಿ
1.	DMA/2025-26/WS/WORK_ INDENT50123 CALL-3	10000000.00	150000.00	5 ತಿಂಗಳು

ಸಹಿ/- ಪೌರಾಯುಕ್ತರು, ಉಡುಪಿ ನಗರಸಭೆ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ
ನೋ ಸಂ :ಆರ್.ಎಸ್. ಆರ್. ಸೌ.ಕಾ. 128-009-2001-02
ಪ್ರಧಾನ ಕಛೇರಿ: ದರ್ಬೆ, ಪುತ್ತೂರು -574202, ದ.ಕ.
ಶಾಖೆ: ಬಿ.ಸಿ.ರೋಡ್, ಫೋನ್: 08255-231666, 9739986844

ವಾಹನ ಹರಾಜು ಪ್ರಕಟಣೆ

ಈ ಕೆಳಕಂಡ ಮಹನೀಯರು ನಮ್ಮ ಸಹಕಾರಿಯಿಂದ ವಾಹನ ಸಾಲ ಪಡೆದುಕೊಂಡು ಸಮಯಕ್ಕೆ ಸರಿಯಾಗಿ ಮರುಪಾವತಿಸದ ಕಾರಣ, ಈ ಕೆಳಗೆ ಕಾಣಿಸಿದ ವಾಹನವನ್ನು ಮುಟ್ಟುಗೋಲು ಹಾಕಲಾಗಿದ್ದು, ಸದ್ರಿ ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸಾಲವನ್ನು **ದಿನಾಂಕ:11-03-2026ರೊಳಗಾಗಿ** ಮರುಪಾವತಿಸದಿದ್ದರೆ, ಸದ್ರಿ ವಾಹನವನ್ನು **ದಿನಾಂಕ:13-03-2026 ರಂದು ಸಮಯ ಬೆಳಿಗ್ಗೆ 11.00ಕ್ಕೆ ಬಿ.ಸಿ.ರೋಡ್ ಶಾಖೆಯ ಆವರಣದಲ್ಲಿ** ಬಹಿರಂಗ ಯಾ ನೋಟೀಸು ಕೊಡದೇನೆ ಖಾಸಗಿಯಾಗಿ "ಎಲ್ಲಿ ಹೇಗಿದೆಯೋ ಹಾಗೇ ಯಥಾಸ್ಥಿತಿಯಲ್ಲಿ" ಹರಾಜು ಮಾಡಲಾಗುವುದು.

ಕ್ರ.ಸಂ.	ವಾಹನ ಸಂಖ್ಯೆ ಮತ್ತು ವಿಧ	ಸಾಲಗಾರರ ಹೆಸರು ಮತ್ತು ವಿಳಾಸ
01	KA-70-2325 Bajaj RE LPG Auto Model December 2019	**ಸಾಲಗಾರರು :** **1) ಎ 22581, ಸಂದೀಪ್** ಬಿನ್ ನಟೇಶ್ ಕುಮಾರ್ ಮನೆ ನಂ. 1-127/1 ಬೆಂಜನಪದವು ಮನೆ, ಬೆಂಜನಪದವು ಅಂಚೆ, ಅಮ್ಮುಂಜೆ ಗ್ರಾಮ, ಬಂಟ್ವಾಳ ತಾಲೂಕು ದ.ಕ. 574219 **2) ಎ 27885, ರೇಷ್ಮಾ ಕೋಂ. ಸಂದೀಪ್** ಮನೆ ನಂ. 1-127/1 ಬೆಂಜನಪದವು ಮನೆ, ಅಮ್ಮುಂಜೆ ಅಂಚೆ, ಅಮ್ಮುಂಜೆ ಗ್ರಾಮ, ಬಂಟ್ವಾಳ ತಾಲೂಕು ದ.ಕ. 574219 **ಸಹ ಜವಾಬ್ದಾರರು,** **1).ಎ 27787, ರೋಹಿತಾಕ್ಷ** ಬಿನ್. ಮಂಜುನಾಥ ಪುರುಷ ಮನೆ ನಂ. 1-156/4, ಬಟ್ರತೋಟ ಮನೆ, ಅಮ್ಮುಂಜೆ ಗ್ರಾಮ, ಬೆಂಜನಪದವು ಅಂಚೆ, ಬಂಟ್ವಾಳ ತಾಲೂಕು ದ.ಕ. 574219. **2). ಎ 27883, ನವೀನ,** ಬಿನ್.ಸದಾಶಿವ ಬೆಟ್ಟಡ, ಮನೆ ನಂ. 1-246, ಬೆಂಜನಪದವು ಶಿವಾಜಿನಗರ ಮನೆ, ಅಮ್ಮುಂಜೆ ಗ್ರಾಮ, ಬೆಂಜನಪದವು ಅಂಚೆ, ಬಂಟ್ವಾಳ ತಾಲೂಕು, ದ.ಕ.-574219.    

ದಿನಾಂಕ 04-03-2026 ರಂತೆ ಸಹಕಾರಿಗೆ ಬರಬೇಕಾಗಿರುವ ಒಟ್ಟು ಹೊರಬಾಕಿ ಮೊತ್ತ ರೂ. 66,732/- + ನಂತರದ ಬಡ್ಡಿ ಮತ್ತು ಇತರ ಖರ್ಚು

(ಆಡಳಿತ ಮಂಡಲಿ ಅನುಮತಿ ಮೇರೆಗೆ)
ಸೂಚನೆ: ಸದ್ರಿ ಹರಾಜು ಪ್ರಕ್ರಿಯೆಯನ್ನು ಮುಂದೂಡುವ ಯಾ ರದ್ದುಗೊಳಿಸುವ ಅಧಿಕಾರವನ್ನು ಸಹಕಾರಿಯ ಆಡಳಿತ ಮಂಡಲಿ ಕಾಯ್ದಿರಿಸಿದೆ.
ದಿನಾಂಕ:04.03.2026 ಸಹಿ/-
ಸ್ಥಳ: ಬಿ.ಸಿ.ರೋಡ್ ಪ್ರಧಾನ ವ್ಯವಸ್ಥಾಪಕರು

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ,
ಸಾಮಾಜಿಕ ಅರಣ್ಯ ಉಪ ವಿಭಾಗ, ಬಾಗಲಕೋಟೆ.

ಸಂಖ್ಯೆ : ಸ.ಅ.ಸಂ./ಸಾ.ಅ.ಬಾ./ಇ-ಪೋರ್ಟಲ್/ಸಿಆರ್-01/2025-26
ದಿನಾಂಕ : 02-03-2026

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026-27 ನೇ ಸಾಲಿನಲ್ಲಿ **ಬಾಗಲಕೋಟ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬಾಗಲಕೋಟ, ಬಾದಾಮಿ ಹಾಗೂ ಹುನಗುಂದ (ಸಾ.ಅ.) ವಲಯಗಳಲ್ಲಿ ವಿವಿಧ ಯೋಜನೆಗಳಡಿ ಕೈಗೊಳ್ಳುವ ನೆಡುತೋಪು ಬೆಳೆಸುವುದು / ನಿರ್ವಹಣೆ ಸಸಿ ಬೆಳೆಸುವುದು / ನಿರ್ವಹಣೆ ಹಾಗೂ ಇತರೆ ಚಟುವಟಿಕೆಗಳಿಗಾಗಿ** ಅರಣ್ಯ ಗುತ್ತಿಗೆದಾರರೆಂದು ಹೆಸರನ್ನು ನೊಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರಿಗೆ ಮಾತ್ರ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

1) ಟೆಂಡರ್ ಷರತ್ತು ಸಂಬಂಧ ವಿವರ / ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ : 17-03-2026 ರ ಅಪರಾಹ್ನ 1.00 ಘಂಟೆಗೆ, 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 18-03-2026 ರ ಅಪರಾಹ್ನ 1.00 ಘಂಟೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 20-03-2026 ರ ಅಪರಾಹ್ನ 1.00 ಘಂಟೆಗೆ, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 20-03-2026 ರ ಅಪರಾಹ್ನ 3.00 ಘಂಟೆಗೆ.

ಸದರಿ ಟೆಂಡರ್‌ಗಳಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇದ್ದಲ್ಲಿ ಇದನ್ನೇ ಮರು ಟೆಂಡರ್ ಪ್ರಕಟಣೆ ಎಂದು ತಿಳಿದು ದಿನಾಂಕ : **23-03-2026** ರವರೆಗೆ ವಿಸ್ತರಿಸಿ ಇ-ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ,
ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/626/ಮಣಿಪಾಲ್/2025-26

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-42) ಡ್ರಾ ಮಾರ್ಚ್ 04ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DU 274794 (IRINJALAKKUDA)

Consolation Prize Rs.5,000/-
DN 274794 DO 274794 DP 274794 DR 274794
DS 274794 DT 274794 DV 274794 DW 274794
DX 274794 DY 274794 DZ 274794

2nd Prize Rs.30,00,000/- [30 Lakhs]
DO 232045 (THIRUVANANTHAPURAM)

3rd Prize Rs.5,00,000/- [5 Lakhs]
DN 793700 (IDUKKI)

FOR THE TICKETS ENDING WITH THE FOLLOWING NUMBERS

4th Prize Rs.5,000/-
0675 0937 1172 1354 1620 2334 2377 2381 3129 3692
3716 4897 4906 5200 6359 7729 7952 8110 8499

5th Prize Rs.2,000/-
0335 4266 5904 6907 6973 9496

6th Prize Rs.1,000/-
1412 1572 1600 2510 2538 3001 3029 3217 3710 4223
4376 4874 4891 5368 6568 6748 7479 7572 7597 7632
8397 8476 9175 9265 9920

7th Prize Rs.500/-
0069 0225 0242 0283 0286 0556 0704 0777 1074 1090
1101 1235 1394 1547 1833 1958 1965 2030 2054 2253
2301 2351 2402 2695 2771 3183 3328 4006 4027 4138
4308 4426 4455 4480 4485 4626 4634 4739 4783 5008
5110 5308 5549 5644 5663 6030 6122 6455 6462 6677
7037 7388 7400 7442 7517 7574 7611 7705 7817 7864
7919 8321 8440 8519 8527 8557 8697 8753 8828 8990
9061 9329 9436 9449 9611 9806

8th Prize Rs.200/-
0114 0685 0946 1033 1085 1129 1131 1139 1200 1361
1395 1593 1717 1746 1781 1877 2118 2368 2395 2599
2963 3095 3113 3203 3389 3421 3457 3464 3520 3688
3837 3939 4083 4198 4231 4306 4323 4348 4409 4431
4500 4593 4629 4757 4832 5017 5038 5074 5171 5199
5352 5451 5562 5590 5875 6015 6063 6157 6185 6236
6310 6388 6423 6430 6519 6613 6787 6911 7320 7408
7606 7677 7679 7704 7805 7825 7961 8046 8076 8336
8430 8642 8742 8890 9015 9091 9128 9191 9211 9248
9284 9405 9618 9807 9905 9998

9th Prize Rs.100/-
0030 0039 0076 0106 0125 0358 0428 0436 0551 0578
0589 0602 0733 0843 1006 1037 1041 1118 1221 1302
1313 1528 1539 1769 1885 2072 2079 2116 2154 2327
2541 2558 2707 2853 2980 3043 3099 3152 3186 3193
3236 3585 3607 3623 3700 3791 3810 3821 3879 3887
3907 3973 4107 4185 4208 4361 4416 4439 4459 4496
4501 4559 4572 4864 4931 5101 5128 5202 5265 5341
5349 5383 5469 5569 5629 5635 5655 5717 5728 5911
5982 6207 6225 6339 6375 6428 6533 6551 6624 6669
6702 6753 6782 6948 7096 7186 7273 7366 7447 7627
7675 7829 7853 7981 8149 8173 8197 8246 8349 8358
8390 8412 8501 8507 8626 8821 8843 8844 8867 8898
9000 9083 9152 9162 9249 9300 9301 9384 9409 9512
9521 9559 9643 9728 9768 9792 9985 9988

ಕೇರಳ ಸರ್ಕಾರದಿಂದ 5 ವರ್ಷಗಳಲ್ಲಿ 150 ಸೇತುವೆ ಪೂರ್ಣ

ಎರಡು ಪಂಚಾಯತ್ ಸಂಪರ್ಕಿಸುವ ರಾಮಂಚಿರ ಸೇತುವೆ ಲೋಕಾರ್ಪಣೆ

ಕಾಸರಗೋಡು: ಕೇರಳ ಸರಕಾರವು ರಸ್ತೆ ಅಭಿವೃದ್ಧಿಗೆ 35,000 ಕೋಟಿ ರೂ. ಗಳನ್ನು ಖರ್ಚು ಮಾಡಿದೆ ಮತ್ತು ಕಳೆದ ಐದು ವರ್ಷಗಳಲ್ಲಿ 150 ಸೇತುವೆಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಪ್ರವಾಸೋದ್ಯಮ ಮತ್ತು ಲೋಕೋಪಯೋಗಿ ಖಾತೆ ಸಚಿವ ಪಿ.ಎ.ಮುಹಮ್ಮದ್ ರಿಯಾಸ್ ಹೇಳಿದ್ದಾರೆ.

ಚೆರುವತ್ತೂರು ಮತ್ತು ಕಯ್ಯೂರು ಚೀಮೇನಿ ಗ್ರಾಮ ಪಂಚಾಯತ್‌ಗಳನ್ನು ಸಂಪರ್ಕಿಸುವ ರಾಮಂಚಿರ ಸೇತುವೆಯನ್ನು ಆನ್‌ಲೈನ್‌ನಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.



ಕೆಐಐಎಫ್‌ಬಿ ಮೂಲಕ ಅಭಿವೃದ್ಧಿ ಚಟುವಟಿಕೆಗಳು ಕಳೆದ ಕೆಲವು ವರ್ಷಗಳಲ್ಲಿ ರಾಜ್ಯದಲ್ಲಿ ಪ್ರಮುಖ ಬದಲಾವಣೆಗಳನ್ನು ತಂದಿವೆ ಎಂದು ಸಚಿವರು ಹೇಳಿದರು. ಕೆಐಐಎಫ್‌ಬಿ ಯೋಜನೆಗಳು ದೀರ್ಘಾವಧಿಯ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ ಎಂದು ಅವರು ನುಡಿದರು.

ವಿವಿಧ ಯೋಜನೆಗಳು ಹಲವು ಪ್ರದೇಶಗಳಲ್ಲಿ ಸಾರಿಗೆ ಸೌಲಭ್ಯಗಳನ್ನು ಸುಧಾರಿಸಿವೆ ಮತ್ತು ಪ್ರವಾಸೋದ್ಯಮ ಸಾಮರ್ಥ್ಯವನ್ನು ಹೆಚ್ಚಿಸಿವೆ. ಕೆಐಐಎಫ್‌ಬಿ ಮೂಲಕ ಲೋಕೋಪಯೋಗಿ ಇಲಾಖೆಯಲ್ಲಿ 528 ಯೋಜನೆಗಳ ಮೂಲಕ 46,145 ಕೋಟಿ ರೂ.ಗಳ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು.

ವಿವಿಧ ಕಾರಣಗಳಿಂದ ಸ್ಥಗಿತಗೊಂಡಿದ್ದ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಯನ್ನು ಪುನರಾರಂಭಿಸಲು ಸಾಧ್ಯವಾಗಿದೆ. ರಾಜ್ಯದ ಸಮಗ್ರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಮತ್ತು ಮೂಲಸೌಕರ್ಯ ಅಭಿವೃದ್ಧಿಯನ್ನು ಬಲಪಡಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಮಾಹಿತಿ ನೀಡಿದರು.

2016-17ನೇ ಸಾಲಿನ ಬಜೆಟ್‌ನಲ್ಲಿ 10 ಕೋಟಿ ರೂ.ಗಳನ್ನು ನಿಗದಿಪಡಿಸಲಾದ ಈ ಯೋಜನೆಗೆ 2020 ರಲ್ಲಿ 14.72 ಕೋಟಿ ರೂ.ಗಳ ಆರ್ಥಿಕ ಅನುಮೋದನೆ ಮತ್ತು 2021ರಲ್ಲಿ 16.25 ಕೋಟಿ ರೂ.ಗಳ ತಾಂತ್ರಿಕ ಅನುಮೋದನೆ ದೊರೆಯಿತು. ಕೆಆರ್‌ಎಫ್‌ಬಿ ಕಾಸರಗೋಡು ವಿಭಾಗದ ಮೇಲ್ವಿಚಾರಣೆಯಲ್ಲಿ ನಿರ್ಮಾಣ ಪೂರ್ಣಗೊಂಡಿತು.

274.15 ಮೀಟರ್ ಉದ್ದದ ಈ ಸೇತುವೆ 9.70 ಮೀಟರ್ ಅಗಲವನ್ನು ಹೊಂದಿದ್ದು, ಇದರಲ್ಲಿ 7.5 ಮೀಟರ್ ಅಗಲದ ಕ್ಯಾರೇಜ್ ವೇ ಮತ್ತು 1.5 ಮೀಟರ್ ಅಗಲದ ಪಾದಚಾರಿ ಮಾರ್ಗವೂ ಸೇರಿದೆ. 40 ಕಂಬಗಳು ಮತ್ತು 19 ಸ್ಪ್ಯಾನ್‌ಗಳನ್ನು ಹಾಗೂ ಸಬ್‌ಸ್ಟ್ರಕ್ಚರ್ ಹೊಂದಿರುವ ಈ ಸೇತುವೆಯು ಮೂರು ಅಪ್ರೋಚ್‌ಗಳನ್ನು ಹೊಂದಿದೆ. ಇದರ ಜೊತೆಗೆ 400 ಮೀಟರ್ ಅಪ್ರೋಚ್ ರಸ್ತೆಯನ್ನು ಬಿಎಂ - ಬಿಸಿ ಮಾನದಂಡಗಳಿಗೆ ಅನುಗುಣವಾಗಿ ನಿರ್ಮಿಸಲಾಗಿದೆ. ಹೊಸ ಸೇತುವೆಯು ಈ ಪ್ರದೇಶದಲ್ಲಿ ಸಾರಿಗೆ ಸೌಲಭ್ಯಗಳನ್ನು ಸುಧಾರಿಸಿದೆ.

ಸಮಾರಂಭದಲ್ಲಿ ತೃಕ್ಕರೀಪ್ಪೂರ ಶಾಸಕ ಎಂ.ರಾಜಗೋಪಾಲನ್ ಅಧ್ಯಕ್ಷತೆ ವಹಿಸಿದ್ದರು. ನೀಲೇಶ್ವರ ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಸಿ.ಎಂ. ಮೀನಾಕುಮಾರಿ, ಚೆರುವತ್ತೂರು ಗ್ರಾಪಂ ಅಧ್ಯಕ್ಷ ಟಿ.ನಾರಾಯಣನ್, ಕಯ್ಯೂರು ಚೀಮೇನಿ ಗ್ರಾಪಂ ಅಧ್ಯಕ್ಷೆ ಎಂ.ಪಿ.ವಿ.ಜಾನಕಿ, ಬ್ಲಾಕ್ ಪಂಚಾಯತ್ ಸದಸ್ಯ ಕೆ.ರಾಜು, ಗ್ರಾಮ ಪಂಚಾಯತ್ ಸದಸ್ಯರಾದ ರಜಿತಾ, ಶಶಿಧರನ್, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಪಿ.ಜನಾರ್ದನನ್, ಕೆ.ವಿ.ಸುಧಾಕರನ್, ಸಿ.ವಿ.ಕೊತ್ತಯ್ಯರಾಜ್ ಮಾತನಾಡಿದರು.

ಸೇತುವೆಯ ಸಕಾಲಿಕ ಕಾಮಗಾರಿಗೆ ನೇತೃತ್ವ ವಹಿಸಿದ ಗುತ್ತಿಗೆದಾರರು, ಇಂಜಿನಿಯರ್‌ಗಳು ಮತ್ತು ಸಹಾಯಕ ಇಂಜಿನಿಯರ್‌ಗಳನ್ನು ಸನ್ಮಾನಿಸಲಾಯಿತು. ಕೆಆರ್‌ಎಫ್‌ಬಿ ಕಾರ್ಯನಿರ್ವಾಹಕ ಇಂಜಿನಿಯರ್ ಸಿ.ಜೆ. ಕೃಷ್ಣನ್ ಸ್ವಾಗತಿಸಿ, ಕೆಆರ್‌ಎಫ್‌ಬಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಕೆ.ಜಯದೀಪ್ ಕುಮಾರ್ ವಂದಿಸಿದರು.

ತುಳು ಅಧಿಕೃತ ಭಾಷೆ : ಆಂಧ್ರಪ್ರದೇಶ ಅಧ್ಯಯನ ವರದಿ ಸರಕಾರಕ್ಕೆ ಸಲ್ಲಿಕೆ

ಮಂಗಳೂರು : ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸುವ ಪ್ರಸ್ತಾವದ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದಲ್ಲಿ ಹೆಚ್ಚುವರಿ ಅಧಿಕೃತ ಭಾಷೆಯನ್ನು ಘೋಷಿಸುವ ಸಂದರ್ಭದಲ್ಲಿ ಅನುಸರಿಸಿರುವ ಮಾನದಂಡಗಳ ಬಗ್ಗೆ ಅಧ್ಯಯನ ನಡೆಸಲು ಸರಕಾರ ನೇಮಿಸಿರುವ ಸಮಿತಿಯು ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿದೆ.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ನಿರ್ದೇಶಕಿ ಕೆ.ಎಮ್ ಗಾಯತ್ರಿ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅವರ ಉಪಸ್ಥಿತಿಯಲ್ಲಿ 6 ಮಂದಿ ಸದಸ್ಯರ ಅಧ್ಯಯನ ಸಮಿತಿಯನ್ನು ಸರಕಾರ ನೇಮಿಸಿತ್ತು.

ಸದ್ರಿ ಸಮಿತಿಯು ಜನವರಿ 19 ಹಾಗೂ 20ರಂದು ಆಂಧ್ರಪ್ರದೇಶ ರಾಜ್ಯದ ಸಚಿವಾಲಯ, ವಿವಿಧ ಇಲಾಖೆ, ಕಚೇರಿಗಳಿಗೆ ಭೇಟಿ ನೀಡಿ ಆಂದ್ರಪ್ರದೇಶದಲ್ಲಿ ಉರ್ದು ಭಾಷೆಯನ್ನು ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸುವ ಸಂದರ್ಭದಲ್ಲಿ ಕೈಗೊಂಡ ಮಾನದಂಡಗಳು ಹಾಗೂ ವಿಧಿವಿಧಾನಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಿದ್ದಪಡಿಸಿತ್ತು.

ಸಮಿತಿಯು ವರದಿಯನ್ನು ವಿಕಾಸ ಸೌಧದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಜೆ.ಮಂಜುನಾಥ್ ಅವರಿಗೆ ಅಧ್ಯಯನ ಸಮಿತಿ ಸದಸ್ಯರು ಸಲ್ಲಿಸಿದರು. ತುಳುಭಾಷೆಯ ಹಿನ್ನೆಲೆ ಹಾಗೂ ಚರಿತ್ರೆಯ ಬಗೆಗಿನ ಪ್ರಸ್ತಾವನೆಯನ್ನು ಕೂಡ ವರದಿ ಜೊತೆಗೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಡಾ. ಬಿ.ಎಸ್. ಮಂಜುನಾಥ ಸ್ವಾಮಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್, ಅಧ್ಯಯನ ಸಮಿತಿ ಸದಸ್ಯರಾದ ಯಕ್ಷಗಾನ ಅಕಾಡೆಮಿಯ ಸದಸ್ಯ ಸುಧಾಕರ ಶೆಟ್ಟಿ , ಕಾನೂನು ಇಲಾಖೆಯ ಉಪಕಾರ್ಯದರ್ಶಿ ವನಿತಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಉಪಕಾರ್ಯದರ್ಶಿ ಮೂರ್ತಿ ಕೆ.ಎನ್ , ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನ ಕಾರ್ಯದರ್ಶಿ ಕೆ.ಎಮ್. ಶುಭಶ್ರೀ, ಕರ್ನಾಟಕ ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ಉಪಸ್ಥಿತರಿದ್ದರು.

ಪಿಸ್ತೂಲ್ ತೋರಿಸಿ ಬೆದರಿಸಿದ್ದ ವ್ಯಕ್ತಿ ವಶಕ್ಕೆ

ಪುತ್ತೂರು: ಪುತ್ತೂರಿನ ದರ್ಬೆಯಲ್ಲಿ ಬೈಕ್‌ನಲ್ಲಿ ಬಂದ ಸವಾರ ವ್ಯಕ್ತಿಯೊಬ್ಬರಿಗೆ ಪಿಸ್ತೂಲ್ ತೋರಿಸಿ ಬೆದರಿಕೆಯೊಡ್ಡಿರುವ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.



ಮುಕ್ವೆ ನಿವಾಸಿ ಮಹಮ್ಮದ್ ಶಫೀಕ್ (19) ಎಂಬಾತ ವಶದಲ್ಲಿರುವ ಆರೋಪಿ. ಮಾ.2ರಂದು ಕೂರ್ನಡ್ಕ ನಿವಾಸಿ ಅಬ್ದುಲ್ ಹಕೀಂ ಎಂಬ ವ್ಯಕ್ತಿಗೆ ದರ್ಬೆ ರಿಲಾಯನ್ಸ್ ಬಳಿ ದ್ವಿಚಕ್ರ ವಾಹನದಲ್ಲಿ ಹೆಲ್ಮೆಟ್ ಧರಿಸದೆ ಬಂದ ಸುಮಾರು 30 ವರ್ಷ ಪ್ರಾಯದ ಅಪರಿಚಿತ ವ್ಯಕ್ತಿಯೊಬ್ಬರು ಪಿಸ್ತೂಲ್ ತೋರಿಸಿ ಗುಂಡು ಹೊಡೆಯಲು ಪ್ರಯತ್ನಿಸಿದ್ದರು ಎಂಬ ದೂರಿಗೆ ಸಂಬಂಧಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಈ ಕುರಿತು ತನಿಖೆ ಕೈಗೆತ್ತಿಕೊಂಡ ಪೊಲೀಸರು ಪೇಟೆಯಾದ್ಯಂತ ಸಿಸಿ ಕ್ಯಾಮರಗಳನ್ನು ಪರಿಶೀಲಿಸಿದಾಗ ದರ್ಬೆ ಸುಬ್ರಹ್ಮಣ್ಯ ರಸ್ತೆಯಲ್ಲಿ ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಆತ ದರ್ಬೆಯಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸ್ತವ್ಯವಿದ್ದು ಅಲ್ಲಿಂದ ಪಿಸ್ತೂಲ್ ಅನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ.

ವ್ಯಕ್ತಿಯ ಸದ್ಗುಣ, ಧರ್ಮನಿಷ್ಠೆಯೇ ಶಾಶ್ವತ ಕೀರ್ತಿಯನ್ನು ನೀಡಬಲ್ಲವು



ಮೂಡುಬಿದಿರೆ: ಅಂತರ್ ಕಾಲೇಜು ಫೆಸ್ಟ್‌ಗಳು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿ. ಪಠ್ಯಪುಸ್ತಕದ ಜ್ಞಾನದ ಜೊತೆಯಲ್ಲಿ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಾಸ, ಆತ್ಮವಿಶ್ವಾಸ ಮತ್ತು ಸಂವಹನ ಕೌಶಲ್ಯಗಳನ್ನು ಉದ್ದೀಪನ ಗೊಳಿಸುತ್ತವೆ ಎಂದು ಬ್ಯಾಂಕ್ ಆಫ್ ಬರೋಡಾ ಮಂಗಳೂರು ಶಾಖೆಯ ಮುಖ್ಯ ವ್ಯವಸ್ಥಾಪಕ ಡಾ. ಪಿ. ಬಾಲಮುರಗನ್ ನುಡಿದರು.

ಅವರು ಆಳ್ವಾಸ್ ಸ್ವಾಯತ್ತ ಪದವಿ ಕಾಲೇಜಿನ ಹಿಂದಿ ವಿಭಾಗ ಕುವೆಂಪು ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ 'ಉಮಂಗ್ 2026' ಅಂತರ್ ಕಾಲೇಜು ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ಜೀವನದಲ್ಲಿ ಸೋಲು- ಗೆಲುವುಗಳು ಸ್ಪರ್ಧೆಯ ಭಾಗ. ಗೆಲುವು ನಮ್ಮನ್ನು ಹುರಿದಂಬಿಸಿದರೆ, ಸೋಲು ನಮಗೆ ಪಾಠ ಕಲಿಸುತ್ತದೆ. ಎರಡನ್ನೂ ಸಮಭಾವದಿಂದ ಸ್ವೀಕರಿಸಬೇಕು ಎಂದುವಿದ್ಯಾರ್ಥಿಗಳಿಗೆಕರೆನೀಡಿದರು.ಮಹಾಭಾರತವನ್ನು ಉಲ್ಲೇಖಿಸಿದ ಅವರು, ಯುದ್ಧಭೂಮಿಯಲ್ಲಿ ಜಯ ಅರ್ಜುನನ ಪಾಲಾದರೂ, ಜನರ ಹೃದಯಗಳಲ್ಲಿ ಕರ್ಣನ ವ್ಯಕ್ತಿತ್ವವೇ ಅಜರಾಮರವಾಗಿ ಉಳಿ ಯಿತು. ವ್ಯಕ್ತಿಯ ಸದ್ಗುಣಗಳು ಮತ್ತು ಧರ್ಮನಿಷ್ಠೆಯೇ ಅವನಿಗೆ ಶಾಶ್ವತ ಕೀರ್ತಿಯನ್ನು ನೀಡಬಲ್ಲವು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ ಆಳ್ವ, ಭಾರತವು ಭಾಷಾ ವೈವಿಧ್ಯತೆಯ ಶ್ರೀಮಂತ ನಾಡು. ಇಲ್ಲಿ ಕನ್ನಡ, ತಮಿಳು, ತೆಲುಗು, ಮರಾಠಿ, ಗುಜರಾತಿ ಸೇರಿದಂತೆ ಅನೇಕ ಭಾಷೆಗಳನ್ನಾಡುವ ಜನರಿದ್ದಾರೆ. ಇಂತಹ ವೈವಿಧ್ಯತೆಯ ನಡುವೆ ಹಿಂದಿ ಭಾಷೆ ಜನರನ್ನು ಒಗ್ಗೂಡಿಸುವ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತದೆ, ಎಂದು ಅವರು ಅಭಿಪ್ರಾಯಪಟ್ಟರು. ಪ್ರತಿ ಭಾಷೆಯೂ ತನ್ನದೇ ಆದ ಸಾಂಸ್ಕೃತಿಕ ವಿಭಿನ್ನತೆಯನ್ನು ಹೊಂದಿದೆ. ಒಂದು ಭಾಷೆಯನ್ನು ಕಲಿಯುವುದರಿಂದ ಮತ್ತೊಂದು ಭಾಷೆ ಹಿಂದುಳಿಯದು, ಬದಲಿಗೆ ನಮ್ಮ ಜ್ಞಾನವಿಸ್ತಾರವಾಗುತ್ತದೆ ಎಂದು ಹೇಳಿದರು.

ಸಭಾಕಾರ್ಯಕ್ರಮದ ನಂತರ ಅಂತರ್ ಕಾಲೇಜು ಸ್ಪರ್ಧೆಗಳು ನಡೆದವು.

ಸಂಜೆ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಆಳ್ವಾಸ್ ಕಾಲೇಜಿನ ಪರೀಕ್ಷಾಂಗ ವಿಭಾಗದ ಕುಲಸಚಿವ ಡಾ ನಾರಾಯಣ್ ಶೆಟ್ಟಿ ಮಾತನಾಡಿದರು. ಉಡುಪಿಯ ಪೂರ್ಣ ಪ್ರಜ್ಞಾ ಕಾಲೇಜು ಸಮಗ್ರ ಚಾಂಪಿಯನ್ ಆಗಿ ಹೊರಹೊಮ್ಮಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಕುರಿಯನ್, ಆಡಳಿತಾಧಿಕಾರಿ ಬಾಲಕೃಷ್ಣ ಶೆಟ್ಟಿ, ಬ್ಯಾಂಕ್ ಆಫ್ ಬರೋಡಾ ಮೂಡುಬಿದಿರೆ ಶಾಖೆಯ ಹಿರಿಯ ವ್ಯವಸ್ಥಾಪಕ ಪ್ರಭು ಕುಮಾರ್, ವಿಭಾಗದ ಮುಖ್ಯಸ್ಥ ಡಾ ದತ್ತಾತ್ರೇಯ ಹೆಗಡೆ, ವಿದ್ಯಾರ್ಥಿ ಸಂಯೋಜಕರಾದ ಲಿಖಿತ್, ದಿಶಾ ಕೋಟ್ಯಾನ್ ಇದ್ದರು. ವಿನೆಟ್ ವಾಸ್ ಕಾರ್ಯಕ್ರಮ ನಿರ್ವಹಿಸಿದರು.

ದ್ವಿತೀಯ ಪಿಯುಸಿ ಪರೀಕ್ಷಾ ಹಾಜರಾತಿ

ಮಂಗಳೂರು: ಜಿಲ್ಲೆಯಲ್ಲಿ ಬುಧವಾರ ನಡೆದ ದ್ವಿತೀಯ ಪಿ.ಯು.ಸಿ ಉರ್ದು ಪರೀಕ್ಷೆಗೆ ಎಲ್ಲಾ 15 ವಿದ್ಯಾರ್ಥಿಗಳು ಹಾಜರಾಗಿದ್ದರು. ಸಂಸ್ಕೃತ ಪರೀಕ್ಷೆಗೆ 7 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಫ್ರೆಂಚ್ ಪರೀಕ್ಷೆಗೆ ಓರ್ವ ವಿದ್ಯಾರ್ಥಿ ಗೈರು ಹಾಜರಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.



ಮಂಗಳೂರು ನಗರಕ್ಕೆ ಒಳಚರಂಡಿ ವ್ಯವಸ್ಥೆಯ ನಿರ್ಮಾಣ, ಉನ್ನತೀಕರಣ ಕಾಮಗಾರಿಗೆ ಬುಧವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್‌ಗುಂಡೂರಾವ್ ಪಚ್ಚನಾಡಿ ಎಸ್‌ಟಿಪಿಯಲ್ಲಿ ಚಾಲನೆ ನೀಡಿದರು. ಈ ಸಂದರ್ಭ ವಿಧಾನ ಪರಿಷತ್ ಸದಸ್ಯ ಐವನ್‌ಡಿಸೋಜ, ಮೆಸ್ಕಾಂ ಅಧ್ಯಕ್ಷ ಹರೀಶ್‌ಕುಮಾರ್ ಮತ್ತು ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪ
ಕೋಳಿಕರಣ್‌ಗೆ ಜೈಲು, ದಂಡ ಶಿಕ್ಷೆ

ಸುಳ್ಯ: ಕಳ್ಳತನ ಪ್ರಕರಣವೊಂದರಲ್ಲಿ ಪೊಲೀಸರು ಬಂಧಿಸಿ ಆಸ್ಪತ್ರೆಗೆ ತಪಾಸಣೆಗೆ ಕರೆ ತಂದ ಸಂದರ್ಭದಲ್ಲಿ ಆಸ್ಪತ್ರೆಯಿಂದ ತಪ್ಪಿಸಿ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪ ಎದುರಿಸುತ್ತಿದ್ದ ಆರೋಪಿಗೆ ಆರೋಪ ಸಾಬೀತಾದ ಹಿನ್ನಲೆಯಲ್ಲಿ ನ್ಯಾಯಾಧೀಶರು ಜೈಲು ಶಿಕ್ಷೆ ವಿಧಿಸಿದ್ದಾರೆ. ರಾಘವನ್ ಕೇಥೀಶ್ವರನ್ ಯಾನೆ ಕೋಳಿಕರಣ್ ಎಂಬಾತನ ವಿರುದ್ಧ ಸುಳ್ಯ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ವಾರೆಂಟ್ ಹೊರಡಿಸಿತ್ತು. 5.10.2024ರಂದು ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವ ಸಲುವಾಗಿ ವೈದ್ಯಕೀಯ ತಪಾಸಣೆಗಾಗಿ ಮಧ್ಯಾಹ್ನ 3.25ರ ವೇಳೆಗೆ ಸುಳ್ಯ ಸರಕಾರಿ ಆಸ್ಪತ್ರೆಗೆ ಪೊಲೀಸ್ ಸಿಬ್ಬಂದಿಗಳಾದ ಲಕ್ಷ್ಮಣ ದೊಡವಾಡ ಮತ್ತು ರಮೇಶ್ ಕರೆದುಕೊಂಡು ಹೋಗಿದ್ದರು. ಈ ಸಂದರ್ಭ ಆರೋಪಿ ತಪ್ಪಿಸಿಕೊಂಡು ಓಡಿ ಹೋಗಿ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ. ಪ್ರಕರಣದ ವಿಚಾರಣೆ ನಡೆಸಿದ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶ ಬಿ. ಮೋಹನ್ ಬಾಬು ಆರೋಪಿಯ ದೋಷಿ ಎಂದು ತೀರ್ಪು ನೀಡಿ, ಮಾ.3ರಂದು ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಿದ್ದಾರೆ. 3 ವರ್ಷಗಳ ಸಾದಾ ಕಾರಾಗೃಹ ಶಿಕ್ಷೆ ಮತ್ತು ರೂ.10 ಸಾವಿರ ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ 6 ತಿಂಗಳ ಸಾದಾ ಕಾರಾಗೃಹ ಶಿಕ್ಷೆ, ಸಾರ್ವಜನಿಕ ಕರ್ತವ್ಯಕ್ಕೆ ಅಡ್ಡಿಪಡಿಸಲು ಮಾಡಿದ ಹಲ್ಲೆಗಾಗಿ



1 ವರ್ಷಗಳ ಸಾದಾ ಕಾರಾಗೃಹ ಶಿಕ್ಷೆ ಮತ್ತು ರೂ.10 ಸಾವಿರ ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ 3 ತಿಂಗಳ ಸಾದಾ ಕಾರಾಗೃಹ ಶಿಕ್ಷೆ, ಕಾನೂನುಬದ್ಧವಾಗಿ ವಶಕ್ಕೆ ಪಡೆಯುವ ಸಂದರ್ಭದಲ್ಲಿ ತಡೆಯುಂಟು ಮಾಡಿದ್ದಕ್ಕಾಗಿ 1 ವರ್ಷಗಳ ಸಾದಾ ಕಾರಾಗೃಹ ಶಿಕ್ಷೆ ಮತ್ತು ರೂ.10 ಸಾವಿರ ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ 3 ತಿಂಗಳ ಸಾದಾ ಕಾರಾಗೃಹ ಶಿಕ್ಷೆ ವಿಧಿಸಲಾಗಿದ್ದು, ಈ ಎಲ್ಲಾ ಶಿಕ್ಷೆಗಳು ಏಕ ಕಾಲಕ್ಕೆ ಜಾರಿಯಾಗತಕ್ಕದ್ದು ಎಂದು ನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ. ಸರಕಾರದ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರಾದ ಪ್ರೀತಿ ಎಂ.ಸಿ. ವಾದ ಮಂಡಿಸಿದ್ದರು.

ಮಡಿಕೇರಿ ಕಡಮಕಲ್, ಪುಷ್ಪಗಿರಿ–ಬೀದಳ್ಳಿ ಮೂಲಕ ಸುಬ್ರಹ್ಮಣ್ಯಕ್ಕೆ ರಸ್ತೆ ಸಂಪರ್ಕ ಯೋಜನೆ
ಪರಿಸರವಾದಿಗಳಿಂದ ಮತ್ತೆ ತೀವ್ರ ಆಕ್ಷೇಪ

ಮಡಿಕೇರಿ: ಮಡಿಕೇರಿಯಿಂದ ಕಡಮಕಲ್ ಮೂಲಕ ಹಾಗೂ ಸೋಮವಾರಪೇಟೆಯ ಪುಷ್ಪಗಿರಿ–ಬೀದಳ್ಳಿ ಮೂಲಕ ಸುಬ್ರಹ್ಮಣ್ಯಕ್ಕೆ ರಸ್ತೆ ಸಂಪರ್ಕ ಕಲ್ಪಿಸುವ ಯೋಜನೆಗೆ ಪರಿಸರವಾದಿಗಳಿಂದ ಮತ್ತೆ ಆಕ್ಷೇಪ ವ್ಯಕ್ತವಾಗಿದೆ.

ಕೊಡಗು ಜಿಲ್ಲೆಯ ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯದ ಮೂಲಕ ರಸ್ತೆ ನಿರ್ಮಿಸುವ ದೀರ್ಘ ಕಾಲದಿಂದ ಬಾಕಿ ಉಳಿದಿರುವ ಪ್ರಸ್ತಾವನೆಯನ್ನು ಪುನರುಜ್ಜೀವನಗೊಳಿಸುವ ಯಾವುದೇ ಕ್ರಮವನ್ನು ತಿರಸ್ಕರಿಸುವಂತೆ ಕೊಡಗು ಏಕೀಕರಣ ರಂಗ, ಕರ್ನಾಟಕ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಮನವಿ ಮಾಡಿದೆ.

ಸಚಿವರಿಗೆ ಸಲ್ಲಿಸಿರುವ ಮನವಿಯಲ್ಲಿ, ಹಿಂದಿನ ಕಾನೂನು ಅಡೆತಡೆಗಳು ಮತ್ತು ನ್ಯಾಯಾಲಯದ ಮಧ್ಯಸ್ಥಿಕೆಗಳನ್ನು ಪ್ರಸ್ತಾಪಿಸಲಾಗಿದ್ದು, ರಸ್ತೆ ಯೋಜನೆಯನ್ನು ಕೈಗೆತ್ತಿಕೊಳ್ಳಲು ನಡೆಯುತ್ತಿರುವ ಹೊಸ ಪ್ರಯತ್ನಗಳನ್ನು ಸಂಸ್ಥೆ ಬಲವಾಗಿ ಆಕ್ಷೇಪಿಸಿದೆ.

ಕೊಡಗಿನ ವಣಚಲುವಿನಿಂದ ಕಡಮಕಲ್‌ಗೆ ರಸ್ತೆ ನಿರ್ಮಿಸುವ ವಿವಾದ 2012ರಲ್ಲಿ ಸುಪ್ರೀಂ ಕೋರ್ಟ್‌ಗೆ ತಲುಪಿತ್ತು. ನ್ಯಾಯಾಲಯದ ನಿರ್ದೇಶನಗಳ ಮೇರೆಗೆ, ಕೇಂದ್ರ ಸಬಲೀಕರಣ ಸಮಿತಿ (ಸಿಇಸಿ) ಸಳ ಪರಿಶೀಲನೆ ನಡೆಸಿತ್ತು ಮತ್ತು ನಂತರ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳ ಕೆಲವು ಕ್ರಮಗಳು ಸುಪ್ರೀಂ ಕೋರ್ಟ್‌ನ ಆದೇಶಗಳನ್ನು ಉಲ್ಲಂಘಿಸಿವೆ ಎಂದು ವರದಿ ಮಾಡಿತ್ತು.



ದಿಗಂತ ವಿಶೇಷ

ಪ್ರಸ್ತಾವಿತ ರಸ್ತೆ ಜೋಡಣೆಗೆ ಸಂಬಂಧಿಸಿದ ಆಪಾದಿತ ಉಲ್ಲಂಘನೆಗಳ ಕುರಿತು ಅನುಸರಣಾ ಕ್ರಮಗಳನ್ನು ಪ್ರಾರಂಭಿಸಲು ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ (ಎನ್‌ಜಿಟಿ) ಡಿಸೆಂಬರ್ 2022ರ ನಿರ್ದೇಶನವನ್ನೂ ಕೊಡಗು ಏಕೀಕರಣ ರಂಗ ತನ್ನ ಮನವಿಯಲ್ಲಿ ಉಲ್ಲೇಖಿಸಿದೆ.

ಈ ಬೆಳವಣಿಗೆಗಳ ಹೊರತಾಗಿಯೂ, ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯದ ಮೂಲಕ ರಸ್ತೆ ಯೋಜನೆಯನ್ನು ಪುನರಾರಂಭಿಸಲು ಹೊಸ ಪ್ರಯತ್ನಗಳು ನಡೆಯುತ್ತಿವೆ. ಮಡಿಕೇರಿ ಶಾಸಕ ಮಂಥರ್ ಗೌಡ ಅವರು ಈ ಕಾಮಗಾರಿಗೆ ಬಜೆಟ್‌ನಲ್ಲಿ ಅನುದಾನ ಹಂಚಿಕೆ ಮಾಡುವಂತೆ ಕೋರಿದ್ದಾರೆ ಎಂದು ಏಕೀಕರಣ ರಂಗ ಕಳವಳ ವ್ಯಕ್ತಪಡಿಸಿದೆ.

ಕೊಡಗು ಏಕೀಕರಣ ರಂಗವು ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿ ಅಭಯಾರಣ್ಯಗಳ ಒಳಗೆ ಹೊಸ ರಸ್ತೆಗಳ ನಿರ್ಮಾಣವನ್ನು ನಿಷೇಧಿಸುವ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ನೀತಿಯನ್ನು ಸಹ ಉಲ್ಲೇಖಿಸಿದೆ. ಹಿರಿಯ ಅಧಿಕಾರಿಗಳು ಈ ಹಿಂದೆ ಸುಪ್ರೀಂ ಕೋರ್ಟ್‌ಗೆ ರಸ್ತೆಗೆ ಅನುಮತಿ ನಿರಾಕರಿಸಿ ಅಫಿಡವಿಟ್ ಸಲ್ಲಿಸಿರುವುದರ ಬಗ್ಗೆಯೂ ಅದು ಗಮನಸೆಳೆದಿದೆ.

ವಿವಾದಾತ್ಮಕ ಯೋಜನೆಗೆ ಯಾವುದೇ ಆರ್ಥಿಕ ಅಥವಾ ಆಡಳಿತಾತ್ಮಕ ಅನುಮೋದನೆ ನೀಡದಂತೆ ಅರಣ್ಯ ಸಚಿವರು ಮಧ್ಯಪ್ರವೇಶಿಸಬೇಕೆಂದು ಸಂಘಟನೆ ಒತ್ತಾಯಿಸಿದೆ.

ಕೊಡಗಿನ ಜನತೆ ದಕ್ಷಿಣ ಕನ್ನಡದ ಪ್ರಸಿದ್ಧ ಪುಣ್ಯಕ್ಷೇತ್ರವಾದ ಸುಬ್ರಹ್ಮಣ್ಯಕ್ಕೆ ತೆರಳಲು ಪ್ರಸಕ್ತ ಸುಳ್ಯ ಮಾರ್ಗವಾಗಿ ನೂರಕ್ಕೂ ಹೆಚ್ಚು ಕಿ.ಮೀ.ಗಳನ್ನು ಕ್ರಮಿಸಬೇಕಿದ್ದು, ವಣಚಲು–ಕಡಮಕಲ್ ಸಂಪರ್ಕ ರಸ್ತೆ ನಿರ್ಮಾವಾದರೆ ಮಡಿಕೇರಿಯಿಂದ ಕೇವಲ 40ಕಿ.ಮೀ.ಗಿಂತಲೂ ಕಡಿಮೆ ಅಂತರದಿಂದ ಕ್ಷೇತ್ರವನ್ನು ತಲುಪಬಹುದಾಗಿದೆ.

ಈ ರಸ್ತೆ ನಿರ್ಮಾಣದ ಬೇಡಿಕೆ ಹಲವು ವರ್ಷಗಳಾಗಿದ್ದು, ಡಿ.ಎಸ್.ಮಾದಪ್ಪ ಅವರು ಮಡಿಕೇರಿ ಕ್ಷೇತ್ರದ ಶಾಸಕರಾಗಿದ್ದ ಸಂದರ್ಭ ಶ್ರಮದಾನದ ಮೂಲಕ ಕಚ್ಚಾ ರಸ್ತೆ ನಿರ್ಮಿಸಿದ್ದರು. ಆದಾದ ಬಳಿಕ ಶಾಸಕದ್ವಯರಾಗಿದ್ದ ಕೆ.ಜಿ.ಬೋಪಯ್ಯ ಹಾಗೂ ಅಪ್ಪಚ್ಚುರಂಜನ್ ನೇತೃತ್ವದಲ್ಲಿ ಬೃಹತ್ ಮಟ್ಟದ ಹೋರಾಟದೊಂದಿಗೆ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಲಾಗಿತ್ತು. ಆದರೆ ಪರಿಸರವಾದಿಗಳು ಹಾಗೂ ಅರಣ್ಯ ಇಲಾಖೆಯ ವಿರೋಧದಿಂದಾಗಿ ಯೋಜನೆ ಸ್ಥಗಿತಗೊಂಡಿತ್ತಲ್ಲದೆ, ಶಾಸಕದ್ವಯರು ಹಾಗೂ ಹಲವು ಬಿಜೆಪಿ ನಾಯಕರು ನ್ಯಾಯಾಲಯದ ಮೆಟ್ಟಿಲೇರುವಂತಾಗಿತ್ತು.

ಇದೀಗ ಶಾಸಕ ಡಾ. ಮಂಥರ್ ಗೌಡ ಅವರು ಮತ್ತೆ ಈ ಯೋಜನೆಯನ್ನು ಪುನರುಜ್ಜೀವನಗೊಳಿಸಲು ಆಸಕ್ತಿವಹಿಸಿದ್ದು, ಸದನದಲ್ಲೂ ಈ ಬಗ್ಗೆ ಪ್ರಸ್ತಾಪಿಸಿದ್ದರು. ಆದರೆ ಇದೀಗ ಇದಕ್ಕೂ ವಿರೋಧ ವ್ಯಕ್ತವಾಗಿದೆ.

> **ಕೊಡಗಿನ ಗಾಳಿಬೀಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಕಡಮಕಲ್ ಗ್ರಾಮದಲ್ಲಿ 200 ಜನಸಂಖ್ಯೆ ಇದ್ದು, ಬಹುತೇಕ ಕೂಲಿ ಕಾರ್ಮಿಕರೇ ವಾಸಿಸುತ್ತಿದ್ದಾರೆ. ಅವರು ಸುಳ್ಯ ಮೂಲಕ 80 ಕಿ.ಮೀ ಕ್ರಮಿಸಿ ಜಿಲ್ಲಾ ಕೇಂದ್ರ ಮಡಿಕೇರಿಗೆ ಬಂದು ಕೆಲಸ ಮಾಡಿಸಿಕೊಂಡು ಹೋಗುವುದು ಅಸಾಧ್ಯದ ಕೆಲಸವಾಗಿದೆ. ಅಲ್ಲದೆ ಆ ಗ್ರಾಮಕ್ಕೆ ಇಲ್ಲಿಯವರೆಗೆ ಸಮರ್ಪಕವಾದ ಯಾವುದೇ ಮೂಲಭೂತ ವ್ಯವಸ್ಥೆ ಕಲ್ಪಿಸಲು ಸಾಧ್ಯವಾಗಿಲ್ಲ.**
> ■ ಡಾ. ಮಂಥರ್ ಗೌಡ

> **ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯ ಪಶ್ಚಿಮ ಘಟ್ಟಗಳ ಜೀವವೈವಿಧ್ಯದ ಹಾಟ್‌ಸ್ಪಾಟ್ ಆಗಿದೆ. 102.59 ಚದರ ಕಿ.ಮೀ. ವಿಸ್ತೀರ್ಣ ಹೊಂದಿರುವ ಇದು ಅಪರೂಪದ ಪಕ್ಷಿಗಳು, ನಿತ್ಯಹರಿದ್ವರ್ಣ ಕಾಡುಗಳು, ಶೋಲಾ ಹುಲ್ಲುಗಾವಲುಗಳು, ಮಲಬಾರ್ ದೈತ್ಯ ಅಳಿಲು, ಏಷ್ಯನ್ ಆನೆ, ಕಾಡು ನಾಯಿಗಳು ಮತ್ತು ನೀಲಗಿರಿ ಫ್ಲೈಕ್ಯಾಚರ್ ಪಕ್ಷಿಗಳನ್ನು ಹೊಂದಿರುವ ಅಪರೂಪದ ಜೀವವೈವಿಧ್ಯ ತಾಣವಾಗಿದೆ. ಇಲ್ಲಿ ರಸ್ತೆ ನಿರ್ಮಾಣವಾದಲ್ಲಿ ಪರಿಸರ ಅಸಮತೋಲನಕ್ಕೆ ಕಾರಣವಾಗಲಿದೆ**
> ■ ಎ.ಎ.ತಮ್ಮು ಪೂವಯ್ಯ, ಕೊಡಗು ಏಕೀಕರಣ ರಂಗ


ನೆಕ್ರಾಜೆ ಶ್ರೀ ಸಂತಾನ ಗೋಪಾಲಕೃಷ್ಣ ದೇವಳ ನೂತನ ಗೋಶಾಲೆಗೆ ಗೋವುಗಳ ಪ್ರವೇಶ

ಬದಿಯಡ್ಕ: ನೆಕ್ರಾಜೆ ಶ್ರೀ ಸಂತಾನ ಗೋಪಾಲಕೃಷ್ಣ ದೇವಸ್ಥಾನದ ವಸುದೈವ ಕುಟುಂಬಕಂ ಗೋಪ್ರಿಯರು ಗೋವಿಂದ ಪುಣ್ಯಕೋಟಿ ಗೋಶಾಲೆ ಇದರ ಪ್ರವೇಶೋತ್ಸವ ಬುಧವಾರ ಬೆಳಗ್ಗೆ ಶುಭ ಮುಹೂರ್ತದಲ್ಲಿ ಜರಗಿತು.

ಶ್ರೀ ಗೋಪಾಲಕೃಷ್ಣನ ಸನ್ನಿಧಿಯಲ್ಲಿ ಗೋವುಗಳಿಗೆ ಪೂಜೆಯನ್ನು ಸಲ್ಲಿಸಿ ಅರ್ಚಕರ ನೇತೃತ್ವದಲ್ಲಿ ಪ್ರದಕ್ಷಿಣೆಯೊಂದಿಗೆ ಗೋವುಗಳನ್ನು ಗೋಶಾಲೆಗೆ ಶ್ರದ್ಧಾಭಕ್ತಿಯಿಂದ ಬರಮಾಡಿಕೊಳ್ಳಲಾಯಿತು.

ಗೋಪೂಜೆಯನ್ನು ಸಲ್ಲಿಸಿ ಗೋಗ್ರಾಸ ನೀಡಲಾಯಿತು. ಪ್ರಮುಖರಾದ ಗೋಪಾಲಕೃಷ್ಣ ಪೈ ಬದಿಯಡ್ಕ, ಡಾ.ಶ್ರೀನಿಧಿ ಸರಳಾಯ ಬದಿಯಡ್ಕ, ಆಡಳಿತ ಮೊಕ್ತೇಸರ ಪ್ರತಾಪ್ ರೈ ನೆಕ್ರಾಜೆ, ಆಡಳಿತ ಸೇವಾ ಸಮಿತಿಯ ಅಧ್ಯಕ್ಷ ವಿಶ್ವನಾಥ ಶೆಟ್ಟಿ ನೆಕ್ರಾಜೆ, ಪ್ರಧಾನ ಕಾರ್ಯದರ್ಶಿ ಗಣೇಶ ವತ್ಸ ನೆಕ್ರಾಜೆ, ಕೋಶಾಧಿಕಾರಿ ಬಾಲಕೃಷ್ಣ ನಾಯ್ಕ್ ಕೊಡಾಕೊಳ್ಳು, ಉಪಾಧ್ಯಕ್ಷ ನಿತ್ಯಾನಂದ ನೆಲ್ಲಿತ್ತಲ, ಗೋಶಾಲೆ ಸಮಿತಿಯ ಗೌರವಾಧ್ಯಕ್ಷ ರಾಮಚಂದ್ರ ಬಲ್ಲಾಳ್ ನೆಕ್ರಾಜೆ, ಕಾರ್ಯಾಧ್ಯಕ್ಷ ಗೋಪಾಲಕೃಷ್ಣ ಮಣಿಯಾಣಿ, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಸುವರ್ಣ ನೆಕ್ರಾಜೆ, ಕೋಶಾಧಿಕಾರಿ ರಮೇಶ್ ಮಾವಿನಕಟ್ಟೆ, ಭಗವದ್ಭಕ್ತರು ಪಾಲ್ಗೊಂಡಿದ್ದರು.





ಕೊಂಡೆವೂರು ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಹಾಗೂ ಶ್ರೀ ಕ್ಷೇತ್ರದ ಆಡಳಿತ ಸೇವಾ ಸಮಿತಿಯ ಅಧ್ಯಕ್ಷ ವಿಶ್ವನಾಥ ಶೆಟ್ಟಿ ನೆಕ್ರಾಜೆ ಗೋವುಗಳನ್ನು ಉದಾರವಾಗಿ ನೀಡಿದ್ದರು. ಊರಿನ ಹಾಗೂ ಪರವೂರ ಭಗವದ್ಭಕ್ತರ ಹಾಗೂ ಗೋಪ್ರೇಮಿಗಳ ಸಹಕಾರದೊಂದಿಗೆ ಗೋಶಾಲೆ ನಿರ್ಮಿಸಲಾಯಿತು.

ಅಜ್ಜಾವರ ಗ್ರಾಮದ ಅಕ್ಷರ ದೇಗುಲದಲ್ಲಿ ವಿಶಿಷ್ಟ ಕಾರ್ಯಕ್ರಮ
ಸರ್ಕಾರಿ ಶಾಲೆಯಲ್ಲಿ ಇಂಗ್ಲೀಷ್ ಹಬ್ಬ

ಸುಳ್ಯ: ಸುಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಕಾಂತಮಂಗಲದ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಆಶಾ ಅಂಬೆಕಲ್ಲು ನೇತೃತ್ವದ ವಿದ್ಯಾರ್ಥಿಗಳು ತಮ್ಮ ಇಂಗ್ಲಿಷ್ ಜ್ಞಾನಗಳು ಮತ್ತು ಬರವಣಿಗೆಯ 'ವಿಶೇಷ ಇಂಗ್ಲೀಷ್ ಹಬ್ಬ' ಕಾರ್ಯಕ್ರಮ ಬುಧವಾರ ಶಾಲೆ ಸಭಾಂಗಣದಲ್ಲಿ ನಡೆಯಿತು.



ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಎಸ್. ಹರಗಿ ಉದ್ಘಾಟಿಸಿ, ನಾನು ಕನ್ನಡ ಭಾಷೆಯಲ್ಲಿ ಕಲಿತಿದ್ದರೂ ಜೀವನ ರೂಪಿಸಿದ್ದು ಆಂಗ್ಲ ಭಾಷೆಯಾಗಿದೆ. ಇಂದು ಖಾಸಗಿ ಸಂಸ್ಥೆಗಳತ್ತ ಮುಖ ಮಾಡುತ್ತಿರುವ ಸಂದರ್ಭದಲ್ಲಿ ತಾಲೂಕಿನಲ್ಲಿ ಈ ರೀತಿಯಲ್ಲಿ ಒಂದು ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳನ್ನು ಸಿದ್ಧಪಡಿಸಿರುವುದು ಸುಲಭದ ಮಾತಲ್ಲ. ಇಂತಹ ಸಂದರ್ಭದಲ್ಲಿ ಓರ್ವ ಶಿಕ್ಷಕಿ ನಿರಂತರವಾಗಿ ವಿದ್ಯಾರ್ಥಿಗಳನ್ನು ಇಂಗ್ಲಿಷ್ ಸುಲಲಿತವಾಗಿ ಮಾತನಾಡಲು ಹಾಗೂ ಅಭ್ಯಾಸಿಸಲು ಪೂರಕವಾತಾವರಣವನ್ನು ನಿರ್ಮಿಸಿದ್ದಾರೆ. ಪ್ರತೀ ವರ್ಷ ತಮ್ಮ ಕೈಯಿಂದ ವೆಚ್ಚ ಮಾಡಿ ಇಂಗ್ಲಿಷ್ ಹಬ್ಬದಲ್ಲಿ ವಿದ್ಯಾರ್ಥಿಗಳನ್ನು ಪ್ರತಿಭೆಯನ್ನು ರೂಪಿಸುವ ಶಿಕ್ಷಕಿಯ ನಡೆ ಮಾದರಿಯಾಗಿದೆ. ಇಂತಹ ಕಾರ್ಯಕ್ರಮ ಪ್ರತಿಯೊಂದು ಶಾಲೆಗಳಲ್ಲಿ ನಡೆಯಲಿ ಎಂದು ಆಶಿಸಿದರು.

ಶಾಲಾ ಮುಖ್ಯ ಶಿಕ್ಷಕಿ ಪ್ರವೀಣಾಲತ ವಹಿಸಿದ್ದರು. ವೇದಿಕೆಯಲ್ಲಿ ಶಿಕ್ಷಣ ಸಂಯೋಜಕರಾದ ಉದಯ, ಧನಲಕ್ಷ್ಮಿ ಕುದ್ಪಾಜೆ, ಅಜ್ಜಾವರದ ಸರಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಗೋಪಿನಾಥ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಮೀರಾ, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಮನಮೋಹನ ಪುತ್ತಿಲ ಉಪಸ್ಥಿತರಿದ್ದರು. ಶಿಕ್ಷಕಿ ಆಶಾ ಅಂಬೆಕಲ್ಲು ಪ್ರಸ್ತಾವಿಸಿದರು. ವಿದ್ಯಾರ್ಥಿನಿಯರಾದ ಜೆಸ್ಸಿಕಾ ಸ್ವಾಗತಿಸಿ, ರಶ್ಮಿ ಯು.ಜೆ. ವಂದಿಸಿದರು. ರಮ್ಯಶ್ರೀ ಕಾರ್ಯಕ್ರಮ ನಿರ್ವಹಿಸಿದರು.

ಮೆರುಗು ತಂದ ಕಲಿಕೋಪಕರಣ

ಸರಕಾರಿ ಶಾಲೆಯಲ್ಲಿ ಇಂಗ್ಲೀಷನ್ನು ಸುಲಲಿತವಾಗಿ ಕಲಿಸಿ ಇಂಗ್ಲೀಷ್ ಹಬ್ಬದ ಮೂಲಕ ಕಿರುಚಿತ್ರ, ರೂಪಕ, ಇಟಾಲಿಯನ್ ಶೈಲಿಯ ಇಂಗ್ಲೀಷ್ ಹಸ್ತಾಕ್ಷರಗಳು ಸೇರಿದಂತೆ ಇಂಗ್ಲೀಷ್ ಕಲಿಕೆಗೆ ಪೂರಕವಾದ ಇಂಗ್ಲೀಷ್ ಕಲಿಕೆಗೆ ಪೂರಕವಾದ ಉಪಕರಣಗಳನ್ನು ವಿದ್ಯಾರ್ಥಿಗಳೇ ಸಿದ್ಧಪಡಿಸಿ ಅವುಗಳ ಪ್ರದರ್ಶನ, ಇಂಗ್ಲೀಷ್ ಮಾತುಗಳ ಸ್ಫುಟತೆ ಗಮನ ಸೆಳೆಯಿತು.

ಮೌಲ್ಯಾಧಾರಿತ ಶಿಕ್ಷಣಕ್ಕೆ ಬದ್ಧವಾದ ಪ್ರತಿಷ್ಠಿತ ವಿದ್ಯಾಸಂಸ್ಥೆಗೆ ಗರಿ | ಐತಿಹಾಸಿಕ ಮೈಲುಗಲ್ಲು ಎಂದ ಕಾಮತ್
53 ವರ್ಷ ಇತಿಹಾಸದ ಕೆನರಾ ಕಾಲೇಜ್‌ಗೆ ಸ್ವಾಯತ್ತ ಸ್ಥಾನಮಾನ

ಮಂಗಳೂರು: ಮೌಲ್ಯಾಧಾರಿತ ಶಿಕ್ಷಣಕ್ಕೆ ಬದ್ಧವಾದ ಮಂಗಳೂರಿನ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಕೆನರಾ ಕಾಲೇಜಿಗೆ ಶೈಕ್ಷಣಿಕ ವರ್ಷ 2025–26ನೇ ಸಾಲಿನಲ್ಲಿ ಸ್ವಾಯತ್ತ ಸ್ಥಾನಮಾನ (ಅಟೋನಮಸ್ ಸ್ಟೇಟಸ್) ಲಭಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಕೆನರಾ ಹೈಸ್ಕೂಲ್ ಅಸೋಸಿಯೇಷನ್ ಅಧ್ಯಕ್ಷ ಡಿ.ವಾಸುದೇವ ಕಾಮತ್ ಅವರು, ಶೈಕ್ಷಣಿಕ ಕ್ಷೇತ್ರದಲ್ಲಿ ಕಳೆದ 53 ವರ್ಷಗಳಿಂದ ಉನ್ನತ ಸಾಧನೆ ಮಾಡುವ ಮೂಲಕ ಗುರುತಿಸಿಕೊಂಡಿರುವ ಕೆನರಾ ಕಾಲೇಜಿಗೆ ಸ್ವಾಯತ್ತ ಸ್ಥಾನಮಾನ ಲಭಿಸಿರುವುದು ಪಯಣದಲ್ಲಿ ಐತಿಹಾಸಿಕ ಮೈಲುಗಲ್ಲಾಗಿದೆ ಎಂದರು.

ಸ್ವಾಯತ್ತ ಸ್ಥಾನಮಾನದಿಂದಾಗಿ ಸಮಾಜ, ಕೈಗಾರಿಕೆ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ವೇಗವಾಗಿ ನಡೆಯುತ್ತಿರುವ ಬದಲಾವಣೆಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ರೂಪಿಸುವ, ಪರಿಷ್ಕರಿಸುವ ಅಧಿಕಾರ ಸಿಗಲಿದೆ. ಇದರ ಮೂಲಕ ಸಮಕಾಲೀನ ಕೌಶಲ್ಯ ಆಧಾರಿತ ಬಹುಶಾಖಾ ಮತ್ತು ವೃತ್ತಿ ಕೇಂದ್ರಿತ ಪಠ್ಯಕ್ರಮಗಳನ್ನು ಪರಿಚಯಿಸಿ ವಿದ್ಯಾರ್ಥಿಗಳಿಗೆ ಭವಿಷ್ಯದ ಮತ್ತು ಪ್ರಸ್ತುತ ಆವಶ್ಯಕತೆಗಳಿಗೆ ಯೋಗ್ಯವಾದ ಶಿಕ್ಷಣವನ್ನು ಒದಗಿಸಲು ಸಾಧ್ಯವಾಗುತ್ತದೆ ಎಂದವರು ತಿಳಿಸಿದರು.



ನ್ಯಾಕ್‌ನಿಂದ ಎ ಗ್ರೇಡ್ ಮಾನ್ಯತೆ

ಕೆನರಾ ಕಾಲೇಜು ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್) ನಿಂದ 3.21 ಸಿ.ಜಿ.ಪಿ.ಎ, 'ಎ' ಶ್ರೇಣಿ ಮಾನ್ಯತೆ ಪಡೆದಿದ್ದು ಇದು ಇಲ್ಲಿನ ಶೈಕ್ಷಣಿಕ ಗುಣಮಟ್ಟ ಮತ್ತು ಶ್ರೇಷ್ಠತೆ ಹಾಗೂ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಈ ಸಂಸ್ಥೆ 1569 ವಿದ್ಯಾರ್ಥಿಗಳು ಮತ್ತು 85 ಅರ್ಹ ಉಪನ್ಯಾಸಕ ಹಾಗೂ ಸಿಬ್ಬಂದಿಯೊಂದಿಗೆ ಶಿಸ್ತು, ಹೊಸತನ ಮತ್ತು ಸಮಗ್ರ ವ್ಯಕ್ತಿತ್ವ ವಿಕಸನವನ್ನು ಉತ್ತೇಜಿಸುವ ಚೈತನ್ಯಯುತವಾದ ಶೈಕ್ಷಣಿಕ ವಾತಾವರಣವನ್ನು ಕಾಪಾಡಿಕೊಂಡು ಬಂದಿದೆ ಎಂದವರು ಹೇಳಿದರು.

ಹೊಸ ಕೋರ್ಸ್‌ಗಳಿಗೆ ಪ್ರಸ್ತಾವನೆ

ಕೈಗಾರಿಕಾ ಅವಶ್ಯಕತೆಗಳಿಗೆ ಹೊಂದಿಕೊಂಡ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಕಾಲೇಜು ಪ್ರಸ್ತಾವನೆಗಳನ್ನು ಸಲ್ಲಿಸಿದೆ. ಲಾಜಿಸ್ಟಿಕ್ಸ್ ನಲ್ಲಿ ಬಿಬಿಎ, ಡೇಟಾ ಅನಾಲಿಟಿಕ್ಸ್‌ನಲ್ಲಿ ಬಿಸಿಎ, ಬಿಸಿನೆಸ್ ಡೇಟಾ ಅನಾಲಿಟಿಕ್ಸ್‌ನಲ್ಲಿ ಬಿ.ಕಾಂ ಕೋರ್ಸ್‌ಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಮಾರುಕಟ್ಟೆ ಅಗತ್ಯಗಳಿಗೆ ಹೊಂದುವ ಉದ್ದೇಶದಿಂದ ಲಾಜಿಸ್ಟಿಕ್ಸ್ ನಿರ್ವಹಣೆ ಡೇಟಾ ಸೈನ್ಸ್ ಮತ್ತು ವ್ಯವಹಾರ ವಿಶ್ಲೇಷಣೆ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶವನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದೆ ಎಂದು ಅಸೋಸಿಯೇಷನ್ ಕೋಶಾಧಿಕಾರಿ ಸಿಎ ಜಗನ್ನಾಥ ಕಾಮತ್ ಹೇಳಿದರು.

ಸರ್ಕಾರ, ಕಾರ್ಪೊರೇಟ್ ಸಂಸ್ಥೆಗಳು, ಶೈಕ್ಷಣಿಕ, ಉದ್ಯಮ ಹಾಗೂ ವಿವಿಧ ವೃತ್ತಿಪರ ಕ್ಷೇತ್ರಗಳಲ್ಲಿ ದೇಶವಿದೇಶಗಳಲ್ಲಿ ಗೌರವಾನ್ವಿತ ಹುದ್ದೆಗಳನ್ನು ಅಲಂಕರಿಸಿರುವ ಬಲಿಷ್ಠ ಹಾಗೂ ನೈಪುಣ್ಯತೆ ಹೊಂದಿದ ಹಳೇ ವಿದ್ಯಾರ್ಥಿ ಸಂಘವು ಈ ಕಾಲೇಜಿನ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಅಸೋಸಿಯೇಶನ್ ಗೌರವ ಕಾರ್ಯದರ್ಶಿ ಎಂ.ರಂಗನಾಥ ಭಟ್ ಹೇಳಿದರು.

ಅಸೋಸಿಯೇಶನ್ ಜತೆ ಕಾರ್ಯದರ್ಶಿ ಟಿ. ಗೋಪಾಲಕೃಷ್ಣ ಶೆಣೈ, ಕೋಶಾಧಿಕಾರಿ ಸಿಎ ಎಂ. ವಾಮನ್ ಕಾಮತ್, ಸಂಚಾಲಕ ಹಾಗೂ ಕೆನರಾ ವಿಕಾಸ್ ಕಾಲೇಜಿನ ಕೋ– ಆರ್ಡಿನೇಟರ್ ಬಸ್ತಿ ಪುರುಷೋತ್ತಮ ಶೆಣೈ, ಪ್ರಾಂಶುಪಾಲರಾದ ಡಾ.ಪ್ರೇಮಲತಾ ವಿ. ಉಪಸ್ಥಿತರಿದ್ದರು.

12 ರ್‍ಯಾಂಕ್‌ಗಳ ಸಾಧನೆ

ಕೆನರಾ ಕಾಲೇಜು 53 ವರ್ಷಗಳ ಪಯಣದಲ್ಲಿ ವಿಶ್ವವಿದ್ಯಾನಿಲಯ ಮಟ್ಟದಲ್ಲಿ 135 ರ್‍ಯಾಂಕ್‌ಗಳನ್ನು ಗಳಿಸಿ ನಿರಂತರವಾಗಿ ಶೈಕ್ಷಣಿಕ ಶ್ರೇಷ್ಠತೆಯನ್ನು ಸಾಧಿಸಿದೆ. ವಿಶೇಷವಾಗಿ 2023 –24 ಮತ್ತು 2024– 25ನೇ ಶೈಕ್ಷಣಿಕ ವರ್ಷಗಳಲ್ಲಿ ವಿಶ್ವವಿದ್ಯಾನಿಲಯ ಮಟ್ಟದ 12 ರ್‍ಯಾಂಕ್‌ಗಳನ್ನು ಪಡೆದಿದೆ. ಬಿಸಿಎ ಮತ್ತು ಎಂಸಿಎ ವಿಭಾಗಗಳು ಸಂಸ್ಥೆಯ ಪ್ರಮುಖ ಶೈಕ್ಷಣಿಕ ಆಧಾರ ಸ್ಥಂಭಗಳಾಗಿದ್ದು ಗುಣಮಟ್ಟದ ಬೋಧನೆ, ಕೈಗಾರಿಕಾ ಆಧಾರಿತ ಪಠ್ಯಕ್ರಮ ಮತ್ತು ಕಂಪ್ಯೂಟರ್ ಅನ್ವಯಿಕ ಹಾಗೂ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆಗೆ ಭದ್ರಬುನಾದಿಯಾಗಿದೆ.

ಕಿರುಸುದ್ದಿ

ವುಮೆನ್ ಕ್ರಿಕೆಟ್ ಪ್ರೀಮಿಯರ್ ಲೀಗ್ ನಮ್ಮ ಉಡುಪಿ ತಂಡಕ್ಕೆ ಪ್ರಶಸ್ತಿ

ಮಂಗಳೂರು: ಇತ್ತೀಚೆಗೆ ಬೆಂಗಳೂರಿನ ಬನಶಂಕರಿಯ ಪಿಇಎಸ್ ಯುನಿವರ್ಸಿಟಿ ಕ್ರಿಕೆಟ್ ಮೈದಾನದಲ್ಲಿ ನಡೆದ ವುಮೆನ್ ಕ್ರಿಕೆಟ್ ಪ್ರೀಮಿಯರ್ ಲೀಗ್‌ನಲ್ಲಿ ರೋಷನ್ ಮಾಲಕತ್ವದ ನಮ್ಮ ಉಡುಪಿ ತಂಡ ಜಯಗಳಿಸುವುದರೊಂದಿಗೆ ರೂ.15 ಲಕ್ಷ ನಗದಿನೊಂದಿಗೆ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ. ಬುಧವಾರ ಮಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಡಬ್ಲ್ಯುಸಿಪಿಎಲ್ ಸಂಸ್ಥಾಪಕ ಅಧ್ಯಕ್ಷ ಡಾ.ಸಂದೀಪ್ ಪಿ ಶೆಟ್ಟಿ, ಆಲ್ ಇಂಡಿಯಾ ಮೆನ್ಸ್ ಆಂಡ್ ವುಮೆನ್ಸ್ ಸ್ಪೋರ್ಟ್ಸ್ ಚಾರಿಟೇಬಲ್ ಟ್ರಸ್ಟ್ ಈ ಪಂದ್ಯಾಟ ಆಯೋಜಿಸಲಾಗಿತ್ತು. ಅತ್ಯಂತ ಶಿಸ್ತುಬದ್ಧವಾಗಿ ಈ ಟೂರ್ನಮೆಂಟ್ ನಡೆದಿದೆ. ಅಂಬಿಕ ಬಿ.ಎನ್. ಮಾಲಕತ್ವದ ಮೈಸೂರು ಮಹಾರಾಣೀಸ್ ತಂಡ ರನ್ನರ್ ಅಪ್ ಪ್ರಶಸ್ತಿಯೊಂದಿಗೆ 12 ಲಕ್ಷ ರೂ. ನಗದು ಹಾಗೂ ಟ್ರೋಫಿ ಪಡೆದುಕೊಂಡಿತು ಎಂದರು. ಮಂಡ್ಯ ಕ್ವೀನ್, ಕಿತ್ತೂರು ಕೇಸರಿ 11, ಮೈಸೂರು ಮಹಾರಾಣೀಸ್, ನಮ್ಮ ಉಡುಪಿ, ಮಂಗಳೂರು ಟೈಗರ್ಸ್, ರಾಯಲ್ ಎಮರಾಲ್ಡ್ ಬೆಂಗಳೂರು ತಂಡಗಳು ಭಾಗವಹಿಸಿದ್ದವು. ಭಾರತದಲ್ಲಿ ಮೊದಲ ಬಾರಿಗೆ 125 ಗ್ರಾಂ ಹಾರ್ಡ್ ಟೆನ್ನಿಸ್ ಬಾಲ್ ಬಳಸಿ ಎರಡನೇ ವರ್ಷದ ವೃತ್ತಿಪರ ಮಹಿಳಾ ಟೂರ್ನಿ ನಡೆಯಿತು. ಎಲ್ಲರ ಸಹಕಾರದೊಂದಿಗೆ ಅತ್ಯಂತ ಯಶಸ್ವಿಯಾಗಿ ಈ ಪಂದ್ಯಾಟ ನಡೆದಿದ್ದು, ಮೆಚ್ಚುಗೆಗೆ ಪಾತ್ರವಾಗಿದೆ ಎಂದವರು ಹೇಳಿದರು.ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಪಮ್ಮಿ ಕೊಡಿಯಾಲ್‌ಬೈಲ್, ರೋಷನ್ ರೈ, ಜಯಂತಿ ಶೆಟ್ಟಿ, ಭರತ್, ಕಿಶೋರ್, ಅಶೋಕ್ ಉಪಸ್ಥಿತರಿದ್ದರು.

ಮಾ.8ರಂದು ಮಂಗಳೂರಿನಲ್ಲಿ ಶೃಂಗಸಭೆ

ಮಂಗಳೂರು: ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಾದ್ಯಾಲಯದಲ್ಲಿ ಮಾ.7 ಮತ್ತು 8ರಂದು ಮಂಗಳೂರು ಡಿಸೈನ್ ಶೃಂಗ ಸಭೆ–2026ನ್ನು ಆಯೋಜಿಸಲಾಗಿದೆ ಎಂದು ಕಾರ್ಯಕ್ರಮ ನಿರ್ದೇಶಕಿ ಅಲ್ಕ ಮನೋಜ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ದಿ ಓಹಾನಾ ಕಮ್ಯುನಿಟಿ ಫೌಂಡೇಶನ್, ಸಂತ ಅಲೋಶಿಯಸ್ ಸಂಸ್ಥೆಯ ಸಹಯೋಗದಲ್ಲಿ ಈ ಶೃಂಗ ಸಭೆನಡೆಯಲಿದೆ. ಡೆಸಿಗ್ನಿಂಗ್ ಫ್ಯೂಚರ್, ಹೋನರಿಂಗ್ ಹೆರಿಟೇಜ್ ಕುರಿತ ಈ ಶೃಂಗ ಸಭೆಯಲ್ಲಿ ನಗರ ಯೋಜನೆ, ಸಮುದ್ರ ಪರಿಸರ ಶಾಸ್ತ್ರ, ತ್ಯಾಜ್ಯ ನಿರ್ವಹಣೆ, ಪಾರಂಪರಿಕ ಸಂರಕ್ಷಣೆ ಹಾಗೂ ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳ 20ಕ್ಕೂ ಹೆಚ್ಚು ತಜ್ಞರು ಭಾಗವಹಿಸಲಿದ್ದಾರೆ ಎಂದರು. ನಗರದಲ್ಲಿ ಕಳೆದ ಕೆಲವು ವರ್ಷಗಳಿಂದಾಗುತ್ತಿರುವ ಮಳೆ ಅನಾಹುತ, ಪ್ರವಾಹ, ತಾಪಮಾನದಲ್ಲಿನ ವ್ಯತ್ಯಯ, ತ್ಯಾಜ್ಯ ನಿರ್ವಹಣೆಯ ಸವಾಲುಗಳು ಇತ್ಯಾದಿ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ಪ್ರಮುಖ ಭಾಷಣಕಾರರಾಗಿ ಮಂಗಳೂರು ಸ್ಮಾರ್ಟ್ ಸಿಟಿ ಲಿ. ಜನರಲ್ ಮ್ಯಾನೇಜರ್ ಅರುಣ್ ಪ್ರಭಾ, ಬೇರೂ ಕಲೆಕ್ಟಿವ್ ಸಂಸ್ಥಾಪಕಿ ದಿವ್ಯ ಹೆಗ್ಡೆ, ವಾಸ್ತುಶಿಲ್ಪಿ ಅಶೋಕ್ ಮೆಂಡೋನ್ಸಾ, ಗ್ರೀನ್ ಎಕ್ಸ್‌ಪರ್ಟ್ಸ್ ಸಂಸ್ಥಾಪಕಿ ಶೆರಾನ್ ಡಿಸೋಜಾ ಮತ್ತಿತರರು ಪಾಲ್ಗೊಳ್ಳುವರು ಎಂದವರು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಂಜಲಿ ರಾವ್, ಚಾರ್ಲಿನ್ ಸಿಕ್ವೇರ ಉಪಸ್ಥಿತರಿದ್ದರು.

ಮಾ.7ರಂದು ಇಫ್ತಾರ್ ಸೌಹಾರ್ದ ಕೂಟ

ಮಂಗಳೂರು: ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಅವರ ನೇತೃತ್ವದಲ್ಲಿ 11ನೇ ವರ್ಷದ ಭಾವೈಕ್ಯತೆಯ ರಂಜಾನ್ ಸಂಭ್ರಮಾಚರಣೆಯ ಇಫ್ತಾರ್ ಸೌಹಾರ್ದ ಕೂಟ ಮಾ.7ರಂದು ನಗರದ ಜೆಪ್ಪು ಮೋರ್ಗನ್ಸ್ ಗೇಟ್‌ನ ಪಾಲೇಮಾರ್ ಗಾರ್ಡನ್‌ನಲ್ಲಿ ಆಯೋಜಿಸಲಾಗಿದೆ. ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಮಾಜಿ ಕಾರ್ಪೊರೇಟರ್ ಜೆ.ನಾಗೇಂದ್ರ ಅವರು, ಅಂದು ಸಂಜೆ 5 ಗಂಟೆಗೆ ಇಫ್ತಾರ್ ಸೌಹಾರ್ದ ಕೂಟ ಸಂಭ್ರಮಾಚರಣೆಯ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ, ಕುದ್ರೋಳಿ ಜುಮ್ಮಾ ಮಸೀದಿಯ ಧರ್ಮಗುರು ಜನಾಬ್ ರಿಯಾಜ್ ಫೈಝಿ ಕಕ್ಕಿಂಜೆ, ಮಂಗಳೂರು ಕ್ರೈಸ್ತ ಧರ್ಮ ಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ರೆ.ಫಾ.ಜೆ.ಬಿ.ಸಲ್ಡಾನಾ, ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ, ಮಾಜಿ ಸಚಿವ ಕೃಷ್ಣ ಜೆ ಪಾಲೆಮಾರ್ ಮತ್ತಿತರರು ಪಾಲ್ಗೊಳ್ಳುವರು ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಎನ್.ಪಿ.ಮನುರಾಜ್, ಮನೀಷ್ ಬೋಳಾರ್, ಇಮ್ರಾನ್ ಕುದ್ರೋಳಿ, ಸತೀಶ್ ಪೆಂಗಲ್, ಚಂದ್ರಹಾಸ ಪೂಜಾರಿ ಕೋಡಿಕಲ್, ಮಹಮ್ಮದ್ ನವಾಜ್ ಮಹಾಕಾಳಿ ಪಡ್ಪು ಉಪಸ್ಥಿತರಿದ್ದರು.

ಮುಲ್ಕಿ: ಹೆದ್ದಾರಿ ತಡೆಬೇಲಿಗೆ ಕಾರು ಡಿಕ್ಕಿ–ಇಬ್ಬರಿಗೆ ಗಾಯ



ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ ಸಮೀಪದ ಕೊಕ್ಕರಕಲ್ ಬಳಿ ಬುಧವಾರ ಸಂಜೆ ಹೆದ್ದಾರಿ ತಡೆಬೇಲಿಗೆ ಕಾರು ಡಿಕ್ಕಿ ಹೊಡೆದು ಕಾರಿನಲ್ಲಿದ್ದ ಇಬ್ಬರು ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು ಸುರತ್ಕಲ್‌ನ ಮಾಂಡೋವಿ ಮೋಟಾರ್ ಪಕ್ಕದ ಈಡನ್ ಅಪಾರ್ಟ್ ಮೆಂಟ್ ನಿವಾಸಿಗಳಾದ ಆಡ್ರಿನ್ ರೀಟಾ ಮತ್ತು ಲಿಯೋನಲ್ ರೋಹನ್. ಗಾಯಾಳುಗಳು ಮುಕ್ಕ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮುಲ್ಕಿ ಕಡೆಯಿಂದ ಸುರತ್ಕಲ್‌ಗೆ ತೆರಳುತ್ತಿದ್ದ ಮಾರುತಿ ವ್ಯಾಗನರ್ ಕಾರು ಕೊಕ್ಕರಲ್ ಬಳಿ ಬರುವಾಗ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಅಪಘಾತ ತಡೆಬೇಲಿಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಕಾರಿನ ಎಡಭಾಗದ ಒಳನುಗ್ಗಿದ ಕಬ್ಬಿಣದ ತಡೆಬೇಲಿ ಸೀಟಿನವರೆಗೆ ತಲುಪಿದೆ. ಈ ಸಂದರ್ಭ ಕಾರಿನಲ್ಲಿದ್ದ ಆಡ್ರಿನ್ ರೀಟಾ ಕಾಲಿಗೆ ಮತ್ತು ಎಡಭಾಗದ ಹಿಂದಿನ ಸೀಟಿನಲ್ಲಿದ್ದ ಲಿಯೋನಲ್ ರೋಹನ್ ಗಾಯಗೊಂಡಿದ್ದಾರೆ. ಅಪಘಾತದಲ್ಲಿ ಕಾರು ತೀವ್ರ ಜಖಂಗೊಂಡಿದ್ದು, ಹೆಜಮಾಡಿ ಟೋಲ್ ಪ್ಲಾಝಾ ಮತ್ತು ಸಂಚಾರಿ ಪೊಲೀಸರು ಸ್ಥಳಕ್ಕೆ ಆಗಮಿಸಿ ಕ್ರೇನ್ ಮೂಲಕ ಕಾರನ್ನು ತೆರವುಗೊಳಿಸಿದ್ದಾರೆ.

ಕಿರುಸುದ್ದಿ

ರಾಷ್ಟ್ರೀಯ ಕುಸ್ತಿ: ರಾಜ್ಯಕ್ಕೆ 3 ಕಂಚು

ಬೆಂಗಳೂರು: ಫೆಬ್ರವರಿ 27ರಿಂದ ಮಾರ್ಚ್ 1ರವರೆಗೆ ತಮಿಳುನಾಡಿನಲ್ಲಿ ನಡೆದ ಅಂಡರ್– 15 ರಾಷ್ಟ್ರೀಯ ಚಾಂಪಿಯನಶಿಪ್ ನಲ್ಲಿ ಕರ್ನಾಟಕದ ಕುಸ್ತಿಪಟುಗಳು ಅತ್ಯುತ್ತಮ ಪ್ರದರ್ಶನ ನೀಡಿ ಮೂರು ಕಂಚಿನ ಪದಕಗಳನ್ನು ರಾಜ್ಯಕ್ಕೆ ತಂದಿದ್ದಾರೆ. ಗ್ರಿಕೋ–ರೋಮನ್ ಶೈಲಿಯ 38 ಕೆಜಿ ವಿಭಾಗದಲ್ಲಿ ಬೆಳಗಾವಿಯ ಸಾಯಿರಾಮ್ ಕಂಚಿನ ಪದಕ ಜಯಿಸಿದರೆ, 52 ಕೆಜಿ ವಿಭಾಗದಲ್ಲಿ ದಾವಣಗೆರೆಯ ಕಾರ್ತಿಕ್ ಕಂಚು ಪಡೆದಿದ್ದಾರೆ. ಮಹಿಳಾ ಕುಸ್ತಿಯ 46 ಕೆಜಿ ವಿಭಾಗದಲ್ಲಿ ಧಾರವಾಡದ ಜಾನವಿ ಕಂಚಿನ ಪದಕವನ್ನು ಗೆದ್ದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಈ ಸಾಧನೆ ಕುರಿತು ಕರ್ನಾಟಕ ಕುಸ್ತಿ ಸಂಘದ ಅಧ್ಯಕ್ಷರಾದ ಬೆಳ್ಳಿಪ್ಪಾಡಿ ಗುಣರಂಜನ್ ಶೆಟ್ಟಿ ಅವರು ಅಭಿನಂದನೆ ಸಲ್ಲಿಸಿ, ರಾಜ್ಯದ ಯುವ ಕ್ರೀಡಾಪಟುಗಳ ಸಾಧನೆ ಶ್ಲಾಘನೀಯವಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಪದಕಗಳನ್ನು ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದರು.

ಶ್ರೇಯಾಂಕ: ಮೊದಲ ಸ್ಥಾನದಲ್ಲೇ ಅಭಿಷೇಕ್

ಮುಂಬೈ: ವಿಶ್ವಕಪ್‌ನಲ್ಲಿ ಕಳಪೆ ಪ್ರದರ್ಶನ ನೀಡಿದ್ದಾದರೂ ಐಸಿಸಿ ಶ್ರೇಯಾಂಕದಲ್ಲಿ ಟಿ20ಯ ನಂಬರ್ 1 ಬ್ಯಾಟರ್ ಆಗಿ ಅಭಿಷೇಕ್ ಶರ್ಮ ಮುಂದುವರಿದಿದ್ದಾರೆ. ವಿಶ್ವಕಪ್ ಪಂದ್ಯಾವಳಿಯ ಸೆಮಿಫೈನಲ್ ಪಂದ್ಯಗಳು ನಡೆಯುತ್ತಿರುವ ಮಧ್ಯೆ ಬುಧವಾರದಂದು ಟಿ20 ಆಟಗಾರರ ಶ್ರೇಯಾಂಕ ಪಟ್ಟಿ ಬಿಡುಗಡೆಯಾಯಿತು. ಇಶಾನ್ ಕಿಶನ್ ಮತ್ತು



ಅಭಿಷೇಕ್ ಶರ್ಮ ರ್‍ಯಾಂಕಿಂಗ್‌ನಲ್ಲಿ ಗಮನ ಸೆಳೆದಿದ್ದಾರೆ. ವಿಶ್ವಕಪ್ ಪಂದ್ಯಾವಳಿಯಲ್ಲಿ ಎರಡು ಶತಕ ಬಾರಿಸಿರುವ ದಾಖಲೆ ಮಾಡಿದ ಪಾಕಿಸ್ತಾನ ಬ್ಯಾಟರ್ ಸಹಿಬ್ಜಾದಾ ಫರ್ಹಾನ್ ಮೊದಲ ಸ್ಥಾನದ ಸನಿಹಕ್ಕೆ ಬಂದಿದ್ದಾರೆ. ಆದಾಗ್ಯೂ ಅಭಿಷೇಕ್ ಶರ್ಮ ಅವರನ್ನು ಮೀರಿಸಿಲ್ಲ. ಪಾಕಿಸ್ತಾನ ತಂಡದ ಮೇಲೆ ಸವಾರಿ ನಡೆಸಿದ್ದ ಇಶಾನ್ ಕಿಶನ್ ಒಂದು ಸ್ಥಾನದ ಬಡ್ತಿಯೊಂದಿಗೆ 4ನೇ ಸ್ಥಾನಕ್ಕೇರಿದ್ದಾರೆ. ಇನ್ನೊಬ್ಬ ಭಾರತೀಯ ತಿಲಕ್ ವರ್ಮಾ ಆರನೇ ಸ್ಥಾನಕ್ಕೇರಿದ್ದಾರೆ. ಡೆವಾಲ್ಡ್ ಬ್ರೇವಿಸ್ 8ನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ. ಬೌಲಿಂಗ್‌ನಲ್ಲಿ ಮೊದಲ ಸ್ಥಾನ ಮುಂದುವರಿಸಿದರೂ ಭಾರತೀಯ ಬೌಲರ್ ವರುಣ್ ಚಕ್ರವರ್ತಿ 18 ಅಂಕಗಳ ಕುಸಿತ ಕಂಡಿದ್ದಾರೆ. 12 ವಿಕೆಟ್ ಕಬಳಿಸಿರುವ ಅವರು, ಪಾಕಿಸ್ತಾನದ ಅಬ್ರಾರ್ ಅವರ ಮೇಲಿದ್ದಾರೆ. ಕಳೆದೆರಡು ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿರುವ ಜಸ್‌ಪ್ರೀತ್ ಬೂಮ್ರಾ 7ನೇ ಸ್ಥಾನಕ್ಕೇರಿದ್ದಾರೆ. ಆರು ಸ್ಥಾನದ ಬಡ್ತಿ ಪಡೆದಿರುವ ಅರ್ಷದೀಪ್ ಸಿಂಗ್ 13ನೇ ಸ್ಥಾನಕ್ಕೇರಿದ್ದಾರೆ. ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಜಿಂಬಾಬ್ವೆಯ ಸಿಕಂದರ್ ರಜಾ ಮೊದಲನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ.

ನಾಳೆ ಐಪಿಎಲ್ ವೇಳಾಪಟ್ಟಿ?

ಹೊಸದಿಲ್ಲಿ: ಐಪಿಎಲ್ ಪಂದ್ಯಾವಳಿಯು ಮಾರ್ಚ್ 28ರಂದು ನಡೆಯಲಿದ್ದು, ಎರಡು ಹಂತದಲ್ಲಿ ವೇಳಾಪಟ್ಟಿ ಬರುವುದಾಗಿ ವರದಿಯಾಗಿದೆ. ಮೊದಲ ಸುತ್ತಿನ ವೇಳಾಪಟ್ಟಿಯು ಶುಕ್ರವಾರ ಅಥವಾ ಶನಿವಾರದಂದು ಬರಲಿದೆ ಎನ್ನಲಾಗುತ್ತಿದೆ. ಬಂಗಾಳ, ತಮಿಳುನಾಡಿನಲ್ಲಿ ಚುನಾವಣೆಗಳಿದ್ದು, ಈ ನಿಟ್ಟಿನಲ್ಲಿ ಐಪಿಎಲ್ ವೇಳಾಪಟ್ಟಿ ಪ್ರಕಟಿಸುವುದಕ್ಕೆ ತಡವಾಗಿದೆ ಎಂದು ತಿಳಿದು ಬಂದಿದೆ. ವರದಿಗಳ ಪ್ರಕಾರ, ಇತ್ತೀಚೆಗಷ್ಟೇ ಆನ್‌ಲೈನ್ ಮೂಲಕ ಐಪಿಎಲ್ ಗವರ್ನಿಂಗ್ ಕೌನ್ಸಿಲ್ ಈ ಬಗ್ಗೆ ಸಭೆಯೊಂದನ್ನು ನಡೆಸಿದೆ. ಈ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದ್ದು, ಶುಕ್ರವಾರ ಅಥವಾ ಶನಿವಾರದಂದು ವೇಳಾಪಟ್ಟಿ ಪ್ರಕಟಿಸಲಿದೆ ಎನ್ನಲಾಗಿದೆ. ಮಾರ್ಚ್ 15 ರಿಂದ ಎಲ್ಲಾ ಫ್ರಾಂಚೈಸಿಗಳು ತಮ್ಮ ಅಭ್ಯಾಸ ಆರಂಭಿಸಿವೆ ಎಂದು ಹೇಳಲಾಗುತ್ತಿವೆ. ಕೆಲವು ತಂಡಗಳು ಈಗಲೇ ಶುರು ಮಾಡಿಕೊಂಡಿವೆ. ವಿಶ್ವಕಪ್‌ನಿಂದಾಗಿ ಇನ್ನಷ್ಟು ತಂಡಗಳು 15ರಂದು ಅಭ್ಯಾಸ ಆರಂಭಿಸಲಿದ್ದಾರೆ ಎನ್ನಲಾಗುತ್ತಿದೆ.

ಏಷ್ಯನ್ ಕಪ್: ಭಾರತ ಸೋಲಿನ ಆರಂಭ

ಪರ್ತ್(ಆಸ್ಟ್ರೇಲಿಯಾ): ವಿಶ್ವಾಸದೊಂದಿಗೆ ಮಹಿಳೆಯರ ಏಷ್ಯನ್ ಕಪ್ ಪಂದ್ಯಾವಳಿಗಿಳಿದಿದ್ದ ಭಾರತ ಮಹಿಳಾ ತಂಡಕ್ಕೆ ಮೊದಲ ಪಂದ್ಯದಲ್ಲೇ ನಿರಾಸೆಯಾಗಿದೆ. ವಿಶ್ವಕಪ್ ಅರ್ಹತಾ ಗಮನದಲ್ಲಿಟ್ಟುಕೊಂಡು ಆಸ್ಟ್ರೇಲಿಯಾಗೆ ತಲುಪಿದ್ದ ಭಾರತ ಸೋಲಿನೊಂದಿಗೆ ಕೂಟ ಆರಂಭಿಸಿದೆ. ವಿಯೇಟ್ನಾಂ ತಂಡವನ್ನು ಎದುರಿಸಿದ್ದ ಬ್ಲ್ಯು ಟೈಗರ್ಸ್ ತಂಡವು 2–1ರಿಂ ಸೋತಿತು. ಬುಧವಾರ ನಡೆದ ಪಂದ್ಯದಲ್ಲಿ ಆರಂಭಿಕ ಹಿನ್ನಡೆ ಅನುಭವಿಸಿದ ಭಾರತ ಶಿಲ್ಕಿ ಅವರಿಗೆ ನೀಡಲಾದ ಎಲ್ಲೋ ಕಾರ್ಡ್ ಆಘಾತ ನೀಡಿತು. ಆದಾಗ್ಯೂ ಮೊದಲನೇ ಹಾಫ್‌ನ ಹಂತದ ವರೆಗೆ ಯಾವುದೇ ಗೋಲು ದಾಖಲಾಗಿರಲಿಲ್ಲ. ಇನ್ನೇನು ಮೊದಲಿನ ಸುತ್ತು ಮುಗದೇ ಹೋಯಿತು ಅನ್ನುವಷ್ಟರಲ್ಲಿ 30ನೇ ನಿಮಿಷದಲ್ಲಿ ವಿಯೇಟ್ನಾಂ ಗೋಲು ದಾಖಲಿಸಿತು. ಮೂರು ಸಬ್‌ಸ್ಟಿಟ್ಯೂಟ್‌ಗಳನ್ನು ಮಾಡಿಕೊಂಡ ನಂತರ 52ನೇ ನಿಮಿಷದಲ್ಲಿ ಕಂಬ್ಯಾಕ್ ಮಾಡಿದ ಭಾರತ ಗೋಲು ಗಳಿಸಿ ಸಮಬಲ ಸಾಧಿಸಿತು. ಅಲ್ಲಿಂದ ಪಂದ್ಯ ರೋಚಕವಾಯಿತು. ಮಧ್ಯದಲ್ಲಿ ಮತ್ತೆ ಮೂರು ಎಲ್ಲೋ ಕಾರ್ಡ್‌ಗಳನ್ನು ಪಡೆದ ಭಾರತ ಪಂದ್ಯದ ಫಲಿತಾಂಶ ಪಡೆಯಲು 98ನಿಮಿಷಗಳ ಆಟ ಆಡಬೇಕಾಯಿತು. 94ನೇ ನಿಮಿಷದಲ್ಲಿ ವಿಯೇಟ್ನಾಂ ಮಗದೊಂದು ಗೋಲು ಗಳಿಸಿ ಪಂದ್ಯ ಗೆದ್ದಿತು.

ಅರವಿಂದ್ ವಿರುದ್ಧ ಸೋತ ಗುಕೇಶ್

ಹೊಸದಿಲ್ಲಿ: ವಿಶ್ವಚಾಂಪಿಯನ್ ಡಿ. ಗುಕೇಶ್ ಅವರಿಗೆ ಭಾರೀ ಆಘಾತವಾಗಿದ್ದು, ಸ್ವದೇಶದ ಅರವಿಂದ್ ಚಿತಂಬರಂ ಅವರೊಂದಿಗಿನ ಪ್ರೆಗ್ ಚೆಸ್ ಲೀಗ್ ಪಂದ್ಯಾವಳಿಯ ಲೀಗ್ ಪಂದ್ಯವನ್ನು ಸೋತಿದ್ದಾರೆ. ಡ್ರಾ ಮತ್ತು ಸೋಲುಗಳೊಂದಿಗೆ ಹಿನ್ನಡೆ ಅನುಭವಿಸಿದ್ದ ಗುಕೇಶ್ ಬುಧವಾರದ ಪಂದ್ಯದಲ್ಲಿ ಅರವಿಂದ್ ಅವರನ್ನು ಎದುರಿಸಿದ್ದರು. ಈ ಪಂದ್ಯದಲ್ಲಿ ಮೊದಲಿನಿಂದಲೂ ಸ್ಥಿರ ಮತ್ತು ತಾಳ್ಮೆಯುತ ಪ್ರದರ್ಶನ ನೀಡಿರುವ ಅರ್ವಿಂದ್ ಗೆಲುವು ಸಾಧಿಸಿದ್ದಾರೆ. ಆರನೇ ಸುತ್ತಿನ ಪಂದ್ಯದಲ್ಲಿ ಗುಕೇಶ್ ಈ ನಿರಾಸೆ ಅನುಭವಿಸುವುದರೊಂದಿಗೆ ಗೆಲುವಿನ ಪಟ್ಟಿಯಲ್ಲಿ ಹಿನ್ನಡೆ ಅನುಭವಿಸಿದ್ದಾರೆ. 2025ರ ಟಾಟಾ ಸ್ಟೀಲ್ ಚೆಸ್‌ನಲ್ಲಿ.ಪ್ರಜ್ಞಾನಂದ ಅವರೊಂದಿಗೆ ಸೋತಿದ್ದ ಗುಕೇಶ್ ಮತ್ತೊಮ್ಮೆ ಸ್ವದೇಶದ ಆಟಗಾರರೊಂದಿಗೆ ಹಿನ್ನಡೆ ಅನುಭವಿಸಿದ್ದಾರೆ.

ಸೆಮಿನಲ್ಲಿ 33 ಬಾಲ್‌ಗೆ ಶತಕ ಬಾರಿಸಿದ ಫಿನ್ | ಅಜೇಯ ಆಫ್ರಿಕಾಗೆ ಆಲೆನ್ ಆಘಾತ

ಕಿವೀಸ್ ಫೈನಲ್‌ಗೆ, ಹರಿಣರು ಮನೆಗೆ

ಕೋಲ್ಕತ್ತಾ: ಸೆಮಿಫೈನಲ್ ಪಂದ್ಯದಲ್ಲಿ ಮನಸಿಗೆ ಬಂದಂತೆ, ಮನಸಿಗೆ ಬಂದ ಸ್ಟೈಲ್‌ನಲ್ಲಿ, ಮನಸಿಗೆ ಬಂದ ಬೌಲರ್‌ಗಳನ್ನು ಮನಸು ತುಂಬುವ ತನಕ ದಂಡಿಸಿ ವಿಶ್ವಕಪ್ ಇತಿಹಾಸದ ಅತಿ ವೇಗದ ಶತಕ ಬಾರಿಸಿದ ಫಿನ್ ಆಲೆನ್ ದ.ಆಫ್ರಿಕಾ ತಂಡವನ್ನು ಸೆಮಿಫೈನಲ್ ನಲ್ಲಿ ಸೋಲಿಸಿ ಹೊರನೂಕಿದರು. ದಾಖಲೆಯ ಇನ್ನಿಂಗ್ಸ್‌ನೊಂದಿಗೆ ತಮ್ಮ ತಂಡವನ್ನು ಫೈನಲ್ ಕಡೆಗೆ ಕೊಂಡೊಯ್ದರು.

ಬುಧವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ದ.ಆಫ್ರಿಕಾ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿತು. ಗುರಿ ಬೆನ್ನತ್ತಿದ ಕಿವೀಸ್ 12.5 ಓವರ್‌ಗಳಲ್ಲೇ ಗುರಿ ಮುಟ್ಟಿ ದಾಖಲೆಯೊಂದನ್ನು ಮಾಡಿತು.

303 ಸ್ಟ್ರೈಕ್‌ರೇಟ್‌ನೊಂದಿಗೆ ಶತಕ ಬಾರಿಸಿದ ಆಲೆನ್ ಇತಿಹಾಸದ ಪುಟಗಳಲ್ಲಿ ದಾಖಲಾದರು. ವೇಗದ ಶತಕ ಬಾರಿಸಿ ಮೆರೆದಾಡಿದರು. ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದರು. ಕೋಲ್ 2 ವಿಕೆಟ್ ಕಿತ್ತು ಪಂದ್ಯದ ಬೆಸ್ಟ್ ಬೌಲರ್ ಎನಿಸಿದರು. ಇದರೊಂದಿಗೆ ಭಾರತ–ಇಂಗ್ಲೆಂಡ್ ನಡುವಿನ ವಿಜೇತರನ್ನು ಎದುರಿಸುವುದಕ್ಕೆ ಕಿವೀಸ್ ಸಜ್ಜಾಗಿದೆ.

ಆರಂಭಿಕರ ಹೊಡೆತಕ್ಕೆ ನಲುಗಿದ ಆಫ್ರಿಕಾ: ಗುರಿ ಬೆನ್ನತ್ತುವಾಗ ಪವರ್‌ಪ್ಲೇನಲ್ಲೇ ನ್ಯೂಜಿಲೆಂಡ್ ಪಂದ್ಯದ ಅರ್ಧ ಭಾಗ ಗೆದ್ದುಕೊಂಡಂತಿತ್ತು. ಮೈದಾನದುದ್ದಕ್ಕೂ ಮನಸಿಗೆ ಬಂದಂತೆ ಮನಸಿಗೆ ಬಂದಷ್ಟು ದಂಡಿಸಿದ ಟಿಮ್ ಸೀಫರ್ಟ್ ಹಾಗೂ ಫಿನ್ ಆಲೆನ್ ಆದಷ್ಟು ಬೇಗ ಪಂದ್ಯವನ್ನು ಮುಗಿಸಿ ಫೈನಲ್‌ಗೆ ಸಿದ್ಧವಾಗಬೇಕೆಂಬಂತೆ ಆಡಿದರು. ಆರಂಭದಲ್ಲಿ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಮುಲಾಜಿಗೆ ಬೀಳದ ಈ ಜೋಡಿ ಆಫ್ರಿಕಾ ಪಡೆಯನ್ನು ನಿಬ್ಬೆರಗಾಗಿಸಿತ್ತು.

ಸಹಸ್ರಾರು ಅಭಿಮಾನಿಗಳನ್ನು ಎದ್ದು ಕುಣಿವಂತೆ ಮಾಡಿತು. ಆರಂಭದಿಂದಲೂ ದಂಡಿಸಿ ಪಂದ್ಯ ಬೇಗನೇ ಮುಗಿಸುವ ನಿರ್ಧಾರ ಸ್ಪಷ್ಟವಾಗಿ ಗೋಚರಿಸಿತು. ಸ್ಕೋರ್ ಬೋರ್ಡ್ ನೋಡ ನೋಡುತ್ತಲೇ 7.5 ಓವರ್‌ಗಳಲ್ಲಿ ನೂರಕ್ಕೆ ಮುಟ್ಟಿತು. ಸೀಫರ್ಟ್ 28 ಬಾಲ್‌ಗಳಲ್ಲಿ, ಆಲೆನ್ 19 ಬಾಲ್‌ಗಳಲ್ಲಿ ಅರ್ಧ ಶತಕಗಳನ್ನು ಪೂರೈಸಿಕೊಂಡು ದಂಡಿಸುವ ಕೆಲಸ ಮುಂದುವರಿಸಿತು. ಆದರೆ 58 ರನ್ ಗಳಿಸಿದ ಸೀಫರ್ಟ್ ವಿಕೆಟ್ ಒಪ್ಪಿಸಿದರು. ಆಲೆನ್ ತಮ್ಮ ಆಟ ಮುಂದುವರಿಸಿ ಪಂದ್ಯ ಗೆಲ್ಲಿಸಿ ಹೊರಬಂದರು.



ಸಂಕ್ಷಿಪ್ತ ಸ್ಕೋರ್

ದ.ಆಫ್ರಿಕಾ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 168: ಯಾನ್ಸನ್ 55*, ಬ್ರೆವಿಸ್ 34; ಕೋಲ್ 9/2
ನ್ಯೂಜಿಲೆಂಡ್ 12.5 ಓವರ್‌ಗಳಲ್ಲಿ 173/1: ಆಲೆನ್ 100*, ಸೀಫರ್ಟ್ 58; ರಬಾಡ 28/1

ಇತಿಹಾಸ ನಿರ್ಮಿಸಿದ ಆಲೆನ್

ಆಲೆನ್ ತಮ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಇತಿಹಾಸದ ಪುಟಗಳಲ್ಲಿ ಸೇರಿಕೊಂಡರು. ಬಿರುಸಿನ ಬ್ಯಾಟಿಂಗ್‌ನೊಂದಿಗೆ ಆಫ್ರಿಕಾ ಬೌಲರ್‌ಗಳ ಬೆವರಿಳಿಸಿದರು. ಅಭಿಮಾನಿಗಳನ್ನು ರಂಜಿಸಿದರು. ಐತಿಹಾಸಿಕ ಸಾಧನೆಯೊಂದನ್ನು ಮಾಡಿ ಮೆರೆದರು. ಪಂದ್ಯದ ಮೊದಲ ಬಾಲ್‌ನಿಂದ ಆರಂಭವಾದ ಅವರ ಸ್ಫೋಟಕ ಬ್ಯಾಟಿಂಗ್ ಯಾವುದೇ ಕ್ಷಣದಲ್ಲೂ ನಿಲ್ಲಲಿಲ್ಲ. ಪಂದ್ಯ ಮುಗಿಯುವ ವರೆಗೂ ವೇಗ ಕಮ್ಮಿಯಾಗಲಿಲ್ಲ. 10 ಫೋರ್, 8 ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದ ಅವರು 33 ಬಾಲ್ ಮಾತ್ರದಲ್ಲಿ ಅಜೇಯ ಶತಕ ಬಾರಿಸಿದರು. ಇದರೊಂದಿಗೆ ಟಿ20 ವಿಶ್ವಕಪ್ ಇತಿಹಾಸದ ಅತಿ ವೇಗದ ಶತಕ ಮತ್ತು ಅಂತಾರಾಷ್ಟ್ರೀಯ ಮೂರನೇ ಅತಿ ವೇಗದ ಶತಕ ಬಾರಿಸಿದರು. ಇದು ಐಸಿಸಿ ಸಂಪೂರ್ಣ ಸದಸ್ಯತ್ವ ಹೊಂದಿದ ರಾಷ್ಟ್ರದ ಆಟಗಾರ ಬಾರಿಸಿದ ಅತಿ ವೇಗದ ಶತಕ ಕೂಡ ಆಗಿದೆ.

ಮಾರ್ಕ್ರಂ ಪಡೆಗೆ ಶಾಕ್

ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಹರಿಣರಿಗೆ ಆರಂಭಿಕ ಆಘಾತ ಎದುರಾಯಿತು. ಡಿಕಾಕ್, ರಯಾನ್ ಬೇಗನೇ ವಿಕೆಟ್ ಒಪ್ಪಿಸುವುದರೊಂದಿಗೆ ಶುರುವಾದ ಆಫ್ರಿಕಾ ಪತನ ಆರಂಭಿಕ ಓವರ್‌ಗಳಲ್ಲೇ ರನ್ ವೇಗಕ್ಕೆ ತಡೆಯೊಡ್ಡಿತು. ಆರಂಭಿಕ ಮಾರ್ಕ್ರಂ ಮತ್ತು ಡೆವಾಲ್ಡ್ ಬ್ರೇವಿಸ್ ಕೊಂಚ ಹೊತ್ತು ಆಸರೆಯಾದರು. ಸ್ಕೋರು 50 ರನ್ ಗಡಿ ದಾಟುತ್ತಿದ್ದಂತೆ ಮಾರ್ಕ್ರಂ ಕೂಡ 18 ರನ್‌ಗೆ ವಿಕೆಟ್ ಒಪ್ಪಿಸಿದರು. ಮಿಲ್ಲರ್ ಕ್ರೀಜ್‌ನಲ್ಲಿ ನಿಲ್ಲದೆ 6 ರನ್ ಗಳಿಸಿ ಪೆವಿಲಿಯನ್ ಹೊರಟರು. ದ.ಆಫ್ರಿಕಾ ಪಡೆಯ ಹೋಪ್ ಹಿಡಿದುಕೊಂಡು ನಿಂತಿದ್ದ ಬ್ರೇವಿಸ್ 34 ರನ್‌ಗಳಿಸಿ ವಿಕೆಟ್ ಒಪ್ಪಿಸಿದ ನಂತರ ಭಾರೀ ನಿರಾಸೆ ಮೂಡಿಸುವ ಆತಂಕಕ್ಕೆ ಸಿಲುಕಿತು ಹರಿಣರ ಪಡೆ.

ಎರಡನೇ ಬಾರಿ ಫೈನಲ್‌ಗೆ ಕಿವೀಸ್

ಈ ಗೆಲುವಿನೊಂದಿಗೆ ಕಿವೀಸ್ ಟಿ20 ವಿಶ್ವಕಪ್ ಇತಿಹಾಸದಲ್ಲಿ ಎರಡನೇ ಬಾರಿಗೆ ಸೆಮಿಫೈನಲ್‌ಗೇರಿದೆ. ಈ ಹಿಂದೆ 2020ರ ಬದಲಿಗೆ 2021ರಲ್ಲಿ ನಡೆದಿದ್ದ ವಿಶ್ವಕಪ್‌ನಲ್ಲಿ ಫೈನಲ್ ಗೇರಿದ್ದ ನ್ಯೂಜಿಲೆಂಡ್ ರನ್ನರ್–ಅಪ್ ಸ್ಥಾನದಲ್ಲಿತ್ತು. ಇದರೊಂದಿಗೆ ಎರಡನೇ ಬಾರಿಗೆ ಫೈನಲ್‌ಗೇರಿದೆ.

ಯಾನ್ಸನ್ ಆಸರೆ

ದೊಡ್ಡ ಆಕೃತಿಯ ಮಾರ್ಕೊ ಯಾನ್ಸನ್ ದೊಡ್ಡ ಇನ್ನಿಂಗ್ಸ್ ಕಟ್ಟಿದರು. ಸೆಮಿನಲ್ಲಿ ಆಸರೆಯಾಗಿ ಒಂದು ಕ್ಷಣಕ್ಕೆ ಇಡೀ ದೇಶಕ್ಕೆ ಹೀರೋ ಆಗಿದ್ದರು. ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಅವರು, ಬಾನೆತ್ತದ ಸಿಕ್ಸರ್‌ಗಳ ಮೂಲಕ ಸಿಡಿದರು. ಅವರಿಗೆ ಸ್ಟಬ್ಸ್ ಸಾಥ್ ದೊರೆಯಿತು. ದ.ಆಫ್ರಿಕಾದ ಪ್ರಮುಖ ಬ್ಯಾಟಿಗರು ಸಿಂಗಲ್‌ಗೂ ಪರದಾಡಬೇಕಾದಾಗ ಅವರು ಸಿಕ್ಸರ್‌ಗಳ ಮೂಲಕ ಗಮನ ಸೆಳದರು. ಅರ್ಧಶತಕ ಬಾರಿಸಿ ಮಿಂಚಿದ ಅವರು 150ರ ಗಡಿ ದಾಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಕೇವಲ 30 ಎಸೆತ ಎದುರಿಸಿದ ಅವರು, ಅಜೇಯ 55 ರನ್ ಬಾರಿಸಿದರು.

ಇಂಗ್ಲೆಂಡ್–ಭಾರತ ಉಪಾಂತ್ಯ ಇಂದು | ಸೂರ್ಯ ಪಡೆಗೆ ದೊಡ್ಡ ಸವಾಲು

ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಯಾರು?

ಮುಂಬೈ: ನಿರೀಕ್ಷಿತ ಟಿ20 ವಿಶ್ವಕಪ್‌ನ ಎರಡನೇ ಸೆಮಿಫೈನಲ್ ಪಂದ್ಯ ಗುರುವಾರದಂದು ನಡೆಯಲಿದ್ದು, ಭಾರತ ಮತ್ತು ಇಂಗ್ಲೆಂಡ್ ತಂಡಗಳು ಎದುರಾಗಲಿವೆ. ವಿಶ್ವಕಪ್ ಪಂದ್ಯಾವಳಿಯಲ್ಲಿ ಉಭಯ ತಂಡಗಳು ಅತ್ಯುತ್ತಮ ಪ್ರದರ್ಶನ ನೀಡಿವೆ. 4ನೇ ಫೈನಲ್ ಪ್ರವೇಶಕ್ಕಾಗಿ ಉಭಯ ತಂಡಗಳು ಮುಖಾಮುಖಿಯಾಗಲಿವೆ. ಟಿ20 ವಿಶ್ವಕಪ್‌ನಲ್ಲಿ ಸತತ ಮೂರು ಬಾರಿ ಸೆಮಿನಲ್ಲಿ ಉಭಯ ತಂಡಗಳು ಎದುರಾಗಿರುವ ನಿಟ್ಟಿನಲ್ಲಿ ಪೈಪೋಟಿ ಎಲ್ಲರ ಗಮನ ಸೆಳೆಯಲಿದೆ.

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಗ್ರಹಣದ ನಿಟ್ಟಿನಲ್ಲಿ ಮಂಗಳವಾರದಂದು ತಡವಾಗಿ ಅಭ್ಯಾಸ ಆರಂಭಿಸಿದ ಭಾರತ ವಿಶ್ವಾಸದಲ್ಲಿ ಕಾಣಿಸಿಕೊಂಡಿತು. ವಿಂಡೀಸ್ ಗೆಲುವಿನೊಂದಿಗೆ ಆತ್ಮವಿಶ್ವಾಸ ಪಡೆದಂತೆ ಕಾಣಿಸಿಕೊಂಡಿತು. ದ.ಆಫ್ರಿಕಾ ಪಂದ್ಯದಿಂದ ಪುಟಿದೆದ್ದಂತೆ ಕಾಣಿಸಿಕೊಂಡಿತು. ಬುಧವಾರದವೂ ಅಭ್ಯಾಸಕ್ಕಿಳಿದ ಭಾರತ ಬ್ಯಾಟಿಂಗ್ ಬೌಲಿಂಗ್ ಮತ್ತು ಫೀಲ್ಡಿಂಗ್ ಪಡೆಯನ್ನು ಸಮತೋಲಿತ ಗಟ್ಟಿಗೊಳಿಸಿತು. ಕೋಚ್‌ಗಳು ಅಲ್ಲಲ್ಲಿ ಬಂದು ಸಲಹೆಗಳನ್ನು ನೀಡುತ್ತಿದ್ದರೆ ಪಿಚ್ ಮಾಂತ್ರಿಕರು ಸ್ಟ್ರಾಟರ್ಜಿಗಳನ್ನು ಮಾಡುತ್ತಿದ್ದರು. ಇತ್ತ ಇಂಗ್ಲೆಂಡ್ ಕೂಡ ವಿಶ್ವಾಸಭರಿತ ಅಭ್ಯಾಸ ನಡೆಸಿಕೊಂಡಿತು. ಕಳೆದ ವಿಶ್ವಕಪ್ ಸೆಮಿನಲ್ಲಿ ಮಾಡಿದ ತಪ್ಪನ್ನು ಮತ್ತೊಮ್ಮೆ ಮಾಡಬಾರದೆಂಬ ಆಲೋಜನೆ ಮಾಡುತ್ತಿತ್ತು. ವಿವಿಧ ಯೋಜನೆಗಳನ್ನು ರೂಪಿಸಿಕೊಳ್ಳುತ್ತಿತ್ತು.

ಸತತ ಮೂರನೇ ಬಾರಿ ಸೆಮಿನಲ್ಲಿ ಮುಖಾಮುಖಿ: ಕಳೆದ ವಿಶ್ವಕಪ್ ಅಂದರೆ 2024ರಲ್ಲೂ ಸೆಮಿಫೈನಲ್‌ನಲ್ಲಿ ಉಭಯ ತಂಡಗಳು ಎದುರಾಗಿದ್ದವು. ಅಲ್ಲಿ ಭಾರತ 68 ರನ್‌ಗಳ ಭರ್ಜರಿ ಗೆಲುವಿನೊಂದಿಗೆ ಫೈನಲ್‌ಗೇರಿತ್ತು. 2022ರಲ್ಲೂ ಇಂಗ್ಲೆಂಡ್ ಹಾಗೂ ಭಾರತ ನಡುವೆಯೇ ಸೆಮಿಫೈನಲ್ ನಡೆದಿತ್ತು. ಅಲ್ಲಿ ಇಂಗ್ಲೆಂಡ್ 10 ವಿಕೆಟ್‌ಗಳ ದೊಡ್ಡ ಗೆಲುವು ಸಾಧಿಸಿತ್ತು. ಇದರೊಂದಿಗೆ ಸತತ ಮೂರನೇ ಸೆಮಿಫೈನಲ್ ಪಂದ್ಯದಲ್ಲಿ ಭಾರತ ಮತ್ತು ಇಂಗ್ಲೆಂಡ್ ತಂಡಗಳು ಮುಖಾಮುಖಿಯಾಗಲಿವೆ.

ತಂಡಗಳ ಬಲಾಬಲ

ಭಾರತ	ಇಂಗ್ಲೆಂಡ್
ಸಂಜು ಲಯ	ಬ್ರೂಕ್ ಆಟ
ಬಲಿಷ್ಠ ಮಧ್ಯಮ ಕ್ರಮಾಂಕ	ಆಲ್‌ರೌಂಡರ್‌ಗಳ ಮಿಂಚಿನಾಟ
ಬೆಸ್ಟ್ ಫಿನಿಶಿಂಗ್ ಪಡೆ	8 ವಿಕೆಟ್ ಬಿದ್ದರೂ ಬ್ಯಾಟರ್ಸ್ ಮುಗಿಯಲ್ಲ
ಬೂಮ್ರಾ, ವರುಣ್ ಬೌಲಿಂಗ್	ಸ್ಪಿನ್ ಬಲ



ಪಿಚ್ ವರದಿ

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರು ಮಿಂಚಲಿದ್ದಾರೆ. ಟಿ20 ಪಂದ್ಯಗಳಲ್ಲಿ ರನ್ ಹೊಳೆ ಹರಿಯುವ ಈ ಪಿಚ್‌ನಲ್ಲಿ 200 ರನ್ ದಾಟಬಹುದು. ಎರಡನೇ ಇನ್ನಿಂಗ್ಸ್‌ನಲ್ಲಿ ಬೌಲಿಂಗ್ ಮಾಡುವುದಕ್ಕೆ ಇಬ್ಬನಿ ಕಾಟ ಇರಲಿದೆ. ಹೀಗಾಗಿ ಟಾಸ್ ಗೆಲ್ಲುವ ತಂಡ ಫೀಲ್ಡಿಂಗ್ ಆಯ್ಕೆಯನ್ನೇ ಮಾಡಿಕೊಳ್ಳುತ್ತದೆ.

ವಿಶ್ವಕಪ್‌ನಲ್ಲಿ ಭಾರತ ಪ್ರದರ್ಶನ

ಆರಂಭಿಕ ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದ ಭಾರತ ಅಮೆರಿಕ, ಪಾಕಿಸ್ತಾನ, ನೆದರ್ಲೆಂಡ್ಸ್, ನಮೀಬಿಯಾ ತಂಡಗಳನ್ನು ಸೋಲಿಸಿ ಗುಂಪಿನಲ್ಲಿ ಅಗ್ರಸ್ಥಾನಿಯಾಗಿ ಸೂಪರ್–8ಕ್ಕೆ ಲಗ್ಗೆ



ಹಾಕಿತು. ಆಘಾತಕಾರಿ ಸೋಲೊಂದರಲ್ಲಿ ದ.ಆಫ್ರಿಕಾ ವಿರುದ್ಧ ಪರಾಭವಗೊಂಡಿತ್ತು. ಆದಾಗ್ಯೂ ಜಿಂಬಾಬ್ವೆ ಹಾಗೂ ವಿಂಡೀಸ್ ಮೇಲೆ ಸವಾರಿ ನಡೆಸಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದೆ. ಒಂದು ಕಡೆ ಬ್ಯಾಟಿಂಗ್ ಕುಸಿತ ಕಂಡಿದೆ. ಕೆಲವು ಪಂದ್ಯಗಳಲ್ಲಿ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿದೆ. ಆದಾಗ್ಯೂ ಕಳೆದ ಎರಡು ಪಂದ್ಯಗಳಲ್ಲಿ ಬ್ಯಾಟರ್‌ಗಳು ತಮ್ಮ ಲಯಕ್ಕೆ ಮರಳಿದ್ದಾರೆ. ಹೀಗಾಗಿ ಭಾರತ ತಂಡದಲ್ಲಿ ವಿಶ್ವಾಸ ಹೆಚ್ಚಿದೆ.

ಭಾರತ ಪಂದ್ಯಗಳು	
ಎದುರಾಳಿ	ಫಲಿತಾಂಶ
ಅಮೆರಿಕ	29 ರನ್ ಜಯ
ನಮೀಬಿಯಾ	93 ರನ್ ಜಯ
ಪಾಕಿಸ್ತಾನ	61 ರನ್ ಜಯ
ನೆದರ್ಲೆಂಡ್ಸ್	17 ರನ್ ಜಯ
ಸೂಪರ್–8 ಪಂದ್ಯಗಳಲ್ಲಿ	
ಎದುರಾಳಿ	ಫಲಿತಾಂಶ
ದ.ಆಫ್ರಿಕಾ	76 ರನ್ ಸೋಲು
ಜಿಂಬಾಬ್ವೆ	72 ರನ್ ಜಯ
ವಿಂಡೀಸ್	5 ವಿಕೆಟ್ ಜಯ

ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ಪ್ರದರ್ಶನ

ಇನ್ನು ಹ್ಯಾರಿ ಬ್ರೂಕ್ ನೇತೃತ್ವದ ಇಂಗ್ಲೆಂಡ್ ತಂಡ ವಿಶ್ವಕಪ್‌ನ ಬಲಿಷ್ಠ ತಂಡಗಳಲ್ಲಿ ಒಂದು ಎನಿಸಿಕೊಂಡಿದೆ. ಮೊದಲ ಪಂದ್ಯದಿಂದಲೂ ಸಮತೋಲಿತ ಪ್ರದರ್ಶನ ನೀಡಿದೆ. ಆರಂಭಿಕರ ಸ್ಫೋಟಕ ಬ್ಯಾಟಿಂಗ್



ಬಲ ಸಿಕ್ಕಿಲ್ಲವಾದರೂ, ಜ್ಯಾಕ್ಸ್ ಅಂಥ ಪ್ರಮುಖ ಆಲ್‌ರೌಂಡರ್‌ಗಳ ಆಟದೊಂದಿಗೆ ಪಂದ್ಯಾವಳಿಯಲ್ಲಿ ಇಂಗ್ಲೆಂಡ್ ಬಲಿಷ್ಠವಾಗಿದೆ. ವಿಂಡೀಸ್ ವಿರುದ್ಧದ ಲೀಗ್ ಹಂತದ ಪಂದ್ಯವನ್ನು ಹೊರತುಪಡಿಸಿ ಬೇರ್‍ಯಾವ ಪಂದ್ಯವನ್ನೂ ಇಂಗ್ಲೆಂಡ್ ಸೋತಿಲ್ಲ. ಮುಖ್ಯವಾಗಿ ಸೂಪರ್–8 ಪಂದ್ಯಗಳಲ್ಲಿ ಅಜೇಯವಾಗಿತ್ತು. ಆಡಿರುವ 7 ಪಂದ್ಯಗಳಲ್ಲಿ ಇಂಗ್ಲೆಂಡ್ ಲೀಗ್, ಸೂಪರ್ ಪಂದ್ಯಗಳನ್ನು ಸೇರಿದಂತೆ ಒಟ್ಟು 6 ಗೆಲುವುಗಳನ್ನು ದಾಖಲಿಸಿದೆ.

ಇಂಗ್ಲೆಂಡ್ ಪಂದ್ಯಗಳು	
ಎದುರಾಳಿ	ಫಲಿತಾಂಶ
ನೇಪಾಳ	4 ರನ್ ಜಯ
ವಿಂಡೀಸ್	30 ರನ್ ಸೋಲು
ಸ್ಕಾಟ್ಲೆಂಡ್	5 ವಿಕೆಟ್ ಜಯ
ಇಟಲಿ	24 ರನ್ ಜಯ
ಸೂಪರ್–8	
ಎದುರಾಳಿ	ಫಲಿತಾಂಶ
ಶ್ರೀಲಂಕಾ	51 ರನ್ ಜಯ
ಪಾಕಿಸ್ತಾನ	2 ವಿಕೆಟ್ ಜಯ
ನ್ಯೂಜಿಲೆಂಡ್	4 ವಿಕೆಟ್ ಗೆಲುವು

ಪಂದ್ಯದ ವಿವರ: ಇಂಗ್ಲೆಂಡ್-ಭಾರತ, ಯಾವಾಗ: ಗುರುವಾರ, ಎಲ್ಲಿ: ಮುಂಬೈ, ಸಮಯ: ಸಂಜೆ 7, ಪ್ರಸಾರ: ಸ್ಟಾರ್‌ಸ್ಪೋಟ್ಸ್, ಜಿಯೋ ಹಾಟ್‌ಸ್ಟಾರ್

ಐಟಿಎಫ್ ಡಬ್ಲ್ಯು 35 ಟೆನಿಸ್ ಟೂರ್ನಿ

2ನೇ ಸುತ್ತಿಗೆ ಅಂಕಿತಾ, ಜೀಲ್ ದೇಸಾಯಿ ಲಗ್ಗೆ

ರಾಚಪ್ಪಾ ಜಂಬಗಿ

ಕಲಬುರಗಿ: ಐಟಿಎಫ್ ಡಬ್ಲ್ಯು 35 ಮಹಿಳಾ ಟೆನಿಸ್ ಟೂರ್ನಿಯ ಪ್ರಧಾನ ಸುತ್ತಿನಲ್ಲಿ ರಂಗಿನ ದಿನವಾದ ಹೋಳಿ ಹಬ್ಬದಂದು ನಡೆದ ಸಿಂಗಲ್ಸ್ ಪಂದ್ಯದಲ್ಲಿ ಭಾರತದ 5ನೇ ಶ್ರೇಯಾಂಕಿತ ಜೀಲ್ ದೇಸಾಯಿ ಹಾಗೂ 8ನೇ ಶ್ರೇಯಾಂಕಿತ ಅಂಕಿತಾ ರೈನಾರವರ ಸ್ಥಿರವಾದ ಪ್ರದರ್ಶನ, ತಂತ್ರಗಾರಿಕೆಯ ಆಟದಿಂದ ಗೆಲುವು ಸಾಧಿಸಿ ಮುಂದಿನ ಸುತ್ತಿಗೇರಿದ್ದಾರೆ.

ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಕೋರ್ಟ್ 3ರಲ್ಲಿ ನಡೆದ ಪ್ರಧಾನ ಸುತ್ತಿನ ಪಂದ್ಯದಲ್ಲಿ ಜೀಲ್ ದೇಸಾಯಿ ಭಾರತೀಯ ಜೆನ್ನಿಫರ್ ಲ್ಯೂಕೇಮಿ ವಿರುದ್ಧ 6–2–6–1 ಅಂತರದಲ್ಲಿ ಗೆಲುವು ಸಾಧಿಸಿದರು. ಆರಂಭದಿಂದಲೇ ಬಲಿಷ್ಠ ಆಟ ಪ್ರದರ್ಶಿಸಿದ ಜೀಲ್ ದೇಸಾಯಿ, ತೀಕ್ಷ್ಣ ರಿಟರ್ನ್ ಸಮ ತೋಲನದ ಮನೋಭಾವ ಮತ್ತು ಕೋರ್ಟ್ ಮೇಲಿನ ಸಂಪೂರ್ಣ ನಿಯಂತ್ರಣ ದೊಂದಿಗೆ ಮೊದಲ ಬಾಲ್‌ನಿಂದ ಕೊನೆಯ ಪಾಯಿಂಟ್ ವರೆಗೆ ಪ್ರಭುತ್ವ ಸಾಧಿಸಿದರು.

ಕೋರ್ಟ್ 2ರಲ್ಲಿ ನಡೆದ ಭಾರತೀಯ ಅಂಕಿತಾ ರೈನಾ ಸೋನಲ್ ಪಾಟೀಲ್ 6–1,6–3 ಅಂಕಗಳಿಂದ ಸೋಲಿಸಿ ಭರ್ಜರಿ ಗೆಲುವು ದಾಖಲಿಸಿದರು. ಆತ್ಮವಿಶ್ವಾಸದ ಜೊತೆಗೆ ನಿಯಂತ್ರಣ ಮತ್ತು ಶ್ರೇಷ್ಠ ಶೈಲಿಯ ಆಟದ ಮೂಲಕ ಅಂಕಿತಾ ರೈನಾ ಎದುರಾಳಿಗೆ ಯಾವುದೇ ಅವಕಾಶ ನೀಡದೆ ಪಂದ್ಯವನ್ನು ಏಕಪಕ್ಷೀಯವಾಗಿ ಮುಕ್ತಾಯಗೊಳಿಸಿದರು. ಬುಧವಾರ ನಡೆದ ಒಟ್ಟು ಎಂಟು ಸಿಂಗಲ್ಸ್ ಪಂದ್ಯಗಳಲ್ಲಿ 6 ಜನ ಭಾರತೀಯ ಆಟಗಾರರ ನಿರಸ ಪ್ರದರ್ಶನದಿಂದ ಸೋಲಾಯಿತು.

ಸಿಂಗಲ್ಸ್ ಫಸ್ಟ್ ರೌಂಡ್ ಫಲಿತಾಂಶ: ಜಾಸ್ಮಿನ್ ಗಿಂಬ್ರೇರೆ ಬೀಟ್ ಐಶ್ವರ್ಯಾ ಜಾಧವ್ –6–2,6–1

ಥಾಸಾಪಾರ್ನ್ ನಾಕ್ಲೋ ಬೀಟ್ ವಾಲೇರಿಯಾ 6–3,6–2

ಪೋಲಿನಾ ಕೆ ಬೀಟ್ ಆಕಾಂಕ್ಷಾ ದಿಲೀಪ್ 6–2,6–1

ಅಣ್ಣಾ ಸೇದ್ಯಾಶೇವ್ ಬೀಟ್ ಸಂಧೀಪ್ತಿ ರಾವ್ 6–2,6–4

ಇವಾ ಮಾರಿ ಬೀಟ್ ಸೋಹಾ ಸಾದೀಕ್ 7–5,6–0

ಯಲಿನಾ ನೆಸ್ಲೀ ಬೀಟ್ ಕಶೀಷ್ ಭಾಟಿಯಾ 6–0,6–4

ಇವಗೇನಿಯಾ ಬೂರಡಿನಾ ಬೀಟ್ ಶ್ರೀವಲ್ಲಿ ರಶ್ಮಿಕಾ 5–1 (ರಿಟೈರ್ಡ್)

ಸಿಂಗಲ್ಸ್‌ನಲ್ಲಿ ಪಯಣ ಮುಗಿಸಿದ ಆಟಗಾರ್ತಿಯರು : ಭಾರತೀಯರಾದ ಆಮೋಧಿನಿ ನಾಯಕ್ (ವೈಲ್ಡ್ ಕಾರ್ಡ್ ಎಂಟ್ರಿ) ಲಕ್ಷ್ಮಿ ಸಿರಿ ದಂಡು, ಚೆವಿಕಾ ರೆಡ್ಡಿ ಸಾಮಾ (ವೈಲ್ಡ್ ಕಾರ್ಡ್ ಎಂಟ್ರಿ) ಲಕ್ಷ್ಮಿ ಪ್ರಭಾ ಅರುಣಕುಮಾರ, ಆಕಾಂಕ್ಷಾ ದಿಲೀಪ್ ನಿಟ್ಟೂರೆ, ಸೇರಿದಂತೆ ಪ್ರಮುಖರು ಸಿಂಗಲ್ಸ್ ಪಯಣ ಮುಗಿಸಿದರು.



ಆರೋಗ್ಯ ಸಮಸ್ಯೆ: ಪಂದ್ಯದಿಂದ ನಿವೃತ್ತಿ

ಐಟಿಎಫ್ ಡಬ್ಲ್ಯು 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ ಪ್ರಧಾನ ಸುತ್ತಿನಲ್ಲಿ ಬುಧವಾರ ಕೋರ್ಟ್ 1ರಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಭಾರತದ 4ನೇ ಶ್ರೇಯಾಂಕಿತ ಶ್ರೀವಲ್ಲಿ ರಶ್ಮಿಕಾ ಭಾಮಿದಿಪಾಟಿ ಆರೋಗ್ಯ ಸಮಸ್ಯೆಯ ಕಾರಣದಿಂದ ಯಲೇನಾ ಬರಡೀನಾ ವಿರುದ್ಧದ ಪಂದ್ಯದಿಂದ ನಿವೃತ್ತಿ ಪಡೆದುಕೊಂಡರು.

ಟೆನಿಸ್: 3 ಕನ್ನಡಿಗರ ಆಯ್ಕೆ

ಬೆಂಗಳೂರು: ಏಷ್ಯಾ ಖಂಡದ ಅತ್ಯಂತ ಪ್ರತಿಷ್ಠಿತ ಜೂನಿಯರ್ ಟೆನಿಸ್ ವೇದಿಕೆಯಾಗಿರುವ ಐಟಿಎಫ್ ಏಷ್ಯಾ ಅಂಡರ್–14 ಡೆವಲಪ್‌ಮೆಂಟ್ ಚಾಂಪಿಯನ್‌ಶಿಪ್ ಫೈನಲ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲು ಕರ್ನಾಟಕದ ಮೂವರು ಪ್ರತಿಭಾವಂತ ಆಟಗಾರರು ಆಯ್ಕೆಯಾಗಿದ್ದಾರೆ.

ಜೂನಿಯರ್ ಟೆನಿಸ್: ಬಾಲಕಿಯರ ವಿಭಾಗದಲ್ಲಿ ಇಬ್ಬರು, ಬಾಲಕರ ವಿಭಾಗದಲ್ಲಿ ಒಬ್ಬ ಸ್ಪರ್ಧೆ

ಮಾರ್ಚ್ 29ರಿಂದ ಏಪ್ರಿಲ್ 10ರವರೆಗೆ ಶ್ರೀಲಂಕಾದ ರಾಜಧಾನಿ ಕೊಲಂಬೋದಲ್ಲಿ ನಡೆಯಲಿರುವ ಈ ಮಹತ್ವದ ಟೂರ್ನಿಯಲ್ಲಿ, ಭಾರತೀಯ ತಂಡದ ನಾಲ್ಕು ಸ್ಥಾನಗಳಲ್ಲಿ ಮೂರನ್ನು ಕರ್ನಾಟಕದ ಆಟಗಾರರು ತಮ್ಮ ಶ್ರಮಪೂರ್ಣ ಸಾಧನೆಯಿಂದ ಭದ್ರಪಡಿಸಿಕೊಂಡಿರುವುದು ರಾಜ್ಯಕ್ಕೆ ಹೆಮ್ಮೆಯ ವಿಷಯವಾಗಿದೆ.

ಹುಡುಗಿಯರ ವಿಭಾಗದಲ್ಲಿ ಸೃಷ್ಟಿ ಕಿರಣ್ ಹಾಗೂ ಪದ್ಮಪ್ರಿಯ ರಾಮೇಶ್ ಕುಮಾರ್ ಅವರು ಸ್ಥಾನ ಪಡೆದಿದ್ದರೆ, ಹುಡುಗರ ವಿಭಾಗದಲ್ಲಿ ಪುನೀತ್ ಮನೋಹರ್ ಅವರು ಆಯ್ಕೆಯಾಗಿದ್ದಾರೆ. ಇವರೊಂದಿಗೆ ಪಂಜಾಬ್‌ನ ತಾನಿಶ್ ನಂದಾ ಕೂಡ ಭಾರತೀಯ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಏಷ್ಯಾದ ಶ್ರೇಷ್ಠ ಅಂಡರ್–14 ಆಟಗಾರರನ್ನು ಒಟ್ಟುಗೂಡಿಸುವ ಈ ಚಾಂಪಿಯನ್‌ಶಿಪ್, ಜೂನಿಯರ್ ಮಟ್ಟದಲ್ಲಿ ಅತ್ಯುನ್ನತ ಸ್ಪರ್ಧಾತ್ಮಕ ವೇದಿಕೆಯಾಗಿದ್ದು, ಭವಿಷ್ಯದ ಅಂತಾರಾಷ್ಟ್ರೀಯ ಟೆನಿಸ್ ತಾರೆಯರಿಗೆ ದಾರಿ ತೋರಿಸುವ ಮಹತ್ವದ ಮೆಟ್ಟಿಲೆಂದು ಪರಿಗಣಿಸಲಾಗಿದೆ. ಈ ಆಯ್ಕೆ ಕುರಿತು ಸಂತಸ ವ್ಯಕ್ತಪಡಿಸಿದ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಸಂಯುಕ್ತ ಕಾರ್ಯದರ್ಶಿ ಸುನೀಲ್ ಯಜಮಾನ ಅವರು, ಸೃಷ್ಟಿ, ಪದ್ಮಪ್ರಿಯ ಹಾಗೂ ಪುನೀತ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಶಿಸ್ತು, ನಿರಂತರ ಶ್ರಮ ಮತ್ತು ಅಚಲ ಸಂಕಲ್ಪದ ಮೂಲಕ ಅವರು ಈ ಸಾಧನೆ ಮಾಡಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5914

ಎಡದಿಂದ ಬಲಕ್ಕೆ
1.ಇದು ಎಳೆಯ, ಚಿಕ್ಕ ಗಿಡ (2)
2.ಕುವೆಂಪು ಅವರ ಮಾನವ ಸಂಬಂಧದ ವಿಶಾಲ ದೃಷ್ಟಿಕೋನ (5)
4.ಮೂಲೆಯ ನಡುವೆ ಇಸ್ಪೀಟು ಆಟದ ಹೆಸರಿದೆ (3)
5.ನಾಕದೊಳಗೆ ಪೌರನಿದ್ದಾನೆ (4)
7.ಹಾಸ್ಯಪಾತ್ರ ಮಾಡುವವನು (4)
9.ಸರ್ಕಾರದ ಬ್ಯಾಂಕಿಂಗ್ ಸೌಲಭ್ಯ ಒದಗಿಸುವ ಯೋಜನೆ (4)
13.ನಗರದ ವಿಸ್ತರಣೆಗೊಂಡ ಭಾಗ (4)
15.ಜಗಳ–ಕಿತ್ತಾಟ (3)
16. ಕರ್ನಾಟಕದ ಪ್ರಸಿದ್ಧ ಪಕ್ಷಿಧಾಮ (5)
17.ದ್ವೇಷದ ಸಮಾನಪದ (2)

ಮೇಲಿನಿಂದ ಕೆಳಕ್ಕೆ
1.ಸತಿ ಪದ್ಧತಿಯನ್ನು ಹೀಗೂ ಹೇಳುತ್ತೇವೆ (5)
2.ಬೆಟ್ಟ–ಗುಡ್ಡಗಳಿಂದ ಕೂಡಿದ ಪ್ರದೇಶ (4)
3.ಇದು ಸರಿಯ ವಿರುದ್ಧವಾದುದು (2)
4.ಅವಿವೇಕದಿಂದ ಕೂಡಿದ ಬುದ್ಧಿ (4)
6.ತಲೆಯಿಲ್ಲದ ದೇಹವಿರುವ ರಾಕ್ಷಸ (3)
8.ಬಡಿಯುವ ದೊಣ್ಣೆ ಮೇಲೇರಿದೆ (3)
10.ದೇಹದಲ್ಲಿ ತಂತುಗಳ ರಚನೆ (4)
11.ಮೂಲದಂತೆ ಪ್ರತಿಯನ್ನು ತಯಾರಿಸು (5)
12.ನೀರಿನ ಪ್ರವಾಹಕ್ಕೆ ಅಡ್ಡವಾಗಿ ಕಟ್ಟಿದ ಗೋಡೆ (4)
14.ದೇವಲೋಕದ ಸುಂದರಿ ತಲೆಕೆಳಗಾಗಿದ್ದಾಳೆ (2)

5913 ಉತ್ತರ

ಎಡದಿಂದ ಬಲಕ್ಕೆ:
2.ಅಪ್ಪಾಜಿ
4.ದಶಮಿ 5.ಸಂಕಷ್ಟ
6.ಗುಡಿಗೋಪುರ 8.ಅಕ್ಷತ
9.ಅವನಿ 10.ನಗರವಾಸಿ
13.ಪಾಕಡ 15.ಆಯಾಸ
16.ಕನಕ

ಮೇಲಿನಿಂದ ಕೆಳಕ್ಕೆ : 1.ಸಂಭವ
2.ಅದೃಷ್ಟವಂತ
3.ಜಿನುಗು 4.ಗೋವಿಂದ
7.ರಜನಿ 8.ಅರ್ಜುನ
9.ಅನುಪಾಲಕ 11.ರಭಸ
12.ಸಿಡುಕ 14.ಡವಣೆ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯವೇ ಕೇಂದ್ರಸ್ಥಾನ | ಕಾಡಾನೆ ಹಾವಳಿ ಇರುವಲ್ಲಿ ತಂಡದಿಂದ ಗಸ್ತು

ಆನೆ ಹಾವಳಿ ತಡೆಗೆ ಬಂತು ಕಾರ್ಯಪಡೆ

ಮಂಗಳೂರು: ಕಾಡಾನೆಗಳ ದಾಳಿಯಿಂದ ಕಂಗೆಟ್ಟಿದ್ದ ಕೃಷಿಕರು ಮತ್ತು ರೈತರಿಗೆ ಖುಷಿಯ ವಿಚಾರವೊಂದನ್ನು ರಾಜ್ಯ ಸರ್ಕಾರ ನೀಡಿದೆ. ಆನೆ ಕಾರ್ಯಪಡೆ ರಚಿಸಬೇಕೆಂಬ ಬಹುಕಾಲದ ಬೇಡಿಕೆಗೆ ಕೊನೆಗೂ ಮನ್ನಣೆ ಸಿಕ್ಕಿದೆ.

ಯಾರೆಲ್ಲಾ ಇರಲಿದ್ದಾರೆ?

ರಾಜ್ಯ ಸರ್ಕಾರದ ಆದೇಶದಂತೆ ನೂತನ ಆನೆ ಕಾರ್ಯಪಡೆಯಲ್ಲಿ ಒಬ್ಬರು ಉಪ ವಲಯ ಅರಣ್ಯಾಧಿಕಾರಿ, ಇಬ್ಬರು ಗಸ್ತು ಅರಣ್ಯ ಪಾಲಕರು, 25 ವಾಹನ ಚಾಲಕರು ಅಥವಾ ತತ್ಸಮಾನ ಸಿಬ್ಬಂದಿ ಕಾರ್ಯ ನಿರ್ವಹಿಸಲಿದ್ದಾರೆ.

ಈ ಕಾರ್ಯಪಡೆ ರಚನೆಯಿಂದ ಕಾಡಂಚಿನ ಜನವಸತಿ, ಕೃಷಿ ಪ್ರದೇಶಗಳಲ್ಲಿ ಕಾಡಾನೆ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಈ ಕಾರ್ಯಪಡೆ ಕಾರ್ಯ ನಿರ್ವಹಿಸಲಿದೆ.

ಜಿಲ್ಲೆಯ ಉಪ್ಪಿನಂಗಡಿ, ಸುಳ್ಯ, ಬೆಳ್ತಂಗಡಿ, ಪುತ್ತೂರು, ಪಂಜ ಮತ್ತು ಸುಬ್ರಹ್ಮಣ್ಯ ವಲಯ ವ್ಯಾಪ್ತಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಕಾಡಾನೆಗಳ ಉಪಟಳ ಹೆಚ್ಚಾಗಿದ್ದು, ಪ್ರತಿ ವರ್ಷ ಬೆಳೆ ಹಾನಿ ಹಾಗೂ ಮಾನವ ಸಾವಿನ ಪ್ರಕರಣಗಳು ಏರಿಕೆಯಾಗುತ್ತಿತ್ತು.. ಇದನ್ನು ಮನಗಂಡ ಸರ್ಕಾರ ಸೂಕ್ತ ಕ್ರಮ ಕೈಗೊಂಡಿದೆ.

ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಗೀತಾ ಎಂ.ಪಾಟೀಲ ಈ ಕುರಿತು ಅಧಿಕೃತ ಆದೇಶ



ಹೊರಡಿಸಿದ್ದಾರೆ.

ಸುಳ್ಯ ಕೇಂದ್ರ ಸ್ಥಾನ:

ಈ ಆನೆ ಕಾರ್ಯಪಡೆಯ ಕೇಂದ್ರ ಸ್ಥಾನವು ಸುಳ್ಯ ಆಗಿದ್ದು, ಮಂಗಳೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ನಿರ್ದೇಶನದ ಅಡಿಯಲ್ಲಿ ಕಾರ್ಯ ನಿರ್ವಹಿಸಲಿದೆ.

ಆನೆ ಕಾರ್ಯಪಡೆ ತಂಡವು ಕಾಡಾನೆ ಹಾವಳಿ ಇರುವ ಪ್ರದೇಶಗಳಲ್ಲಿ ಗಸ್ತು ತಿರುಗುವುದು, ಜನವಸತಿ, ಕೃಷಿ ಪ್ರದೇಶಗಳಲ್ಲಿ ಹಾಗೂ ಕಾಫಿ ಎಸ್ಟೇಟ್‌ಗಳಲ್ಲಿ ಆನೆಗಳ ಚಲನವಲನಗಳನ್ನು ಗುರುತಿಸಿ, ಕೂಡಲೆ ಸ್ಥಳಕ್ಕೆ ಧಾವಿಸಿ ಆನೆಗಳನ್ನು ಅರಣ್ಯ ಪ್ರದೇಶಕ್ಕೆ ಹಿಮ್ಮೆಟ್ಟಿಸುವುದು. ಕಾಡಾನೆ ಹಾವಳಿ ಕಂಡುಬರುವ ಪ್ರದೇಶಗಳ ಸಾರ್ವಜನಿಕರಿಗೆ ಆನೆಗಳ ಚಲನವಲನ ಕುರಿತು ಮಾಹಿತಿ ನೀಡುವುದಲ್ಲದೆ, ಅರಣ್ಯ ಪ್ರದೇಶದ ಒಳಗೆ ಸಂಚರಿಸದಂತೆ ಪ್ರಚಾರ ಮಾಡುವುದು. ಕೇಂದ್ರ ಸ್ಥಾನದಲ್ಲಿ ನಿಯಂತ್ರಣ ಕೊಠಡಿ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಅದರ ದೂರವಾಣಿ ಸಂಖ್ಯೆಯನ್ನು ಸಾರ್ವಜನಿಕರಲ್ಲಿ ಪ್ರಚುರಪಡಿಸುವುದು ಸೇರಿದಂತೆ ಹಲವು ಷರತ್ತುಗಳನ್ನು ಆದೇಶದಲ್ಲಿ ಸೂಚಿಸಲಾಗಿದೆ.

- ಪ್ರತಿ ವರ್ಷ ಬೆಳೆ ಹಾನಿ ಹಾಗೂ ಮಾನವ ಸಾವಿನ ಪ್ರಕರಣಗಳು ಏರಿಕೆಯಾಗುತ್ತಿತ್ತು.
- ಕಾರ್ಯಪಡೆ ರಚನೆಯಿಂದ ಕಾಡಂಚಿನ ಜನವಸತಿ, ಕೃಷಿ ಪ್ರದೇಶಗಳಲ್ಲಿ ಕಾಡಾನೆ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಈ ಕಾರ್ಯಪಡೆ ಕಾರ್ಯ ನಿರ್ವಹಿಸಲಿದೆ.

ಕರಾವಳಿಗೆ ಪ್ರತ್ಯೇಕ ಟಾಸ್ಕ್ ಫೋರ್ಸ್ ಅನಿವಾರ್ಯತೆಯ ಮನವರಿಕೆ ಮಾಡಿದ ಕಿಶೋರ್

ಕರಾವಳಿ ಭಾಗದ ರೈತರ ಪ್ರಾಣ ಮತ್ತು ಬೆಳೆ ರಕ್ಷಣೆಗಾಗಿ ಉಡುಪಿ-ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಶಾಸಕ ಕಿಶೋರ್ ಕುಮಾರ್ ಪುತ್ತೂರು ಅವರು ನಡೆಸಿದ್ದ ಭಗೀರಥ ಯತ್ನ ಮತ್ತು ನಿರಂತರ ಹೋರಾಟಕ್ಕೆ ಇದೀಗ ಬೃಹತ್ ಜಯ ಸಿಕ್ಕಿದೆ. ಕಾಡಾನೆಗಳ ಉಪಟಳದಿಂದಾಗಿ ಈ ಭಾಗದ ರೈತರು ತಮ್ಮ ಜೀವನಾಧಾರವಾದ ಅಡಿಕೆ, ತೆಂಗು, ಬಾಳೆ ಬೆಳೆಗಳನ್ನು ಕಳೆದುಕೊಂಡು ಕಣ್ಣೀರು ಹಾಕುತ್ತಿದ್ದರು. ಈ ಸಮಸ್ಯೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದ ಶಾಸಕ ಕಿಶೋರ್ ಕುಮಾರ್ ಅವರು, ವಿಧಾನ ಪರಿಷತ್ ಸದನದಲ್ಲಿ ಅನೇಕ ಬಾರಿ ಈ ವಿಚಾರವನ್ನು ಪ್ರಸ್ತಾಪಿಸಿ ಸರ್ಕಾರದ ವಿರುದ್ಧ ಗುಡುಗಿದ್ದರು. ಕೇವಲ ಸದನದಲ್ಲಿ ಮಾತನಾಡಿ



ಸುಮ್ಮನಾಗದೆ, ಕಿಸಾನ್ ಸಂಘದ ನಿಯೋಗದೊಂದಿಗೆ ಅರಣ್ಯ ಸಚಿವರಾದ ಈಶ್ವರ್ ಖಂಡ್ರೆ ಅವರನ್ನು ಖುದ್ದಾಗಿ ಹಲವು ಬಾರಿ ಭೇಟಿಯಾಗಿ, ಕರಾವಳಿಗೆ ಪ್ರತ್ಯೇಕ ಟಾಸ್ಕ್ ಫೋರ್ಸ್ ಅನಿವಾರ್ಯತೆಯನ್ನು ಮನವರಿಕೆ ಮಾಡಿ ಕೊಟ್ಟಿದ್ದರು. ಶಾಸಕರ ಸತತ ಒತ್ತಡ, ಬೆನ್ನುಬಿಡದ ಯತ್ನ ಹಾಗೂ ಕರಾವಳಿ ರೈತರ ಮೇಲಿನ ಅವರ ಬದ್ಧತೆಯ ಫಲವಾಗಿಯೇ ಸರ್ಕಾರ ಇಂದು ಮಣಿದು ಈ ಅಧಿಕೃತ ಆದೇಶವನ್ನು ಹೊರಡಿಸಿದೆ.

ಕಿರುಸುದ್ದಿ

ಎಸ್‌ಎಸ್‌ಎಲ್‌ಸಿ ಸಹಾಯವಾಣಿ

ಮಂಗಳೂರು: ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಮತ್ತುಅವರ ಪೋಷಕರಿಗೆ ಪರೀಕ್ಷಾ ಸಂಬಂಧಿ ಯಾವುದೇ ಸಮಸ್ಯೆ, ಪರೀಕ್ಷಾ ಸಿದ್ಧತೆ ಬಗ್ಗೆ ಭಯ, ಆತಂಕ, ಗೊಂದಲಗಳಿದ್ದರೆ ದೂರವಾಣಿ ಸಂಖ್ಯೆದೂರವಾಣಿ ಸಂಖ್ಯೆ : 0824–2451239ಕರೆ ಮಾಡಿ ಪರಿಹಾರ ಕಂಡುಕೊಳ್ಳಬಹುದು. ಸಹಾಯವಾಣಿ ಕಾರ್ಯ ನಿರ್ವಹಿಸುವ ದಿನಗಳು ಮತ್ತು ಸಮಯ ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 10.30 ರಿಂದ ಸಂಜೆ 5, ಭಾನುವಾರ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1. ಸಹಾಯವಾಣಿಯಲ್ಲಿ ಸ್ವೀಕರಿಸುವ ವಿಷಯ ಸಮಸ್ಯೆ ಮತ್ತುಕರೆ ಮಾಡಿದ ದೂರವಾಣಿ ಸಂಖ್ಯೆ ದಾಖಲಿಸಿ ಇಟ್ಟುಕೊಳ್ಳಲಾಗುತ್ತದೆ. ಮರುದಿನ ಕರೆ ಮಾಡಿದವರಿಗೆ ಸಹಾಯವಾಣಿಯಿಂದಲೇ ಕರೆ ಮಾಡಿ ಉತ್ತರ/ಪರಿಹಾರವನ್ನು ನೀಡಲಾಗುತ್ತದೆ. ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಈ ಸಹಾಯವಾಣಿ ವ್ಯವಸ್ಥೆಗೊಳಿಸಲಾಗಿದ್ದು ತಜ್ಞರ ನೆರವಿನಲ್ಲಿ ಪರಿಹಾರ ತಿಳಿಸಲಾಗುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುವೈಟ್: ಭೇಟಿ ವೀಸಾ ಅವಧಿ, ನಿವಾಸಿಗಳಿಗೆ ಗೈರುಹಾಜರಿ ಪರವಾನಗಿ ವಿಸ್ತರಣೆ

ಮಂಗಳೂರು: ದೇಶದಲ್ಲಿ ಯುದ್ಧದ ಛಾಯೆ ಎದುರಾಗಿರುವ ಹಿನ್ನಲೆಯಲ್ಲಿ ಕುವೈಟ್ ಸರಕಾರ ಅವಧಿ ಮುಗಿದ ಅಥವಾ ಅವಧಿ ಮುಗಿಯಲಿರುವ ಎಲ್ಲಾ ರೀತಿಯ ಭೇಟಿ ಪ್ರವೇಶ ವೀಸಾಗಳನ್ನು ಫೆ.28ರ ಶನಿವಾರದಿಂದ ಒಂದು ತಿಂಗಳವರೆಗೆ ವಿಸ್ತರಿಸಿದೆ. ರೆಸಿಡೆನ್ಸಿ ವ್ಯವಹಾರಗಳ ಇಲಾಖೆಗಳಿಗೆ ಭೇಟಿ ನೀಡುವ ಅಗತ್ಯವಿಲ್ಲದೆ, ಇಲೆಕ್ಟ್ರಾನಿಕ್ ವ್ಯವಸ್ಥೆಯ ಮೂಲಕ ವಿಸ್ತರಣೆಯನ್ನು ಸ್ವಯಂಚಾಲಿತವಾಗಿ ಅನ್ವಯಿಸಲಾಗುತ್ತದೆ. ಪ್ರಸ್ತುತ ಅಸಾಧಾರಣ ಸಂದರ್ಭಗಳನ್ನು ಪರಿಗಣಿಸಿ, ಈ ಅವಧಿಯಲ್ಲಿ ನಿಗದಿತ ಶುಲ್ಕಗಳು ಮತ್ತು ಯಾವುದೇ ಪರಿಣಾಮವಾಗಿ ದಂಡಗಳಿಂದ ಸಂಪೂರ್ಣ ವಿನಾಯಿತಿ ಇರುತ್ತದೆ. ಪ್ರಸ್ತುತ ದೇಶದ ಹೊರಗೆ ಇರುವ ಮತ್ತು ಅನುಮತಿಸಲಾದ ಗೈರುಹಾಜರಿ ಅವಧಿಯನ್ನು ಮೀರಿದ ಮತ್ತು ಕುವೈಟ್ ರಾಜ್ಯಕ್ಕೆ ಮರಳಲು ಸಾಧ್ಯವಾಗದ ನಿವಾಸಿಗಳಿಗೆ ಇಲೆಕ್ಟ್ರಾನಿಕ್ ವ್ಯವಸ್ಥೆಯ ಮೂಲಕ ಸ್ವಯಂಚಾಲಿತವಾಗಿ 3 ತಿಂಗಳ ಗೈರುಹಾಜರಿ ಪರವಾನಗಿಯನ್ನು ನೀಡಲಾಗುತ್ತದೆ. ವ್ಯಕ್ತಿಗತ ಪ್ರಕ್ರಿಯೆ ಅಗತ್ಯವಿಲ್ಲದೆ ಮತ್ತು ನಿಗದಿತ ಶುಲ್ಕದಿಂದ ವಿನಾಯಿತಿ ನೀಡಲಾಗುತ್ತದೆ ಎಂದು ಕುವೈಟ್‌ನ ಆಂತರಿಕ ಸಚಿವಾಲಯ ಪ್ರಕಟಿಸಿದೆ ಎಂದು ಕುವೈಟ್‌ನಲ್ಲಿ ಉದ್ಯೋಗಿಯಾಗಿರುವ ಮಂಗಳೂರು ನಿವಾಸಿ ಮೋಹನ್‌ದಾಸ್ ಕಾಮತ್ ತಿಳಿಸಿದ್ದಾರೆ.

ಬೈಕ್ ಸ್ಕಿಡ್: ಸವಾರ ಮೃತ್ಯು

ಪುತ್ತೂರು: ಬೈಕ್ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಕುಂಬ್ರ ನಿವಾಸಿ ಭುವನ್ ಗೌಡ (34) ಸಾವಿಗೀಡಾದ ಘಟನೆ ಮಾ.3ರಂದು ತಿಂಗಳಾಡಿ ಸಮೀಪದ ತ್ಯಾಗರಾಜ ನಗರದಲ್ಲಿ ನಡೆದಿದೆ. ಕುಂಬ್ರ ಶಾಲಾ ಬಳಿಯ ನಿವಾಸಿಯಾಗಿರುವ ಧರ್ಮಪಾಲ ಮತ್ತು ಮೋಹಿನಿ ಅವರ ಪುತ್ರ ಭುವನ್ ಗೌಡ ನಿಂತಿಕಲ್ಲಿನಲ್ಲಿರುವ ಬಾರ್‌ನಲ್ಲಿ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದು, ಮಾ.3ರಂದು ಸಂಜೆ ಕೆಲಸ ಮುಗಿಸಿ ಮನೆ ಕಡೆಗೆ ಬೈಕಿನಲ್ಲಿ ಬರುತ್ತಿದ್ದ ವೇಳೆ ತ್ಯಾಗರಾಜನಗರದಲ್ಲಿ ಮಜ್ಜಾರಡ್ಕಕ್ಕೆ ತಿರುಗುವ ಬಳಿ ಬೈಕ್ ಸ್ಕಿಡ್ ಆಗಿ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಈ ವೇಳೆ ಭುವನ್ ರಸ್ತೆ ಬದಿಗೆ ಎಸೆಯಲ್ಪಟ್ಟಿದ್ದರು. ತಕ್ಷಣವೇ ಅವರನ್ನು ಸ್ಥಳೀಯರು ಪುತ್ತೂರು ಆಸ್ಪತ್ರೆಗೆ ಕರೆ ತಂದರೂ ಈ ವೇಳೆಗಾಗಲೇ ಅವರು ಮೃತಪಟ್ಟಿದ್ದರು. ಭುವನ್ ತಂದೆ, ತಾಯಿ ಹಾಗೂ ಸಹೋದರ ಹಾಗೂ ಇಬ್ಬರು ಸಹೋದರಿಯರನ್ನು ಅಗಲಿದ್ದಾರೆ. ಭುವನ್ ಗೌಡ ಅವರು ಹಲವು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದರು.

ಆನೆ ದಂತ ಅಕ್ರಮ ಮಾರಾಟ ಯತ್ನ: ಬಂಧನ

ಕಡಬ: ಆನೆ ದಂತವನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಕಡಬದ ವ್ಯಕ್ತಿಯನ್ನು ಅರಣ್ಯ ಸಂಚಾರಿದಳದ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಕಡಬದಲ್ಲಿ ಮಟನ್ ಸ್ಟಾಲ್ ನಡೆಸುತ್ತಿರುವ ತಾಜುದ್ದೀನ್ ಎಂಬಾತ ಆನೆ ದಂತಗಳನ್ನು ಸಂಗ್ರಹಿಸಿ ಹೆಚ್ಚಿನ ಹಣಕ್ಕೆ ಮಾರಾಟ ಮಾಡಲು ಸಂಚು ರೂಪಿಸಿರುವ ಆರೋಪದಲ್ಲಿ ಪೊಲೀಸರು ಬಂಧಿಸಿರುವುದಾಗಿ ತಿಳಿದು ಬಂದಿದೆ. ಖಚಿತ ಮಾಹಿತಿಯ ಆಧಾರದಲ್ಲಿ ಮಂಗಳೂರಿನಿಂದ ಕಡಬಕ್ಕೆ ಆಗಮಿಸಿದ ಮಂಗಳೂರಿನ ಪೊಲೀಸರ ತಂಡ ಸೋಮವಾರ ಕಡಬದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಮಾಲು ಸಮೇತ ವಶಕ್ಕೆ ಪಡೆದಿದ್ದಾರೆ. ಸುಮಾರು 26 ಕೆಜಿ ತೂಕದ ಆನೆ ದಂತವನ್ನು ಆರೋಪಿಯಿಂದ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಆರೋಪಿಯನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುವ ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದು. ಆನೆ ದಂತ ಮಾರಾಟ ಮಾಡುವ ಜಾಲದಲ್ಲಿ ಭಾಗಿಯಾಗಿರುವ ಇನ್ನಷ್ಟು ಆರೋಪಿಗಳಿಗಾಗಿ ಬಲೆ ಬೀಸಿದ್ದಾರೆ. ಕಡಬ ಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ವನ್ಯಜೀವಿಗಳ ಭೇಟೆಯಂತಹ ಅಕ್ರಮ ಚಟುವಟಿಕೆಗಳು ಹೆಚ್ಚಾಗಿ ಕೇಳಿ ಬರುತ್ತಿದ್ದು, ಆನೆದಂತದ ಮೂಲ, ಇದರ ಹಿಂದಿರುವ ಪ್ರಭಾವಿ ವ್ಯಕ್ತಿಗಳ ಬಗ್ಗೆ ಇಲಾಖೆಗಳು ಮಾಹಿತಿ ಕಲೆ ಹಾಕುತ್ತಿವೆ.

ಅಮೆರಿಕಾ ಸೇನಾ ನೆಲೆ ಬಳಿಯ ಉಡುಪಿಯವರಿಗೆ ಜೀವ ಭಯ!

ಉಡುಪಿ: ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷ ಗಲ್ಫ್ ರಾಷ್ಟ್ರಗಳಿಗೂ ಹರಡುತ್ತಿರುವ ಬೆನ್ನಲ್ಲೇ, ಉಡುಪಿ ಜಿಲ್ಲೆಯ ಪ್ರವಾಸಿಗರಲ್ಲಿ ಭೀತಿ ಹೆಚ್ಚಾಗಿದೆ. ಬುಧವಾರ ಯುಎಇಯಿಂದ ಮತ್ತೆ ಇಬ್ಬರು ಜಿಲ್ಲಾ ಸಹಾಯವಾಣಿಗೆ ಕರೆ ಮಾಡಿದ್ದು, ಇದರೊಂದಿಗೆ ನೆರವು ಕೋರಿದವರ ಒಟ್ಟು ಸಂಖ್ಯೆ 12ಕ್ಕೆ ಏರಿಕೆಯಾಗಿದೆ. ಸಂಕಷ್ಟದಲ್ಲಿರುವವರ ಪೈಕಿ ಯುಎಇಯಲ್ಲಿ 6, ಬಹ್ರೇನ್‌ನಲ್ಲಿ 5 ಹಾಗೂ ಇರಾನ್‌ನಲ್ಲಿ ಓರ್ವ ವ್ಯಕ್ತಿ ಇದ್ದಾರೆ.

ಅಮೆರಿಕಾ ಸೇನಾ ನೆಲೆ ಬಳಿ ಉಡುಪಿಯವರು

ಬಹ್ರೇನ್‌ನಲ್ಲಿರುವ ಅಮೆರಿಕಾ ಸೇನಾ ನೆಲೆ ಸಮೀಪವೇ ಉಡುಪಿ ಜಿಲ್ಲೆಯ ಕೆಲವರು ವಾಸವಾಗಿದ್ದು, ಯುದ್ಧದ ತೀವ್ರತೆಗೆ ಅವರಲ್ಲಿ ನಡುಕ ಹುಟ್ಟಿಸಿದೆ. ಕ್ಷಿಪಣಿ ದಾಳಿಯ ಭೀತಿಯಿಂದಾಗಿ ಅಲ್ಲಿನ ಪರಿಸ್ಥಿತಿ ಉದ್ವಿಗ್ನಗೊಂಡಿದೆ. 'ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿದ್ದರೂ ಈವರೆಗೆ ಸರ್ಕಾರದಿಂದ ಯಾವುದೇ ನೇರ ಸಂಪರ್ಕ ಅಥವಾ ಭರವಸೆ ಬಂದಿಲ್ಲ' ಎಂದು ಅವರು ಅಳಲು ತೋಡಿಕೊಂಡಿದ್ದಾರೆ. ಯುದ್ಧದ ಭೀಕರತೆಗೆ ಬೆದರಿರುವ ಕೆಲವರು, 'ಒಮ್ಮೆ ತಾಯ್ನಾಡಿಗೆ ಮರಳಿದರೆ ಸಾಕು, ಮತ್ತೆ ಎಂದಿಗೂ ವಾಪಸ್ ಬರುವುದಿಲ್ಲ' ಎನ್ನುವಷ್ಟು ಜಿಗುಪ್ಸೆ ವ್ಯಕ್ತಪಡಿಸಿದ್ದಾರೆ.



ಜೀವ ಉಳಿದರೆ ಸಾಕು

ಸಂಕಷ್ಟಕ್ಕೆ ಸಿಲುಕಿರುವ ಅನಿವಾಸಿಗಳ ಕುಟುಂಬದವರು ಉಡುಪಿಯಲ್ಲಿ ತೀವ್ರ ಆತಂಕದಲ್ಲಿದ್ದು, ದಿನವಿಡೀ ಸುದ್ದಿವಾಹಿನಿಗಳಿಗೆ ಅಂಟಿಕೊಂಡಿದ್ದಾರೆ. ಮಧ್ಯಪ್ರಾಚ್ಯದ ಆಕಾಶದಲ್ಲಿ ಕ್ಷಿಪಣಿಗಳ ಹಾರಾಟ ಮತ್ತು ಸ್ಫೋಟದ ಸದ್ದು ಅಲ್ಲಿರುವ ಕನ್ನಡಿಗರ ನಿದ್ದೆ ಕೆಡಿಸಿದೆ. ಒಟ್ಟಿನಲ್ಲಿ ಗಲ್ಫ್ ರಾಷ್ಟ್ರಗಳ ಸುರಕ್ಷತೆಯ ಬಗ್ಗೆ ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈ ಹಿನ್ನೆಲೆಯಲ್ಲಿ ಅನಿವಾಸಿಗಳು ಉದ್ಯೋಗಕ್ಕಿಂತ ಪ್ರಾಣ ರಕ್ಷಣೆಯೇ ಮುಖ್ಯ ಎಂದು ಭಾವಿಸುತ್ತಿದ್ದಾರೆ.



ಮಧ್ಯಪ್ರಾಚ್ಯದಲ್ಲಿ ಯುದ್ಧದ ತೀವ್ರತೆ

ಪ್ರಸ್ತುತ ಗಲ್ಫ್ ವಲಯದಲ್ಲಿ ಇರಾನ್‌ನ ಬ್ಯಾಲಿಸ್ಟಿಕ್ ಕ್ಷಿಪಣಿಗಳ ಅಬ್ಬರ ಜೋರಾಗಿದೆ. ಅಮೆರಿಕಾದ ಮಿಲಿಟರಿ ನೆಲೆಗಳ ಮೇಲೆ ದಾಳಿಯಾಗುವ ಸಾಧ್ಯತೆ ಇರುವುದರಿಂದ ಬಹ್ರೇನ್ ಮತ್ತು ಯುಎಇಯಲ್ಲಿ ಹೈ-ಅಲರ್ಟ್ ಘೋಷಿಸಲಾಗಿದೆ. ಕ್ಷಿಪಣಿ ನಿರೋಧಕ ವ್ಯವಸ್ಥೆಗಳ ಕಾರ್ಯಾಚರಣೆಯಿಂದಾಗಿ ಆಕಾಶದಲ್ಲಿ ನಿರಂತರ ಸೈರನ್ ಸದ್ದು ಕೇಳಿಬರುತ್ತಿದ್ದು, ವಿಮಾನಯಾನ ಸೇವೆಗಳು ಅಸ್ತವ್ಯಸ್ತಗೊಂಡಿವೆ. ಈ ತಾಂತ್ರಿಕ ಮತ್ತು ರಾಜತಾಂತ್ರಿಕ ಗೊಂದಲಗಳಿಂದಾಗಿ ಅನಿವಾಸಿ ಕನ್ನಡಿಗರನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರುವ ಪ್ರಕ್ರಿಯೆ ವಿಳಂಬವಾಗುತ್ತಿದೆ.

ಪ್ರೇಮ ಪ್ರಕರಣ ಸಂಧಾನದ ವೇಳೆ ಗಲಾಟೆ, ಚೂರಿ ಇರಿತ

ಅಪ್ರಾಪ್ತ ಸಹಿತ ಐವರ ಬಂಧನ

ಉಡುಪಿ: ಮಲ್ಪೆ ಬೀಚ್ ಸಮೀಪದ ಗೆಸ್ಟ್ ಹೌಸ್ ಒಂದರ ಬಳಿ ಮಂಗಳವಾರ ರಾತ್ರಿ ಪ್ರೇಮ ಪ್ರಕರಣವೊಂದರ ಸಂಧಾನದ ವೇಳೆ ಉಂಟಾದ ಗಲಾಟೆ ವಿಕೋಪಕ್ಕೆ ತಿರುಗಿ, ಸ್ಥಳೀಯ ಮೀನುಗಾರ ಮುಖಂಡ ಹಾಗೂ ಇತರರ ಮೇಲೆ ಚಾಕು ಇರಿತ ನಡೆದಿದೆ.

ಘಟನೆಯಲ್ಲಿ ಮಂಜುನಾಥ ಸಾಲಿಯಾನ್ ಯಾನೆ ಮಂಜು ಕೊಳ (52) ಸೇರಿದಂತೆ ಮೂವರು ಗಾಯಗೊಂಡಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ಅಪ್ರಾಪ್ತ ಸೇರಿ ಐವರು ಆರೋಪಿಗಳನ್ನು ಮಲ್ಪೆ ಪೊಲೀಸರು ಬಂಧಿಸಿದ್ದಾರೆ.

ಘಟನೆಯ ವಿವರ:

ಕಾಪು ತಾಲೂಕಿನ ಮೂಡು ಪಲಿಮಾರಿನ ಅಮೃತ್ ಭಂಡಾರಿ ಎಂಬಾತನ ತಂಗಿಯ ಪ್ರೇಮ ಪ್ರಕರಣದ ವಿಷಯವಾಗಿ ಮಂಜು ಕೊಳ ಹಾಗೂ ಇತರರು ಸಂಧಾನಕ್ಕೆ ಕುಳಿತಿದ್ದರು. ಈ ವೇಳೆ ಮಾತಿಗೆ ಮಾತು ಬೆಳೆದು ಆರೋಪಿಗಳು ಮಂಜು ಕೊಳ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಗಲಾಟೆ ತೀವ್ರಗೊಂಡಾಗ ಅಮೃತ್ ಭಂಡಾರಿ ಹಾಗೂ ಆತನ ತಂಡದವರು ತಮ್ಮ ಬಳಿಯಿದ್ದ ಚಾಕುವಿನಿಂದ ಮಂಜು ಕೊಳ ಅವರ ಹೊಟ್ಟೆಗೆ ಇರಿದಿದ್ದಾರೆ. ಇದನ್ನು ತಡೆಯಲು ಬಂದವರುಣ್ ಮತ್ತು ಲತೀಶ್ ಎಂಬವರಿಗೂ ಚಾಕು ಇರಿತವಾಗಿದ್ದು, ಸಂತೋಷ್ ಅಮೀನ್ ಮತ್ತು ಧನುಷ್ ಎಂಬವರ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಲಾಗಿದೆ.



ಆರೋಪಿಗಳ ಬಂಧನ

ಘಟನೆ ನಡೆದ ಬೆನ್ನಲ್ಲೇ ಕಾರ್ಯಪ್ರವೃತ್ತರಾದ ಮಲ್ಪೆ ಪೊಲೀಸರು ಬುಧವಾರ ಬೆಳಿಗ್ಗೆ ಐವರು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ಬಂಧಿತರನ್ನು ಮೂಡು ಪಲಿಮಾರಿನ ಅಮೃತ್ ಭಂಡಾರಿ (22), ಪ್ರಜ್ಞೇಶ್ (22), ಪುನೀತ್ ಪೂಜಾರಿ (24) ಹಾಗೂ ಕಾರ್ಕಳ ಇನ್ನಾ ಗ್ರಾಮದ ಅಭಿಜಿತ್ (20) ಎಂದು ಗುರುತಿಸಲಾಗಿದೆ. ಇವರ ಜೊತೆಗಿದ್ದ ಓರ್ವ ಅಪ್ರಾಪ್ತ ಬಾಲಕನನ್ನು ಬಾಲಾಪರಾಧ ನ್ಯಾಯ ಮಂಡಳಿಗೆ ಹಾಜರುಪಡಿಸಲಾಗಿದೆ.

ಕೋಮು ಹಿನ್ನೆಲೆ ಇಲ್ಲ

ಇದು ಕೇವಲ ವೈಯಕ್ತಿಕ ಕಾರಣ ಹಾಗೂ ಕುಟುಂಬದ ವಿಷಯಕ್ಕಾಗಿ ನಡೆದ ಗಲಾಟೆಯಾಗಿದ್ದು, ಇದಕ್ಕೆ ಯಾವುದೇ ಕೋಮು ಹಿನ್ನೆಲೆ ಇಲ್ಲ. ಸಾರ್ವಜನಿಕರು ಸಾಮಾಜಿಕ ಜಾಲತಾಣಗಳಲ್ಲಿ ವದಂತಿಗಳನ್ನು ಹರಡಬಾರದು. ಗಾಯಾಳುಗಳು ಪ್ರಸ್ತುತ ಉಡುಪಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಲ್ಪೆ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿದೆ.

ಹರಿರಾಮ್ ಶಂಕರ್, ಉಡುಪಿ ಎಸ್ ಪಿ

ನೇತ್ರಾವತಿ ನದಿಯ ತೀರದಲ್ಲಿ ಆಧಾರ್ ಕಾರ್ಡ್‌ಗಳ ರಾಶಿ ಪತ್ತೆ!

ಬಂಟ್ವಾಳ : ಪುದು ಗ್ರಾಮದ ಹತ್ತನೇ ಮೈಲ್‌ಕಲ್ಲು ಸಮೀಪ ನೇತ್ರಾವತಿ ನದಿ ತೀರದಲ್ಲಿ ಸ್ಥಳೀಯ ನಿವಾಸಿಗಳ ವಿಳಾಸ ಹೊಂದಿರುವ ನೂರಾರು ಆಧಾರ್ ಕಾರ್ಡ್‌ಗಳ ರಾಶಿ ಪತ್ತೆಯಾಗಿರುವ ಅಂಶ ಬೆಳಕಿಗೆ ಬಂದಿದ್ದು, ಈ ವಿದ್ಯಮಾನ ಸ್ಥಳೀಯವಾಗಿ ಹತ್ತು ಹಲವು ಅನುಮಾನಗಳನ್ನು ಹುಟ್ಟು ಹಾಕಿದೆ.

ಮಂಗಳವಾರ ಸಂಜೆ ನದಿಯಲ್ಲಿ ತೇಲಿ ಬರುತ್ತಿದ್ದ ಆಧಾರ್ ಕಾಡ್‌ಗಳನ್ನು ಗಮನಿಸಿದ ಸ್ಥಳೀಯರು ಈ ಮಾಹಿತಿಯನ್ನು ಸಂಬಂಧಿಸಿದವರಲ್ಲಿ ಹಂಚಿಕೊಂಡಿದ್ದಾರೆ. ಈ ವಿಷಯ ತಿಳಿದು ಹಲವರು ಸ್ಥಳಕ್ಕೆ ತೆರಳಿ ಪರಿಶೀಲನೆಯನ್ನು ನಡೆಸಿದ್ದು, ಪುದು ಗ್ರಾಮದ ಹಲವಾರು ಮನೆಗಳ ವಿಳಾಸ ಹೊಂದಿರುವ ಕಾರ್ಡ್‌ಗಳು ನದಿ ಬದಿಯಲ್ಲಿ ಪತ್ರೆಯಾಗಿದೆಯೆನ್ನಲಾಗಿದೆ

ಈ ಬಗ್ಗೆ ಪ್ರತಿಕ್ರಿಯಿಸಿರುವ ಪುದು ಗ್ರಾಮ ಪಂಚಾಯತ್ ಅಧ್ಯಕ್ಷ ರಮ್ಲಾನ್



ಮಾರಿಪಳ್ಳ, ಈಬಗ್ಗೆ ಸ್ಥಳೀಯರು ಕರೆ ಮಾಡಿ ತಿಳಿಸಿದ ತಕ್ಷಣ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ ನೂರಾರು ಆಧಾರ್ ಕಾರ್ಡ್ ಗಳು ನದಿ ತೀರದಲ್ಲಿ ಪತ್ತೆಯಾಗಿದ್ದು,ಇದೊಂದು ಗಂಭೀರ ವಿಷಯವಾಗಿದೆ ಎಂದು ತಿಳಿಸಿದ್ದಾರೆ.

ಗ್ರಾಮಸ್ಥರಿಗೆಆಧಾರ್‌ಕಾರ್ಡ್‌ತಲುಪದೆ ಸಾರ್ವಜನಿಕರು ಹಣ ನೀಡಿ ಸೈಬರ್ ಕೇಂದ್ರಗಳಿಂದಪ್ರತಿಗಳನ್ನುಪಡೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.ಈ ವಿಚಾರದ ಕುರಿತಂತೆ ಸೂಕ್ತ ತನಿಖೆಯಾಗಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಉನ್ನತಾಧಿಕಾರಿಗಳು ಹಾಗೂ. ಸ್ಥಳೀಯ ಶಾಸಕರಿಗೂ ಗ್ರಾಮ ಪಂಚಾಯತ್ ವತಿಯಿಂದ ದೂರು ಸಲ್ಲಿಸಲಾಗುವುದು ಎಂದು ತಿಳಿಸಿದ್ದಾರೆ.

ಈಜುಕೊಳ ಕಾಮಗಾರಿ ವೇಳೆ ಶಾಕ್ ತಗುಲಿ ಪ್ಲಂಬರ್ ದಾರುಣ ಮೃತ್ಯು

ಕಾಸರಗೋಡು: ಸ್ವಿಮ್ಮಿಂಗ್ ಪೂಲ್‌ನ ಕೆಲಸದ ಮಧ್ಯೆ ಪ್ಲಂಬಿಂಗ್ ಕೆಲಸ ಮಾಡುತ್ತಿದ್ದ ಯುವಕ ಶಾಕ್ ತಗುಲಿ ದಾರುಣವಾಗಿ ಮೃತಪಟ್ಟ ಘಟನೆ ನಡೆದಿದೆ. ಬೆಳ್ಳೂರು ಮುಕುಂಡಂಗೋಳಿ ನಿವಾಸಿ ಚಿಕ್ಕಪ್ಪ ರೈ ಮತ್ತು ರತ್ನಾವತಿ ದಂಪತಿಯ ಪುತ್ರ ಪ್ರಭಾಕರ ರೈ (39) ಮೃತಪಟ್ಟ ಯುವಕ.

ಮಧೂರು ಪಟ್ಲ ಸರಕಾರಿ ಶಾಲೆಯ ಸಮೀಪದ ಅಬ್ದುಲ್ಲ ಎಂಬವರ ಮನೆ ಅಂಗಳದ ಈಜು ಕೊಳದಲ್ಲಿ ದುರಂತ ಸಂಭವಿಸಿದೆ.

ಮಂಗಳವಾರ ಸಂಜೆ ಸಂಭವಿಸಿದ ದುರಂತದ ಬಗ್ಗೆ ರಾತ್ರಿ ಗಮನಕ್ಕೆ ಬಂದಿದ್ದು, ಅಗ್ನಿಶಾಮಕ ದಳ ತಲುಪಿ ಪ್ರಭಾಕರ ರೈ ಯವರ ಮೃತದೇಹವನ್ನು ನೀರಿನಿಂದ ಮೇಲೆತ್ತಿ ಕಾಸರಗೋಡು ಜನರಲ್ ಆಸ್ಪತ್ರೆಯ ಶವಾಗಾರಕ್ಕೆ ತಲುಪಿಸಿದೆ.

ಮುಹಾದ್ ಎಂಬ ವ್ಯಕ್ತಿಗೆ



- ಬೆಳ್ಳೂರು ಮುಕುಂಡಂಗೋಳಿ ನಿವಾಸಿ ಚಿಕ್ಕಪ್ಪ ರೈ ಮತ್ತು ರತ್ನಾವತಿ ದಂಪತಿಯ ಪುತ್ರ, ಪ್ರಭಾಕರ ರೈ ಮೃತಪಟ್ಟ ಯುವಕ.
- ಅಗ್ನಿಶಾಮಕ ದಳ ತಲುಪಿ ಪ್ರಭಾಕರ ರೈ ಯವರ ಮೃತದೇಹವನ್ನು ನೀರಿನಿಂದ ಮೇಲೆತ್ತಿ ಕಾಸರಗೋಡು ಜನರಲ್ ಆಸ್ಪತ್ರೆಯ ಶವಾಗಾರಕ್ಕೆ ತಲುಪಿಸಿದೆ.

ಸ್ವಿಮ್ಮಿಂಗ್ ಪೂಲ್‌ನ ನಿರ್ಮಾಣ ಹೊಣೆ ನೀಡಲಾಗಿತ್ತು. ಅವರ ಸಹಾಯಕನಾಗಿ ಪ್ರಭಾಕರ ರೈ ಬಂದಿದ್ದರು. ರಂಜಾನ್ ವ್ರತಾಚರಣೆಯಲ್ಲಿದ್ದ ಕಾರಣ ಮುಹಾದ್ ಬೇಗ ಕೆಲಸ ಮುಗಿಸಿದ್ದರು. ಪ್ರಭಾಕರ ರೈಯಲ್ಲಿ ಕೆಲಸ ನಿಲ್ಲಿಸಿ ಹೋಗಲು ಹೇಳಿದ ಬಳಿಕ ತಾನು ತೆರಳಿರುವುದಾಗಿ ಮುಹಾದ್ ತಿಳಿಸಿದ್ದಾರೆ. ಆದರ ಬಳಿಕ ಅಪಾಯ ಸಂಭವಿಸರಬೇಕೆಂದು ಶಂಕಿಸಲಾಗಿದೆ. ಕೆಲಸ ಮುಗಿಸಿ ಪ್ರಭಾಕರ ರೈ ಮನೆಗೆ ಬಾರದ ಹಿನ್ನೆಲೆಯಲ್ಲಿ ನಡೆಸಿದ ತನಿಖೆಯಲ್ಲಿ ಮೃತಪಟ್ಟ ಮಾಹಿತಿ ತಿಳಿದುಬಂದಿದೆ. ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದಾಗ 4 ಗಂಟೆ ಕಳೆದ ಬಳಿಕ ದುರಂತ ಸಂಭವಿಸಿರುವುದಾಗಿ ಸ್ಪಷ್ಟಗೊಂಡಿದೆ.

ಮೃತರು ತಂದೆ, ತಾಯಿ, ಪತ್ನಿ ಅಕ್ಷತಾ, ಏಕಪುತ್ರ ಸುಶಾನ್ ಅವರನ್ನು ಅಗಲಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ | ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್‌ಗುಂಡೂರಾವ್ ಸ್ಪಷ್ಟ ಸೂಚನೆ

ಸಮಸ್ಯೆ ಪರಿಹರಿಸಿಕೊಂಡು ಇ-ಖಾತಾ ಮತ್ತು ಇ-ಸ್ವತ್ತು ತ್ವರಿತ ನೀಡಲು ಕ್ರಮ

ಮಂಗಳೂರು: ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತ್‌ಗಳು ಇ-ಖಾತಾ ಮತ್ತು ಇ-ಸ್ವತ್ತುಗಳನ್ನು ತ್ವರಿತವಾಗಿ ನೀಡಲು ಕ್ರಮ ವಹಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್‌ಗುಂಡೂರಾವ್ ಹೇಳಿದರು.

ಅವರು ಬುಧವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳ ಜೊತೆ ಸಭೆ ನಡೆಸಿ ಮಾತನಾಡಿದರು.

ಸಾರ್ವಜನಿಕರು ಕಟ್ಟಡ ನಿರ್ಮಾಣ, ನಿವೇಶನ ನಕ್ಷೆ ಮಂಜೂರಾತಿ ಸೇರಿದಂತೆ ವಿವಿಧ ಮಂಜೂರಾತಿಗಳಿಗೆ ಇ-ಖಾತಾ ಮತ್ತು ಇ-ಸ್ವತ್ತು ಅಗತ್ಯವಾಗಿದ್ದು, ತಾಂತ್ರಿಕ ಸಮಸ್ಯೆಯಿಂದಾಗಿ ಇ-ಖಾತಾ ನೀಡಿಕೆ ವಿಳಂಬವಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿವೆ. ಈ ನಿಟ್ಟಿನಲ್ಲಿ ಇಂತಹ ಸಮಸ್ಯೆಗಳನ್ನು ಪರಿಹರಿಸಲು ಸಂಬಂಧಿಸಿದವರೊಂದಿಗೆ ಕ್ಷಿಪ್ರವಾಗಿ ಚರ್ಚಿಸಿ ಸಮಸ್ಯೆ ಪರಿಹರಿಸಲು ಸೂಚಿಸಿದರು.

ಪ್ರಸ್ತುತ ಇ-ಖಾತಾ ನೀಡಿಕೆ ಸಮಸ್ಯೆ ಬಗೆಹರಿದಿದ್ದು, ಫೆಬ್ರವರಿ ತಿಂಗಳಲ್ಲಿ 1058 ಇ-ಖಾತಾಗಳನ್ನು ನೀಡಲಾಗಿದೆ ಎಂದು ಮಹಾನಗರಪಾಲಿಕೆ ಆಯುಕ್ತರು ಸಭೆಗೆ ಮಾಹಿತಿ ನೀಡಿದರು.

ಮಂಗಳೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಜಿಲ್ಲಾ ರಂಗಮಂದಿರ ಕಾಮಗಾರಿಗೆ ಶೀಘ್ರವೇ ಚಾಲನೆ ನೀಡಬೇಕು. ಬಂಟ್ವಾಳದಲ್ಲಿ ನಿರ್ಮಾಣಗೊಳ್ಳುತ್ತಿರುವ ಪಂಜೆ ಮಂಗೇಶರಾಯ ಭವನ ತ್ವರಿತವಾಗಿ ಪೂರ್ಣಗೊಳಿಸಬೇಕು. ನಗರದ ಅತ್ತಾವರದಲ್ಲಿ ಕುದ್ಮುಲ್ ರಂಗರಾವ್ ಸಮಾಧಿ ಸ್ಥಳ ಅಭಿವೃದ್ಧಿಗೆ ಆರಣ್ಯ ತಕರಾರನ್ನು ಶೀಘ್ರದಲ್ಲಿ ಬಗೆಹರಿಸಲು ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿದರು.

ಹೆಚ್ಚುವರಿ ಸಿಬ್ಬಂದಿಯನ್ನು ಬಳಸಿಕೊಳ್ಳಿ

ಗ್ರಾಮಾಂತರ ಪ್ರದೇಶದಲ್ಲಿ ವಿನ್ಯಾಸ, ನಕ್ಷೆ ಅನುಮೋದನೆ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಯೋಜನಾ ಪ್ರಾಧಿಕಾರಗಳು ಹೆಚ್ಚುವರಿ ಸಿಬ್ಬಂದಿಯನ್ನು ಬಳಸಿಕೊಳ್ಳಬೇಕು ಎಂದು ಸಚಿವರು ತಿಳಿಸಿದರು.



ಉದ್ಯಮಗಳೊಂದಿಗೆ ಮಾತುಕತೆ ನಡೆಸಿ

ತ್ಯಾಜ್ಯ ಶುದ್ಧೀಕರಣಘಟಕದಲ್ಲಿ ಶುದ್ಧೀಕರಣಗೊಂಡ ನೀರನ್ನು ಬೃಹತ್ ಕೈಗಾರಿಕೆಗಳು ಬಳಸುವಂತಾಗಲು ಸಂಬಂಧಿಸಿದ ಉದ್ಯಮಗಳೊಂದಿಗೆ ಮಾತುಕತೆ ನಡೆಸುವಂತೆ ಮಹಾನಗರಪಾಲಿಕೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

- ಮಂಗಳೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಜಿಲ್ಲಾ ರಂಗಮಂದಿರ ಕಾಮಗಾರಿಗೆ ಶೀಘ್ರವೇ ಚಾಲನೆ ನೀಡಬೇಕು.
- ಬಂಟ್ವಾಳದಲ್ಲಿ ನಿರ್ಮಾಣಗೊಳ್ಳುತ್ತಿರುವ ಪಂಜೆ ಮಂಗೇಶರಾಯ ಭವನ ತ್ವರಿತವಾಗಿ ಪೂರ್ಣಗೊಳಿಸಬೇಕು.
- ನಗರದ ಅತ್ತಾವರದಲ್ಲಿ ಕುದ್ಮುಲ್ ರಂಗರಾವ್ ಸಮಾಧಿ ಸ್ಥಳ ಅಭಿವೃದ್ಧಿಗೆ ಆರಣ್ಯ ತಕರಾರನ್ನು ಶೀಘ್ರದಲ್ಲಿ ಬಗೆಹರಿಸಿ.

ಥರ್ಡ್-ಪಾರ್ಟಿ ಪರಿಶೀಲನೆ ನಡೆಸಿ

ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಜಲಸಿರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು ಥರ್ಡ್-ಪಾರ್ಟಿ ಪರಿಶೀಲನೆ ನಡೆಸುವಂತೆ ದಿನೇಶ್ ಗುಂಡೂರಾವ್ ಸೂಚಿಸಿದರು.

ಜಿಲ್ಲೆಯಲ್ಲಿ ಹೊಸದಾಗಿ ನಿರ್ಮಾಣಗೊಂಡು ಕಾಮಗಾರಿ ಪೂರ್ಣಗೊಂಡಿರುವ ಹಾಸ್ಟೆಲ್ ಕಟ್ಟಡಗಳ ಉದ್ಘಾಟನೆಗೆ ಕಾಯದೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ., ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ, ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್‌ಕುಮಾರ್, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ ಕಾರ್ಬಾರಿ, ಅಪರಜಿಲ್ಲಾಧಿಕಾರಿ ರಾಜು ಕೆ, ಮತ್ತಿತರರು ಇದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಗುರುವಾರ 05, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
34° 24°	32° 24°


ಪುಟ 5
ಕುಂಬಳೆ ಪಂಚಾಯತ್ ಮಟ್ಟದ ಹಿಂದು ಏಕತಾ ಸಮ್ಮೇಳನ


ಪುಟ 6
ನೀರಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ ಯಿಡ್ತರೆ ಗ್ರಾಮದ ಜನ

ಹೋಳಿ ಹಬ್ಬದ ಸಂಭ್ರಮಕ್ಕೆ ಬ್ರಹ್ಮಾವರ ತಾಲೂಕಿನ ನೀಲಾವರ ಕೆಳಕುಂಜಾಲಿನಲ್ಲಿ ಸಾಂಪ್ರದಾಯಿಕ ಟಚ್



ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ನೀಲಾವರ ಕೆಳಕುಂಜಾಲು ಶ್ರಿ ತುಳಜಾ ಭವಾನಿ ಹತ್ತು ಸಮಸ್ತರಿಂದ ಸಾಂಪ್ರದಾಯಿಕವಾಗಿ ಹೋಳಿ ಹಬ್ಬವನ್ನು ವಿಶೇಷವಾಗಿ ಆಚರಿಸಲಾಯಿತು. ಸಾಂಪ್ರದಾಯಿಕ ವೇಷ ಭೂಷಣ, ವಾದ್ಯಗಳೊಂದಿಗೆ ಇಲ್ಲಿ ಹಿರಿಯರು, ಕಿರಿಯರೆನ್ನದೆ ಒಟ್ಟಾಗಿ ಜನಪದ ಹಾಡು ಹಾಡಿ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿಕೊಂಡರು.

ಎಲ್ಲೆಡೆ ಸತತವಾಗಿ ಹೆಚ್ಚುತ್ತಿರುವ ಉಷ್ಣಾಂಶ
ಖಾರಾವಳಿ @37°!
ಬಾ ಮಳೆಯೇ ಬಾ ಎನ್ನುತ್ತಿದ್ದಾರೆ ಜನ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾತಾವರಣದ ತಾಪಮಾನ ಸತತವಾಗಿ ಏರಿಕೆಯಾಗುತ್ತಿದ್ದು, ಬುಧವಾರ ಗರಿಷ್ಠ 37 ಡಿಗ್ರಿ ಸೆಲ್ಸಿಯೆಸ್ ಮುಟ್ಟಿದೆ.

ಬಿಸಿಲು ಜನಜೀವನದ ಮೇಲೆ ಸ್ಪಷ್ಟ ಪರಿಣಾಮಗಳನ್ನು ಬೀರುತ್ತಿದ್ದು, ಜನತೆ ಭರ್ಜರಿಯಾದ ಮಳೆಯೊಂದರ ನಿರೀಕ್ಷೆಯಲ್ಲಿದ್ದಾರೆ. ಜಿಲ್ಲೆಯ ಪ್ರಮುಖ ನಗರ ಮಂಗಳೂರು ಸಹಿತ ಹಲವೆಡೆ ಮಧ್ಯಾಹ್ನ ವೇಳೆ ರಸ್ತೆ ಬಿಕೋ ಎನ್ನುವ ಸ್ಥಿತಿ ಬಂದಿದೆ. ಬಿಸಿಲಿನ ತೀವ್ರತೆ ತಡೆಯಲು ಸಾರ್ವಜನಿಕರು ತಂಪು ಪಾನೀಯಗಳು, ಎಳನೀರು ಮತ್ತು ಹಣ್ಣುಗಳತ್ತ ಹೆಚ್ಚು ಮುಖಮಾಡುತ್ತಿದ್ದಾರೆ.

ಸದ್ಯಕ್ಕಿಲ್ಲ ಎಲ್ಲಿಗೂ 'ಮಳೆ ಭಾಗ್ಯ'!

ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಮುಂದಿನ ಕೆಲವು ದಿನಗಳ ಕಾಲ ಇದೇ ಮಾದರಿ ವಾತಾವರಣ ಇರಲಿದ್ದು, ಕರಾವಳಿ ಜಿಲ್ಲೆಗಳಲ್ಲಿ ಸದ್ಯ ಯಾವುದೇ ಮಳೆಯ ಲಕ್ಷಣ ಇಲ್ಲ, ಕೃಷಿ ಕ್ಷೇತ್ರದಲ್ಲೂ ಇದರ ಸ್ಪಷ್ಟ ಪರಿಣಾಮ ಕಂಡುಬರುತ್ತಿದ್ದು, ನೀರಾವರಿ ಅವಲಂಬಿತ ಬೆಳೆಗಳಿಗೆ ಒತ್ತಡ ಹೆಚ್ಚಾಗಿದೆ. ಕುಡಿಯುವ ನೀರಿನ ಬೇಡಿಕೆ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಸ್ಥಳೀಯ ಆಡಳಿತ ನೀರಿನ ಸಮರ್ಪಕ ಪೂರೈಕೆಗೆ ಕ್ರಮಗಳನ್ನು ಕೈಗೊಂಡಿದೆ. ಜಿಲ್ಲೆಯಲ್ಲಿ ತಾಪಮಾನ ಏರಿಕೆ ಹವಾಮಾನ ಬದಲಾವಣೆಯ ಸೂಚಕವಷ್ಟೇ ಅಲ್ಲ, ಎಚ್ಚರಿಕೆಯ ಘಂಟೆಯೂ ಆಗಿದೆ.



'ಹೀಟ್ ಸ್ಟ್ರೋಕ್' ಬಗ್ಗೆ ಇರಲಿ ತುಸು ಎಚ್ಚರಿಕೆ...
ಆರೋಗ್ಯ ಇಲಾಖೆ ನಾಗರಿಕರಿಗೆ ಮಧ್ಯಾಹ್ನ 12ರಿಂದ 3 ಗಂಟೆಯವರೆಗೆ ಅನಾವಶ್ಯಕವಾಗಿ ಹೊರಗಡೆ ತೆರಳದಂತೆ ಸೂಚನೆ ನೀಡಿದೆ. ಇದಲ್ಲದೆ ಬಿಸಿಲಿಗೆ ತೆರಳುವುದರಿಂದಾಗಿ ಹೀಟ್ ಎಕ್ಸಾಸ್ಟನ್ ಮತ್ತು ಹೀಟ್ ಸ್ಟ್ರೋಕ್ ಪ್ರಕರಣಗಳು ಹೆಚ್ಚುವ ಸಾಧ್ಯತೆ ಇರುವುದಾಗಿ ವೈದ್ಯರು ಕೂಡಾ ಎಚ್ಚರಿಸಿದ್ದಾರೆ.

ಆಕಸ್ಮಿಕ ಬೆಂಕಿಗೆ ಹೊತ್ತಿ ಉರಿದ ಒಣ ಹುಲ್ಲು

ಕೈಕಂಬ: ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಹೊಲದಲ್ಲಿದ್ದ ಒಣ ಹುಲ್ಲಿಗೆ ಬೆಂಕಿ ತಗುಲಿ ಸುತ್ತುಮುತ್ತ ಹರಡಿ ಆತಂಕ ಸೃಷ್ಟಿಸಿದ ಘಟನೆ ಗಂಜಿಮಠ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಳಲಿಯ ಕೆಳಗಿನ ಬಾಕಿಮಾರು ಎಂಬಲ್ಲಿ ಬುಧವಾರ ಮಧ್ಯಾಹ್ನ ನಡೆದಿದ್ದು, ಸ್ಥಳೀಯ ಯುವಕರ ಸಮಯಪ್ರಜ್ಞೆಯಿಂದಾಗಿ ಪಕ್ಕದ ಮನೆಗಳಿಗೆ ಬೆಂಕಿ ಹರಡುವುದು ತಪ್ಪಿದೆ. ಮಧ್ಯಾಹ್ನ ಒಂದೂವರೆ ಗಂಟೆ ಸುಮಾರಿಗೆ ಹೊಲದಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡು ಗದ್ದೆಯಲ್ಲಿದ್ದ ಒಣ ಹುಲ್ಲಿಗೆ ಬೆಂಕಿ ಹರಡಿದೆ. ಬಿಸಿಲಿಗೆ ಒಣಗಿದ್ದ ಹುಲ್ಲಿಗೆ ತಗುಲಿದ್ದ ಬೆಂಕಿ ಗಾಳಿಗೆ ವ್ಯಾಪಕವಾಗಿ ಸುತ್ತಮುತ್ತಲಿನ ಪ್ರದೇಶಕ್ಕೆ ವ್ಯಾಪಿಸಿತ್ತು.

36 ಡಿಗ್ರಿ ಸೆಲ್ಸಿಯಸ್ ದಾಟಿದ ತಾಪ
ಉರಿಬಿಸಿಲಿಗೆ ಉಫ್ ಎನ್ನುತ್ತಿದೆ ಉಡುಪಿ!!
ಕೃಷಿಕರು, ಕಾರ್ಮಿಕರು ಹೈರಾಣ

ಉಡುಪಿ: ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಸೂರ್ಯನ ಪ್ರಖರತೆ ವಿಪರೀತವಾಗಿದ್ದು ಮಾರ್ಚ್ ಆರಂಭದಲ್ಲೇ ಜನತೆ ಉರಿ ಬಿಸಿಲಿನ ತಾಪಕ್ಕೆ ತತ್ತರಿಸಿ ಹೋಗಿದ್ದಾರೆ.


ಬುಧವಾರ ಜಿಲ್ಲೆಯ ಗರಿಷ್ಟ ತಾಪಮಾನ 36 ಡಿಗ್ರಿ ಸೆಲ್ಸಿಯಸ್ ದಾಟಿದ್ದು ಕರಾವಳಿಯ ಗಾಳಿಯಲ್ಲಿನ ತೇವಾಂಶದಿಂದಾಗಿ ಅಸಹನೀಯ ಸೆಖೆಯು ಜನರನ್ನು ಹೈರಾಣಾಗಿಸಿದೆ.

ಹಗಲು ರಸ್ತೆಗೆ ಬರುವುದೇ ಸವಾಲು

ಬೆಳಿಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯ ವರೆಗೆ ರಸ್ತೆಗಿಳಿಯುವುದೇ ಸವಾಲಾಗಿ ಪರಿಣಮಿಸಿದೆ. ಕೃಷಿಕರು, ಕಾರ್ಮಿಕರು ಹಾಗೂ ದಿನನಿತ್ಯದ ಉದ್ಯೋಗಿಗಳು ಬಿಸಿಲಿನ ಬೇಗೆಯಿಂದಾಗಿ ಸುಸ್ತಾಗುತ್ತಿದ್ದು ತಂಪು ಪಾನೀಯ ಹಾಗೂ ಎಳನೀರಿನ ಮೊರೆ ಹೋಗುತ್ತಿದ್ದಾರೆ. ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮುಂದಿನ ಎರಡು ದಿನಗಳ ಕಾಲ ತಾಪಮಾನ ಮತ್ತಷ್ಟು ಏರಿಕೆಯಾಗುವ ಸಾಧ್ಯತೆಯಿದೆ.

ತಂಪುಪಾನೀಯಗಳಿಗೆ ಬೇಡಿಕೆ ಹೆಚ್ಚಳ

ಸೆಕೆಯ ವಾತಾವರಣದಿಂದ ಜಿಲ್ಲೆಯಲ್ಲಿ ತಂಪು ಪಾನೀಯಗಳಿಗೆ ಬೇಡಿಕೆ ಹೆಚ್ಚಳವಾಗಿದೆ. ಎಳನೀರು ಮಾರಾಟ ಕೂಡಾ ತೇಜಿ ಪಡೆದುಕೊಂಡಿದ್ದು, ವ್ಯಾಪಾರಿಗಳಿಗೆ ಖುಷಿ ನೀಡಿದೆ.



ಹೆಚ್ಚಿನ ಪ್ರಮಾಣದಲ್ಲಿ ಶುದ್ಧ ನೀರು ಸೇವಿಸಿ

ಬಿಸಿಲಿನ ತಾಪದಿಂದ ನಿರ್ಜಲೀಕರಣ ಸಂಭವಿಸದಂತೆ ಸಾರ್ವಜನಿಕರು ಹೆಚ್ಚಿನ ಪ್ರಮಾಣದಲ್ಲಿ ನೀರು ಸೇವಿಸಬೇಕು ಹಾಗೂ ಮಧ್ಯಾಹ್ನದ ಅವಧಿಯಲ್ಲಿ ಅನಗತ್ಯವಾಗಿ ಹೊರಗೆ ಅಲೆಯಬಾರದು. ನಗರದ ಮಾರುಕಟ್ಟೆ ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಮಧ್ಯಾಹ್ನದ ವೇಳೆಗೆ ಜನರ ಸಂಚಾರ ವಿರಳವಾಗುತ್ತಿದ್ದು, ಮಾರ್ಚ್ ತಿಂಗಳಲ್ಲೇ ಮೇ ತಿಂಗಳ ಬಿಸಿಲಿನ ಅನುಭವವಾಗುತ್ತಿದೆ.

ಸುತ್ತಮುತ್ತ

ಕಾಸರಗೋಡಿನಲ್ಲಿ ಸುಡುಬಿಸಿಲು: ಎಲ್ಲೆಡೆ ಮಳೆಯದ್ದೇ ನಿರೀಕ್ಷೆ

ಕಾಸರಗೋಡು: ಜಿಲ್ಲೆಯಲ್ಲಿ ಬುಧವಾರ ದಿನಪೂರ್ತಿ ಮೋಡ ಹಾಗೂ ಬಿಸಿಲಿನ ಜುಗಲ್‌ಬಂದಿ ಕಾಣಿಸಿಕೊಂಡಿದ್ದು, ತಾಪಮಾನ ಗರಿಷ್ಠ 33 ಡಿಗ್ರಿಯನ್ನು ತಲುಪಿದೆ.

ಅಸಾಧ್ಯ ಸೆಕೆಗೆ ನಾಗರಿಕರು ಹೈರಾಣ

ಅಸಾಧ್ಯ ಸೆಕೆಯಿಂದ ನಾಗರಿಕರು ಬಳಲಿಬೆಂಡಾಗಿದ್ದು, ಮಳೆಯೊಂದರ ನಿರೀಕ್ಷೆಯಲ್ಲಿದ್ದಾರೆ. ಈ ನಡುವೆ ಆರೋಗ್ಯ ಇಲಾಖೆ ಮುನ್ನೆಚ್ಚರಿಕೆ ನೀಡಿದ್ದು, ಬಿಸಿಲಿನ ತೀವ್ರತೆಯಿಂದ ರಕ್ಷಿಸಿಕೊಳ್ಳುವಂತೆ ಸಲಹೆ ನೀಡಿದೆ. ಅನಗತ್ಯ ಬಿಸಿಲಿಗೆ ಮೈಯೊಡ್ಡದಂತೆ ಸೂಚಿಸಿದೆ.

4 ಲಕ್ಷ ರೂ. ಮೌಲ್ಯದ ಚಿನ್ನದ ಸರ ಹಿಂತಿರುಗಿಸಿದ ಬಸ್ ಕಂಡಕ್ಟರ್ !

ಮೂಡುಬಿದಿರೆ: ಖಾಸಗಿ ಬಸ್‌ನಲ್ಲಿ ಸಿಕ್ಕ ಸುಮಾರು 4 ಲಕ್ಷ ಮೌಲ್ಯದ ಚಿನ್ನದ ಸರವನ್ನು ನಿರ್ವಾಹಕರೊಬ್ಬರು ವಾರಿಸುದಾರರಿಗೆ ಹಿಂತಿರುಗಿಸಿ ಪ್ರಾಮಾಣಿಕತೆ ಮೆರೆದಿದ್ದಾರೆ. ಹೋಳಿ ಹಬ್ಬದ ಪ್ರಯುಕ್ತ ಕುಂದಾಪುರ ನಿವಾಸಿ, ನಿಟ್ಟೆ ಎಂಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ಬೆಲೆಬಾಳುವ ಚಿನ್ನದ ಸರ ಧರಿಸಿಕೊಂಡು



ಸೋಮವಾರ ಕಾಲೇಜಿಗೆ ಬಂದಿದ್ದಳು. ಮಧ್ಯಾಹ್ನ ಕಾರ್ಕಳದಿಂದ ನಿಟ್ಟೆ ಮಾರ್ಗ ಮಂಗಳೂರಿಗೆ ಹೋಗುವ ವಿಶಾಲ್ ಬಸ್ ಹತ್ತಿ, ಪಡುಬಿದ್ರೆಯಲ್ಲಿ ಇಳಿದು ಇನ್ನೊಂದು ಬಸ್ ಹಿಡಿದು ಊರಿಗೆ ಹೋಗಿದ್ದಳು. ಮನೆಗೆ ಹೋದಾಗ ಈಕೆಯ ಕತ್ತಿನಲ್ಲಿದ್ದ ಚಿನ್ನದ ಸರ ಎಲ್ಲೊ ಬಿದ್ದಿರುವುದು ಗಮನಕ್ಕೆ ಬಂದಿತ್ತು. ಇತ್ತ ವಿಶಾಲ್ ಬಸ್ ಕಂಡಕ್ಟರ್ ಪಡುಮಾರ್ನಾಡಿನ ಕೋಡಿಕುಂಡಾವು ರಾಜೇಶ್ ಹೆಗ್ಡೆ ಬಸ್ಸಿನೊಳಗೆ ಬಿದ್ದಿದ್ದ ಚಿನ್ನದ ಸರವನ್ನು ತೆಗೆದಿಟ್ಟುಕೊಂಡು ಈ ಬಗ್ಗೆ ವಾಟ್ಸಪ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದರು. ವಿದ್ಯಾರ್ಥಿನಿಯ ಸಂಬಂಧಿ ಬಸ್ಸಿನ ಟಿಕೇಟ್ ಪರಿವೀಕ್ಷಕರೊಬ್ಬರ ಮೂಲಕ ವಿಷಯ ವಾರಿಸುದಾರರಿಗೆ ತಿಳಿಸಿ ಖಚಿತಪಡಿಸಿಕೊಂಡ ಬಳಿಕ ಚಿನ್ನ ಅವರಿಗೆ ಹಿಂತಿರುಗಿಸಲಾಗಿದೆ. ಬಸ್ ಕಂಡಕ್ಟರ್ ಪ್ರಾಮಾಣಿಕತೆಗೆ ಸಾರ್ವಜನಿಕರ ಪ್ರಶಂಸೆ ವ್ಯಕ್ತವಾಗಿದೆ.

ಲಾಟರಿ ವ್ಯವಹಾರ: ನಗದು ಸಹಿತ ಇಬ್ಬರು ಪೊಲೀಸರ ವಶಕ್ಕೆ

ಮಂಜೇಶ್ವರ: ಸಮಾನಾಂತರ ಲಾಟರಿ ವ್ಯವಹಾರ ನಡೆಸುತ್ತಿದ್ದ ಇಬ್ಬರನ್ನು ಮಂಜೇಶ್ವರ ಪೊಲೀಸರು ಬಂಧಿಸಿದ್ದಾರೆ. ಇಚ್ಲಂಗೋಡು ಪಚ್ಚಂಬಳದ ಕುಂಞಾಲಿ(61), ಕಣ್ವತೀರ್ಥ ಕಾಡಬಳಿಯ ಪ್ರದೀಪ್ (43) ಎಂಬವರನ್ನು ಎಸ್‌ಐ ಉಮೇಶ್‌ನೇತೃತ್ವ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 30,910 ರೂ. ವಶಪಡಿಸಲಾಗಿದೆ.


ಲೋಡ್, ಅನ್‌ಲೋಡ್ ವೇಳೆ ಗೋಣಿಗಟ್ಟಲೆ ಅನ್ನಭಾಗ್ಯ ಅಕ್ಕಿ ಮಣ್ಣುಪಾಲು
ಇಲ್ಲಿ ಪಡಿತರ ವಿತರಕರಿಗೆ ನಿತ್ಯ ನಷ್ಟ ಭರಿಸುವ ಶಿಕ್ಷೆ

ಕಡಬ: ಬಡವರಿಗಾಗಿ ಸರಕಾರ ಜಾರಿ ಮಾಡಿರುವ ಮಹತ್ವಾಕಾಂಕ್ಷೆಯ 'ಅನ್ನ ಭಾಗ್ಯ' ಯೋಜನೆ ಅಕ್ಕಿ ನ್ಯಾಯಬೆಲೆ ಅಂಗಡಿಗಳಿಗೆ ಲೋಡಿಂಗ್, ಅನ್ ಲೋಡಿಂಗ್ ಸಂದರ್ಭದಲ್ಲಿ ಹೊರಗೆ ಚೆಲ್ಲಿ ಪೋಲಾಗುತ್ತಿದ್ದು, ಇದರಿಂದ ಪಡಿತರ ವಿತರಕರು ನಷ್ಟ ಅನುಭವಿಸುತ್ತಿರುವ ಬಗ್ಗೆ ದೂರುಗಳು ವ್ಯಕ್ತವಾಗಿದೆ.

ಗೋಣಿಚೀಲ ಗುಣಮಟ್ಟವಿಲ್ಲ

ಕಳಪೆ ಗುಣಮಟ್ಟದ ಗೋಣಿ ಚೀಲಗಳಿಂದ ಈ ಸಮಸ್ಯೆ ಉಂಟಾಗುತ್ತಿದೆ ಎಂಬುದು ಅವರ ವಾದವಾಗಿದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಸೇರಿದಂತೆ ವಿವಿಧ ಸಹಕಾರ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು ಪ್ರಮುಖವಾಗಿ ನ್ಯಾಯಬಲೆ ಅಂಗಡಿಗಳನ್ನು ನಡೆಸುವ ಮೂಲಕ ಅನ್ನಭಾಗ್ಯ ಯೋಜನೆಯ ವಸ್ತುಗಳನ್ನು ಜನರಿಗೆ ತಲುಪಿಸುತ್ತವೆ. ನ್ಯಾಯಬೆಲೆ ಪಡಿತರ ಅಂಗಡಿಗಳಿಗೆ ಅಕ್ಕಿ ಸಾಗಿಸುವ ವೇಳೆ ಲಾರಿಗಳಿಂದ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಸಂದರ್ಭ ಕಾರ್ಮಿಕರು ಮೂಟೆ ಹೊರಲು ಕಬ್ಬಿಣದ ಹುಕ್ ಬಳಸುವುದರಿಂದ ಚೀಲದಲ್ಲಿ ರಂಧ್ರಗಳಾಗಿ ಅಕ್ಕಿ ಹೊರಗಡೆ ಚೆಲ್ಲುತ್ತದೆ.



- ಅನ್‌ಲೋಡ್‌ನ ವೇಳೆ ಕನಿಷ್ಠ 4 ಗೋಣಿಯಷ್ಟು ಅಕ್ಕಿ ನಷ್ಟ
- ಚೆಲ್ಲಿದ ಅಕ್ಕಿ ಸಂಗ್ರಹಿಸಿದರೂ ಕಲ್ಲು ಮಣ್ಣು ಸೇರಿ ವ್ಯರ್ಥ
- ಪಡಿತರ ಅಂಗಡಿಯವರೇ ನಷ್ಟ ಭರಿಸಬೇಕಾದ ಪರಿಸ್ಥಿತಿ
- ಸೂಕ್ತ ಪರಿಹಾರ ಕ್ರಮ ಕೈಗೊಳ್ಳಲು ಆಗ್ರಹ

ಸಂಬಂಧಪಟ್ಟವರು ತಕ್ಷಣ ಗಮನಿಸಲಿ

ಕಳಪೆ ಗುಣಮಟ್ಟದ ಗೋಣಿ ಚೀಲಗಳಿಂದ ಅಕ್ಕಿ ಸೋರಿ ಹೋಗುತ್ತಿದೆ. ಪ್ರತಿ ಲೋಡ್‌ನಲ್ಲಿ 3 ರಿಂದ 4 ಗೋಣಿ ಅಕ್ಕಿ ಅನ್‌ಲೋಡಿಂಗ್ ವೇಳೆಯೇ ಚೆಲ್ಲಿ ಹೋಗುತ್ತದೆ. ಲೋಡಿಂಗ್ ವೇಳೆ ಸೋರಿಕೆಯಾಗುವ ಅಕ್ಕಿ ಬೇರೆಯೇ ಇದೆ. ಈ ಎಲ್ಲಾ ನಷ್ಟವನ್ನು ಸಂಘವೇ ಭರಿಸಬೇಕಿದೆ. ಈ ಸಮಸ್ಯೆಯ ಬಗ್ಗೆ ಸಂಬಂಧಪಟ್ಟವರು ಅಗತ್ಯವಾಗಿ ಗಮನಹರಿಸಬೇಕಿದೆ.

● ರಮೇಶ್ ಕಲ್ಪುರೆ, ಅಧ್ಯಕ್ಷರು, ಕಡಬ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ

ತಿರುವಿನಲ್ಲಿ ರಸ್ತೆ ಅಗೆದರು, ತಿಂಗಳಾದರೂ ಅದನ್ನು ಸರಿಪಡಿಸಲು ಮಾತ್ರ ಮರೆತರು!!

ಪುತ್ತೂರು: ನಗರದೊಳಗಿನ ರಸ್ತೆಯ ಸಹಕಾರಿ ಪಿತಾಮಹ ಮೊಳಹಳ್ಳಿ ಶಿವರಾಯ ವೃತ್ತದ ಬಳಿ ರಸ್ತೆಯನ್ನು ಅಗೆದು ತಿಂಗಳಾದರೂ ಮುಚ್ಚುವ ಕಾರ್ಯ ನಡೆಸಿಲ್ಲ. ನಗರದೊಳಗಿನ ಪ್ರಮುಖ ರಸ್ತೆ ಇದಾಗಿರುವ ಕಾರಣದಿಂದ ಇಲ್ಲಿ ದಿನಂಪ್ರತಿ ನೂರಾರು ವಾಹನಗಳು ಓಡಾಡುತ್ತವೆ. ಹೀಗಾಗಿ ಇದು ಸಹಜವಾಗಿಯೇ ಆತಂಕ ಹುಟ್ಟುಹಾಕಿದೆ.

ಅಪಾಯಕರ ಸ್ಥಿತಿಯಿದೆ

ಇದು ವೃತ್ತದ ಬಳಿಯೇ ಇರುವುದರಿಂದ ವಾಹನಗಳಿಗೆ ಮೂರೂ ಕಡೆಯಿಂದ ಬರುವ ವಾಹನಗಳಿಗೆ ಅಪಾಯಕರವಾದ ಪರಿಸ್ಥಿತಿ ಇದೆ. ಯಾವುದೋ ಕಾರಣಕ್ಕೆ ಡಾಮರು ರಸ್ತೆಯನ್ನು ಅಗೆಯಲಾಗಿದೆ. »ಪುಟ 6



ತಕ್ಷಣ ಸರಿಪಡಿಸಿ

ರಸ್ತೆ ಅಗೆದು ಕೆಲವೊಂದು ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಬೇಕಾಗುತ್ತದೆ. ಆದರೆ, ತಿಂಗಳು ಕಳೆದರೂ ಮುಚ್ಚುವ ಜವಾಬ್ದಾರಿಯನ್ನು ಸಂಬಂಧಪಟ್ಟವರು ತೋರಿಲ್ಲ. ನಗರಸಭೆ ಕಚೇರಿ ಕಟ್ಟಡ 100 ಮೀಟರ್ ಸನಿಹದಲ್ಲಿರುವ ಈ ಅವ್ಯವಸ್ಥೆಯನ್ನು ನಗರಸಭೆಯ ಅಧಿಕಾರಿಗಳು ಗಮನಹರಿಸಿ ತಕ್ಷಣ ಸರಿಪಡಿಸಬೇಕು.

● ಶ್ಯಾಂ ಪ್ರಸಾದ್ ಕೈಲಾರ್, ನ್ಯಾಯವಾದಿ, ಪುತ್ತೂರು

ಮಳೆಗಾಲಕ್ಕೆ ಮುನ್ನವೇ ಎಚ್ಚೆತ್ತುಕೊಳ್ಳಬೇಕಿದೆ ಮಹಾನಗರ ಪಾಲಿಕೆ | ಅನುಷ್ಠಾನವಾಗಬೇಕಿದೆ ಬಂದರು ನಗರಿಯಲ್ಲಿ ಅಚ್ಚುಕಟ್ಟಾದ ವ್ಯವಸ್ಥೆ
ಸ್ಮಾರ್ಟ್ ನಗರ ಮಂಗಳೂರಿಗೆ ಈಗ ಒಳಚರಂಡಿ ವ್ಯವಸ್ಥೆಯೇ ನಿಜವಾದ ಸವಾಲು!

ಮಂಗಳೂರು: ಮಂಗಳೂರು ನಗರ ಈಗ 'ಸ್ಮಾರ್ಟ್ ಸಿಟಿ'ಯಾಗಿ ಬದಲಾಗುತ್ತಿದ್ದರೂ ಇಲ್ಲಿನ ಒಳಚರಂಡಿ ವ್ಯವಸ್ಥೆಗಳು ಮಾತ್ರ ಇನ್ನೂ ಪರಿಪೂರ್ಣತೆ ಕಂಡಿಲ್ಲ. ಪ್ರತೀ ಮಳೆಗಾಲದಲ್ಲಿ ಡ್ರೈನೇಜ್ ನೀರು ಇಲ್ಲಿ ಮಳೆಯ ನೀರಿನೊಂದಿಗೆ ಹರಿಯುವುದು ಸಾಮಾನ್ಯವಾಗುತ್ತಿದೆ. ಇನ್ನೇನು ಕೆಲವೇ ತಿಂಗಳಲ್ಲಿ ಮಳೆಗಾಲ ಆರಂಭವಾಗುತ್ತಿದ್ದರೂ ಮಂಗಳೂರು ಮಹಾನಗರ ಪಾಲಿಕೆ ಆಡಳಿತ ಮಾತ್ರ ಎಚ್ಚೆತ್ತುಕೊಂಡಂತೆ ಕಾಣುತ್ತಿಲ್ಲ.

'ಫೋನ್ ಇನ್'ನಲ್ಲಿ ಸತತ ದೂರು

ಒಳಚರಂಡಿಗಳಲ್ಲಿ ಹರಿಯಬೇಕಾದ ಕೊಳಚೆ ನೀರು ಅಲ್ಲಲ್ಲಿ ಮಳೆ ನೀರು ಹರಿಯುವ ತೋಡುಗಳಲ್ಲಿ ಹರಿಯುತ್ತಿದೆ. ಕುಡಿಯುವ ನೀರಿನ ಪೈಪ್‌ಲೈನ್, ಬಾವಿ, ಕೊಳವೆಬಾವಿಗಳಿಗೆ ಸೇರ್ಪಡೆಯಾಗುತ್ತಿರುವ ಬಗ್ಗೆಯೂ ದೂರುಗಳು ನಿರಂತರವಾಗಿ ಕೇಳಿಬರುತ್ತಿವೆ. ಈ ಬಗ್ಗೆ ಪ್ರತಿ ಫೋನ್ ಇನ್ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಪಾಲಿಕೆಯನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಸಮರ್ಪಕವಾಗಿ ಕಾಮಗಾರಿ ಮಾತ್ರ ನಡೆದಿಲ್ಲ. ಅಲ್ಲದೆ ನಗರದ ಕೆಲವು ಕಟ್ಟಡಗಳಿಂದ ನೇರವಾಗಿ ನೀರನ್ನು ಪೈಪ್‌ಗಳ ಮೂಲಕ ಒಳಚರಂಡಿಗೆ ಬಿಡಲಾಗುತ್ತಿದೆ. ಕೆಲವೆಡೆ ಇದೆಲ್ಲಾ ರಸ್ತೆಗಳಲ್ಲಿಯೇ ಹರಿಯುತ್ತಿದೆ. ನಗರದ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಬಳಿಯಂತೂ ರಸ್ತೆಯಲ್ಲೇ ತ್ಯಾಜ್ಯ ನೀರು. »ಪುಟ 6




'ಜಲ್ ಹಿ ಅಮೃತ್'ನಡಿ 3,70,00,000 ರೂ.ಗಳ ಅನುಮೋದನೆ

15ನೆ ಹಣಕಾಸು ಯೋಜನೆಯಡಿ ಕಂಡತ್‌ಪಳ್ಳಿ ವೆಟ್‌ವೆಲ್ ನಿರ್ಮಾಣ, ಬಿಜೈ ಆನೆಗುಂಡಿ, ಎಕ್ಕೂರು ಪ್ರದೇಶದ ಮುಖ್ಯ ಕೊಳವೆ ಮಾರ್ಗದ ಮರು ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಜಲ್ ಹಿ ಅಮೃತ್ ಯೋಜನೆಯಡಿ ಎಸ್‌ಟಿಪಿಗಳ ಉನ್ನತೀಕರಣಕ್ಕಾಗಿ 3.70 ಕೋಟಿ ರೂ. ಅನುಮೋದನೆಯಾಗಿದ್ದು, ಟೆಂಡರ್ ಹಂತದಲ್ಲಿದೆ ಎಂದು ನಗರಾಭಿವೃದ್ಧಿ ಸಚಿವಾಲಯ ಈ ಬಗ್ಗೆ ಮಾಹಿತಿ ನೀಡಿದೆ.

ಇಲ್ಲಿ ನೂರಾರು ಕೋಟಿ ರೂ. ವ್ಯಯಿಸಲಾಗಿದೆ

ಈಗಾಗಲೇ ಪಾಲಿಕೆಯಿಂದ ಹೊಸ ಒಳಚರಂಡಿ ವ್ಯವಸ್ಥೆ, ದುರಸ್ತಿ ಕಾಮಗಾರಿಗಳಿಗಾಗಿಯೇ ಸ್ಮಾರ್ಟ್ ಸಿಟಿ, ಕ್ವಿಮಿಕ್, ಜಲಶುದ್ಧಿ ಅಭಿಯಾನ ಎಂಬೆಲ್ಲಾ ಯೋಜನೆಗಳ ಮೂಲಕ ಕಳೆದ ಹಲವು ವರ್ಷಗಳಿಂದ ನೂರಾರು ಕೋಟಿ ರೂ. ವ್ಯಯಿಸಲಾಗಿದೆ. ಅಧಿವೇಶನದಲ್ಲಿ ನಗರಾಭಿವೃದ್ಧಿ ಇಲಾಖೆಯ ಸಚಿವರು ನೀಡಿರುವ ಉತ್ತರದಂತೆಯೇ, ಸ್ಮಾರ್ಟ್ ಸಿಟಿ ಯೋಜನೆಯಡಿ ಮಂಗಳೂರು ನಗರದಲ್ಲಿ 41.14 ಕೋಟಿ ರೂ. ಮೊತ್ತದ ಒಳಚರಂಡಿ ಕಾಮಗಾರಿ ಕೈಗೊತ್ತಿಕೊಂಡಿದ್ದು, ಕಾಮಗಾರಿಗಳು ಮುಗಿದಿವೆ. ಈ ಕಾಮಗಾರಿಯಲ್ಲಿ 39 ಕಿ.ಮೀ. ಉದ್ದದ ಒಳಚರಂಡಿ ಕೊಳವೆಗಳನ್ನು ಅಳವಡಿಸಲಾಗಿದ್ದು, 1782 ಆಳಗುಂಡಿಗಳನ್ನು ನಿರ್ಮಿಸಲಾಗಿದೆ. 5160 ಮನೆ ಹಾಗೂ ವಾಣಿಜ್ಯ ಮಳಿಗೆಗಳಿಗೆ ಒಳಚರಂಡಿ ಕೊಳವೆಗಳ ಸಂಪರ್ಕ ಒದಗಿಸಲಾಗಿದೆ. ಇದರ ಹೊರತಾಗಿ ವೆಟ್‌ವೆಲ್ ನಿರ್ಮಾಣಕ್ಕಾಗಿ ಸ್ಮಾರ್ಟ್ ಸಿಟಿ ವತಿಯಿಂದ 14.26 ಕೋಟಿ ರೂ. ಠೇವಣಿ ಮೊತ್ತವನ್ನು ಪಾಲಿಕೆಗೆ ನೀಡಲಾಗಿದೆ. ಒಟ್ಟು 55.40 ಕೋಟಿ ರೂ. ಗಳನ್ನು ಸ್ಮಾರ್ಟ್ ಸಿಟಿಯಿಂದ ಒಳಚರಂಡಿ ಕಾಮಗಾರಿಗಳಿಗೆ ವ್ಯಯಿಸಲಾಗಿದೆ.

ಸುತ್ತಮುತ್ತ

ಉಜಿರೆ ಬ್ರಹ್ಮಕಲಶ: ಇಂದಿನ ಕಾರ್ಯಕ್ರಮ

ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಪ್ರಯುಕ್ತ ಇಂದು (ಮಾ.5) ಬೆಳಿಗ್ಗೆ 6ರಿಂದ ಮಹಾ ಗಣಪತಿ ಹೋಮ, ಅಂಕುರ ಪೂಜೆ, ತ್ರಿಕಾಲ ಪೂಜೆ, ಶಾಂತಿ ಹೋಮಗಳು, ಮಂಜುಳೇಶನಲ್ಲಿ ಪ್ರಾಯಶ್ಚಿತ್ತ ಹೋಮ, ಅನುಜ್ಞಾ ಕಲಶ, ಬ್ರಹ್ಮ ಕಲಶ ಪೂಜೆ, ಪರಿಕಲಶ ಪೂಜೆ, ವಿಷ್ಣುಯಾಗ, ಬೆಳಿಗ್ಗೆ 9.30ರಿಂದ ಅಥರ್ವಶೀರ್ಷ ಗಣಯಾಗ, ಸಂಜೆ ಕುಂಡ ಶುದ್ಧಿ, ಅಂಕುರ ಪೂಜೆ, ತ್ರಿಕಾಲ ಪೂಜೆ ಅಧಿವಾಸ ಹೋಮ, ಅಧಿವಾಸ ಬಲಿ ಮತ್ತಿತರ ಕಾರ್ಯಕ್ರಮಗಳು ಜರಗಲಿವೆ. ಸಂಜೆ 4:30 ರಿಂದ ಸುದರ್ಶನ ಸಭಾಭವನದಲ್ಲಿ ಜರಗಲಿರುವ ಸಭಾ ಕಾರ್ಯಕ್ರಮದಲ್ಲಿ ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಕೆ. ಪ್ರತಾಪ ಸಿಂಹ ನಾಯಕ್ ಅವರ ಅಧ್ಯಕ್ಷತೆಯಲ್ಲಿ ಜರಗುವ ಈ ಕಾರ್ಯಕ್ರಮದಲ್ಲಿ ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ ಬರೋಡ, ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಟಿ. ಶ್ಯಾಮ ಭಟ್, ಬಂಟ್ವಾಳದ ಶಾಸಕ ರಾಜೇಶ್ ನ್ಯಾಕ್, ಎಂಎಲ್‌ಸಿ ಕಿಶೋರ್ ಕುಮಾರ್ ಬೊಟ್ಯಾಡಿ, ಕ್ಯಾಂಪ್ಕೋ ಅಧ್ಯಕ್ಷ ಎಸ್. ಆರ್. ಸತೀಶ್ಚಂದ್ರ, ಉಜಿರೆ ಗ್ರಾಪಂ ಮಾಜಿ ಅಧ್ಯಕ್ಷೆ ಉಷಾ ಕಿರಣ್ ಕಾರಂತ್, ಬೆಳ್ತಂಗಡಿ ಶ್ರೀ ರಾಘವೇಂದ್ರ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಪಿತಾಂಬರ ಹೇರಾಜೆ, ಬೆಂಗಳೂರು ಸಮಿತಿಯ ಸಹ ಸಂಚಾಲಕ ಕೆ. ವೆಂಕಟರಮಣ ರಾವ್, ಎಸ್‌ಡಿಎಂ ಕಾಲೇಜಿನ ಪ್ರಿನ್ಸಿಪಾಲ್ ಡಾ. ವಿಶ್ವನಾಥ ಪಿ., ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಸಂಪತ್ ಸುವರ್ಣ, ಬೆಳ್ತಂಗಡಿ ರೋಟರಿ ಕ್ಲಬ್ ಅಧ್ಯಕ್ಷ ಪ್ರಕಾಶ್ ಪ್ರಭು, ಬೆಳ್ತಂಗಡಿ ತಾಲೂಕು ಚಿತ್ಪಾವನ ಬ್ರಾಹ್ಮಣರ ಸಂಘದ ಅಧ್ಯಕ್ಷ ತ್ರಿವಿಕ್ರಮ ಹೆಬ್ಬಾರ್, ಉಜಿರೆ ಹವ್ಯಕ ವಲಯದ ಅಧ್ಯಕ್ಷ ವಿದ್ಯಾ ಕುಮಾರ್ ಕಾಂಚೋಡು, ವೈದ್ಯ ಪ್ರದೀಪ ಆಟಿಕುಕ್ಕೆ, ಬ್ರಹ್ಮ ಕಲಶೋತ್ಸವ ಸಮಿತಿ ಸಂಚಾಲಕ ಮೋಹನ ಶೆಟ್ಟಿಗಾರ್ ಹಾಗೂ ಪ್ರಧಾನ ಕಾರ್ಯದರ್ಶಿ ಭರತ್ ಕುಮಾರ್ ಉಪಸ್ಥಿತರಿರುವರು.

ಸ್ಥಳೀಯರಿಗೆ ಉದ್ಯೋಗ ಕಲ್ಪಿಸಲು ಆಗ್ರಹಿಸಿ ಮನವಿ

ಕಡಬ: ಕ್ಯೊಲ ಪಶು ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಕ್ಯೊಲ ಜಾನುವಾರು ಸಂವರ್ಧನ ಮತ್ತು ತರಬೇತಿ ಕೇಂದ್ರದಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಬೇಕು ಎಂದು ಕೆ.ಪಿ.ಸಿ.ಸಿ. ಸಂಯೋಜಕ ಜಿ. ಕೃಷ್ಣಪ್ಪ ರಾಮಕುಂಜ ಅವರು ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು. ಕ್ಯೊಲ, ರಾಮಕುಂಜ ಪರಿಸರವು ತೀರಾ ಹಿಂದುಳಿದ ಹಾಗೂ ಬಡವರು ಅಧಿಕ ಇರುವ ಪ್ರದೇಶವಾಗಿರುತ್ತದೆ. ಗ್ರಾಮಾಂತರ ಪ್ರದೇಶವಾದ ಇಲ್ಲಿ ಉದ್ಯೋಗಾವಕಾಶ ಇಲ್ಲವಾಗಿದೆ. ಈ ಪ್ರದೇಶದಲ್ಲಿ ಅತೀ ಹೆಚ್ಚು ನಿರುದ್ಯೋಗಿ ಯುವಕರಿದ್ದಾರೆ. ಆದ ಕಾರಣ ಈ ವಿದ್ಯಾಲಯದಲ್ಲಿ ಉದ್ಯೋಗಿಗಳನ್ನು ನೇಮಕ ಮಾಡುವಾಗ ಸ್ಥಳೀಯರಿಗೆ ಆದ್ಯತೆ ನೀಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಜಿ. ಕೃಷ್ಣಪ್ಪ ರಾಮಕುಂಜ ಅವರ ನೇತೃತ್ವದಲ್ಲಿ ಸಚಿವರನ್ನು ಭೇಟಿ ಮಾಡಿದ ನಿಯೋಗದಲ್ಲಿ ಅಕ್ರಮ ಸಕ್ರಮ ಸಮಿತಿ ಸದಸ್ಯ ಎಚ್. ಆದಂ, ಗ್ರಾ.ಪಂ. ಮಾಜಿ ಸದಸ್ಯರಾದ ಯತೀಶ್ ಗೌಡ ಬಾನಡ್ಕ, ನಝೀರ್ ಪೂರಿಂಗ, ಅಬ್ಬಾಸ್ ಕುಂತೂರು, ಎನ್. ಸಿದ್ದಿಕ್, ಎಸ್.ಪಿ. ಖಲಂದರ್, ಪಿ. ಲತೀಫ್ ಇದ್ದರು.

ಮಾ.14: ರಾಷ್ಟ್ರೀಯ ಲೋಕ ಅದಾಲತ್

ಬಂಟ್ವಾಳ: ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಮಾ.14ರಂದು ಬಂಟ್ವಾಳ ನ್ಯಾಯಾಲಯದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮವನ್ನು ತಾಲೂಕು ಕಾನೂನು ಸೇವೆಗಳ ಸಮಿತಿ ಬಂಟ್ವಾಳ ಇವರ ಆಶ್ರಯದಲ್ಲಿ ನಡೆಯಲಿದೆ ಎಂದು ಸಮಿತಿಯ ಅಧ್ಯಕ್ಷ ಅನಿಲ್ ಪ್ರಕಾಶ್ ಎಂ. ಪಿ ಹಾಗೂ ಸದಸ್ಯ ಕಾರ್ಯದರ್ಶಿ ರಾಜೇಂದ್ರ ಪ್ರಸಾದ್ ಕೆ ಎಸ್ ಅವರು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅದಾಲತ್ ಹಿನ್ನಲೆಯಲ್ಲಿ ಬುಧವಾರ ನ್ಯಾಯಾಲಯದ ಆವರಣದಲ್ಲಿ ತಾಲೂಕಿನ ವಿವಿಧ ಇಲಾಖಾಧಿಕಾರಿಗಳ ಸಭೆಯನ್ನು ನಡೆಸಿದ ಬಳಿಕ ಈ ಮಾಹಿತಿ ನೀಡಿದ್ದಾರೆ. ಅದಾಲತ್ತಿನಲ್ಲಿ ರಾಜಿ ಸಂಧಾನದ ಮೂಲಕ ಬಗೆಹರಿಸಿಕೊಳ್ಳಬಹುದಾದ ಆಸ್ತಿ ವಿವಾದಗಳು, ವಿಭಾಗ ಮೊಕದ್ದಮೆಗಳು, ಹಣ ವಸೂಲಿ ಪ್ರಕರಣಗಳು, ನಿರ್ದಿಷ್ಟ ಪರಿಹಾರ ಕಾಯ್ದೆಯಡಿಯಲ್ಲಿ ದಾಖಲಾದ ಮೊಕದ್ದಮೆಗಳು, ಮೋಟಾರು ವಾಹನ ಪ್ರಕರಣಗಳು, ವಿವಾಹ ಸಮನ್ವಯ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು ಮತ್ತು ಇತರ ರಾಜಿಗೆ ಯೋಗ್ಯ ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ಸಿವಿಲ್ ಮತ್ತು ಕ್ರಿಮಿನಲ್ ವಿವಾದ ಪರಿಹರಿಸಿಕೊಳ್ಳಲು ಪ್ರಯತ್ನ ಮಾಡುವುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉಜಿರೆ ಬ್ರಹ್ಮಕಲಶ | ನೂತನ ವಿಜಯಗೋಪುರ ಲೋಕಾರ್ಪಣೆಗೊಳಿಸಿ ಡಾ. ಡಿ. ವೀರೇಂದ್ರ ಹೆಗ್ಗಡೆ ಸಂದೇಶ

ಧಾರ್ಮಿಕ ಆಚರಣೆ ಪಾಲನೆಯಿಂದ ಗ್ರಾಮದ ಬೆಳವಣಿಗೆ

ಬೆಳ್ತಂಗಡಿ: ಉಜಿರೆಯ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಪ್ರಯುಕ್ತ ನಿರ್ಮಾಣಗೊಂಡ ವಿಜಯ ಗೋಪುರವನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಲೋಕಾರ್ಪಣೆಗೊಳಿಸಿದರು.

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸುಂದರವಾದ ಗೋಪುರಗಳನ್ನು ನಿರ್ಮಿಸುವುದು ಬಹಳ ಕಡಿಮೆ. ಆದರಲ್ಲೂ ನಮ್ಮ ದಕ್ಷಿಣ ಭಾರತದಲ್ಲಿ ಇಂತಹ ಸುಂದರ ರಾಜಗೋಪುರ ಉಜಿರೆಯಲ್ಲಿ ನಿರ್ಮಾಣವಾಗಿರುವುದು ಹೆಮ್ಮೆಯ ವಿಚಾರ. ಇದರ ಹಿಂದೆ ಹಲವರ ಹಲವು ದಿನಗಳ ಶ್ರಮ ಇದೆ. ಧಾರ್ಮಿಕತೆಯನ್ನು ನೋಡಿ ಮುಂದುವರೆಸಿಕೊಂಡು ಹೋದರೆ ಖಂಡಿತವಾಗಿ ಗ್ರಾಮದ ಬೆಳವಣಿಗೆ ಆಗುತ್ತದೆ. ಶರತ್‌ಕೃಷ್ಣ ಪಡ್ವೆಟ್ನಾಯರು ಗ್ರಾಮದ ಮನೆಮನೆಗೆ ತೆರಳಿ ಭಕ್ತರನ್ನು ಒಂದಾಗಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಉಜಿರೆ ಅಶೋಕ ಭಟ್ ಬರೆದ 'ವಿಜಯಪಥ' ಮತ್ತು ಸಾಂತೂರು ಶ್ರೀನಿವಾಸ ತಂತ್ರಿ ಬರೆದ 'ಉಜಿರೆ ಜನಾರ್ದನ ದೇವಸ್ಥಾನದ ಇತಿಹಾಸ' ಪುಸ್ತಕಗಳನ್ನು ಅನಾವರಣಗೊಳಿಸಿದರು.



ಸಾಂಸ್ಕೃತಿಕ ಚಿಂತಕ ದಾಮೋದರ ಶರ್ಮಾ ಅವರು ಧಾರ್ಮಿಕ ಉಪನ್ಯಾಸ ನೀಡಿ, ರಾಜಗೋಪುರ ಅಂದರೆ ಅದು ದೇವ ದೇವತೆಗಳಿಗೆ ಸ್ವಾಗತ ಕೋರುವ ಲಾಂಛನ. ಶ್ರೀ ವಿಷ್ಣುದೇವರ ಶಯನಾಸನದಂತೆ ಕಾಣುವ ಗೋಪುರಕ್ಕೆ ನಮಿಸಿದರೆ ಜನಾರ್ದನ ಸ್ವಾಮಿಗೆ ನಮಿಸಿದಂತೆಯೇ ಎಂದರು.

ವಿಜಯಗೋಪುರ ಲೋಕಾರ್ಪಣೆಗೆ ಆಗಮಿಸುವ ಸಂದರ್ಭ ವೀರೇಂದ್ರ ಹೆಗ್ಗಡೆಯವರು ಶ್ರೀ ಸಚ್ಚಿದಾನಂದ ಸ್ವಾಮೀಜಿಗಳು ರಥವನ್ನು ಏರಿದ ನಂತರ ತಾವು ರಥವನ್ನು ಏರಿದರು. ಇದರಲ್ಲೇ ಅವರು ಗುರುಪರಂಪರೆಗೆ ನೀಡುವ ಗೌರವ ಎಲ್ಲರಿಗೂ ತಿಳಿಯುತ್ತದೆ ಎಂದು ಹೇಳಿದರು.

ದೈವದ ಮೇಲೆ ನಂಬಿಕೆ ಇಟ್ಟು ಶ್ರಮದೊಂದಿಗೆ ಮುಂದುವರಿದರೆ ದೇವರು ಆಶೀರ್ವಾದ ನೀಡುತ್ತಾರೆ ಎನ್ನುವುದು ಇಲ್ಲಿ ಸಾಬೀತಾಗಿದೆ. ಕಳೆದ ಒಂದು ವರ್ಷದಲ್ಲಿ ಪ್ರಾರಂಭವಾಗಿ ಉತ್ತಮ ರೀತಿಯಲ್ಲಿ ನಿರ್ಮಾಣಗೊಂಡ ವಿಜಯಗೋಪುರ ಮತ್ತು ಪುನರ್ ಪ್ರತಿಷ್ಠೆಗೊಂಡ ದೇವಸ್ಥಾನ ಭಕ್ತರ ಶ್ರಮದಾನಕ್ಕೆ ಉತ್ತಮಉದಾಹರಣೆ ಎಂದರು.

ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ಶಾಸಕ ಹರೀಶ್ ಪೂಂಜ ಮಾತನಾಡಿ, ಸಂಬಂಧಗಳಿಂದಾಗಿಯೇ 'ನ ಭೂತೋ, ನ ಭವಿಷ್ಯತಿ ಎನ್ನುವಷ್ಟು' ಅದ್ದೂರಿಯಾಗಿ ಬ್ರಹ್ಮಕಲಶೋತ್ಸವ ನಡೆಯುತ್ತಿದೆ ಎಂದರು.

> ಬೇರೆ ಯಾವ ದೇಶದಲ್ಲೂ ಕಾಣದ ವೈಶಿಷ್ಟ್ಯತೆ ನಮ್ಮ ದೇಶದಲ್ಲಿ ಕಾಣುತ್ತದೆ. ಎಷ್ಟೇ ಆಧುನಿಕತೆ ಬಂದರೂ ಆಧ್ಯಾತ್ಮಿಕತೆ ಮತ್ತು ಸಂಸ್ಕೃತಿಯನ್ನು ಭಾರತೀಯರು ಮರೆಯದೆ ಮುಂದುವರಿಸುತ್ತಿದ್ದಾರೆ ಎನ್ನುವುದಕ್ಕೆ ಇಂದಿನ ಕಾರ್ಯಕ್ರಮ ಉತ್ತಮ ಉದಾಹರಣೆ. ಇಂದು ಉಜಿರೆಯ ಜನಾರ್ದನ ದೇವಸ್ಥಾನ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದಿದೆ. ಪರಂಪರೆ ಮತ್ತುಆಧುನಿಕತೆಯನ್ನು ಜೊತೆಯಲ್ಲಿ ಕೊಂಡೊಯ್ದರೆ ಮಾತ್ರ ನಮ್ಮ ಇತಿಹಾಸವನ್ನು ಮುಂದಿನ ಪೀಳಿಗೆಗೆ ತಲುಪಿಸಲು ಸಾಧ್ಯ.
>
> • ದಿನೇಶ್ ಗುಂಡೂರಾವ್

ಶ್ರೀ ಕ್ಷೇತ್ರ ಧರ್ಮಸ್ಥಳದ ಡಿ. ಹರ್ಷೇಂದ್ರ ಕುಮಾರ್ ಮಾತನಾಡಿದರು. ವಿಜಯಗೋಪುರ ನಿರ್ಮಾಣ ಸಮಿತಿ ಅಧ್ಯಕ್ಷ ಶಶಿಧರ ಶೆಟ್ಟಿ ಬರೋಡಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಎಲ್ಲಾ ಧರ್ಮದವರು ಒಟ್ಟಾಗಿ ದೇವಸ್ಥಾನದ ಶ್ರಮದಾನದಲ್ಲಿ ಭಾಗವಹಿಸಿರುವುದು ಅಪೂರ್ವ ಸಂಗತಿ. ಭಕ್ತರ ಆಸಕ್ತಿಗೆ ನೀಡಲು ಬೇಕಾದಷ್ಟು ಕೆಲಸ ಇಲ್ಲಿರಲಿಲ್ಲ ಎಂಬುದು ವಿಶೇಷ ಎಂದರು.

ಹಲವರಿಗೆ ಸನ್ಮಾನ

ವಾಸ್ತು ತಜ್ಞ ರಮೇಶ್ ಕಾರಂತ್ ಬೆದ್ರಡ್ಕ, ಶಿಲ್ಪಿ ಕೃಷ್ಣಪ್ಪ ಚಾರ್ಮಾಡಿ, ರಮೇಶ್ ಲಾಯಿಲ, ಕಾಷ್ಠ ಶಿಲ್ಪಿ ಶಶಿಧರ ಆಚಾರ್ಯ, ಶೇಖರ ಸೋಮೇಶ್ವರ, ಬಿ. ರಾಜ ಹೆಗ್ಡೆ ವಿದ್ಯುತ್‌ಗುತ್ತಿಗೆದಾರ ಲೋಕೇಶ್ ರೈ ಹಾಗೂ ಮಾತೃ ಶಕ್ತಿ ಶಿಲಾ ಸಂಚಯನ ಸಮಿತಿ ಅಧ್ಯಕ್ಷೆ ವನಿತಾ ವಿಶ್ವನಾಥ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡ್ವೆಟ್ನಾಯರ್ ಸ್ವಾಗತಿಸಿದರು. ರಾಜಗೋಪುರ ನಿರ್ಮಾಣ ಸಮಿತಿ ಪ್ರಧಾನ ಕೋಶಾಧಿಕಾರಿ ರಾಜೇಶ್ ಪೈ ವಂದಿಸಿದರು. ಉಜಿರೆ ಎಸ್.ಡಿ.ಎಂ ಕಾಲೇಜು ಕುಲಸಚಿವ ಹಾಗೂ ಸಂಸ್ಕೃತ ಉಪನ್ಯಾಸಕ ಪ್ರೊ. ಶ್ರೀಧರ ಭಟ್ಟ ಕಾರ್ಯಕ್ರಮ ನಿರೂಪಿಸಿದರು.

ವಿವಿಧ ಕ್ಷೇತ್ರದ ಐದು ಮಂದಿ ಸಾಧಕರಿಗೆ ಮಾ.8ಕ್ಕೆ ಸ್ವಸ್ತಿ ಸಿರಿ ರಾಜ್ಯ ಪ್ರಶಸ್ತಿ ಪ್ರದಾನ



ಬಂಟ್ವಾಳ: ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್ ಪುಂಜಾಲಕಟ್ಟೆ ಇದರ ವತಿಯಿಂದ 18ನೇ ವರ್ಷದ ಸಾಮೂಹಿಕ ವಿವಾಹ ಸಮಾರಂಭ ಹಾಗೂ ಸ್ವಸ್ತಿ ಸಿರಿ ರಾಜ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಮಾ.8ರಂದು ಭಾನುವಾರ ಪುಂಜಾಲಕಟ್ಟೆಯ ಬಂಗ್ಲೆ ಮೈದಾನದಲ್ಲಿ ನಡೆಯಲಿದೆ.

ಬೆಳಿಗ್ಗೆ 9ಕ್ಕೆ ವಧು-ವರರ ಭವ್ಯ ಮೆರವಣಿಗೆ ನಡೆಯಲಿದೆ. 18ನೇ ವರ್ಷದ ಮದುವೆ ದಿಬ್ಬಣಕ್ಕೆ ಕಿಯೋನಿಕ್ಸ್ ಮಾಜಿ ಅಧ್ಯಕ್ಷ ಹರಿಕೃಷ್ಣ ಬಂಟ್ವಾಳ್, ಧಾರ್ಮಿಕ ಮುಖಂಡ ಕಿರಣ್ ಚಂದ್ರ ಪುಷ್ಪಗಿರಿ, ನಿವೃತ್ತ ಬ್ಯಾಂಕ್ ಮ್ಯಾನೇಜರ್ ಚಂದ್ರಹಾಸ ಶೆಟ್ಟಿ ಮಜಲೋಡಿ, ಪುಂಜಾಲಕಟ್ಟೆ ಯಕ್ಷಧ್ರುವ ಪಟ್ಲ ಫೌಂಡೇಷನ್ ಅಧ್ಯಕ್ಷ ಯಶೋಧರ ಶೆಟ್ಟಿ ದಂಡೆ ಮತ್ತಿತರ ಗಣ್ಯರು ಚಾಲನೆ ನೀಡುವರು. ರಾಜ್ಯ ಧಾರ್ಮಿಕ ಪರಿಷತ್ ವಿಶೇಷ ಆಹ್ವಾನಿತ ಸದಸ್ಯ ರವಿಶಂಕರ್ ಸಮಾರಂಭ ಉದ್ಘಾಟಿಸುವರು, ಶಾಸಕ ರಾಜೇಶ್ ನ್ಯಾಕ್ ಅಧ್ಯಕ್ಷತೆ ವಹಿಸುವರು, ಸಂಸದ ಕ್ಯಾ. ಬ್ರಿಜೇಶ್ ಚೌಟ ರಾಜ್ಯ ಪ್ರಶಸ್ತಿ ಪ್ರದಾನ ಮಾಡುವರು. ಉದ್ಯಮಿ ಅಬ್ದುಲ್ ಕುಂಞ ಹಾಗೂ ಪಿಲಾತಬೆಟ್ಟು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕಿನ ಮಾಜಿ ಅಧ್ಯಕ್ಷ ಯು.ಎಸ್. ಚಂದ್ರಶೇಖರ್ ಭಟ್ ಮಂಗಲ ಸೂತ್ರ ವಿತರಿಸುವರು, ಬಿಜೆಪಿ ಮುಖಂಡ ಸಂದೇಶ್ ಶೆಟ್ಟಿ ಆರೆಬೆಟ್ಟು, ಜಗದೀಪ್ ಡಿ.ಸುವರ್ಣ, ಅಶೋಕ್ ನೆಕ್ರಾಜೆ, ನಿತ್ಯಾನಂದ ಪೂಜಾರಿ ಕೆಂತಲೆ ಮತ್ತಿತರ ಗಣ್ಯರು ಭಾಗವಹಿಸುವರು.

ಕಾರ್ಯಕ್ರಮದಲ್ಲಿ ಧಾರ್ಮಿಕ ಕ್ಷೇತ್ರದಲ್ಲಿ ರವಿಶಂಕರ ಶೆಟ್ಟಿ ಬಡಾಜೆಗುತ್ತು, ಯಕ್ಷಗಾನ ಕ್ಷೇತ್ರದಲ್ಲಿ ದಿವಾಕರ ದಾಸ್, ಶಿಕ್ಷಣ ಕ್ಷೇತ್ರದಲ್ಲಿ ಸಂತೋಷ್ ಎಸ್. ಸನಿಲ್, ಉದ್ಯಮ ಕ್ಷೇತ್ರದಲ್ಲಿ ಮೊಹಮ್ಮದ್ ರಫೀಕ್, ಸಮಾಜ ಸೇವೆ ಹಾಗೂ ಸಂಘಟನಾ ಕ್ಷೇತ್ರದಲ್ಲಿ ಸುಧೀರ್ ಪೂಜಾರಿಯವರಿಗೆ ಸ್ವಸ್ತಿ ಸಿರಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸುವುದಾಗಿ ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್‌ನ ಸ್ಥಾಪಕಾಧ್ಯಕ್ಷ ಎಂ. ತುಂಗಪ್ಪ ಬಂಗೇರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಗವದ್ಗೀತಾಧಾರಿತ ಮೌಲ್ಯ ಶಿಕ್ಷಣ ಸ್ಪರ್ಧೆ: ಶಾರದಾ ವಿದ್ಯಾಲಯಕ್ಕೆ ಹಲವು ಪದಕಗಳು



ಮಂಗಳೂರು: ಅಂತರಾಷ್ಟ್ರೀಯ ಇಸ್ಕಾನ್ ಸಂಘಟನೆ ವತಿಯಿಂದ ಜನವರಿಯಲ್ಲಿ ನಡೆದ ಶ್ರೀಮದ್ ಭಗವದ್ಗೀತಾ ಆಧಾರಿತ ವಿಶ್ವದ ಅತಿದೊಡ್ಡ ಮೌಲ್ಯ ಶಿಕ್ಷಣ ಸ್ಪರ್ಧೆಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಿಂದ ಸುಮಾರು 80 ಶಾಲೆಗಳಿಂದ 6500 ವಿದ್ಯಾರ್ಥಿಗಳು ಪಾಲ್ಗೊಂಡಿದ್ದು ಈ ಸ್ಪರ್ಧೆಯಲ್ಲಿ ಜಿಲ್ಲಾಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿದ ಶಾರದಾ ವಿದ್ಯಾಲಯದ 7ನೇ ತರಗತಿಯ ವಿದ್ಯಾರ್ಥಿ ತನುಷಾ ಆರ್. ಆತ್ರೇಯ ಅವರಿಗೆ ಚಿನ್ನದ ಪದಕ ಹಾಗೂ ವಿದ್ಯುತ್‌ಚಾಲಿತ ಸೈಕಲ್ ಅನ್ನು ಬಹುಮಾನವಾಗಿ ನೀಡಲಾಯಿತು.

ಕುಡುಪುಕಟ್ಟೆ ಇಸ್ಕಾನ್ ವತಿಯಿಂದ ಕೊಡಿಯಾಲಬೈಲಿನ ಶಾರದಾ ವಿದ್ಯಾಲಯದಲ್ಲಿ ನಡೆದ ಬಹುಮಾನ ವಿತರಣಾ ಸಮಾರಂಭ ನಡೆಯಿತು.

ಅದೇ ರೀತಿ ವಿದ್ಯಾಲಯಕ್ಕೆ ಪ್ರಥಮ ಸ್ಥಾನ ಗಳಿಸಿದ ಆರನೇ ತರಗತಿಯ ವಿದ್ಯಾರ್ಥಿನಿ ಲಾಸ್ಯ ಶೆಟ್ಟಿಗೆ ಚಿನ್ನದ ಪದಕ, ವಿದ್ಯಾಲಯದ ವಿದ್ಯಾರ್ಥಿನಿ ಮಿಥಾಲಿ ಯು.ಎಲ್, ದಕ್ಷ್ ಕೆ. ಪೂಜಾರಿ ಅವರಿಗೆ ಬೆಳ್ಳಿಯ ಪದಕ, ಅನಿಕಾ ಎಸ್. ಭಟ್, ಭಾವಿ ಎನ್.ಎಸ್., ನಿಹಾಲಿ ಆರ್. ಹೊಸಕೆರೆ ಅವರಿಗೆ ಕಂಚಿನ ಪದಕ ನೀಡಿ ಗೌರವಿಸಲಾಯಿತು. ಈ ಸ್ಪರ್ಧೆಯಲ್ಲಿ ಶಾರದಾ ವಿದ್ಯಾಲಯದಿಂದ 366 ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಇಸ್ಕಾನ್ ಸಂಘಟನೆಯ ಹಿರಿಯರಾದ ಶ್ರೀವತ್ಸ ಪ್ರಭುಜಿ ಬಹುಮಾನ ವಿತರಿಸಿದರು. ಈ ಸಂದರ್ಭ ಕಾರ್ಯಕ್ರಮ ಸಂಯೋಜಕ ಇಸ್ಕಾನ್ ಕುಡುಪುಕಟ್ಟೆಯ ವಿಜಯ ಅಚ್ಯುತದಾಸರು ಸ್ಪರ್ಧೆಯ ಉದ್ದೇಶ ವಿವರಿಸಿದರು. ಸಂಯೋಜಕ ಪ್ರಶಾಂತ ದಾಸ್, ಶಾರದಾ ವಿದ್ಯಾಲಯದ ಆಡಳಿತ ಪ್ರಾಂಶುಪಾಲ ದಯಾನಂದ ಕಟೀಲ್ ಉಪಸ್ಥಿತರಿದ್ದರು. ವಿದ್ಯಾಲಯದ ಶಿಕ್ಷಕಿ ನೀರಜಾ ಹರೀಶ್ ನಿರ್ವಹಿಸಿ ವಂದಿಸಿದರು.

ಮಾ.18-20: ಮಿತ್ತಮಜಲು ದೈವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ



ಬಂಟ್ವಾಳ: ಸಜೀಪಮಾಗಣೆ ಮಿತ್ತಮಜಲು ಶ್ರೀ ನಡಿಯೇಳು ದೈವಂಗಳು ಶ್ರೀ ಉಳ್ಳಾಲ್ತಿ ಶ್ರೀ ನಾಲ್ಕೈತ್ತಾಯ ಹಾಗೂ ಪರಿವಾರ ದೈವಗಳ ಕ್ಷೇತ್ರದಲ್ಲಿ ಶ್ರೀ ದೈವಂಗಳ ನೂತನ ಸ್ವರ್ಣಬಿಂಬ ಪ್ರತಿಷ್ಠಾಪನ ಪ್ರಯುಕ್ತ ಮಾ. 18ರಿಂದ 20ರವರೆಗೆ ಬ್ರಹ್ಮಶ್ರೀ ನೀಲೇಶ್ವರ ಕೆ. ಉಚ್ಚಿಲ ತ್ತಾಯ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ನಡೆಯಲಿರುವ ಬ್ರಹ್ಮಕಲಶೋತ್ಸವ ಪೂರ್ವಭಾವಿ ಸಿದ್ಧತಾ ಸಭೆ ಮಿತ್ತಮಜಲು ಕ್ಷೇತ್ರದಲ್ಲಿ ನಡೆಯಿತು.

ನೂತನ ಸ್ವರ್ಣ ಬಿಂಬ

ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವಿವೇಕ್ ಶೆಟ್ಟಿ ನಗ್ರೀಗುತ್ತು ಅಧ್ಯಕ್ಷತೆ ವಹಿಸಿ ಮಾತನಾಡಿ, ದೈವರಾದನೆಯಲ್ಲಿ ಸಜೀಪ ಮಾಗಣೆಗೆ ತನ್ನದೇ ಆದ ಮಹತ್ವವನ್ನು ಹೊಂದಿದ್ದು, ಆ ಪರಂಪರೆಯನ್ನು ನಾವೆಲ್ಲರೂ ಮುಂದುವರಿಸಿ ಶ್ರೀ ದೈವಂಗಳ ಕೃಪೆಗೆ ಪಾತ್ರರಾಗುವಂತೆ ವಿನಂತಿಸಿದರು. ಸುಮಾರು 160 ಪವನ್ ಚಿನ್ನದೊಂದಿಗೆ ಶ್ರೀ ದೈವಂಗಳ ನೂತನ ಸ್ವರ್ಣ ಬಿಂಬ, ಆಯುಧ, ಪಲ್ಲಕ್ಕಿ ನವೀಕರಣಗೊಳ್ಳುತ್ತಿದ್ದು, ಶ್ರೀ ಉಳ್ಳಾಲ್ತಿ ದೈವದ ಸ್ವರ್ಣ ಮುಕುಟ ಕೆಲಸ ಪ್ರಗತಿಯಲ್ಲಿದ್ದು, ಮಾ.18ರಂದು ವಾದ್ಯ ಭವ್ಯವಾದ ಮೆರವಣಿಗೆಯಲ್ಲಿ ಮಾರ್ನಬೈಲು ಜಂಕ್ಷನ್‌ನಿಂದ ಶ್ರೀ ಕ್ಷೇತ್ರಕ್ಕೆ ಹಸಿರು ವಾಣಿ ಹೊರೆ ಕಾಣಿಕೆ ಜೊತೆ ಕ್ಷೇತ್ರಕ್ಕೆ ತರಲಾಗುವುದು ಎಂದು ವಿವರಿಸಿದರು.

ಸಜೀಪ ಮಾಗಣೆ ತಂತ್ರಿ ಎಂ. ಸುಬ್ರಹ್ಮಣ್ಯ ಭಟ್ ಮಾತನಾಡಿ ಜೀವಮಾನದಲ್ಲಿ ಅಪರೂಪಕ್ಕೊಮ್ಮೆ ಸಿಗುವ ಇಂತಹ ಪುಣ್ಯ ಕಾರ್ಯಗಳಲ್ಲಿ ಎಲ್ಲರೂ ಭಾಗವಹಿಸಿ ಕ್ಷೇತ್ರದ ಪಾವಿತ್ರ್ಯತೆ ಹಾಗೂ ಕೀರ್ತಿಯನ್ನು ಹೆಚ್ಚಿಸುವಂತೆ ವಿನಂತಿಸಿದರು. ಗಡಿ ಪ್ರಧಾನರಾದ ಸಜೀಪಗುತ್ತು ಮುತ್ತಣ್ಣ ಶೆಟ್ಟಿ ಯಾನೆ ಕಾಳ ಶೆಟ್ಟಿಮಾಡದಾರು ಗುತ್ತು ಗಡಿ ಪ್ರಧಾನರಾದ ಶಶಿಧರ ರೈ ಯಾನೆ ನಾರಣ ಆಳ್ವ ಹಾಗೂ ಗುತ್ತು ಮನೆತನದ ಪ್ರತಿನಿಧಿಗಳು ಚಾಕರಿ ವರ್ಗದವರು ವಿವಿಧ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶಿಮಂತೂರು ದೇವಸ್ಥಾನದಲ್ಲಿ ಜಾತ್ರೆ: ದೀಪೋತ್ಸವ, ಚಂಡಿಕಾಯಾಗ ಸಂಪನ್ನ



ಮುಲ್ಕಿ: ಶಿಮಂತೂರು ಶ್ರೀ ಆದಿಜನಾರ್ದನ ದೇವಸ್ಥಾನದ ವರ್ಷಾವದಿ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಮಧ್ಯಾಹ್ನ ಮಹಾಪೂಜೆ ನಡೆಯಿತು.

ಸಂಜೆ 3 ಗಂಟೆಗೆ ಗ್ರಹಣದ ನಿಮಿತ್ತ ಶಾಂತಿ ಹೋಮ ಪ್ರಾಯಶ್ಚಿತ್ತ ಹೋಮ, ಸಂಜೆ 7 ಗಂಟೆಗೆ ಶುದ್ಧಕಲಶಾಭಿಷೇಕ ಅಲಂಕಾರ ಪೂಜೆ, ರಾತ್ರಿ ಶ್ರೀ ದೇವರ ಉತ್ಸವ ಬಲಿ ಚಂದ್ರಮಂಡಲ ರಥೋತ್ಸವ ಪಲ್ಲಕ್ಕಿ ಉತ್ಸವ, ಬಾಕಿಮಾರು ದೀಪ, ಕೆರೆ ದೀಪೋತ್ಸವ ವಿಜೃಂಭಣೆಯಿಂದ ನಡೆಯಿತು.

ಈ ಸಂದರ್ಭ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ದೇವಸ್ಥಾನದ ಆಡಳಿತ ಮೊಕ್ತೇಸರ ಉದಯಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ರೂಪಾ ವಿಷ್ಣುಮೂರ್ತಿ ಭಟ್, ಶಶಿಕಲಾ ಎನ್. ಕುಂದರ್, ಶಾಂತಾರಾಮ ಹೆಗ್ಡೆ ತೆಂಗಾಳಿ, ನಂದನಾ ಶೆಟ್ಟಿ ಕುಬೆವೂರು, ಅರುಣ್ ಕುಮಾರ್ ಕಟ್ಟಪುಣಿ, ಶಂಕರ್ ಮಾಸ್ಟರ್, ಮೋಹನ್ ಕೋಟ್ಯಾನ್ ಶಿಮಂತೂರು, ಬಾಲಕೃಷ್ಣ ಶೆಟ್ಟಿ ಅಂಬೆಲಬೀಡು, ಚಂದ್ರಹಾಸ ಸುವರ್ಣ, ಉದಯ ಕುಮಾರ್ ಶೆಟ್ಟಿ ಅಧಿಧನ್, ಹರೀಶ್ ಶೆಟ್ಟಿ ದಿನೇಶ್ಚಂದ್ರ ಅಜಿಲ, ಸುರೇಶ್ ಶೆಟ್ಟಿ ಗೋಪಾಲ, ಯುವಕ ಮಂಡಲ ಮಹಿಳಾ ಭಜನಾ ಮಂಡಳಿಯ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

ವಿಶೇಷ ಯಾಗ

ಶಿಮಂತೂರು ಶ್ರೀ ಆದಿ ಜನಾರ್ದನ ದೇವಸ್ಥಾನದಲ್ಲಿ ಕ್ಷೇತ್ರದ ತಂತ್ರಿಗಳಾದ ಶಿಬರೂರು ವೇದವ್ಯಾಸ ತಂತ್ರಿಗಳ ನೇತೃತ್ವದಲ್ಲಿ ಲೋಕ ಕಲ್ಯಾಣಾರ್ಥವಾಗಿ ಚಂಡಿಕಾಯಾಗ ವಿಜೃಂಭಣೆಯಿಂದ ನಡೆಯಿತು. ಬಳಿಕ ಮಹಾ ಅನ್ನ ಸಂತರ್ಪಣೆ ನಡೆಯಿತು.

ಮಹಿಳಾ ಪ್ರಾಂಶುಪಾಲರ ಅಮಾನತು ಕ್ರಮ ಸರಿಯಾಗಿದೆ: ಕಾಂಗ್ರೆಸ್ ಹೇಳಿಕೆ

ಪುತ್ತೂರು: ನಿಮಯಗಳನ್ನು ಪಾಲನೆ ಮಾಡದೆ, ಶಾಸಕರಿಗೂ ಗೌರವ ನೀಡದ ಪುತ್ತೂರು ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರನ್ನು ಅಮಾನತು ಮಾಡಿದ ಕ್ರಮ ಸರಿಯಾಗಿದೆ. ಈ ವಿಚಾರವನ್ನು ಮುಂದಿಟ್ಟುಕೊಂಡು ಪುತ್ತೂರು ಶಾಸಕ ಅಶೋಕ್ ರೈ ಅವರು ಮಹಿಳೆಯರಿಗೆ ಅನ್ಯಾಯ ಮಾಡಿದ್ದಾರೆ ಎಂದು ಪ್ರತಿಭಟನೆ ಮಾಡಿರುವ ಬಿಜೆಪಿ ಮಹಿಳಾ ಮೋರ್ಚಾದ ಕ್ರಮವನ್ನು ಖಂಡಿಸಿಸುವುದಾಗಿ ದ.ಕ. ಗ್ರಾಮಾಂತರ ಜಿಲ್ಲಾ ಮಹಿಳಾ ಕಾಂಗ್ರೆಸ್ ಹೇಳಿದೆ.

ತಪ್ಪು ಹುಡುಕುವ ಪ್ರಯತ್ನ

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗ್ರಾಮಾಂತರ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಉಷಾ ಅಂಚನ್ ಮತ್ತು ಉಸ್ತುವಾರಿ ಅನಿತಾ ಹೇಮನಾಥ್ ಶೆಟ್ಟಿ, ಪುತ್ತೂರು ಶಾಸಕರ ಒಂದೇ ಒಂದು ತಪ್ಪು ಹುಡುಕಲು ವಿಫಲವಾಗಿರುವ ಬಿಜೆಪಿಗರು ಈಗ ಮಹಿಳಾ ಮೋರ್ಚಾವನ್ನು ಮುಂದಿಟ್ಟುಕೊಂಡು ವ್ಯರ್ಥ ಪ್ರತಿಭಟನೆ ಮಾಡಿದ್ದಾರೆ. ಶಾಸಕರ ವಿರುದ್ಧ ಭಾಷಣ ಮಾಡಲು ಪುತ್ತೂರಿನ ಮಹಿಳಾ ನಾಯಕರು ಸಿಗದ ಕಾರಣ ಮಂಗಳೂರಿನಿಂದ ಕರೆತಂದು ಭಾಷಣ ಮಾಡಿಸಿದ್ದಾರೆ. ಶಾಸಕರ ವಿರುದ್ಧ ಜಿಲ್ಲಾ ಮಟ್ಟದಲ್ಲಿ ಪ್ರತಿಭಟನೆ ಮಾಡಲು ಮಹಿಳಾ ಮೋರ್ಚಾ ಮುಂದಾದರೆ ಶಾಸಕರ ಪರ ನಾವು ಕೂಡ ಮಹಿಳೆಯರನ್ನು ಸೇರಿಸಿ ಸಮಾವೇಶ ಮಾಡಲು ಸಿದ್ಧರಿದ್ದೇವೆ ಎಂದು ಹೇಳಿದರು.

ಸಂಜೀವ ಮಠಂದೂರು ಅವರನ್ನು ನೋಡಿ ಕಲಿಯಲಿ ಎಂದು ಬಿಜೆಪಿ ಮಹಿಳಾ ಮೋರ್ಚಾ ನಾಯಕರು ಹೇಳಿರುವುದು ಹಾಸ್ಯಾಸ್ಪದ ಎಂದು ಹೇಳಿದರು. ಅನಿತಾ ಹೇಮನಾಥ ಶೆಟ್ಟಿ ಮಾತನಾಡಿ, ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರು ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮಾಡಲು ಬಿಜೆಪಿಗರೇ ಕುಮ್ಮಕ್ಕು ನೀಡಿದ್ದರು. ಕಾಲೇಜಿನ ಧೂಳಿನ ಸಮಸ್ಯೆ ಬಗ್ಗೆ ಪ್ರಾಂಶುಪಾಲರು ಶಾಸಕರಿಗೆ ಯಾವ ಮಾಹಿತಿಯೂ ನೀಡಿಲ್ಲ, ಇಲಾಖೆಗೂ ನೀಡಿಲ್ಲ. ನೇರವಾಗಿ ವಿದ್ಯಾರ್ಥಿನಿಯರನ್ನು ಬೀದಿಯಲ್ಲಿ ತಂದು ಕೂರಿಸಿದ್ದಲ್ಲದೆ, ಶಾಸಕರು ಪ್ರಶ್ನಿಸಿದಾಗ ಉಡಾಫೆಯ ಉತ್ತರ ನೀಡಿದ್ದಾರೆ. ಏನೂ ಮಾಡದೆ ಬೇಜವಾಬ್ದಾರಿಯಿಂದ ಕಾನೂನು ಬಾಹಿರವಾಗಿ ವರ್ತಿಸಿದ ಕಾರಣ ಪ್ರಾಂಶುಪಾಲರು ಅಮಾನತಾಗಿದ್ದಾರೆ. ಇದು ಶಾಸಕರ ದಬ್ಬಾಳಿಕೆಯಲ್ಲ ಎಂದರು. ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅನಿ ಮಿನೇಜಸ್, ತಪ್ಪು ಮಾಡಿದ ಅಧಿಕಾರಿ ವಿರುದ್ಧ ಇಲಾಖಾ ನಿಯಮಾವಳಿ ಪ್ರಕಾರ ಕ್ರಮ ಆಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪುತ್ತೂರು ನಗರಸಭೆ ಮಾಜಿ ಅಧ್ಯಕ್ಷೆ ಜಯಂತಿ ಬಲ್ನಾಡು, ಮುಖಂಡೆ ಜಯಂತಿ ಪಟ್ಟುಮೂಲೆ ಉಪಸ್ಥಿತರಿದ್ದರು.

ನಿಟ್ಟೆ ಕೆ.ಎಸ್.ಹೆಗ್ಡೆ ಆಸ್ಪತ್ರೆಯಲ್ಲಿ ವಿಶೇಷ ಕಾರ್ಯಾಗಾರ ಸಮಾರೋಪ



ಉಳ್ಳಾಲ: ದೇರಳಕಟ್ಟೆ ನಿಟ್ಟೆ ಉಷಾ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸಸ್, ಕೆ.ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆ ಮತ್ತು ನಿಟ್ಟೆ ಸೆಂಟರ್ ಫಾರ್ ಸ್ಟೆಮ್ ಸೆಲ್, ರಿಸರ್ಚ್ ಆಂಡ್ ರಿಜನರೇಶನ್ ಮೆಡಿಸಿನ್ ಹಾಗೂ ಕ್ಷೇಮಾ ಸಹಯೋಗದೊಂದಿಗೆ ನಡೆದ ಟ್ರಾನ್ಸ್‌ಫ್ಯೂಷನ್ ಮೆಡಿಸಿನ್, ಐಸಿಎಂಆರ್ ಅನುದಾನಿತ ಕಾರ್ಯಾಗಾರದ ಸಮಾರೋಪ ಸಮಾರಂಭವು ದೇರಳಕಟ್ಟೆಯ ಜಸ್ಟಿಸ್ ಕೆ.ಎಸ್.ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ಚಿಂತನಾ ಸಭಾಂಗಣದಲ್ಲಿ ನಡೆಯಿತು.

ಅತಿಥಿಗಳಾಗಿ ಭಾಗವಹಿಸಿದ್ದ ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಸ್ಟೆಮ್ ಸೆಲ್ ಸಂಶೋಧನೆ ಮತ್ತು ಪುನರುತ್ಪಾದನಾ ಕೇಂದ್ರದ ನಿರ್ದೇಶಕ ಡಾ. ಅನಿರ್ಬನ್ ಚಕ್ರವರ್ತಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ.ಫಾತಿಮಾ ಡಿ'ಸಿಲ್ವಾ ಮಾತನಾಡಿ, ಕಾರ್ಯಾಗಾರವನ್ನು ಯಶಸ್ವಿಯಾಗಿ ಆಯೋಜಿಸಿದತಂಡದಪ್ರಯತ್ನಗಳನ್ನು ಶ್ಲಾಘಿಸಿದದರು.

ಸಂಪನ್ಮೂಲ ವ್ಯಕ್ತಿಗಳಾದ ಡಾ. ಚಂದ್ರಿಕಾ ರಾವ್, ಡಾ.ಮೋಹನ ಕುಮಾರ್ ಮತ್ತು ಡ್ಯಾರಲ್ ಅರಾನ್ಹಾ ಉಪಸ್ಥಿತರಿದ್ದರು. ಆಯೋಜನಾ ಕಾರ್ಯದರ್ಶಿ ಡಾ.ಸುಚಿತ್ರಾ ಬಿ.ಎಸ್ ಅವರು ಕಾರ್ಯಾಗಾರದ ಉದ್ದೇಶಗಳು, ನಡೆದ ವಿವಿಧ ಅಧಿವೇಶನಗಳು ಹಾಗೂ ಫಲಿತಾಂಶಗಳ ವರದಿ ಮಂಡಿಸಿದರು. ಸಮುದಾಯ ಆರೋಗ್ಯ ನರ್ಸಿಂಗ್ ವಿಭಾಗದ ಮುಖ್ಯಸ್ಥೆ ಪ್ರೊ. ಡಾ.ನೀತಾ ಕಾಮತ್ ಸ್ವಾಗತಿಸಿದರು. ಸಹ ಪ್ರಾಧ್ಯಾಪಕಿ ಡಾ.ಸರಿತಾ ತೆಲ್ಮಾ ಫರ್ನಾಂಡಿಸ್ ನಿರೂಪಿಸಿದರು. ಶ್ರೀಕಾಂತ್ ಎಸ್.ಕೆ.ವಂದಿಸಿದರು.

ತೆರಿಗೆ ಸಂಗ್ರಹದಲ್ಲಿ ಅಭೂತಪೂರ್ವ ಯಶಸ್ಸು | ಶೇ. 103ರಷ್ಟು ಸಾಧನೆ | ಸುಬ್ರಹ್ಮಣ್ಯ ಗ್ರಾಮ ಪಂಚಾಯತ್‌ನಿಂದಲೇ 1 ಕೋ.ರೂ. ಸಂಗ್ರಹ

ಆರ್ಥಿಕ ವರ್ಷದಲ್ಲಿ 3.4 ಕೋಟಿ ರೂ. ತೆರಿಗೆ ಸಂಗ್ರಹಿಸಿ ಕಡಬ ತಾಲೂಕು ರಾಜ್ಯಕ್ಕೇ ಪ್ರಥಮ!

ಕಡಬ: ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಕಡಬ ತಾಲೂಕಿನ ತೆರಿಗೆ ಸಂಗ್ರಹಣೆಯು ಜಿಲ್ಲೆಗೆ ಮಾತ್ರವಲ್ಲ ರಾಜ್ಯಕ್ಕೇ ಪ್ರಥಮವಾಗಿರುವುದು ಮಾದರಿಯಾಗಿದೆ.

ಹೊಸ ತಾಲೂಕಾಗಿ ಘೋಷಣೆಯಾದಲ್ಲಿಂದ ಈವರೆಗೆ ಪ್ರತೀ ವರ್ಷ ತೆರಿಗೆ ಸಂಗ್ರಹಣೆಯಲ್ಲಿ ಅಗ್ರಸ್ಥಾನ ಪಡೆಯುತ್ತಿದೆ. ಅಂತೆಯೇ ಈ ಆರ್ಥಿಕ ವರ್ಷದಲ್ಲಿಯೂ ಕಡಬ ತಾಲೂಕು ತನ್ನ ಪ್ರಸಕ್ತ ಸಾಲಿನ ತೆರಿಗೆ ಗುರಿಯನ್ನು ಮೀರಿ ಸಾಧನೆ ಮಾಡುವ ಮೂಲಕ ಜಿಲ್ಲೆಯ ಅಭಿವೃದ್ಧಿಯ ಪಥದಲ್ಲಿ ಕಡಬದ ಈ ಸಾಧನೆಯು ಒಂದು ಮೈಲಿಗಲ್ಲಾಗಿದೆ.

ಶೇ.103ರ ಸಾಧನೆ

ಕಡಬ ತಾಲೂಕಿನ 21 ಗ್ರಾಮ ಪಂಚಾಯತ್‌ಗಳು ಪ್ರಸಕ್ತ ಸಾಲಿನ ಬೇಡಿಕೆಯಲ್ಲಿ ಶೇ.100ರಷ್ಟು ಗುರಿ ತಲುಪಿರುವುದು ಒಂದು ಐತಿಹಾಸಿಕ ಸಾಧನೆಯಾಗಿದೆ.



ಪ್ರಸಕ್ತ ಸಾಲಿನ ಗುರಿಯನ್ನು ಮೀರಿ ಶೇ.103ರಷ್ಟು ತೆರಿಗೆ ಸಂಗ್ರಹಿಸುವ ಮೂಲಕ ಜಿಲ್ಲೆಯಲ್ಲೇ ಪ್ರಥಮ ಸ್ಥಾನವನ್ನು ಕಡಬ ತಾಲೂಕು ಪಡೆದಿದೆ.

ರೂ.3.41 ಕೋಟಿ ತೆರಿಗೆ ಸಂಗ್ರಹ

ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಎಲ್ಲಾ ವಾಣಿಜ್ಯ ಕಟ್ಟಡಗಳು, ಮನೆಗಳು, ವಿವಿಧ ಕೈಗಾರಿಕಾ ಕಟ್ಟಡಗಳಿಗೆ ಕಾನೂನು ಬದ್ಧವಾಗಿ ವಿಸುವ ತೆರಿಗೆಗಳಿಗೆ ಸಂಬಂಧಿಸಿ ಪಂಚಾಯತ್‌ಗಳಿಗೆ ಗುರಿಯನ್ನು ನೀಡಲಾಗುತ್ತದೆ. ವಾರ್ಷಿಕ ತಾಲೂಕಿಗೆ 21 ಗ್ರಾ.ಪಂ.ಗಳನ್ನು ಸೇರಿ ಒಟ್ಟು ರೂ.3.34 ಕೋಟಿ ತೆರಿಗೆ ಸಂಗ್ರಹಿಸುವ ಗುರಿಯಾಗಿತ್ತು. ಆದರೆ, ಈಗಾಗಲೇ ರೂ.3.41 ಕೋಟಿಗಿಂತಲೂ ಅಧಿಕ ಮೊತ್ತವನ್ನು ಗ್ರಾಮ ಪಂಚಾಯತ್‌ಗಳು ತೆರಿಯನ್ನು ಸಂಗ್ರಹಿಸಿವೆ.

ಸುಬ್ರಹ್ಮಣ್ಯ ಗ್ರಾ.ಪಂ. ಒಂದರಿಂದಲೇ ರೂ.1 ಕೋಟಿಗಿಂತ ಹೆಚ್ಚು ತೆರಿಗೆ ಸಂಗ್ರಹಣೆಯಾಗಿದೆ. ಅಲ್ಲದೆ, ನೆಲ್ಯಾಡಿ ಗ್ರಾ.ಪಂ.ನಿಂದ ರೂ.33 ಲಕ್ಷ, ಕೌಕ್ರಾಡಿ ಗ್ರಾ.ಪಂ.ನಿಂದ ರೂ.29 ಲಕ್ಷ, ರಾಮಕುಂಜ ಗ್ರಾ.ಪಂ.ನಿಂದ ರೂ.20 ಲಕ್ಷ, ಕುಟ್ರುಪಾಡಿ ಗ್ರಾ.ಪಂ.ನಿಂದ ರೂ.19 ಲಕ್ಷ., ಬೆಳಂದೂರು ಗ್ರಾ.ಪಂ.ನಿಂದ ರೂ.17 ಲಕ್ಷ, ಸವಣೂರು ಗ್ರಾ.ಪಂ.ನಿಂದ ರೂ.16.5 ಲಕ್ಷ, ಆಲಂಕಾರು ಗ್ರಾ.ಪಂ.ನಿಂದ ರೂ.16.4 ಲಕ್ಷ, ಬಿಳಿನೆಲೆ ಗ್ರಾ.ಪಂ. ರೂ.15 ಲಕ್ಷ ಹಾಗೂ ಮರ್ಧಾಳ ಗ್ರಾ.ಪಂ.ನಿಂದ ರೂ.15 ಲಕ್ಷ ರೂಗಳಷ್ಟು ತೆರಿಗೆ ಸಂಗ್ರಹಿಸಲಾಗಿದೆ. ಎಲ್ಲಾ ಗ್ರಾ.ಪಂ.ಗಳು ಶೇ.100ಕ್ಕಿಂತ ಹೆಚ್ಚಿನ ಸಂಗ್ರಹಿಸುವಲ್ಲಿ ಯಶಸ್ವಿಯಾಗಿದೆ.

ನಾಗರಿಕರ ಸಹಕಾರ

ಹಳೆಯ ಬಾಕಿಯನ್ನು ಹೊರತುಪಡಿಸಿ, ಪ್ರಸಕ್ತ ಸಾಲಿನ ತೆರಿಗೆಯನ್ನು ಪೂರ್ಣವಾಗಿ ವಸೂಲಿ ಮಾಡುವ ಮೂಲಕ ನಾಗರಿಕರು ಸಂಪೂರ್ಣ ಸಹಕಾರವನ್ನು ಗ್ರಾಮೀಣಾಭಿವೃದ್ಧಿಗೆ ನೀಡಿದ್ದಾರೆ. ಈ ಸಾಧನೆಯು ತಾಲೂಕಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಬಿಲ್ ಕಲೆಕ್ಟರ್‌ಗಳು ಮತ್ತು ತೆರಿಗೆ ಪಾವತಿಸಿದ ಜಾಗೃತ ನಾಗರಿಕರ ಶ್ರಮಕ್ಕೆ ಸಾಕ್ಷಿಯಾಗಿದೆ. ವರ್ಷಾಂತ್ಯವಾಗುವ ಮಾರ್ಚ್ ತಿಂಗಳ ಒಂದು ತಿಂಗಳ ಮೊದಲೇ ಶೇ.100ಕ್ಕಿಂತ ಹೆಚ್ಚಿನ ತೆರಿಗೆ ಸಂಗ್ರಹಣೆಯನ್ನು ಮಾಡಿರುವುದು ತಾಲೂಕಿನ ಸಾಧನೆಯಾಗಿದೆ.

ತಾಲೂಕುವಾರು ಪ್ರಗತಿ

ತಾಲೂಕುವಾರ ಪ್ರಗತಿಯಲ್ಲಿ ಕಡಬ ಶೇ.103, ಮೂಡುಬಿದ್ರೆ ಶೇ.99, ಉಳ್ಳಾಲ ಶೇ.96, ಸುಳ್ಯ ಶೇ.95, ಬೆಳ್ತಂಗಡಿ ಶೇ.94, ಮುಲ್ಕಿ ಶೇ.91, ಪುತ್ತೂರು ಶೇ.90, ಬಂಟ್ವಾಳ ಶೇ.89, ಮಂಗಳೂರು ಶೇ.85 ತೆರಿಗೆ ಸಂಗ್ರಹಣೆಯಲ್ಲಿ ಮಾಡುವ ಮೂಲಕ ಒಟ್ಟು ಜಿಲ್ಲೆಯಲ್ಲಿ ಶೇ.92 ತೆರಿಗೆ ಸಂಗ್ರಹಣೆಯನ್ನು ಮಾಡಿರುವ ಬಗ್ಗೆ ಮಾಹಿತಿ ದೊರೆತಿದೆ.

> **ಸರ್ವರ ಸಹಕಾರ**
>
> ಗ್ರಾಮೀಣಾಭಿವೃದ್ಧಿ ಹೊಂದ ಬೇಕಾದರೆ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಗಳಲ್ಲಿ ತೆರಿಗೆ ಪಾವತಿಯೂ ಒಂದು. ಇದಕ್ಕೆ ಸರಕಾರ ಆರಂಭಿಕ 3 ತಿಂಗಳು ಶೇ.5 ವಿನಾಯಿತಿಯನ್ನೂ ನೀಡಿತ್ತು. ಅಲ್ಲದೆ, ತೆರಿಗೆ ಸಂಗ್ರಹಣಾ ಅಭಿಯಾನವನ್ನು ಗ್ರಾ.ಪಂ.ಗಳಲ್ಲಿ, ಗ್ರಾಮ ಗ್ರಾಮಗಳಲ್ಲಿ ಮಾಡುವ ಮೂಲಕ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಶ್ರಮದ ಫಲವಾಗಿ ಈ ಸಾಧನೆ ಮಾಡಲು ಸಾಧ್ಯವಾಗಿದೆ.
>
> • ನವೀನ್ ಕುಮಾರ್ ಭಂಡಾರಿ ಎಚ್., ಇಒ, ತಾ.ಪಂ. ಕಡಬ

ಸುತ್ತಮುತ್ತ

ಮಾಬುಕಳ: ಹತ್ತನೇ ತರಗತಿ ಮಕ್ಕಳಿಗೆ ಕೌಶಲ್ಯ ಪ್ರೇರಣಾ ಅಭಿಯಾನ



ಕೋಟ: ಕೌಶಲ್ಯ ಪ್ರೇರಣ ಅಭಿಯಾನದ ಅಂಗವಾಗಿ ಚೇತನಾ ಪ್ರೌಢಶಾಲೆ ಹಂಗಾರಕಟ್ಟೆ ಇಲ್ಲಿನ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಬಿದ್ಕಲ್ ಕಟ್ಟೆ ಹಾಗೂ ಕೋಟದ ಪಂಚವರ್ಣ ಸಂಘಟನೆಯ ಸಹಯೋಗದೊಂದಿಗೆ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ ಇತ್ತೀಚಿಗೆ ಜರಗಿತು.

ಬಿದ್ಕಲ್ ಕಟ್ಟೆ ಸರಕಾರಿ ಐಟಿಐನ ಏರ್ ಕಂಡೀಷನ್ ವಿಭಾಗದ ಕಿರಿಯ ತರಬೇತಿ ಅಧಿಕಾರಿ ಸುಚಿತ್ರ ಹತ್ತನೇ ತರಗತಿಯ ನಂತರ ಗ್ರಾಮೀಣ ವಿದ್ಯಾರ್ಥಿಗಳಿಗೆ ಐಟಿಐ ತರಬೇತಿಯಲ್ಲಿನ ಎರಡು ವರ್ಷದ ಕೇಂದ್ರ ಸರಕಾರದ ಎನ್‌ಸಿವಿಟಿ ಕೋರ್ಸ್‌ಗಳ ಬಗ್ಗೆ ಮಾಹಿತಿ ನೀಡಿದರು. ಫಿಟ್ಟರ್ ವಿಭಾಗದ ಹಾಗೂ ಕೌಶಲ್ಯ ಪ್ರೇರಣಾ ಸಂಸ್ಥೆಯ ಕೋಟ ಅಜಿತ್ ಆಚಾರ್ 10ನೇ ತರಗತಿಯ ನಂತರದ ಕೌಶಲ್ಯ ಕೋರ್ಸುಗಳು ಹಾಗೂ ವಿದ್ಯಾರ್ಥಿನಿಯರಿಗೆ ಸರಕಾರಿ ಉದ್ಯೋಗದಲ್ಲಿ 33 % ಅವಕಾಶ ಮತ್ತು ತಾಂತ್ರಿಕ ಕೋರ್ಸ್‌ಗಳ ಮುಖೇನ ಸರಕಾರಿ ಉದ್ಯೋಗವನ್ನು ಪಡೆಯುವ ನೈಜ ಅವಕಾಶವನ್ನು ವಿದ್ಯಾರ್ಥಿನಿಯರು ಸದುಪಯೋಗಪಡಿಸಿಕೊಳ್ಳುವಂತೆ ಮಾರ್ಗದರ್ಶನ ನೀಡಿದರು. ಶಾಲೆಯ ಮುಖ್ಯ ಶಿಕ್ಷಕಿ ಕಲ್ಪನಾ ಶೆಟ್ಟಿ ಈ ಕಾರ್ಯಕ್ರಮ ಸಂಯೋಜನೆಯಲ್ಲಿ ಸಹಕರಿಸಿದರು ಪ್ರೌಢ ಶಾಲೆಯ ಕನ್ನಡ ಅಧ್ಯಾಪಕರಾದ ಪಕೀರಪ್ಪ ಸ್ವಾಗತಿಸಿ ವಂದಿಸಿದರು. ವಿಜ್ಞಾನ ಶಿಕ್ಷಕರಾದ ಗೋವಿಂದ ರಾವ್ ಸಹಕರಿಸಿದರು. ಶಾಲೆಯ ಇತರ ಅಧ್ಯಾಪಕರು ಸಿಬ್ಬಂದಿಗಳು 8, 9 ಹಾಗೂ 10ನೇ ತರಗತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗಿಯಾದರು. ಕೌಶಲ್ಯ ಪ್ರೇರಣಾ ಸೇವಾ ಸಂಸ್ಥೆ ಕೋಟ ಕಾರ್ಯಕ್ರಮ ಸಂಯೋಜಿಸಿದರು.

ಡಾ.ಜಗಜೀವನ ರಾಂ, ಡಾ.ಬಿ.ಆರ್ ಅಂಬೇಡ್ಕರ್ ಪ್ರಶಸ್ತಿಗೆ ಅರ್ಜಿ ಆಹ್ವಾನ

ಉಡುಪಿ: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2026-27 ನೇ ಸಾಲಿನಲ್ಲಿ ಡಾ. ಬಾಬು ಜಗ ಜೀವನ ರಾಂ ರವರ 119 ನೇ ಹಾಗೂ ಡಾ.ಬಿ.ಆರ್ ಅಂಬೇಡ್ಕರ್ ರವರ 135 ನೇ ಜನ್ಮ ದಿನಾಚರಣೆ ಅಂಗವಾಗಿ ಪ್ರಶಸ್ತಿ ನೀಡಲು, ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳು ತಮ್ಮ ಸ್ವ-ವಿವರವುಳ್ಳ ಅರ್ಜಿ ನಮೂನೆಯನ್ನು ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳಿಂದ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಮಾರ್ಚ್ 10 ರ ಒಳಗಾಗಿ ಸದರಿ ಕಛೇರಿಗಳಿಗೆ ಅಥವಾ ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ರಜತಾದ್ರಿ, ಮಣಿಪಾಲ, ಉಡುಪಿ ಇವರಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸ ಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಕೊಡೆತ್ತೂರು ಶ್ರೀ ಅರಸು ಕುಂಜರಾಯ, ಪರಿವಾರ ದೈವಗಳ ವಾರ್ಷಿಕ ನೇಮ

ಕಿನ್ನಿಗೋಳಿ: ಕೊಡೆತ್ತೂರು ಶ್ರೀ ಅರಸು ಕುಂಜರಾಯ ಹಾಗೂ ಪರಿವಾರ ದೈವಗಳ ವಾರ್ಷಿಕ ನೇಮ ಮಾ. 8ರಿಂದ 13 ರತನ ನಡೆಯಲಿದೆ. ಮಾ. 8ರಂದು ಬೆಳಿಗ್ಗೆ ಧ್ವಜಾರೋಹಣ, ಅನ್ನಸಂತರ್ಪಣೆ, ಸಂಜೆ ಎಲ್ಲಾ ಪರಿವಾರ ದೈವಗಳ ಭಂಡಾರ ಆಗಮನ, ರಾತ್ರಿ ಕೊಡೆತ್ತೂರು ಶ್ರೀ ಅರಸು ಕುಂಜರಾಯ ದೈವದ ನೇಮ, ರಾತ್ರಿ ಕೊಂಡೇಲ್ತಾಯ ದೈವ ಹಾಗೂ ಮೈಸಂದಾಯ ದೈವದ ನೇಮ, ಮಾ. 9 ರಂದು ಬೆಳಿಗ್ಗೆ ಶಿಬರೂರು ಉಳ್ಳಾಯ ದೈವದ ನೇಮ, ರಾತ್ರಿ ಶಿಬರೂರು ಕೊಡಮಣಿತ್ತಾಯ ದೈವದ ನೇಮ ಹಾಗೂ ಧಾರ್ಮಿಕ ಸಭೆ, ಮಾ. 10 ರಂದು ರಾತ್ರಿ ಕೊಡೆತ್ತೂರು ಮಾಗಂದಡಿ ಕಾಂತೇರಿ ಧೂಮಾವತಿ ಬಂಟ ದೈವದ ನೇಮ, ಅಡ್ಯಂತಾಯ ಬಬ್ಬರ್ಯ ದೈವದ ನೇಮ , ಮಾ. 11ರಂದು ರಾತ್ರಿ ಬಡಗ ಎಕ್ಕಾರು ಶ್ರೀ ಜಾರಂದಯ ಬಂಟ ದೈವದ ನೇಮ, ರಾತ್ರಿ ಕೊಡೆತ್ತೂರು ಕೋರದಬ್ಬು ದೈವದ ಭಂಡಾರ ಆಗಮನ ಹಾಗೂ ರಾತ್ರಿ ಜಾರಂದಾಯ ಕೋರದಬ್ಬು ದೈವದ ಭೇಟಿ, ಮಾ. 12ರಂದು ರಾತ್ರಿ ಕೊಡೆತ್ತೂರು ಮಿತ್ತಬಲು ಶ್ರೀ ಸರಳ ಧೂಮಾವತಿ ಬಂಟ ದೈವದ ನೇಮ, ಪಿಲಿಚಂಡಿ ದೈವದ ನೇಮ ನಡೆಯಲಿದೆ. ಮಾ. 13ರಂದು ಬೆಳಿಗ್ಗೆ ಧ್ವಜಾರೋಹಣ ಮತ್ತು ಭಂಡಾರಗಳ ನಿರ್ಗಮನ ನಡೆಯಲಿದೆ ಹಾಗೂ ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ಆಡಳಿತ ಮಂಡಳಿಯ ಪ್ರಕಟಣೆ ತಿಳಿಸಿದೆ.

ಕಾಪು ಪುರಸಭೆ : ಅಧ್ಯಕ್ಷರ ಆಯ್ಕೆ - ಚುನಾವಣಾ ಅಧಿಕಾರಿಗಳ ನೇಮಕ

ಉಡುಪಿ: ವಿವಿಧ ಕಾರಣಗಳಿಂದ ತೆರವಾಗಿರುವ ಜಿಲ್ಲೆಯ ಕಾಪು ಪುರಸಭೆಯ 10 ನೇ ಅವಧಿಯ ಅಧ್ಯಕ್ಷ ಸ್ಥಾನ - ಸಾಮಾನ್ಯ (ಮಹಿಳೆ) ಕ್ಕೆ ಚುನಾವಣೆ ನಡೆಸುವ ಸಲುವಾಗಿ ಕಾಪು ತಹಶೀಲ್ದಾರ್ ಆದ ಅನಂತ ಶಂಕರ ಬಿ ಅವರನ್ನು ಚುನಾವಣಾ ಅಧಿಕಾರಿಯನ್ನಾಗಿ ನೇಮಿಸಲಾಗಿದ್ದು, ಸದ್ರಿ ರವರು ಕರ್ನಾಟಕ ಪೌರಸಭೆ ನಿಯಮ 1965 ರ ನಿಯಮ 01 ರಿಂದ 18 ರ ವರೆಗಿನ ನಿಯಮದಂತೆ ಚುನಾವಣೆ ನಡೆಸಿ, ಅಧ್ಯಕ್ಷರನ್ನು ಆಯ್ಕೆ ಮಾಡುವಂತೆ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

ಬಪ್ಪನಾಡು ಸೇತುವೆಯಿಂದ ಪಾವಂಜೆ ಸೇತುವೆವರೆಗೆ 'ಅಪಘಾತ ವಲಯ' | ಅಕ್ರಮ ಕಟ್ಟಡಗಳ ತೆರವು

ಮುಲ್ಕಿ ರಾಷ್ಟ್ರೀಯ ಹೆದ್ದಾರಿ ಸರ್ವಿಸ್ ರಸ್ತೆ ಕಾಮಗಾರಿಗೆ ಚಾಲನೆ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ ಚತುಷ್ಪಥಗೊಂಡ ಬಳಿಕ ದಕ್ಷಿಣ ಕನ್ನಡ ಜಿಲ್ಲೆಯ ಗಡಿ ಭಾಗದ ಬಪ್ಪನಾಡು ಸೇತುವೆಯಿಂದ ಪಾವಂಜೆ ಸೇತುವೆವರೆಗೆ ರಾಷ್ಟ್ರೀಯ ಹೆದ್ದಾರಿ ಅಪಘಾತ ವಲಯವಾಗಿ ಪರಿಣಮಿಸಿದ್ದು, ಹಲವಾರು ಅಪಘಾತಗಳು ಸಂಭವಿಸಿ ಅನೇಕರು ಪ್ರಾಣ ಕಳೆದುಕೊಂಡಿದ್ದರೆ, ಇನ್ನು ಹಲವರು ಗಾಯಾಳುಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಬಗ್ಗೆ ಸ್ಥಳೀಯ ಸಾಮಾಜಿಕ ಕಾರ್ಯಕರ್ತರ ಮನವಿ ಹಾಗೂ ಮಾಧ್ಯಮಗಳ ವರದಿಯ ಹಿನ್ನೆಲೆಯಲ್ಲಿ ಎಚ್ಚೆತ್ತ ದಕ್ಷಿಣ ಕನ್ನಡ ಜಿಲ್ಲೆಯ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಹೆದ್ದಾರಿ ಇಲಾಖೆಯ ಅಧಿಕಾರಿಗಳಿಗೆ ಸರ್ವಿಸ್ ರಸ್ತೆ ಕಾಮಗಾರಿ ನಡೆಸಬೇಕು ಎಂಬ ಸೂಚನೆಯ ಹಿನ್ನೆಲೆಯಲ್ಲಿ ಮುಲ್ಕಿ ಹೆದ್ದಾರಿಯ ಬಪ್ಪನಾಡು ಬಳಿ ಹೆದ್ದಾರಿ ಸರ್ವಿಸ್ ರಸ್ತೆ ಕಾಮಗಾರಿ ಆರಂಭವಾಗಿದೆ. ಜೆಸಿಬಿ ಮೂಲಕ ಹೆದ್ದಾರಿ ಸರ್ವಿಸ್ ರಸ್ತೆ ನಿರ್ಮಾಣ ಕಾರ್ಯ ನಡೆಯುತ್ತಿದ್ದು ಸರ್ವಿಸ್ ರಸ್ತೆಯಲ್ಲಿ ಅಕ್ರಮವಾಗಿ ನಿರ್ಮಾಣವಾಗಿರುವ ಕಟ್ಟಡಗಳನ್ನು, ಗೂಡಂಗಡಿಗಳನ್ನು ಹಾಗೂ ವಿದ್ಯುತ್ ಕಂಬಗಳನ್ನು ತೆರವುಗೊಳಿಸುವ ಕಾರ್ಯ ನಡೆದಿದೆ.



ಅಪಘಾತ ವಲಯ ತಾಣಗಳು

ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ ಬಪ್ಪನಾಡು ದೇವಸ್ಥಾನದಿಂದ ಎದುರು ಭಾಗದ ಜಂಕ್ಷನ್ ಹೆದ್ದಾರಿ, ಮುಲ್ಕಿ ಬಸ್ ನಿಲ್ದಾಣದ ಬಳಿಯ ಹೆದ್ದಾರಿ ಜಂಕ್ಷನ್, ಮುಲ್ಕಿ ವಿಜಯ ಸನ್ನಿಧಿ, ಕಾರ್ನಾಡ್ ಬೈಪಾಸ್, ಕೋಲ್ನಾಡ್ ಬೈ ಪಾಸ್ ಹೆದ್ದಾರಿ, ಪಡುಪಣಂಬೂರು ಪೆಟ್ರೋಲ್ ಬಂಕ್ ಬಳಿಯ ಜಂಕ್ಷನ್, ಹಳೆಯಂಗಡಿ ಜಂಕ್ಷನ್, ಪಾವಂಜೆ ಜಂಕ್ಷನ್ ಹೆದ್ದಾರಿಯಲ್ಲಿ ಪ್ರತಿ ನಿತ್ಯ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತದೆ ರಾಷ್ಟ್ರೀಯ ಹೆದ್ದಾರಿ ಕಾರ್ನಾಡ್ ಬೈಪಾಸ್ ಹಾಗೂ ಪಡುಪಣಂಬೂರು ಪೆಟ್ರೋಲ್ ಬಂಕ್ ಬಳಿಯ ಜಂಕ್ಷನ್ ಸಾಕಷ್ಟು ಅಗಲವಿದ್ದರೂ ಮಾರಣಾಂತಿಕ ಅಪಘಾತಗಳು ಸಂಭವಿಸುತ್ತಿರುವುದು ಆಶ್ಚರ್ಯದಾಯಕವಾಗಿ ಪರಿಣಮಿಸಿದೆ ಈ ಭಾಗದಲ್ಲಿ ಸೂಕ್ತ ಸರ್ವಿಸ್ ರಸ್ತೆ ಇಲ್ಲದೆ ಹೆದ್ದಾರಿಯಲ್ಲಿ ಬರುತ್ತಿರುವ ವಾಹನಗಳು ಏಕಾಏಕಿ ಯೂ ಟರ್ನ್ ತೆಗೆದುಕೊಂಡು ವಿರುದ್ಧ ದಿಕ್ಕಿನಲ್ಲಿ ಚಲಿಸಿ ಅಪಘಾತ ಸಂಭವಿಸುತ್ತಿರುತ್ತದೆ ಎಂದು ಸ್ಥಳೀಯರು ಆರೋಪಿಸುತ್ತಾರೆ.

ಹೆದ್ದಾರಿ ಫ್ಲೈ ಓವರ್ ನಿರ್ಮಿಸಲು ಆಗ್ರಹ

ರಾಷ್ಟ್ರೀಯ ಹೆದ್ದಾರಿಯ ಬಪ್ಪನಾಡು ಜಂಕ್ಷನ್ ಬಳಿಯಿಂದ ಪಾವಂಜೆ ಜಂಕ್ಷನ್ ವರೆಗೆ ಮೂರು ಕಡೆಗಳಲ್ಲಿ ಫ್ಲೈಓವರ್ ನಿರ್ಮಾಣದ ಅಗತ್ಯವಿದೆ. ಬಪ್ಪನಾಡು, ಮುಲ್ಕಿ ಬಸ್ ನಿಲ್ದಾಣ, ಹಳೆಯಂಗಡಿ ಜಂಕ್ಷನ್ ಬಳಿ ಫ್ಲೈ ಓವರ್ ನಿರ್ಮಾಣದ ಅಗತ್ಯವಿದೆ. ಮುಂದಿನ ದಿನಗಳಲ್ಲಿ ಹೆದ್ದಾರಿಯಲ್ಲಿ ವಾಹನ ಸಂಚಾರ ಮತ್ತಷ್ಟು ವಿಪರೀತವಾಗುವ ಕಾರಣ ಅಪಘಾತದ ಸಂಖ್ಯೆ ಮತ್ತಷ್ಟು ಜಾಸ್ತಿ ಆಗುವ ಸಾಧ್ಯತೆ ಇದೆ ಎಂದು ಸ್ಥಳಿಯರು ಹೇಳುತ್ತಾರೆ.

ಸೋಲಾರ್ ಬ್ಲಿಂಕರ್ ಅಳವಡಿಕೆ

ಮುಲ್ಕಿಯ ರಾಷ್ಟ್ರೀಯ ಹೆದ್ದಾರಿ 66ರ ಬಪ್ಪನಾಡು ಸೇತುವೆ ಬಳಿಯಿಂದ ಹೆದ್ದಾರಿಯ 2 ಕಡೆ ಮುಲ್ಕಿ ಬಸ್ ನಿಲ್ದಾಣದ ಜಂಕ್ಷನ್‌ವರೆಗೆ, ಪಡುಪಣಂಬೂರು ಬಸ್ ನಿಲ್ದಾಣದ ಜಂಕ್ಷನ್ ಬಳಿ ಹಾಗೂ ಪಾವಂಜೆಯಲ್ಲಿ ಸರ್ವಿಸ್ ರಸ್ತೆ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ.ರಾಷ್ಟ್ರೀಯ ಹೆದ್ದಾರಿ ಅಪಘಾತ ವಲಯದ ಜಂಕ್ಷನ್ ನ ಮಾರುದ್ದ ದೂರದಲ್ಲಿ ಸೋಲಾರ್ ಬ್ಲಿಂಕರ್ ಅಳವಡಿಸುವ ಕಾರ್ಯ ಕೂಡ ನಡೆಯಲಿದೆ.

● ವಿನೋದ್ ಸಾಲ್ಯಾನ್ ಬೆಳ್ಳಾಯರು, ಮಾಜಿ ಅಧ್ಯಕ್ಷ, ಪಡುಪಣಂಬೂರು ಗ್ರಾ.ಪಂ.

ಸೂರ್ಯ ದೇವರು, ಶ್ರೇಷ್ಠ ಚೈತನ್ಯಕರ: ಡಾ. ಚಾರುಕೀರ್ತಿ ಶ್ರೀ



ಬೆಳ್ತಂಗಡಿ: ಭಕ್ತಿ ಇದ್ದಲ್ಲಿ ಮುಕ್ತಿ ಪ್ರಾಪ್ತ ವಾಗುತ್ತದೆ. ಸೂರ್ಯ ದೇವರ ಶಕ್ತಿ ಪ್ರತ್ಯಕ್ಷವಾಗಿರುವುದರಿಂದ ಅದು ಶ್ರೇಷ್ಠ ಚೈತನ್ಯಕರ ಎಂದು ಮೂಡಬಿದರೆಯ ಡಾ. ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ನುಡಿದರು.

ಅವರು ನಾರಾವಿ ಶ್ರೀ ಸೂರ್ಯನಾರಾಯಣ ದೇವರ ಬ್ರಹ್ಮಕಲಶೋತ್ಸವದ ಮೂರನೇ ದಿನವಾದ ಮಂಗಳವಾರ ನಡೆದ ಧಾರ್ಮಿಕ ಸಭೆಯಲ್ಲಿ ಆಶೀರ್ವದಿಸಿದರು. ಸೂರ್ಯದೇವ ನಮ್ಮೆಲ್ಲರ ಆರೋಗ್ಯ ಕಾಂತಿಗೆ, ಕೀರ್ತಿಗೆ ಕಾರಣ. ನಮ್ಮ ಸಮಾಜದ 16 ಸಮುದಾಯಗಳಿಗೆ ಸೇವೆ ಮಾಡಲು ಅವಕಾಶವಿರುವುದು ಜಾತ್ರೆಯಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಾತ್ರ ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ವಿನಯ ಹೆಗ್ಡೆ ಅಧ್ಯಕತೆ ವಹಿಸಿದ್ದರು. ಮಾಜಿ ಸಚಿವ ವಿನಯಕುಮಾರ ಸೊರಕೆ, ಅಭಯಚಂದ್ರ ಜೈನ್, ವಕೀಲೆ ಶ್ವೇತಾ ಜೈನ್, ರಘುರಾಮ ಶೆಟ್ಟಿ ಮಾಳ, ನಿವೃತ್ತ ಅಧ್ಯಾಪಕ ಎಂ.ಕೆ.ಅರಿಗ, ವೇರಾಡಿ ಸಿ.ಎ.ಬ್ಯಾಂಕ್ ಅಧ್ಯಕ್ಷ ಸತೀಶ್ ಕೆ. ಕಾಶಿಪಟ್ಣ, ಪ್ರವೀಣ ಕುಮಾರ್ ಜೈನ್, ಪ್ರವೀಣ ಪಿಂಟೋ, ಸಂಜೀವ ಶೆಟ್ಟಿ, ನಿವೃತ್ತ ಪೋಲಿಸ್ ಅಧಿಕಾರಿ ಪೀತಾಂಬರ ಹೆರಾಜೆ, ವೇರಾಡಿ ಸಿ.ಎ.ಬ್ಯಾಂಕ್ ನಿರ್ದೇಶಕ ರಾಜೇಶ್ ಶೆಟ್ಟಿ, ಸದಾನಂದ ಪೂಜಾರಿ, ದಿನೇಶ್ ಶೆಟ್ಟಿ, ಚಂದ್ರಶೇಖರ್ ಜಾರೋಡಿ, ನಾರಾವಿ ಭಾ.ಜೈನ್ ಮಿಲನ್ ಅಧ್ಯಕ್ಷ ಕಿಶೋರ್ ಕುಮಾರ್ ಕಂಠಾವು, ದಿನೇಶ್ ಶೆಟ್ಟಿ ಮಾಳ, ದಆಡಳಿತ ಮೊಕ್ತೇಸರ ರವೀಂದ್ರ ಪೂಜಾರಿ ಬಾಂದೊಟ್ಟು, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ರಕ್ಷಿತ್ ಶಿವರಾಂ ಇದ್ದರು. ಧರಣೇಂದ್ರ ಜೈನ್ ಸ್ವಾಗತಿಸಿದರು. ಸತೀಶ್ ಹೊಸ್ಮಾರ್ ನಿರೂಪಿಸಿದರು.

ಆನೆಗುಂದಿ ಶ್ರೀ ಭೇಟಿ

ಆನೆಗುಂದಿ ಸರಸ್ವತೀ ಪೀಠದ ಶ್ರೀ ಕಾಳಹಸ್ತೇಂದ್ರ ಸರಸ್ವತೀ ಸ್ವಾಮೀಜಿ ಬೆಳಿಗ್ಗೆ ದೇವಳಕ್ಕೆ ಭೇಟಿ ನೀಡಿದರು. ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ಯೋಗಾಸನ ನೃತ್ಯ, ಮಹಿಳಾ ಕುಣಿತ ಭಜನೆ ನಡೆದವು.

ಯಕ್ಷಗಾನ ಶಿಕ್ಷಣಕ್ಕೆ ಪೂರ್ವರಂಗವೇ ಆಧಾರವಾಗಿದೆ : ಧನಂಜಯ ಕುಂಬ್ಳೆ



ಮಂಗಳೂರು: ಹಿಂದೆ ಯಕ್ಷಗಾನ ವನ್ನು ಕಲಿಸುವ ಕಲಿಕಾಕೇಂದ್ರಗಳಿರುತ್ತಿರಲಿಲ್ಲ, ಮೇಳಕ್ಕೆ ಕೆಲಸಕ್ಕೆ ಸೇರುತ್ತಿದ್ದ ಹುಡುಗರು ಕೋಡಂಗಿ, ಬಾಲಗೋಪಾಲ, ಸ್ತ್ರೀವೇಷ, ಅರ್ಧನಾರೀಶ್ವರ ಮೊದಲಾದ ಪೂರ್ವರಂಗದ ವೇಷಗಳನ್ನು ಹಾಕಿ ಹಂತ ಹಂತವಾಗಿ ಕಲಿಯುತ್ತಿದ್ದರು. ಯಕ್ಷಗಾನದ ಭಾಗವತಿಕೆ ಬಣ್ಣಗಾರಿಕೆ, ಕುಣಿತ ವೈವಿಧ್ಯಗಳಿಗೆ ಪೂರ್ವರಂಗವೇ ಆಧಾರ. ಇಂದು ಯಕ್ಷಶಿಕ್ಷಣ ಕಲಿಸುವ ಕೇಂದ್ರಗಳು ಇದನ್ನು ಗಮನಿಸಬೇಕು ಎಂದು ಮಂಗಳೂರು ವಿವಿಯ ಡಾ.ದಯಾನಂದ ಪೈ ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಧನಂಜಯ ಕುಂಬ್ಳೆ ಹೇಳಿದರು.

ಅವರು ಮಂಗಳವಾರ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ಶಿವರಾಮ ಕಾರಂತ ವೇದಿಕೆಯಲ್ಲಿ ಮಂಗಳೂರು ವಿವಿ ಯಕ್ಷಗಾನ ಅಧ್ಯಯನ ಕೇಂದ್ರ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಲಲಿತ ಕಲಾ ಸಂಘದ ವತಿಯಿಂದ ನಡೆದ ಎರಡು ದಿನದ ಯಕ್ಷಗಾನ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಅಧ್ಯಕ್ಷತೆಯನ್ನು ವಹಿಸಿದ್ದ ವಿಶ್ವವಿದ್ಯಾನಿಲಯ ಕಾಲೇಜಿನ ಪ್ರಾಂಶುಪಾಲ ಪ್ರೊ.ಗಣಪತಿ ಗೌಡ ಮಾತನಾಡಿದರು. ಯಕ್ಷಗುರುಗಳಾದ ಅಶ್ವತ್ಥ್ ಮಂಜನಾಡಿ, ಕಲಾವಿದೆ ಸಾಯಿಸುಮ ನಾವಡ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು. ಲಲಿತ ಕಲಾ ಸಂಘದ ಉಪನಿರ್ದೇಶಕಿ ಡಾ. ನಾಗರತ್ನ ಕೆ.ಎ, ಪ್ರಾಧ್ಯಾಪಕ ಡಾ. ಸೀತಾರಾಮ ಕಡಮಣ್ಣಾಯ, ಡಾ. ಮಾಧವ ಎಂ.ಕೆ, ಪ್ರೊ. ಜಯವಂತ ನಾಯಕ್, ಡಾ. ರಾಮಕೃಷ್ಣ ಬಿ.ಎಂ, ಡಾ. ಗಾಯತ್ರಿ, ವಿದ್ಯಾರ್ಥಿ ಸಂಘ ಅಧ್ಯಕ್ಷ ಕಾರ್ತಿಕ್ ಆಚಾರ್ಯ ಲಲಿತಾ ಕಲಾ ಸಂಘದ ಸಹ ಕಾರ್ಯದರ್ಶಿ ವಿದ್ಯಾರ್ಥಿನಿ ಶಿವಾನಿ ಮತ್ತಿತರರು ಉಪಸ್ಥಿತರಿದ್ದರು. ಡಾ. ನಾಗರತ್ನ ಕೆ.ಎ ಸ್ವಾಗತಿಸಿದರು ವಂದನಾರ್ಪಣೆ ಗ್ರಂಥ ಪಾಲಕಿ ಡಾ.ವನಜ ವಂದಿಸಿದರು. ಸುಮನಾ ನಿರೂಪಿಸಿದರು.

ಬಡಗನ್ನೂರು: ಫೋಲ್ಡಿಂಗ್, ಸಾರಿ ಗೊಂಡೆ ತರಬೇತಿಯ ಸಮಾರೋಪ



ಪುತ್ತೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಗ್ರಾಮೀಣ ಶ್ರೇಷ್ಠತಾ ಕೇಂದ್ರ ಬೆಳ್ತಂಗಡಿ ಜಂಟಿ ಆಶ್ರಯದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿಯಡಿಯಲ್ಲಿ ಯೋಜನೆ ಪಾಲುದಾರಬಂಧುಗಳಿಗೆ ಉಚಿತವಾಗಿ ಹಮ್ಮಿಕೊಂಡ ಸಾರಿ ಫೋಲ್ಡಿಂಗ್ ಹಾಗೂ ಸಾರಿಗೊಂಡೆ ತರಬೇತಿಯ ಸಮಾರೋಪ ಕಾರ್ಯಕ್ರಮ ಬಡಗನ್ನೂರು ಗ್ರಾಮ ಪಂಚಾಯತ್‌ನ ಹೊಸ ಕೌಶಲ್ಯಾಭಿವೃದ್ಧಿ ಕಟ್ಟಡದಲ್ಲಿ ನಡೆಯಿತು.

ಕುಂಬ್ರ ಕೃಷಿ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ಹಾಗೂ ಬಡಗನ್ನೂರು ಗ್ರಾ.ಪಂ.ನ ಮಾಜಿ ಉಪಾಧ್ಯಕ್ಷರು ಸಂತೋಷ್ ಆಳ್ವ ಉದ್ಘಾಟಿಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಬಾಬು ನಾಯ್ಕ ಮಾತನಾಡಿದರು. ತರಬೇತಿ ಪಡೆದ ಸದಸ್ಯರಾದ ರಶ್ಮಿತಾ, ಸವಿತಾ, ಶೋಭಾ ಅವರು 5 ದಿನದಲ್ಲಿ ನಡೆದ ತರಬೇತಿಯು ಬಗ್ಗೆ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಗ್ರಾಮೀಣ ಶ್ರೇಷ್ಠತಾ ಕೇಂದ್ರ ಬೆಳ್ತಂಗಡಿಯ ಉಪನ್ಯಾಸಕಿ ಧರಣಿ ಮಾತನಾಡಿ, ಮಹಿಳೆಯರು ಸ್ವಾವಲಂಬಿಯಾಗಿ ಜೀವನ ನಡೆಸಬೇಕೆಂಬುದು ಪೂಜ್ಯರ ಹಾಗೂ ಮಾತೃಶ್ರೀ ಅಮ್ಮನವರ ಮೂಲ ಆಶಯ. ಅದಕ್ಕಾಗಿ ಗ್ರಾಮ ಮಟ್ಟದ ಮಹಿಳೆಯರಿಗೆ ಇಂತಹ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ತರಬೇತಿ ಪಡೆದವರ ಆರ್ಥಿಕ ಜೀವನಕ್ಕೆ ಒಳ್ಳೆಯ ಸಹಕಾರ ನೀಡಲಿ ಎಂದು ಶುಭ ಹಾರೈಸಿದರು. ಅಧ್ಯಕ್ಷತೆಯನ್ನು ಬಡಗನ್ನೂರು ಗ್ರಾ.ಪಂ. ಮಾಜಿ ಅಧ್ಯಕ್ಷೆ ಪುಷ್ಪಲತಾ ವಹಿಸಿದ್ದರು. ಪುತ್ತೂರು ತಾಲೂಕಿನ ಯೋಜನಾಕಾರಿ ಶಶಿಧರ್ ಎಂ., ಅರಿಯಡ್ಕ ವಲಯದ ಮಾಜಿ ಜನಜಾಗೃತಿ ವಲಯಾಧ್ಯಕ್ಷ ನಾರಾಯಣ ರೈ ಕುದ್ಕಾಡಿ, ಅರಿಯಡ್ಕ ವಲಯದ ಮೇಲ್ವಿಚಾರಕ ಹರೀಶ್ ಕೆ., ಜ್ಞಾನವಿಕಾಸ ಸಮನ್ವಯಾಕಾರಿ ಕಾವ್ಯಶ್ರೀ, ತಾಲೂಕು ನೋಡಲ್ ಅಕಾರಿ ಜೀವನ್, ಸೇವಾ ಪ್ರತಿನಿಧಿ ಸಾವಿತ್ರಿ, ತರಬೇತಿ ಶಿಕ್ಷಕಿಯಾದ ದೀಕ್ಷಾ ಕೆ., ಒಕ್ಕೂಟದ ಕಾರ್ಯದರ್ಶಿ ಭಾರತಿ ರೈ ಮತ್ತಿತರರು ಉಪಸ್ಥಿತರಿದ್ದರು.

ಬಿ.ಸಿ.ರೋಡ್: ಸೇವಾ ಜಾಗರಣ ವತಿಯಿಂದ ರಕ್ತದಾನ, ದಂತ, ಆರೋಗ್ಯ ತಪಾಸಣಾ ಶಿಬಿರ



ಬಂಟ್ವಾಳ: ಸೇವಾ ಜಾಗರಣ ಆಶಕ್ತರ ಕಷ್ಟ ಗಳಿಗೆ ಸ್ಪಂದಿಸಿ ದುರ್ಬಲರಿಗೆ ಆಶ್ರಯವಾಗಿ ಮೂಡಿಬರುತ್ತಿದೆ ಎಂದು ಹಿಂದೂ ಮುಖಂಡ ಸತ್ಯಜಿತ್ ಸುರತ್ಕಲ್ ಹೇಳಿದರು.

ಸೇವಾ ಜಾಗರಣ ಇದರ ಆಶ್ರಯದಲ್ಲಿ ಕೆಎಂಸಿ ಆಸ್ಪತ್ರೆ ಹಾಗೂ ಎ.ಜೆ.ಆಸ್ಪತ್ರೆ ಮಂಗಳೂರು ಇದರ ಸಹಯೋಗದಲ್ಲಿ ಭಾನುವಾರ ಬಿ.ಸಿ.ರೋಡ್ ಸ್ಪರ್ಶ ಕಲಾ ಮಂದಿರದಲ್ಲಿ ನಡೆದ ರಕ್ತದಾನ ಶಿಬಿರ ಹಾಗೂ ಉಚಿತ ನೇತ್ರ, ದಂತ ಮತ್ತು ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸೇವ್ ಲೈಫ್‌ನ ಅರ್ಜುನ್ ಭಂಡಾರ್ಕರ್ ಮಾತನಾಡಿ, ಸೇವಾ ಜಾಗರಣದ ಸೇವಾ ಕಾರ್ಯ ಸಮಾಜಕ್ಕೆ ಮಾದರಿ ಎಂದರು.

ಕೆಎಂಸಿ ಆಸ್ಪತ್ರೆ ಡಾ. ವೈಭವ ರಕ್ತದಾನದ ಮಾಹಿತಿ ನೀಡಿದರು. ಉದ್ಯಮಿ ಉಮೇಶ್ ಸಾಲ್ಯಾನ್ ಬೆಂಜನಪದವು, ನಿವೃತ್ತ ಸೈನಿಕ ವಿಜಯನ್,ಹಿಂದೂ ಮುಖಂಡ ರತ್ನಾಕರ ಶೆಟ್ಟಿ, ವೃತ್ತ ಸೈನಿಕ ಡಿಕೆಶ್, ರಾಯಿ ವಿವೇಕಾನಂದ ಟ್ರಸ್ಟ್‌ನ ಮಧುಕರ ಬಂಗೇರ, ವಿಹಿಂಪ ಗುರುಪುರ ಪ್ರಖಂಡದ ವಿಶ್ವನಾಥ ಪಾಕಜೆ, ಎ.ಜೆ.ಆಸ್ಪತ್ರೆಯ ಡಾ. ಶಿಲ್ಪಾ, ನಿವೃತ್ತ ಸೈನಿಕ ಡಿಕೆಶ್, ಮುಂಡಾಜೆ ಸೇವಾ ಜಾಗರಣದ ಪ್ರಮುಖರಾದ ಜಗದೀಶ ಬಂಗೇರ ಹೊಳ್ಳರಬೈಲು ಇದ್ದರು. ಭಾರತೀಯ ನೌಕಾ ಪಡೆಯ ಮಾಜಿ ಅಧಿಕಾರಿ ಸಿ.ಪಿ.ಒ.ವಿಜಯನ್ ಸೈನ್ಯಕ್ಕೆ ಸೇರುವ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಸುಮಾರು 82 ಮಂದಿ ರಕ್ತದಾನ, 150 ಮಂದಿ ಆರೋಗ್ಯ ತಪಾಸಣೆಗೈದರು. 42 ಮಂದಿಗೆ ಉಚಿತ ಕನ್ನಡಕ ವಿತರಿಸಲಾಯಿತು. ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ, ಪ್ರಮುಖರಾದ ನಾರಾಯಣ ಹೊಳ್ಳ ನೆತ್ತರಕೆರೆಗುತ್ತು, ಸುದರ್ಶನ್ ಬಜ, ವೀರೇಂದ್ರ ಅಮೀನ್ ವಗ್ಗ, ಗಣೇಶ್ ಸುವರ್ಣ ತುಂಬೆ, ನರಸಿಂಹ ಮಾಣಿ, ತಿರುಲೇಶ್ ಬೆಳ್ಳೂರ್ ಭೇಟಿ ನೀಡಿದರು. ಸುಶಾನ್ ಆಚಾರ್ಯ ಬೊಳ್ಳಾರಿ ಸ್ವಾಗತಿಸಿ, ಗಣೇಶ್ ಹೊಳ್ಳರಬೈಲು ವೈಯಕ್ತಿಕ ಗೀತೆ ಹಾಡಿದರು. ಜಗದೀಶ ಕಡೆಗೋಳಿ ನಿರೂಪಿಸಿದರು. ಯೋಗೀಶ್ ಕುಮ್ಡೇಲ್ ಸಹಕರಿಸಿದರು.

ಹಿರಿಯಡ್ಕ ಕೆಪಿಎಸ್‌ನಲ್ಲಿ ನಿವೃತ್ತಿ ಹೊಂದಿದ ಉಪನ್ಯಾಸಕರಿಗೆ ಬೀಳ್ಕೊಡುಗೆ



ಹಿರಿಯಡ್ಕ: ವಯೋನಿವೃತ್ತಿ ಹೊಂದಿದ ಕರ್ನಾಟಕ ಪಬ್ಲಿಕ್ ಸ್ಕೂಲ್, ಹಿರಿಯಡಕ ಪದವಿಪೂರ್ವ ವಿಭಾಗದ ರಾಜ್ಯಶಾಸ್ತ್ರ ಉಪನ್ಯಾಸಕ ದೇವದಾಸ್ ಬಿ. ಪ್ರಭು ಅವರಿಗೆ ಬೀಳ್ಕೊಡುಗೆ ಸಮಾರಂಭ ನಡೆಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ನಿವೃತ್ತ ರಾಜ್ಯಶಾಸ್ತ್ರ ಉಪನ್ಯಾಸಕ ದಯಾನಂದ ಮಾತನಾಡಿ, ದೇವದಾಸ್ ಪ್ರಭು ತಮ್ಮ ಸೇವಾ ಅವಧಿಯಲ್ಲಿ ವಿವಿಧ ಕಾಲೇಜುಗಳಲ್ಲಿ ಹಾಗೂ ಜಿಲ್ಲಾಮಟ್ಟದ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕರ್ತವ್ಯ ನಿರ್ವಹಿಸಿದ್ದನ್ನು ಸ್ಮರಿಸಿದರು. ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸನ ಹಾಗೂ ಶೈಕ್ಷಣಿಕ ಪ್ರಗತಿಗೆ ಅವರು ನೀಡಿದ ಕೊಡುಗೆ ಗಮನಾರ್ಹ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ದೇವದಾಸ್ ಬಿ. ಪ್ರಭು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವಗಳನ್ನು ಹಂಚಿಕೊಂಡು, ಸಹೋದ್ಯೋಗಿಗಳ ಹಾಗೂ ವಿದ್ಯಾರ್ಥಿಗಳ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಿದರು.

ಪ್ರಾಂಶುಪಾಲ ಮಂಜುನಾಥ ಭಟ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಉಪನ್ಯಾಸಕರಾದ ವೀಣಾ ಡಿ. ನಾಯಕ್ ಸ್ವಾಗತಿಸಿ. ಗೀತಾ ಕುಮಾರಿ ವಂದಿಸಿ, ನವನೀತ್ ಅರಸ್ ಕಾರ್ಯಕ್ರಮವನ್ನು ನಿರ್ವಹಿಸಿದರು. ಈ ಸಂದರ್ಭದಲ್ಲಿ ಉಪಪ್ರಾಂಶುಪಾಲ ಪ್ರಕಾಶ್ ಪ್ರಭು, ದೇವದಾಸ್ ಬಿ. ಪ್ರಭು ಅವರ ಧರ್ಮಪತ್ನಿ ಧನ್ಯಾ, ಸಂಸ್ಥೆಯ ಉಪನ್ಯಾಸಕರು, ಚಿತ್ರಕಲಾ ಶಿಕ್ಷಕ ಮೋಹನ್ ಕಡಬ, ವಿದ್ಯಾರ್ಥಿ ನಾಯಕ ಆಯುಷ್ ನಾಯಕ್ ಹಾಗೂ ನಾಯಕಿ ತ್ರಿಶಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕೋಟ ಶ್ರೀ ಅಮೃತೇಶ್ವರೀ ಯಕ್ಷಗಾನ ಮೇಳಕ್ಕೆ ಬೆತ್ತದ ಪೆಟ್ಟಿಗೆಯ ಹಸ್ತಾಂತರ



ಕೋಟ: ಕೋಟದ ಅಮೃತೇಶ್ವರೀ ದಶಾವತಾರ ಯಕ್ಷಗಾನ ಮೇಳಕ್ಕೆ ಗಣಪತಿ ಬೆತ್ತದ ಪೆಟ್ಟಿಗೆಯನ್ನು ಅರುಂಧತಿ ಎಚ್. ಮಯ್ಯ ಮತ್ತು ಕುಟುಂಬದವರು ಹುಬ್ಬಳ್ಳಿ ಹಾಗೂ ಕೆ. ಶ್ರೀನಿವಾಸರಾವ್ ಮತ್ತು ಸಹೋದರು ಕೋಟತಟ್ಟು ಪಡುಕರೆ ಇವರ ಪರವಾಗಿ ಹಿರಿಯ ಕೃಷಿಕ ಕೆ.ಶಿವಮೂರ್ತಿ ಕೋಟತಟ್ಟು ಪಡುಕೆರೆ ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಆನಂದ್ ಸಿ. ಕುಂದರ್ ಅವರಿಗೆ ಹಸ್ತಾಂತರಿಸಿದರು. ಗಣಪತಿ ದೇವರು ಇಡುವ ಬೆತ್ತದ ಪೆಟ್ಟಿಗೆ ಸುಮಾರು 15,000 ರೂ. ಮೌಲ್ಯ ಹೊಂದಿದ್ದು, ಇತ್ತೀಚಿಗೆ ಶ್ರೀದೇಗುಲದಲ್ಲಿ ಇದನ್ನು ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ದೇಗುಲದ ಸಮಿತಿಯ ಸದಸ್ಯರಾದ ಶಿವ ಪೂಜಾರಿ, ಗಣೇಶ್ ನೆಲ್ಲಿಬೆಟ್ಟು, ಚಂದ್ರ ಆಚಾರ್, ಮೇಳದ ವ್ಯವಸ್ಥಾಪಕ ಸುರೇಶ್ ಬಂಗೇರ, ಯಕ್ಷಗಾನ ಸೇವಾಕರ್ತರಾದ ಸುಧೀರ್ ಕೊಯ್ಕೂರು ದಂಪತಿಗಳು ಇದ್ದರು.

ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದ ಬ್ರಹ್ಮಕಲಶೋತ್ಸವಕ್ಕೆ ಮೆರುಗು ನೀಡಿದೆ ಭೋಜನಾಲಯ, ಗೋದಾಮಿನ ಕಲಾತ್ಮಕ ವಿನ್ಯಾಸ,

ಭಕ್ತರನ್ನು ಆಕರ್ಷಿಸುತ್ತಿದೆ 'ಸುಪ್ರಸಾದ' ಭೋಜನ ಶಾಲೆ ಅಚ್ಚುಕಟ್ಟುತನ, ಅಲಂಕಾರ

ಉಜಿರೆ: ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನದಲ್ಲಿ 12 ವರ್ಷಗಳ ನಂತರ ನೆರವೇರುತ್ತಿರುವ ಬ್ರಹ್ಮಕಲಶೋತ್ಸವ ಕೇವಲ ಒಂದು ಧಾರ್ಮಿಕ ವಿಧಿಯಲ್ಲ, ಅದೊಂದು ಜನಮಾನಸದ ಭಕ್ತಿಯ ಉತ್ಸವ. ಇಲ್ಲಿ 'ಅನ್ನದಾಸೋಹ'ವನ್ನು ಕೇವಲ ಹಸಿವು ನೀಗಿಸುವ ಕಾಯಕವೆಂದು ಪರಿಗಣಿಸದೆ, ಪರಮಾತ್ಮನಿಗೆ ಸಲ್ಲಿಸುವ ಪರಮ ಭಕ್ತಿಯ ಮಾರ್ಗವೆಂದು ಭಾವಿಸಲಾಗಿದೆ. ಈ ಪವಿತ್ರ ಭಾವನೆಗೆ ಸಾಕ್ಷಿಯಂತಿದೆ ಇಲ್ಲಿನ 'ಸುಪ್ರಸಾದ' ಭೋಜನ ಶಾಲೆ. ಊಟಕ್ಕೆ ಬರುವ ಭಕ್ತ ಬಂಧುಗಳು ಇಲ್ಲಿನ ಅಚ್ಚುಕಟ್ಟುತನ ಮತ್ತು ದೈವಿಕ ಅಲಂಕಾರಕ್ಕೆ ಮಾರುಹೋಗಿ, ಅಲ್ಲಿಂದ ಹೊರಬರಲು ಮನಸ್ಸಿಲ್ಲದಂತೆ ಮಂತ್ರಮುಗ್ಧರಾಗುತ್ತಾರೆ.

ಭೋಜನಾಲಯದ ಮುಂಭಾಗದಲ್ಲಿ ಒಂದು ಭವ್ಯವಾದ ಶಿವನ ರಚನೆ ಎಲ್ಲರನ್ನೂ ಆಕರ್ಷಿಸುತ್ತಿದೆ. ಧ್ಯಾನಸ್ಥನಾಗಿ ಕುಳಿತಿರುವ ಶಿವನು ಸಮತೋಲನ, ಆಂತರಿಕ ಶಾಂತಿಯ ಪ್ರತೀಕದಂತೆ ಕಾಣಿಸುತ್ತಿದ್ದಾನೆ. ಅಹಂಕಾರದಿಂದ ವಿಮುಕ್ತಗೊಳ್ಳುವ ಬಗೆಯನ್ನೂ ಬಿಂಬಿಸುತ್ತಿದ್ದಾನೆ. ಈ ಶಾಂತ ಭಾವವು ಅನ್ನದಾಸೋಹ ನಡೆಯುತ್ತಿರುವ ಸ್ಥಳಕ್ಕೆ ಗಾಂಭೀರ್ಯತೆ ತಂದು ಕೊಡುತ್ತಿದೆ. ಭೋಜನಾಲಯದ ಒಳಗೆ ಪ್ರವೇಶಿಸುತ್ತಿದ್ದಂತೆಯೇ ಧಾನ್ಯಗಳನ್ನು ಶೇಖರಿಸುವ ಗೋದಾಮು ಕಣ್ಣಿಗೆ ಕಟ್ಟುತ್ತದೆ. ಸಿದ್ಧಪಡಿಸಿದ ಆಹಾರವನ್ನು ಶೇಖರಿಸುವ ಬಿದಿನರ ವಿನ್ಯಾಸ ಸೆಳೆಯುತ್ತದೆ. ಮಧ್ಯಭಾಗದಲ್ಲಿರುವ ಮರದ ದಂಬೆಯ ನಡುಭಾಗದಲ್ಲಿ ನೀರು ಹರಿಯುವುದು ಮಂತ್ರಮುಗ್ಧಗೊಳಿಸುತ್ತವೆ.



ಗೋದಾಮನ್ನು ಇಲ್ಲಿ ಶಕ್ತಿಯರೂಪಕವಾಗಿ ಚಿತ್ರಿಸಲಾಗಿದೆ. ಸಂಗ್ರಹಿಸಿದ ಪ್ರತಿಯೊಂದು ಧಾನ್ಯವು ರೈತರ ಪರಿಶ್ರಮ ಮತ್ತು ಪ್ರಕೃತಿಯ ಉದಾರತೆಯಿಂದ ಪಡೆದ ಆಶೀರ್ವಾದ ಎಂಬುದನ್ನು ಇದು ನಮಗೆ ನೆನಪಿಸುತ್ತದೆ. ಹಾಗೆಯೇ ಗೋದಾಮಿನ ಮುಂದೆ ವಿವಿಧ ಧಾನ್ಯಗಳಿಂದ ಬಿಡಿಸಿರುವ ರಂಗೋಲಿಯು ಮತ್ತಷ್ಟು ಆಳವಾದ ಅರ್ಥವನ್ನು ನೀಡುತ್ತದೆ. ಕೇವಲ ಬಣ್ಣದ ಪುಡಿಗಳನ್ನು ಬಳಸುವ ಬದಲು ಅಕ್ಕಿ ಬೇಳೆಕಾಳನ್ನು ಬಳಸಿ ಕಲಾತ್ಮಕ ವಿನ್ಯಾಸಗಳನ್ನು ಮಾಡಲಾಗಿದೆ ಈ ಆಯ್ಕೆಯು ಕೇವಲ ಸೃಜನಶೀಲವಷ್ಟೇ ಅಲ್ಲ ಸಾಂಕೇತಿಕವುಹೌದು.ಪ್ರತಿಯೊಂದು ಧಾನ್ಯವು ಪೋಷಣೆ, ವೈವಿಧ್ಯತೆ ಮತ್ತು ಸಮೃದ್ಧಿಯನ್ನು ಪ್ರತಿನಿಧಿಸುತ್ತದೆ. ಆಹಾರವನ್ನು ಬೇಯಿಸಿ ಬಡಿಸುವ ಮೊದಲು, ಆ ಧಾನ್ಯಗಳಿಗೆ ಸಲ್ಲಿಸುವ ಗೌರವದ ಅಭಿವ್ಯಕ್ತವಾಗಿದೆ.

ವಿನ್ಯಾಸದಲ್ಲಿ ಪ್ರಮುಖವಾಗಿ ಬಳಸಲಾಗಿರುವ ಬಿದಿರು ಸರಳತೆ, ದೃಢತೆ ಮತ್ತು ಸುಸ್ಥಿರತೆಯ ಸಂಕೇತ ಈ ಗುಣಗಳು ಸಾಂಕೇತಿಕವಾಗಿ ಅನ್ನದಾಸೋಹದ ಮೂಲ ತತ್ವವನ್ನೇಎತ್ತಿತೋರಿಸುತ್ತವೆ.

ಮಧ್ಯಭಾಗದಲ್ಲಿರುವ ಕಲ್ಲುಗಳು, ಹಸಿರು ಮತ್ತು ಹರಿಯುವ ನೀರಿನಿಂದಕೂಡಿದ ಪ್ರಕೃತಿಆಧಾರಿತ ವಿನ್ಯಾಸವು ಈ ಬಾಂಧವ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ. ನೀರು ಪವಿತ್ರತೆ ಮತ್ತುಜೀವದ ಸಂಕೇತವಾದರೆ, ಗಿಡಗಳು ಬೆಳವಣಿಗೆ ಮತ್ತು ಸಮೃದ್ಧಿಯ ಸಂಕೇತವಾಗಿವೆ. ಇವೆಲ್ಲವೂ ಸೇರಿಒಂದು ಪ್ರಶಾಂತವಾದ ಪರಿಸರವನ್ನು ಸೃಷ್ಟಿಸುತ್ತವೆ; ಆಹಾರವು ಕೇವಲ ದೈಹಿಕಅಗತ್ಯವಲ್ಲ, ಬದಲಾಗಿಅದುದೈವಿಕ ಆಶೀರ್ವಾದ ಎಂಬ ಭಾವನೆಯನ್ನು ಮೂಡಿಸುತ್ತವೆ. ಈ ಪರಿಸರವುಊಟಕ್ಕೂ ಮುನ್ನಕೃತಜ್ಞತೆ ಸಲ್ಲಿಸಲು ಸ್ಫೂರ್ತಿಯಾಗುತ್ತದೆ. ತನ್ಮೂಲಕಒಂದು ಸಾಮಾನ್ಯ ಭೋಜನವನ್ನುಆಧ್ಯಾತ್ಮಿಕಅನುಭವವನ್ನಾಗಿ ಪರಿವರ್ತಿಸುತ್ತದೆ.

■ ಸಿಂಧು, ಉಜಿರೆ ಎಸ್‌ಡಿಎಂ ಪತ್ರಿಕೋದ್ಯಮ ವಿದ್ಯಾರ್ಥಿನಿ

ಸುತ್ತಮುತ್ತ

ಕಲ್ಲಾಪು ದೇವಸ್ಥಾನದಲ್ಲಿ ಶ್ರೀ ನಾಗದೇವರ ಪ್ರತಿಷ್ಠೆ

ಮುಲ್ಕಿ: ಪಡುಪಣಂಬೂರು ಸಮೀಪದ ಕಲ್ಲಾಪು ಶ್ರೀ ವೀರಭದ್ರ ಮಹಾಮ್ಮಾಯಿ ದೇವಸ್ಥಾನದಲ್ಲಿ ಶ್ರೀ ನಾಗದೇವರ ಪ್ರತಿಷ್ಠೆ ವಿಜೃಂಭಣೆಯಿಂದ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದ ತಂತ್ರಿಗಳಾದ ಶಿಬರೂರು ವೇದವ್ಯಾಸ ತಂತ್ರಿ ಹಾಗೂ ಅರ್ಚಕ ಶ್ರೀಕೃಷ್ಣ ಭಟ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ, ನಡೆದು ನವೀಕೃತ ಶ್ರೀ ನಾಗದೇವರ ಸನ್ನಿಧಿಯಲ್ಲಿ ವಾಸ್ತು ಹೋಮ, ಶ್ರೀ ನಾಗದೇವರ ಪ್ರತಿಷ್ಠೆ, ಸೀಯಾಳ ಅಭಿಷೇಕ ಮಹಾಪೂಜೆ, ಪ್ರಸಾದ ವಿತರಣೆ, ಮಹಾ ಅನ್ನಸಂತರ್ಪಣೆ ನಡೆಯಿತು. ಕ್ಷೇತ್ರದ ಅಧ್ಯಕ್ಷ ಉಮನಾಥ್ ಜೆ. ಶೆಟ್ಟಿಗಾರ್ ಹಾಗೂ ಗುರಿಕಾರರು, ಗ್ರಾಮಸ್ಥರು ಮತ್ತಿತರರು ಉಪಸ್ಥಿತರಿದ್ದರು

ಪ್ರಿಯದರ್ಶಿನಿ ಸೊಸೈಟಿಗೆ ರಮಾನಾಥ ರೈ ಭೇಟಿ



ಮುಲ್ಕಿ: ಹಳೆಯಂಗಡಿಯ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿಗೆ ಮಾಜಿ ಸಚಿವ ಬಿ. ರಮಾನಾಥ ರೈ ಸೋಮವಾರ ಭೇಟಿ ನೀಡಿದರು. ಸೊಸೈಟಿಯ ಪರವಾಗಿ ಅಧ್ಯಕ್ಷ ಎಚ್ ವಸಂತ ಬರ್ನಾಡ್ ರವರು ರಮಾನಾಥ ರೈ ಅವರನ್ನು ಗೌರವಿಸಿದರು. ಬಂಟ್ವಾಳ ಕೋ ಆಪರೇಟಿವ್ ಸೊಸೈಟಿಯ ಸಿಇಒ ಬೇಬಿ ಕುಂದರ್, ಬಂಟ್ವಾಳ ತಾಲೂಕು ಭೂ ಅಭಿವೃದ್ಧಿ ಬ್ಯಾಂಕಿನ ಮಾಜಿ ಅಧ್ಯಕ್ಷ ಸುದರ್ಶನ್ ಜೈನ್ ,ಮುಲ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಹನ್ ಕೋಟ್ಯಾನ್ ಉಪಸ್ಥಿತರಿದ್ದರು. ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸುದರ್ಶನ್ ಪಂಜ ಧನ್ಯವಾದ ಅರ್ಪಿಸಿದರು.

ಕರ್ನಪ್ಪಾಡಿ ಗರಡಿಯಲ್ಲಿ ವಾರ್ಷಿಕ ನೇಮ

ನಿಡ್ಪಳ್ಳಿ: ಸುಮಾರು 5 ಶತಮಾನಗಳ ಹಿಂದೆ ಮೂಡಿ ಬಂದ ಮಾತೆ ದೇಯಿ ಬೈದೆತಿಯ ಅವಳಿ ಪುತ್ರರಾದ ಕೋಟಿ–ಚೆನ್ನಯರು ನಡೆದಾಡಿದ ಪವಿತ್ರ ನೆಲ



ನಿಡ್ಪಳ್ಳಿ ಗ್ರಾಮದ ಕರ್ನಪ್ಪಾಡಿ ಶ್ರೀ ಬ್ರಹ್ಮ ಬೈದೆರ್ಕಳ ಗರಡಿಯಲ್ಲಿ ಬೈದೆರುಗಳ ವಾರ್ಷಿಕ ನೇಮ ನಡೆಯಿತು. ಮಾ.2ಕ್ಕೆ ಸಂಜೆ ಗರಡಿಯಲ್ಲಿ ಶುದ್ಧ ಹೋಮ ನಡೆದು ಬಳಿಕ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ ಪ್ರಸಾದ ವಿತರಣೆ ಬಳಿಕ ಸಾರ್ವಜನಿಕ ಅನ್ನ ಸಂತರ್ಪಣೆ ನಡೆಯಿತು. ಗರಡಿ ಸೇವಾ ಸಮಿತಿ ಅಧ್ಯಕ್ಷ ಶಿವಪ್ಪ ಪೂಜಾರಿ ನುಳಿಯಾಲು, ಕಾರ್ಯದರ್ಶಿ ಮಾಧವ ಪೂಜಾರಿ ರೆಂಜ, ಕೊಡಮಣಿತ್ತಾಯ ದೈವಸ್ಥಾನ ಪ್ರತಿಷ್ಠಾ ಸಮಿತಿ ಗೌರವಾಧ್ಯಕ್ಷ ಜಯಂತ ನಡುಬೈಲು, ಅಧ್ಯಕ್ಷ ಜನಾರ್ಧನ ಪೂಜಾರಿ ಪದಡ್ಕ, ಕಾರ್ಯದರ್ಶಿ ರಾಧಾಕೃಷ್ಣ ಆರ್. ಕೋಡಿ, ಕೋಶಾಧಿಕಾರಿ ರಾಜೇಶ್ ನೆಲ್ಲಿತ್ತಡ್ಕ, ಭಾರತಿ ಎಸ್. ನುಳಿಯಾಲು ಮತ್ತಿತರರಿದ್ದರು.

ವಿಶ್ವಜ್ಯೋತಿ ಯುವಕ ಸಂಘ: ಅಧ್ಯಕ್ಷರಾಗಿ ಮನೋಜ್ ವಳವೂರ್

ಬಂಟ್ವಾಳ: ವಿಶ್ವಜ್ಯೋತಿ ಯುವಕ ಸಂಘ (ರಿ) ಇದರ ಮುಂದಿನ ಸಾಲಿನ ನೂತನ ಅಧ್ಯಕ್ಷರಾಗಿ ಮನೋಜ್ ವಳವೂರ್ ಆಯ್ಕೆಯಾಗಿದ್ದಾರೆ.
ಉಳಿದಂತೆ ಸಂಘದ ಇಯರ ಪದಾಧಿಕಾರಿಗಳು



ಇಂತಿದ್ದಾರೆ. ಗೌರವಾಧ್ಯಕ್ಷರಾಗಿ ಸಂಜೀವ ಪೂಜಾರಿ ವಳವೂರ್, ಗೌರವಸಲಹೆಗಾರರಾಗಿ ಶೇಖರ ಪೂಜಾರಿ ವಳವೂರ್, ಸುಂದರ ಪೂಜಾರಿ ವಳವೂರ್, ಮಾಧವ ಪೂಜಾರಿ ವಳವೂರ್, ಪೂವಪ್ಪ ವಳವೂರ್, ಉಪಾಧ್ಯಕ್ಷರಾಗಿ ಶ್ರೀಕಾಂತ್ ದರಿಬಾಗಿಲು, ಕಾರ್ಯದರ್ಶಿಯಾಗಿ ಪ್ರದೀಪ್ ಶೆಟ್ಟಿ ಬ್ರಹ್ಮರಕೊಟ್ಲು, ಜೊತೆ ಕಾರ್ಯದರ್ಶಿಯಾಗಿ ಆನಂದ್ ಉಮನಗುಡ್ಡೆ,ಕೋಶಾಧಿಕಾರಿಯಾಗಿ ವಸಂತ್ ಉಮನಗುಡ್ಡೆ, ಜೊತೆಕೋಶಾಧಿಕಾರಿಯಾಗಿ ಗಣೇಶ್ ವಳವೂರ್, ಕ್ರೀಡಾಕಾರ್ಯದರ್ಶಿಯಾಗಿ ಸುಶಾಂತ್ ವಳವೂರ್, ಜೊತೆ ಕ್ರೀಡಾ ಕಾರ್ಯದರ್ಶಿಯಾಗಿ ಗಣೇಶ್ ಉಮನಗುಡ್ಡೆ ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ವೀರಾಜಪೇಟೆ: ಚೆನ್ನಯ್ಯನಕೋಟೆ- ಕಣ್ಣಂಗಾಲದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕರಿಂದ ಚಾಲನೆ

ಚೆಕ್‌ಡ್ಯಾಮ್‌ಗಳಿಂದ ನೀರಾವರಿ ಸಮಸ್ಯೆ ದೂರ: ಪೊನ್ನಣ್ಣ



ಮಡಿಕೇರಿ: ವೀರಾಜಪೇಟೆ ತಾಲೂಕು ಕಣ್ಣಂಗಾಲ ಗ್ರಾಮದಲ್ಲಿ ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರು ಭೇಟಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಅಲ್ಲಿನ ಕುಮ್ಮೆಹೊಳೆಗೆ ಚೆಕ್ ಡ್ಯಾಮ್ ನಿರ್ವಹಿಸುವ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಬಳಿಕ ಮಾತನಾಡಿದ ಶಾಸಕರು, ಈ ಕಾಮಗಾರಿಯು 1.50 ಕೋಟಿ ರೂ ವೆಚ್ಚದಲ್ಲಿ ನಡೆಯಲಿದ್ದು, ಸಣ್ಣ ನೀರಾವರಿ ಇಲಾಖೆ ಮೂಲಕ ನಡೆಯುವ ಕಾಮಗಾರಿಯು ಸುತ್ತಮುತ್ತಲಿನ ಜಮೀನಿಗೆ ನೀರಾವರಿ ಸೌಲಭ್ಯ ಒದಗುವುದರೊಂದಿಗೆ ಅಂತರ್ಜಲ ಸಹ ವೃದ್ಧಿಯಾಗಲಿದೆ ಎಂದು ತಿಳಿಸಿದರು.

ಕಾಮಗಾರಿಯನ್ನು ಅತ್ಯಂತ ಗುಣಮಟ್ಟದಲ್ಲಿ ಹಾಗೂ ಅತೀ ಶೀಘ್ರವಾಗಿ ನಿರ್ವಹಿಸಬೇಕೆಂದು ಇದೇ ಸಂದರ್ಭದಲ್ಲಿ ಸ್ಥಳದಲ್ಲಿ ಉಪಸ್ಥಿತರಿದ್ದ ಗುತ್ತಿಗೆದಾರರಿಗೆ ಶಾಸಕರು ಸೂಚಿಸಿದರು.

ಬಳಿಕ ಚಾಮುಂಡಿ ಪೈಸಾರಿಗೆ ಭೇಟಿ ನೀಡಿದ ಶಾಸಕರು, ತಮ್ಮ ಅನುದಾನದ 15 ಲಕ್ಷ ರೂ.ಗಳಲ್ಲಿ ನಿರ್ಮಿಸಿದ ರಸ್ತೆಯನ್ನು ಸಾರ್ವಜನಿಕರ ಬಳಕೆಗಾಗಿ ಲೋಕಾರ್ಪಣೆಗೊಳಿಸಿದರು.
ಈ ಸಂದರ್ಭದಲ್ಲಿ ಪ್ರಮುಖರಾದ ಪಟ್ಟಡ ರಂಜಿ ಪೂಣಚ್ಚ, ವಲಯ ಅಧ್ಯಕ್ಷ ಮಚ್ಚಾರಂಡ ಕಿರಣ್, ಹನೀಫ್, ರಫೀಕ್, ಅಂದಾಯಿ, ಕುಂಡಚ್ಚಿರ ಮಂಜು ದೇವಯ್ಯ, ಇಟ್ಟೀರ ಭವಿನ್, ಮಂಜುನಾಥ್, ಡಿಲ್ಲು ನಾಣಯ್ಯ, ಬೇರೆರ ಕಿರಣ್ ಶಿವಪ್ಪ, ಮಚ್ಚಾರಂಡ ವನಿತಾ ಗಣಪತಿ, ಸ್ಥಳೀಯರಾದ ಬೊಪ್ಪಂಡ ಜಗ ಬೆಳ್ಳಿಯಪ್ಪ, ವಿಜು ಕಾಳಪ್ಪ, ಗಣೇಶ್ ಇತರರು ಇದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಚೆನ್ನಯ್ಯನಕೋಟೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರು ಭೂಮಿ ಪೂಜೆ ನೆರವೇರಿಸಿದರು.

> **ಗ್ಯಾರಂಟಿ ನಡೆವೆಯೂ ಅಭಿವೃದ್ಧಿ ಕಾರ್ಯ**
> ವೀರಾಜಪೇಟೆ ತಾಲೂಕಿನ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಗ್ಯಾರಂಟಿ ನಡುವೆಯೂ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದೆ. ಜನರ ಎಲ್ಲಾ ಬೇಡಿಕೆ ಈಡೇರಿಸಲು ಪ್ರಯತ್ನಿಸಲಾಗುವುದು.
> ● ಎ. ಎಸ್.ಪೊನ್ನಣ್ಣ

ಚೆನ್ನಯ್ಯನಕೋಟೆಯ ಪರಿಶಿಷ್ಟ ಜಾತಿ ಸಮುದಾಯ ದವರ ಗದ್ದೆಯ ಬಳಿ ಹರಿಯುವ ಹಳ್ಳಕ್ಕೆ ಪಿಕಪ್ ಹಾಗೂ ಕಾಲುವೆ ಕೃಷಿ ಜಮೀನು ಹತ್ತಿರ ಹರಿಯುವ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣಕ್ಕೆ ಅವರು ಭೂಮಿ ಪೂಜೆ ನೆರವೇರಿಸಿದರು. ಈ ಕಾಮಗಾರಿಯು ಸುಮಾರು 2 ಕೋಟಿ ರೂ. ವೆಚ್ಚದಲ್ಲಿ, ಸಣ್ಣ ನೀರಾವರಿ ಇಲಾಖೆ ಮೂಲಕ ನಡೆಯಲಿದೆ ಎಂದು ಶಾಸಕರು ತಿಳಿಸಿದರು. ಈ ಸಂದರ್ಭ ಗುತ್ತಿಗೆದಾರರಿಗೆ ಕಾಮಗಾರಿಯ ಗುಣಮಟ್ಟ ಕಾಯ್ದುಕೊಂಡು ಶೀಘ್ರದಲ್ಲಿ ಮುಕ್ತಾಯಗೊಳಿಸಬೇಕೆಂದು ಸೂಚಿಸಿದರು. ಬಸವನಹಳ್ಳಿಯಲ್ಲಿ ಶಾಸಕರ ಅನುದಾನವಾದ 10 ಲಕ್ಷಗಳಲ್ಲಿ ನಿರ್ಮಾಣವಾದ ಕಾಂಕ್ರೀಟ್ ರಸ್ತೆಯ ಲೋಕಾರ್ಪಣೆ ಮಾಡಿದರು. ಸ್ಥಳೀಯರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಶುಭ ಕೋರಿದರು.

ಸ್ಥಳೀಯ ಹಿರಿಯರು ಶಾಸಕರ ಅನುದಾನಕ್ಕಾಗಿ ಧನ್ಯವಾದ ಅರ್ಪಿಸಿದರಲ್ಲದೆ ಶಾಸಕರು ನೀಡುತ್ತಿರುವ ಅನುದಾನಗಳು ಹಾಗೂ ಜನಪರ ಕೆಲಸಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭ ಪಟ್ಟಡ ರಂಜಿ ಪೂಣಚ್ಚ, ಗ್ರಾ.ಪಂ. ಅಧ್ಯಕ್ಷೆ ಜಯಲಕ್ಷ್ಮಿ, ಸದಸ್ಯ ವಿಜು ನಾರಾಯಣ, ಜಿ.ಪಂ. ಮಾಜಿ ಸದಸ್ಯ ಗಣೇಶ್, ಹನೀಫ್, ರಫೀಕ್, ಸಾಬಾ ಕಾಳಪ್ಪ, ಪಾಲಿಬೆಟ್ಟ ಪಂಚಾಯತ್ ಸದಸ್ಯ ನಾಸಿರ್, ಅಜ್ಜಿಕುಟ್ಟಿರ ಪೊನ್ನು, ಚೆಕು, ಅನಿಲ್, ಕುಂಡಚ್ಚಿರ ಮಂಜು ದೇವಯ್ಯ, ರವೀಂದ್ರ ಭಾವೆ, ಸಾಬು, ಡಾ.ವಾಸು, ಪೂಣಚ್ಚ ಎಂ.ಜಿ. ಬೆಳ್ಯಪ್ಪ, ಎಂ.ಬಿ ಅಪ್ಪಣ್ಣ, ಗಗನ್ ಕಾರ್ಯಪ್ಪ ಹರ್ಷ, ಅಪ್ಪಚ್ಚು ಗಣೇಶ್, ಅಪ್ಪಯ್ಯ, ಲೋಹಿತ್, ಶಾಂತಿ, ಲಕ್ಷ್ಮಿ ಇತರರು ಉಪಸ್ಥಿತರಿದ್ದರು.

ಅಕ್ಷಯ ಕಾಲೇಜಿನಲ್ಲಿ ವಾರ್ಷಿಕ ಶಿಬಿರ ಸಮಾರೋಪ: ಬಹುಮಾನ ವಿತರಣೆ



ಪುತ್ತೂರು: ಮಂಗಳೂರು ವಿಶ್ವ ವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ ಯಡಿ ಅಕ್ಷಯ ಕಾಲೇಜಿನ ವತಿಯಿಂದ 'ನನ್ನ ಭಾರತಕ್ಕಾಗಿ ಯುವಜನತೆ–ಡಿಜಿಟಲ್ ಸಾಕ್ಷರತೆಗಾಗಿ ಯುವಜನತೆ' ಎಂಬ ಆಶಯದೊಂದಿಗೆ ಆಯೋಜಿಸಲಾದ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭವು ಶ್ರೀ ರಾಮಚಂದ್ರ ಪದವಿ ಪೂರ್ವ ವಿದ್ಯಾಲಯದಲ್ಲಿ ನೆರವೇರಿತು.

ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಜಯಂತ್ ಮಾತನಾಡಿದರು. ಮುಖ್ಯ ಅತಿಥಿಗಳಾಗಿದ್ದ ಪೆರ್ನೆ ಅಯೋಧ್ಯಾ ನಗರದ ಶ್ರೀ ರಾಮಚಂದ್ರ ವಿದ್ಯಾಲಯದ ಪ್ರಾಂಶುಪಾಲ ಶೇಖರ್ ರೈ ಕೆ. ಮಾತನಾಡಿದರು.

ಮುಖ್ಯ ಅತಿಥಿಗಳಾಗಿದ್ದ ಪೆರ್ನೆಯ ಶ್ರೀ ರಾಮಚಂದ್ರ ಪ್ರೌಢ ಶಾಲೆಯ ಮುಖ್ಯ ಗುರುಃ ಸತ್ಯನಾರಾಯಣ ರೈ ಕೆ.ಎಂ., ಹಾಲು ಉತ್ಪಾದಕರ ಸಂಘದ ಸದಸ್ಯ ರಮೇಶ್ ಕೋಟ, ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಅರ್ಪಿತ್ ಟಿ.ಎ., ಅಕ್ಷಯ ಕಾಲೇಜಿನ ಉಪಪ್ರಾಂಶುಪಾಲ ರಕ್ಷಣಾ ಟಿ.ಆರ್., ಉಪಸ್ಥಿತರಿದ್ದರು. ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ದೇಶಕಿ ಕಲಾವತಿ ಜಯಂತ್ ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಾಧಿಕಾರಿ ಮೇಘಶ್ರೀ ಅವರು ಶಿಬಿರದ ಅವಧಿಯಲ್ಲಿ ಕೈಗೊಂಡ ಪರಿಸರ ಸ್ವಚ್ಛತಾ ಕಾರ್ಯಗಳು, ಜಾಗೃತಿ ಕಾರ್ಯಕ್ರಮಗಳು ಹಾಗೂ ಶಿಬಿರಾರ್ಥಿಗಳ ದಿನಚರಿಯ ಕುರಿತು ವಿವರಿಸಿದರು. ಸಹ ಯೋಜನಾಕಾರಿಗಳಾದ ಗಂಧರ್ವ ಮತ್ತು ಸೌಜನ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಯೋಜನಾಧಿಕಾರಿ ರಾಕೇಶ್ ಕೆ. ಪ್ರಸ್ತಾವಿಸಿದರು. ಶಿಬಿರಾರ್ಥಿ ಯಶಸ್ವಿ ಪ್ರಾರ್ಥಿಸಿದರು. ಎನ್ನೆಸ್ಸೆಸ್ ಘಟಕ–1ರ ನಾಯಕ ಜಿಗ್ನೇಶ್ ಸ್ವಾಗತಿಸಿ, ಘಟಕ–2ರ ನಾಯಕಿ ಕೋಮಲಾಕ್ಷಿ ವಂದಿಸಿದರು. ಶಿಬಿರಾರ್ಥಿ ಅಕ್ಷಿತ್ ಕಾರ್ಯಕ್ರಮ ನಿರ್ವಹಿಸಿದರು.

> **ಧರ್ಮರಾಯ ತಂಡಕ್ಕೆ ಟ್ರೋಫಿ**
> ವಾರ್ಷಿಕ ಶಿಬಿರದಲ್ಲಿ ಉತ್ತಮ ಪ್ರದರ್ಶನ ನೀಡಿದ 'ಧರ್ಮರಾಯ' ತಂಡಕ್ಕೆ ಟ್ರೋಫಿ ಪ್ರದಾನ ಮಾಡಲಾಯಿತು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಧಾರ್ಮಿಕತೆ ಭಾರತೀಯ ಸಂಸ್ಕೃತಿ, ಭಾರತೀಯರ ಆತ್ಮ: ಆನೆಗುಂದಿ ಶ್ರೀ



ಬದಿಯಡ್ಕ: ನೀರ್ಚಾಲಿನ ಶ್ರೀ ಕುಮಾರಸ್ವಾಮಿ ಮಂದಿರವು ಧಾರ್ಮಿಕ ಶ್ರದ್ಧೆಗೆ ಹಿಡಿದ ಕೈಗನ್ನಡಿಯಾಗಿದೆ. ಮಂದಿರ, ದೇವಸ್ಥಾನ, ಶಾಲೆಗಳು ಸರಿಯಾಗಿದ್ದಲ್ಲಿ ಊರಿನ ಜನರು ಸಂಸ್ಕಾರವಂತರಾಗುತ್ತಾರೆ. ಧಾರ್ಮಿಕತೆ ಭಾರತೀಯ ಸಂಸ್ಕೃತಿ, ಭಾರತೀಯರ ಆತ್ಮವಾಗಿದೆ ಎಂದು ಜಗದ್ಗುರು ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠದ ಶ್ರೀ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮೀಜಿ ತಿಳಿಸಿದರು.

ನೀರ್ಚಾಲು ಶ್ರೀ ಕುಮಾರಸ್ವಾಮಿ ಭಜನಾ ಮಂದಿರದ ಪುನರ್ ಪ್ರತಿಷ್ಠಾ ಮಹೋತ್ಸವದ ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ ಅವರು ಆಶೀರ್ವಚನ ನೀಡಿದರು.

ಅದು ನಿರಂತರ ಮುಂದುವರಿದರೆ ಮಾತ್ರ ಭರತ ಭೂಮಿಯಲ್ಲಿ ಹಿಂದು ಧರ್ಮ ಉಳಿಯಲು ಸಾಧ್ಯ. ಆಧುನಿಕವಾಗಿ ಮುಂದುವರಿಯುತ್ತಾ ನಾವು ಎತ್ತ ಸಾಗುತ್ತೇವೆ ಎಂಬುದನ್ನು ಗಮನಿಸಬೇಕು. ನಮ್ಮ ಸಂಸ್ಕೃತಿ ಮುಂದಿನ ಪೀಳಿಗೆಗೆ ಮುಂದುವರಿಯಬೇಕಿದ್ದರೆ ನಾವು ಮಕ್ಕಳಿಗೆ ಆದರ್ಶವಾಗಿರಬೇಕು ಎಂದು ಶ್ರೀಗಳು ಸಂದೇಶ ನೀಡಿದರು.

ಸಮಾರಂಭದಲ್ಲಿ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಧಾಕೃಷ್ಣ ಭಟ್ ಖಂಡಿಗೆ ಅಧ್ಯಕ್ಷತೆ ವಹಿಸಿದ್ದರು. ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಶಂಕರ ಡಿ., ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಸದಸ್ಯೆ ಬಿಂದ್ಯಾ ಕಾರ್ತಿಕ್, ಡಾ.ಜಯಶ್ರೀ ನಾಗರಾಜ್ ಚೇತನಡ್ಕ, ವಿಶ್ವ ಹಿಂದು ಪರಿಷತ್‌ನ ಜಿಲ್ಲಾಧ್ಯಕ್ಷ ಜಯದೇವ ಖಂಡಿಗೆ, ನಾರಾಯಣ ಶೆಟ್ಟಿ ಬೇಳ ಮುಂತಾದವರು ಶುಭಕೋರಿದರು. ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ರವೀಂದ್ರ ಮಾಸ್ತರ್ ನೀರ್ಚಾಲು ಕಾರ್ಯಕ್ರಮ ನಿರೂಪಿಸಿದರು. ಮಂದಿರದ ಅರ್ಚಕ ಸುಬ್ರಹ್ಮಣ್ಯ ಆಚಾರ್ಯ ಸ್ವಾಗತಿಸಿ, ಬಾಲಕೃಷ್ಣ ಆಚಾರ್ಯ ನೀರ್ಚಾಲು ಕಾರ್ಯಕ್ರಮ ವಂದಿಸಿದರು.

ಜಾಲ್ಸೂರಿನಲ್ಲಿ ಅಭಿವೃದ್ಧಿ ಕಾಮಗಾರಿ: ಶಾಸಕಿ ಮುರುಳ್ಯರಿಂದ ಗುದ್ದಲಿಪೂಜೆ



ಸುಳ್ಯ: ಜಾಲ್ಸೂರು ಗ್ರಾಮದಲ್ಲಿ ಅಭಿವೃದ್ಧಿ ಕಾಮಗಾರಿಗಳ ಗುದ್ದಲಿ ಪೂಜೆ ಮತ್ತು ಕಾಮಗಾರಿಗಳ ಉದ್ಘಾಟನೆಯನ್ನು ಶಾಸಕಿ ಭಾಗೀರಥಿ ಮುರುಳ್ಯ ನೆರವೇರಿಸಿದರು.

ರೂ.10 ಲಕ್ಷ ಅನುದಾನದ ಸುಳ್ಯ ತಾಲೂಕಿನ ಜಾಲ್ಸೂರು ಗ್ರಾಮದ ಅರ್ತಾಜೆ–ನಡುಬೆಟ್ಟು ರಸ್ತೆಗೆ ಗುದ್ದಲಿಪೂಜೆ ಹಾಗೂ ಮಳೆ ಹನಿ ಯೋಜನೆಯಲ್ಲಿ ರೂ.10 ಲಕ್ಷ ಅನುದಾನದಲ್ಲಿ ಆಡ್ಕಾರು–ಕಜೆಗದ್ದೆ ರಸ್ತೆ ಅಭಿವೃದ್ಧಿಗೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಜಾಲ್ಸೂರು ಗ್ರಾಮದ ಆಡ್ಕಾರು ಮಾವಿನಕಟ್ಟೆ ರಸ್ತೆ ಅಭಿವೃದ್ಧಿ ರೂ.10 ಲಕ್ಷ, ಜಾಲ್ಸೂರು ರಿಕ್ಷಾ ತಂಗುದಾಣ ನಿರ್ಮಾಣ ರೂ.10 ಲಕ್ಷ, ಆಡ್ಕಾರು–ಕಜೆಗದ್ದೆ ರಸ್ತೆ ಅಭಿವೃದ್ಧಿ ರೂ.10 ಲಕ್ಷ, ಕೊರೆಕಾನ ರಸ್ತೆ ಅಭಿವೃದ್ಧಿಗೆ ರೂ.10 ಲಕ್ಷ, ಬೊಳುಬೈಲು ಕುಕ್ಕುತಮರ ಜಂಕ್ಷನ್ ರಸ್ತೆ ಅಭಿವೃದ್ಧಿ ರೂ.20 ಲಕ್ಷ, ಬೊಳುಬೈಲು ಶಾಲಾ ಅಭಿವೃದಿಗೆ ರೂ.4 ಲಕ್ಷ, ನೆಕ್ರಾಜೆ–ಗಾಳಿಕೂಪು ರಸ್ತೆ ಅಭಿವೃದ್ಧಿ ರೂ.2 ಲಕ್ಷ, ಅರ್ತಾಜೆ–ನಡುಬೆಟ್ಟು ರಸ್ತೆ ಅಭಿವೃದ್ಧಿಗೆ ರೂ.10 ಲಕ್ಷ, ಪಿಲಿಕೋಡಿ ಎಸ್‌ಟಿ ಕಾಲೋನಿಗೆ ರಸ್ತೆ ಅಭಿವೃದ್ಧಿಗೆ ರೂ.5 ಲಕ್ಷ, ಮೊಂಟಡ್ಕ ದೈಯರಮಾಡ ರಸ್ತೆ ಅಭಿವೃದ್ಧಿಗೆ ರೂ.5.50 ಲಕ್ಷ, ಕಾಟೂರು–ವಿನೋಬನಗರ ರಸ್ತೆ ಅಭಿವೃದ್ಧಿಗೆ ರೂ.5.50 ಲಕ್ಷ, ಗಬ್ಬಲಡ್ಕ–ವಿನೋಬನಗರ ಸಂಪರ್ಕ ಸೇತುವೆ ನಿರ್ಮಾಣಕ್ಕೆ ರೂ.20 ಲಕ್ಷ, ಆಡ್ಕಾರು ಶಾಲಾ ಅಭಿವೃದ್ಧಿ ಅನುದಾನಗೆ ರೂ.1.5 ಲಕ್ಷ, ಸೋಣಂಗೇರಿ ಶಾಲಾ ಅಭಿವೃದ್ಧಿಗೆ ರೂ.2 ಲಕ್ಷ, ಸೋಣಂಗೇರಿ–ಜಿಬ್ಬಡ್ಕ ರಸ್ತೆ ಅಭಿವೃದ್ಧಿಗೆ ರೂ.5.5 ಲಕ್ಷ ಅನುದಾನ ನೀಡಲಾಗಿದೆ. ಮುಂದೆ ಆದ್ಯತೆ ಮೇರೆಗೆ ಅನುದಾನ ಬಳಕೆ ಮಾಡಿಕೊಂಡು ಅಭಿವೃದ್ಧಿಯತ್ತ ಮುನ್ನಡೆಯಲಾಗುವುದು ಎಂದು ಶಾಸಕರು ಹೇಳಿದರು.

ಅರ್ಕುಳ ಬಸದಿ ಜ್ಞಾನ, ಪ್ರಕಾಶದ ಸಂಕೇತ: ರಾಜಶೇಖರಾನಂದ ಸ್ವಾಮೀಜಿ



ಬಂಟ್ವಾಳ: ಜೈನ ಧರ್ಮವು ಧಾರ್ಮಿಕ ಸಹಿಷ್ಣುತೆ, ಆತ್ಮಶುದ್ಧಿ ಮತ್ತು ತಪಸ್ಸಿನ ಮೂಲಕ ಮೋಕ್ಷಪ್ರಾಪ್ತಿಯ ಮಾರ್ಗವನ್ನು ತೋರಿಸುತ್ತದೆ. ಅಹಿಂಸೆಯ ಪರಮ ತತ್ವವು ಭಾರತೀಯ ಸಂಸ್ಕೃತಿಯ ನೈತಿಕ ಮೌಲ್ಯಗಳನ್ನು ಗಟ್ಟಿಗೊಳಿಸಿದೆ. ಅರ್ಕುಳ ಅನಂತನಾಥ ಸ್ವಾಮಿ ಬಸದಿಯ ನವೀಕೃತ ಚಂದ್ರಶಾಲೆ ಕೇವಲ ಅಲಂಕಾರವಲ್ಲ; ಅದು ಜ್ಞಾನ ಮತ್ತು ಪ್ರಕಾಶದ ಸಂಕೇತವಾಗಿದೆ ಎಂದು ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ನುಡಿದರು.

ಚಂಡಿಕಾ ಯಾಗ, ನಂದಿಪೂಜೆ

ಶ್ರೀ ಕ್ಷೇತ್ರ ಅರ್ಕುಳದ ವಾರ್ಷಿಕ ಜಾತ್ರೆಯ ಪ್ರಯುಕ್ತ ನಡೆದ ಚಂಡಿಕಾ ಯಾಗ ಹಾಗೂ ನಂದಿ ಪೂಜೆಯಲ್ಲಿ ಭಾಗವಹಿಸಿ ಬಸದಿಯ ನವೀಕೃತ ಚಂದ್ರಶಾಲೆಯನ್ನು ಉದ್ಘಾಟಿಸಿ ಆಶೀರ್ವಚನಗೈದ ಸ್ವಾಮೀಜಿ ಅವರು, ಈ ಪುನರುದ್ಧಾರ ಕಾರ್ಯವು ಭಕ್ತರಲ್ಲಿ ಧರ್ಮಜಾಗೃತಿಯನ್ನು ಉಂಟುಮಾಡಿ, ಅಹಿಂಸೆ, ಸಂಯಮ, ಸನ್ಮಾರ್ಗ ಪ್ರೇರೇಪಿಸಲಿ ಎಂದರು.

ಅರ್ಕುಳ ಬೀಡು ವಜ್ರನಾಭ ಶೆಟ್ಟಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೂಡುಬಿದರೆ ಶಾಸಕ ಉಮಾನಾಥ ಕೋಟ್ಯಾನ್, ಅರ್ಕುಳ ಬೀಡು ರತ್ನರಾಜ ಶೆಟ್ಟಿ, ಅಜಿತ್ ಕುಮಾರ್ ಶೆಟ್ಟಿ ಕಂಪ ಸದಾನಂದ ಆಳ್ವ, ಅರ್ಕುಳ ಬಸದಿ ಪುಷ್ಪರಾಜ ಇಂದ್ರ ಮೊದಲಾದವರು ಉಪಸ್ಥಿತರಿದ್ದರು.

ಬೈಂದೂರಿನಲ್ಲಿ ಅಕ್ರಮ ಸಕ್ರಮ ಕಡತ ವಿಲೇವಾರಿ ಸಭೆ: ಹಕ್ಕುಪತ್ರಗಳ ವಿತರಣೆ



ಉಪ್ಪುಂದ: ಇಲ್ಲಿನ ತಾಲೂಕು ಕಚೇರಿಯಲ್ಲಿ ಶಾಸಕ ಗುರುರಾಜ್ ಗಂಟಿಹೊಳೆಯವರ ಅಧ್ಯಕ್ಷತೆಯಲ್ಲಿ ನಡೆದ ಅಕ್ರಮ ಸಕ್ರಮ ಕಡತ ವಿಲೇವಾರಿ ಸಭೆ ನಡೆಯಿತು.

ಸಿಬ್ಬಂದಿಗಳ ಮೇಲೆ ಶಾಸಕರು ಗರಂ

ತಾಲೂಕು ಕಚೇರಿ, ಸರ್ವೆ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗಳು ಅಕ್ರಮ ಸಕ್ರಮದಡಿ ಅರ್ಜಿ ಸಲ್ಲಿಸಿರುವ ಅರ್ಹ ಕಡತಗಳನ್ನು ಮಂಜೂರು ಮಾಡಲು ಅಸಡ್ಡೆ ತೋರಿಸುತ್ತಿರುವ ಹಾಗೂ ವಿನಾ ಕಾರಣ ವಿಳಂಬ ಮಾಡುತ್ತಿರುವ ಸಿಬ್ಬಂದಿಗಳ ಮೇಲೆ ಶಾಸಕರು ಕೆಂಡಾ ಮಂಡಲರಾಗಿ ಅವರನ್ನು ತರಾಟೆಗೆ ತೆಗೆದುಕೊಂಡರಲ್ಲದೇ ಇದಕ್ಕೆ ಕಾರಣರಾದವರ ವಿರುದ್ಧ ನೇರ ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಗುಡುಗಿದ್ದಾರೆ.

ಇರುವ ಸೀಮಿತ ಅರ್ಹ ಅರ್ಜಿಗಳನ್ನು ಕಾಲ ಮಿತಿಯಲ್ಲಿ ವಿಲೇವಾರಿ ಮಾಡದೇ ತಾಂತ್ರಿಕ ಸಮಸ್ಯೆಗಳ ನೆಪವನ್ನು ಮುಂದಿಟ್ಟು ವರ್ಷಗಟ್ಟಲೆ ಅರ್ಜಿಗಳನ್ನು ಮಂಜೂರಾತಿಗೆ ಪ್ರಯತ್ನಿಸದೇ ಇರುವುದನ್ನು ಸಹಿಸಲು ಸಾಧ್ಯವಿಲ್ಲ, ಸರ್ವೆ ಇಲಾಖೆ ಹಾಗೂ ತಾಲೂಕು ಕಚೇರಿ ವಿಭಾಗಗಳು ಸಮನ್ವಯ ಕಾರ್ಯ ನಿರ್ವಹಿಸಿ ಬಾಕಿ ಉಳಿದಿರುವ ಹಕ್ಕುಪತ್ರ ವಿತರಣೆಗೆ ಕ್ರಮಕೈಗೊಳ್ಳಬೇಕು ಎಂದರು.

ನಂತರ ಜಡ್ಕಲ್, ಮುದೂರು ಹಾಗೂ ಹಳ್ಳಿಹೊಳೆ ಗ್ರಾಮಗಳ ಅರ್ಹ 06 ಜನ ರೈತರಿಗೆ ಇದೇ ಸಂದರ್ಭದಲ್ಲಿ ಶಾಸಕರು ಹಕ್ಕುಪತ್ರ ವಿತರಣೆ ಮಾಡಿದರು. ಬೈಂದೂರು ತಾಲೂಕು ತಹಸೀಲ್ದಾರ್ ರಾಮಚಂದ್ರಪ್ಪ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಸರ್ವೆ ಮೇಲ್ವಿಚಾರಕರು, ಸರ್ವೆಯರುಗಳು ಹಾಗೂ ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ತಾಲೂಕು ಕಚೇರಿ ವಿಷಯ ನಿರ್ವಾಹಕರುಗಳು ಉಪಸ್ಥಿತರಿದ್ದರು.

ಕೆಂಪು ಕಲ್ಲು ಪಾಯ, ಲಾರಿ ಮಾಲಕರ ಸಂಘ: ಪದಾಧಿಕಾರಿಗಳ ಪದಗ್ರಹಣ



ವಿಟ್ಲ: ಕೆಂಪು ಕಲ್ಲು ಪಾಯ ಮತ್ತು ಲಾರಿ ಮಾಲಕರ ಸಂಘ ವಿಟ್ಲ ವಲಯದ 15ನೇ ವರ್ಷದ ವಾರ್ಷಿಕ ಮಹಾಸಭೆ ಮತ್ತು ಸಂಘದ 2026–27ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಕನ್ಯಾನ, ದೇಲಂತಬೆಟ್ಟುವಿನ ಭಾರತ ಸೇವಾಶ್ರಮದಲ್ಲಿ ನಡೆಯಿತು.

ಕನ್ಯಾನ ಭಾರತ ಸೇವಾಶ್ರಮದ ಕಾರ್ಯದರ್ಶಿ ಈಶ್ವರ ಭಟ್ ಕಾರ್ಯಕ್ರಮ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಸುಧೀರ್ ಕೋಟ್ಯಾನ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕನ್ಯಾನ ಪಂಚಾಯತ್ ಮಾಜಿ ಅಧ್ಯಕ್ಷ ರಘುರಾಮ ಶೆಟ್ಟಿ, ಮಂಗಳೂರು ಎಂ ಫ್ರೆಂಡ್ಸ್ ಚಾರಿಟಬಲ್ ಟ್ರಸ್ಟ್ ಸ್ಥಾಪಕ ಅಧ್ಯಕ್ಷ ರಶೀದ್ ಎಸ್.ಎಂ. ವಿಟ್ಲ, ವಿಟ್ಲ ಬ್ರಹ್ಮಶ್ರೀ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಸಂಜೀವ ಪೂಜಾರಿ ನಿಡ್ಯ, ವಿಟಿವಿ ವಿಟ್ಲ ಇದರ ಆಡಳಿತ ನಿರ್ದೇಶಕ ರಾಮದಾಸ್ ಶೆಟ್ಟಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀನಿವಾಸ ಶೆಟ್ಟಿ ಭಾಗವಹಿಸಿದ್ದರು.

ಸಂಘದ ನೂತನ ಅಧ್ಯಕ್ಷ ಹರೀಶ್ ಎಸ್.ಪಿ., ಉಪಾಧ್ಯಕ್ಷ ರಿಯಾಝ್ ಗಡಿಯಾರ, ಕಾರ್ಯದರ್ಶಿ ಸುರೇಶ್ ಕುದ್ದುಪದವು, ಜತೆ ಕಾರ್ಯದರ್ಶಿ ಸತೀಶ್ ಪೆರುವಾಯಿ, ಕೋಶಾಕಾರಿ ಪ್ರಶಾಂತ್ ಉಕ್ಕುಡ, ನಿಕಟ ಪೂರ್ವ ಉಪಾಧ್ಯಕ್ಷ ಇಸ್ಮಾಯಿಲ್, ಜತೆ ಕಾರ್ಯದರ್ಶಿ ಅಶ್ಫಕ್ ಉಕ್ಕುಡ, ಕೋಶಾಕಾರಿ ಜಯಪ್ರಕಾಶ್ ವರಪ್ಪಾದೆ ಇದ್ದರು. ಕಾರ್ಯಕ್ರಮದಲ್ಲಿ ಆಶ್ರಮವಾಸಿಗಳಿಗೆ ವಿವಿಧ ಸ್ಪರ್ಧೆ ಏರ್ಪಡಿಸಿ ಬಹುಮಾನ ಮತ್ತು ಸುಮಾರು 300 ಆಶ್ರಮ ವಾಸಿಗಳಿಗೆ ಮಧ್ಯಾಹ್ನದ ಭೋಜನ ನೀಡಲಾಯಿತು. ಕಾರ್ಯದರ್ಶಿ ರವಿ ಪೂಜಾರಿ ವಿಟ್ಲ ವರದಿ ವಾಚಿಸಿ ಲೆಕ್ಕ ಪತ್ರ ಮಂಡಿಸಿದರು. ಮಾಜಿ ಅಧ್ಯಕ್ಷ ಉದಯ ಕುಮಾರ್ ದಂಬೆ ಸ್ವಾಗತಿಸಿ, ಸಂಜೀವ ಪೂಜಾರಿ ಎಂ.ಎಸ್. ವಂದಿಸಿದರು. ರೇಣುಕಾ ಕಣಿಯೂರು ನಿರ್ವಹಿಸಿದರು.

ಸಸಿಹಿತ್ಲು ಶ್ರೀ ಭಗವತೀ ಕ್ಷೇತ್ರದ ಬ್ರಹ್ಮಕಲಶೋತ್ಸವ ಸಂಭ್ರಮ: ತೋರಣ, ಉಗ್ರಾಣ ಮುಹೂರ್ತ



ಮುಲ್ಕಿ: ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಮಾ.4ರಿಂದ 8ರವರೆಗೆ ನಡೆಯಲಿರುವ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ತೋರಣ ಮುಹೂರ್ತ ಹಾಗೂ ಉಗ್ರಾಣ ಮುಹೂರ್ತ ವಿಜೃಂಭಣೆಯಿಂದ ಮಾ.4 ಬೆಳಿಗ್ಗೆ 8.30ರ ಸುಮಹೂರ್ತದಲ್ಲಿ ನಡೆಯಿತು.

ಬುಧವಾರ ಬೆಳಿಗ್ಗೆ 8:30 ಗಂಟೆಗೆ. ವೇದಮೂರ್ತಿ ಕೃಷ್ಣಮೂರ್ತಿ ಭಟ್ ಹೊಯ್ಗೆಗುಡ್ಡೆ ಹಾಗೂ ಶ್ರೀಪತಿ ಭಟ್, ವಿದ್ವಾನ್ ವೆಂಕಟೇಶ ತಂತ್ರಿ ಎಡಪದವು ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ವಿಶೇಷ ಪ್ರಾರ್ಥನೆ ಋತ್ವಿಜರ ಸ್ವಾಗತ, ಮಹಾಪ್ರಾರ್ಥನೆ, ಪಂಚಗವ್ಯ, ಪುಣ್ಯಾಹ, ನಾಂದಿ, ಅರಣಿ ಮಂಥನ, ದ್ವಾದಶ ನಾರಿಕೇಳ ಗಣಯಾಗ, ತೋರಣ ಮುಹೂರ್ತ ನಡೆಯಿತು. ಉಗ್ರಾಣ ಮುಹೂರ್ತದ ದೀಪ ಪ್ರಜ್ವಲನೆಯನ್ನು ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆನುವಂಶಿಕ ಅರ್ಚಕ ವೇದಮೂರ್ತಿ ಲಕ್ಷ್ಮೀನಾರಾಯಣ ಆಸ್ರಣ್ಣ ನೆರವೇರಿಸಿ, ಆಶೀರ್ವಚನ ನೀಡಿದರು.

ಮುಖ್ಯ ಅತಿಥಿಗಳಾಗಿ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಆನುವಂಶಿಕ ಮೊಕ್ತೇಸರ ಹಾಗೂ ಪ್ರಧಾನ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಪ್ರಧಾನ ಅರ್ಚಕ ನರಸಿಂಹ ಭಟ್, ಪಾವಂಜೆ ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದ ಅರ್ಚಕ ವಾಸುದೇವ ಭಟ್, ಸಸಿಹಿತ್ಲು ಕದಿಕೆ ಮೊಗವೀರ ಸಭಾದ ಅಧ್ಯಕ್ಷ ಗಿರೀಶ್ ಶ್ರೀಯಾನ್, ಲೀಲಾದರ ಬಂಗೇರ ಸಸಿಹಿತ್ಲು ಪಟೇಲರ ಮನೆ, ಸುರತ್ಕಲ್ ಎನ್ ಐಟಿಕೆ ಪ್ರಾಧ್ಯಾಪಕ ಶ್ರೀಕಾಂತ್ ರಾವ್, ಮೋಹನ್ ಶೆಟ್ಟಿಗಾರ್ ಸಸಿಹಿತ್ಲು, ಕ್ಷೇತ್ರದ ಆಡಳಿತ ಸಮಿತಿ ಅಧ್ಯಕ್ಷ ವಾಮನ್ ಇಡ್ಯಾ, ಆಡಳಿತ ಮೊಕ್ತೇಸರ ಚಂದ್ರಶೇಖರ್ ಬೆಲ್ಚಡ, ಬ್ರಹ್ಮಕಲಶೋತ್ಸವ ಮುಂಬೈ ಸಮಿತಿ ಅಧ್ಯಕ್ಷ ವೇದ ಪ್ರಕಾಶ್ ಶ್ರಿಯಾನ್,ಪಾಕ ಶಾಸ್ತ್ರಜ್ಞ ವೆಂಕಟೇಶ್ ಭಟ್ ಪಾವಂಜೆ ಸಮಿತಿಯ ಪದಾಧಿಕಾರಿಗಳಾದ ಕಸ್ತೂರಿ ಪಂಜ , ಈಶ್ವರ ಕಟೀಲ್,ವಿನೋದ್ ಸಾಲ್ಯಾನ್ ಬೆಳ್ಳಾಯರು, ರಮೇಶ್ ಬಂಗೇರ,ಸುರೇಶ್ ಬಂಗೇರ,ಚಂದ್ರಶೇಖರನಾಣಿಲ್, ದಿವಾಕರ ಸಾಮಾನಿ,ಸುನಿಲ್ ಆಳ್ವ ಗುರುರಾಜ್ ಮಲ್ಲಿಗೆಯಂಗಡಿ, ಉಮೇಶ್ವಪಂಜ,ಕಿರಣ್ ಗುರಿಕಾರ, ದಯಾನಂದ ಮಾಡ ಎಕ್ಕಾರು, ದೊಡ್ಡಯ್ಯ ಮೂಲ್ಯ ಕಟೀಲು, ಮತ್ತಿತರರು ಉಪಸ್ಥಿತರಿದ್ದರು.

ಭಕ್ತಾದಿಗಳಿಂದ ಹೊರೆಕಾಣಿಕೆ ಸಮರ್ಪಣೆ, ಭವ್ಯ ಮೆರವಣಿಗೆ: ಭಂಡಾರ ಆಗಮನ

ಮುಲ್ಕಿ: ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಮಾ.4ರಿಂದ 8ರವರೆಗೆ ನಡೆಯಲಿರುವ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ಹೊರೆ ಕಾಣಿಕೆ ಭವ್ಯ ಶೋಭಾ ಯಾತ್ರೆ ಪಾವಂಜೆ ಶ್ರೀ ಜ್ಞಾನ ಶಕ್ತಿ ಸುಬ್ರಮಣ್ಯ ದೇವಸ್ಥಾನದಿಂದ ಶ್ರೀ ಸಸಿಹಿತ್ಲು ಭಗವತೀ ಕ್ಷೇತ್ರಕ್ಕೆ ನಡೆಯಿತು.

ಶೋಭಾ ಯಾತ್ರೆಯನ್ನು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ ನಾಗವ್ರಜ ಕ್ಷೇತ್ರದ ಯಾಜೀ ನಿರಂಜನ್ ಭಟ್ ದೀಪ ಬೆಳಗಿಸಿ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಬಪ್ಪನಾಡು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ಪ್ರಧಾನ ಅರ್ಚಕ ಶ್ರೀಪತಿ ಉಪಾಧ್ಯಾಯ, ಮುಕ್ಕ ಶ್ರೀ ಸತ್ಯ ಧರ್ಮ ದೇವಿ ದೇವಸ್ಥಾನದ ಗಣೇಶ್ ಐತಾಳ್, ಸುರತ್ಕಲ್ ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದ ಅನುವಂಶಿಕ ಮೊಕ್ತೇಸರ ಡಾ. ಎಸ್ ಜಿ ಮಯ್ಯ, ಕರ್ನಾಟಕ ಸರಕಾರದ ಮಾಜೀ ಸಚಿವ ನಾಗರಾಜ ಶೆಟ್ಟಿ ಬಿಜೆಪಿ ನಾಯಕ ಸುದರ್ಶನ್ ಮೂಡಬಿದ್ರೆ, ಭುವನಾಭಿರಾಮ ಉಡುಪ, ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ವಾಮನ್ ಇಡ್ಯಾ, ಬ್ರಹ್ಮ ಕಲಶೋತ್ಸವ ಮುಂಬೈ ಸಮಿತಿ ಅಧ್ಯಕ್ಷ ವೇದ ಪ್ರಕಾಶ್ ಶ್ರಿಯಾನ್, ಮೊಕ್ತೇಸರ ಚಂದ್ರಶೇಖರ ಬೆಲ್ಚಡ,ಬ್ರಹ್ಮಕಲಶೋತ್ಸವ ಸಮಿತಿಯ ಪದಾಧಿಕಾರಿಗಳಾದ ರಮೇಶ್ ಬಂಗೇರ, ಚಂದ್ರಶೇಖರ ನಾಣಿಲ್, ಜಯಕೃಷ್ಣ ಕೋಟ್ಯಾನ್, ಉಮೇಶ್ ಪಂಜ, ದಿವಾಕರ ಸಾಮಾನಿ, ಅಭಿಲಾಶ್ ಶೆಟ್ಟಿ ಕಟೀಲು, ವಿನೋದ್ ಸಾಲ್ಯಾನ್ ಬೆಳ್ಳಾಯರು, ರಾಜೇಶ್ ಕೆರೆ ಕಾಡು, ಲಕ್ಷ್ಮಣ ಸಾಲ್ಯಾನ್ ಪುನರೂರು, ಶೋಭೇಂದ್ರ ಸಸಿಹಿತ್ಲು, ಕಿರಣ್ ಗುರಿಕಾರ, ಗಣೇಶ್ ಕದಿಕೆ ಭಂಡಾರ ಮನೆ, ಸುಶೀಲ್ ಬಂಗೇರ ಮುಲ್ಕಿ, ವಿನೋದ್ ಬೊಳ್ಳೂರು, ರಾಜೇಂದ್ರ ಪ್ರಸಾದ್ ಎಕ್ಕಾರು ಮತ್ತಿತರರು ಉಪಸ್ಥಿತರಿದ್ದರು. ನವೀನ್ ಶೆಟ್ಟಿ ಎಡ್ಮೆಮಾರ್ ನಿರೂಪಿಸಿದರು.

ಬಳಿಕ ವಿವಿಧ ಬಿರುದಾವಳಿಗಳೊಂದಿಗೆ ಬೃಹತ್ ಹೊರೆ ಕಾಣಿಕೆ ಸಮರ್ಪಣಾ ಕಾರ್ಯಕ್ರಮ ಮಧ್ಯಾಹ್ನ 12:30ರಿಂದ ಕ್ಷೇತ್ರದಲ್ಲಿ ಮಹಾ ಅನ್ನಸಂತರ್ಪಣೆ , ಸಂಜೆ 4:30 ರಿಂದ ಕ್ಷೇತ್ರದಲ್ಲಿ ವಾಸ್ತು ಪೂಜೆ ವಾಸ್ತು ಬಲಿ ಪ್ರಾಸಾದ ಶುದ್ಧಿ ವಾಸ್ತು ಹೋಮ ರಾಕ್ಷೋಘ್ನ ಹೋಮ ಹಾಗೂ ಕದಿಕೆ ಭಂಡಾರ ಮಂದಿರದಿಂದ ಭಂಡಾರ ಆಗಮನ ಕಾರ್ಯಕ್ರಮ ನಡೆಯಿತು.

ಸುತ್ತ ಮುತ್ತ

ಇಂದು ಮಾಯಿಪ್ಪಾಡಿ ಡಯಟ್ ಆಡಳಿತಾತ್ಮಕ ಬ್ಲಾಕ್ ಉದ್ಘಾಟನೆ

ಕಾಸರಗೋಡು: ಕಾಸರಗೋಡು ಜಿಲ್ಲಾ ಶಿಕ್ಷಣ ಇಲಾಖೆ, ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್ ಮತ್ತು ಲೋಕೋಪಯೋಗಿ ಕಟ್ಟಡ ವಿಭಾಗದಿಂದ ನಿರ್ಮಿಸಲಾದ ಮಾಯಿಪ್ಪಾಡಿ ಡಯಟ್ ಆಡಳಿತಾತ್ಮಕ ಬ್ಲಾಕ್‌ನ ಉದ್ಘಾಟನೆಯನ್ನು ಮಾ.5ರಂದು ಬೆಳಿಗ್ಗೆ 10 ಗಂಟೆಗೆ ಮಾಯಿಪ್ಪಾಡಿ ಡಯಟ್ ಸಭಾಂಗಣದಲ್ಲಿ ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ನೆರವೇರಿಸುವರು. ಮಧೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಜ್ಞಾನಿ ಎಸ್.ಶ್ಯಾನುಭೋಗ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್, ಶಾಸಕರಾದ ಇ.ಚಂದ್ರಶೇಖರನ್, ಎಂ.ರಾಜಗೋಪಾಲನ್, ಸಿ.ಎಚ್.ಕುಂಞಂಬು, ಎ.ಕೆ.ಎಂ.ಅಶ್ರಫ್ ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ದೇಗುಲ ನವೀಕರಣಕ್ಕೆ ಆರ್ಥಿಕ ಸಹಾಯ ವಿತರಣೆ

ಕಾಸರಗೋಡು: ಮಲಬಾರ್ ದೇವಸ್ವಂ ಮಂಡಳಿಯ ವ್ಯಾಪ್ತಿಯಲ್ಲಿರುವ ದೇವಾಲಯಗಳ ನವೀಕರಣಕ್ಕಾಗಿ ಆರ್ಥಿಕ ಸಹಾಯ ವಿತರಣೆಯನ್ನು ಮಾ.5ರಂದು ಬೆಳಗ್ಗೆ 11 ಗಂಟೆಗೆ ಶ್ರೀ ಅಳಕೋಡಿ ದೇವಿ ದೇವಾಲಯದ ಸಭಾಂಗಣದಲ್ಲಿ ದೇವಸ್ವಂ ಮತ್ತು ಬಂದರು ಹಾಗೂ ಸಹಕಾರಿ ಖಾತೆ ಸಚಿವ ವಿ.ಎನ್.ವಾಸವನ್ ಉದ್ಘಾಟಿಸಲಿದ್ದಾರೆ. ಶಾಸಕ ತೊಟ್ಟತ್ತಿಲ್ ರವೀಂದ್ರನ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮಾ.7: ತಾಲೂಕು ಅಭಿವೃದ್ಧಿ ಸಮಿತಿ ಸಭೆ

ಕಾಸರಗೋಡು: ವೆಳ್ಳರಿಕುಂಡು ತಾಲೂಕು ಅಭಿವೃದ್ಧಿ ಸಮಿತಿ ಸಭೆಯು ಮಾ.7 ರಂದು ಅಪರಾಹ್ನ 2.30ಕ್ಕೆ ವೆಳ್ಳರಿಕುಂಡು ತಾಲೂಕು ಮಿನಿ ಸಿವಿಲ್‌ಸ್ಟೇಷನ್ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿದೆ.

ಮಾ.9: ಕುಂಬಳೆಯಲ್ಲಿ ಹಿಂದೂ ಜನ ಜಾಗೃತಿ ಸಭೆ

ಕುಂಬಳೆ: ಹಿಂದೂ ಐಕ್ಯವೇದಿ ಕಾಸರಗೋಡು ಜಿಲ್ಲಾ ಸಮಿತಿ ವತಿಯಿಂದ ಹಿಂದೂ ಜನ ಜಾಗೃತಿ ಸಭೆಯು ಮಾ.9ರಂದು ಅಪರಾಹ್ನ 3 ಗಂಟೆಗೆ ಕುಂಬಳೆ ಪೇಟೆಯಲ್ಲಿ ಜರಗಲಿದೆ. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಉದ್ಘಾಟಿಸುವರು. ಹಿಂದೂ ಐಕ್ಯವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಪಿ.ಹರಿದಾಸ್ ಅವರು ಮುಖ್ಯ ಭಾಷಣ ಮಾಡುವರು. ಸಭೆಯಲ್ಲಿ ಸನ್ಯಾಸಿ ಶ್ರೇಷ್ಠರು, ವಿವಿಧ ಸಮುದಾಯದ ಮುಖಂಡರು, ಪದಾಧಿಕಾರಿಗಳು ಭಾಗವಹಿಸುವರು.

ಮಾ.22: ವೈದ್ಯಕೀಯ ಶಿಬಿರ

ಮಂಜೇಶ್ವರ: ಕುರುಡಪದವು ಶ್ರೀರಾಮ್ ಫ್ರೆಂಡ್ಸ್ ಕ್ಲಬ್ ಹಾಗೂ ದೇರಳಕಟ್ಟೆ ಕೆ.ಎಸ್.ಹೆಗ್ಡೆ ಆಸ್ಪತ್ರೆ ಇವುಗಳ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರ ಮತ್ತು ಉಚಿತ ವೈದ್ಯಕೀಯ ಶಿಬಿರವು ಮಾ.22ರೊದು ಬೆಳಗ್ಗೆ 9ರಿಂದ ಕುರುಡಪದವು ಎಯುಪಿ ಶಾಲೆಯಲ್ಲಿ ಜರಗಲಿದೆ. ಬೆಳಗ್ಗೆ 9.30ಕ್ಕೆ ವಾರ್ಡ್ ಸದಸ್ಯೆ ಸುಮನಾ ಜಿ.ಭಟ್ ಉದ್ಘಾಟಿಸುವರು. ಶಾಲಾ ಮೆನೇಜರ್ ಶಂಕರನಾರಾಯಣ ಭಟ್ ಕಾಡೂರು ಅಧ್ಯಕ್ಷತೆ ವಹಿಸುವರು. ಪದ್ಮನಾಭ ಬಲ್ರ್ಯಾಯ, ಚಂದ್ರಶೇಖರ ಕುರುವೇರಿ, ವಾಸುದೇವ ಶೆಟ್ಟಿಗಾರ್, ಅಶ್ರಫ್ ವಡ್ಯತ್ತಜೆ, ಗುರುರಾಜ್ ಚಿಪ್ಪಾರು, ದಿನೇಶ್ ಶೆಟ್ಟಿ ಕರುವೋಳು, ಪ್ರವೀಣ್ ಬೇಡಗುಡ್ಡೆ, ಬ್ರಹ್ಮದತ್ತ್ ಎನ್., ರವೀಂದ್ರ ಮೂಕಂಪಾರೆ ಹಾಗೂ ವೈದ್ಯಾಧಿಕಾರಿಗಳು ಭಾಗವಹಿಸುವರು.

ಅಬಕಾಸ್ ಸ್ಪರ್ಧೆ: ಬೆಳ್ಳಿಯ ಪದಕ



ಬದಿಯಡ್ಕ: ಬ್ರೈನೋಬ್ರೈನ್ ಅಬಕಾಸ್ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಬದಿಯಡ್ಕದ ಪದ್ಮಶ್ರೀ ಟ್ಯುಟೋರಿಯಲ್ ಸಂಸ್ಥೆಯ ವಿದ್ಯಾರ್ಥಿಗಳಾದ ಆರ್ಯ, ಅಭಿರಾಮ, ಆರಾಧ್ಯ, ಶಿವನ್ಯ, ವಿಶಾಗ್ ರೈ, ಅನುಶ್ರೀ ರೈ ಅವರು ಬೆಳ್ಳಿ ಪದಕದೊಂದಿಗೆ ಅತ್ಯುತ್ತಮ ಅಂಕ ಗಳಿಸಿದ್ದಾರೆ. ಅವರಿಗೆ ಮಧುರಾ ಹೆಗಡೆ ಹಾಗೂ ಅಶ್ವಿನಿರಾಜ್ ಪಟ್ಟಾಜೆ ತರಬೇತಿ ನೀಡಿದ್ದಾರೆ.

ಕಾಸರಗೋಡು ಜಿಲ್ಲಾ ಪಂಚಾಯತ್‌ನ 2026-27ನೇ ಸಾಲಿನ ಮುಂಗಡಪತ್ರ

26,01,37,040 ರೂ.ಗಳ ಮಿಗತೆ ಬಜೆಟ್ ಮಂಡನೆ

ಕಾಸರಗೋಡು: ಕಾಸರಗೋಡು ಜಿ.ಪಂ.ನ 2026-27ನೇ ಸಾಲಿನ 1277767040 ರೂ.ಗಳ ಆಯ, 1006630000 ರೂ. ವ್ಯಯದ 260137040 ರೂ.ಗಳ ಮಿಗತೆ ಮುಂಗಡಪತ್ರವನ್ನು ಜಿ.ಪಂ.ನ ಉಪಾಧ್ಯಕ್ಷೆ ಹಾಗೂ ಹಣಕಾಸು ಸ್ಥಾಯೀ ಸಮಿತಿ ಅಧ್ಯಕ್ಷರಾದ ಕೆ.ಕೆ.ಸೋಯಾ ಜಿ.ಪಂ.ಸಭಾಂಗಣದಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಮಂಡಿಸಿದರು.



- ಕಡುಬಡತನ ಸಂಪೂರ್ಣ ಮುಕ್ತಗೊಳಿಸಲು ವಿವಿಧ ಯೋಜನೆಗಳಡಿ 10 ಲ.ರೂ.
- ಲೈಫ್ ಮಿಷನ್ ಯೋಜನೆಯಡಿ ವಸತಿ ಸೌಲಭ್ಯ ಒದಗಿಸಲು 6,84,77,600 ರೂ
- ಕ್ಷೀರ ವಲಯದ ಸ್ವಾವಲಂಬನೆಗೆ 1.40,000 ರೂ.

ಕಡುಬಡತನ ಸಂಪೂರ್ಣ ಮುಕ್ತಗೊಳಿಸಲು ವಿವಿಧ ಯೋಜನೆಗಳಡಿ 10 ಲ.ರೂ. ಮೀಸಲಿರಿಸಲಾಗಿದೆ. ಲೈಫ್ ಮಿಷನ್ ಯೋಜನೆಯಡಿ ಎಲ್ಲರಿಗೂ ಸಂಪೂರ್ಣ ವಸತಿ ಸೌಲಭ್ಯ ಒದಗಿಸಲು 6,84,77,600 ರೂ., ಕೆರೆಗಳ ಪುನಶ್ಚೇತನ ಹಾಗೂ ಮಣ್ಣು ಮತ್ತು ಜಲ ಸಂರಕ್ಷಣೆಗಾಗಿ 3,88,73,500 ರೂ. ಮೃತಿಕಾ ಯೋಜನೆಯಡಿ ವೈಜ್ಞಾನಿಕ ಮಣ್ಣು ಪರೀಕ್ಷೆಯ ಮೂಲಕ ರಸಗೊಬ್ಬರ ಬಳಕೆ ಉತ್ತೇಜಿಸಲು 2,60,000 ರೂ., ಜಿಲ್ಲೆಯ ಸ್ಥಳೀಯ ತಳಿಯಾದ ಬೇಡಗಂ ತೆಂಗಿನ ಸಸಿಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸುವ ಯೋಜನೆಗಾಗಿ 5 ಲ.ರೂ. , ಸಮಗ್ರ ಬೀಜೋತ್ಪಾದನೆ ಮತ್ತು ವಿತರಣೆ ಕಾರ್ಯಗಳಿಗಾಗಿ 28 ಲಕ್ಷ ರೂ., ಕಾಸರಗೋಡು ಬೀಜ ಕೇಂದ್ರದಲ್ಲಿ ಅಗ್ರಿ ಕಾಂಪ್ಲೆಕ್ಸ್ ಸ್ಥಾಪಿಸಲು 50 ಲಕ್ಷ ರೂ., ಕಾಸರಗೋಡು ಮತ್ತು ಪುಲ್ಲೂರು ಬೀಜ ಕೇಂದ್ರಗಳ ಮೂಲಸೌಕರ್ಯ ಅಭಿವೃದ್ಧಿಗಾಗಿ 60 ಲಕ್ಷ ರೂ.ಗಳನ್ನು ಮೀಸಲಿರಿಸಲಾಗಿದೆ.

ಕ್ಷೀರ ವಲಯದ ಸ್ವಾವಲಂಬನೆಗಾಗಿ 1.40,000 ರೂ., ಮೀನುಗಾರರಿಗೆ ಬಲೆಗಳ ಖರೀದಿಸುವ ಯೋಜನೆಗಳಿಗೆ 13,20,000 ರೂ., ಸಾರ್ವಜನಿಕ ಜಲಮೂಲಗಳಲ್ಲಿ ಮೀನು ಮರಿಗಳ ಬಿಡುವ ಯೋಜನೆಗಳಿಗೆ 10,00,000 ರೂ., ಪಶು ಸಂಗೋಪನಾ ವಲಯದಲ್ಲಿ ಪ್ರಾಣಿಗಳ ಜನನ ನಿಯಂತ್ರಣ (ಎಬಿಸಿ) ಯೋಜನೆಗೆ 30,00,000 ರೂ., ಪರಿಶಿಷ್ಟಜಾತಿ, ಪರಿಶಿಷ್ಟಪಂಗಡದವರ ಕೌಶಲ್ಯ ತರಬೇತಿ ಕಾರ್ಯಕ್ರಮ ಮುಂದುವರಿಕೆಗಾಗಿ 9,19,77,600 ರೂ., ವಿಜ್ಞಾನ ಕೇರಳಂ ಮೂಲಕ ಉದ್ಯೋಗವಕಾಶ ಸೃಷ್ಟಿಸಲು ಜಿ.ಪಂ.ನ ನೇತೃತ್ವ ವಿವಿಧ ಇಲಾಖೆಗಳ ಸಮನ್ವಯ ಸಾಧ್ಯತೆ ಬಳಸಿಕೊಂಡು ಈ ಯೋಜನೆ ಜಾರಿಗೊಳಿಸಲು 1 ಕೋ.ರೂ., ಮಹಿಳಾ ಕೇಂದ್ರಿತ ಸಬಲೀಕರಣ ಕಾರ್ಯಕ್ರಮಗಳಿಗೆ 3,29,50,000 ರೂ., ಐಡಿಇಎ-ಐಎಎಸ್ ಡೆವಲಪ್‌ಮೆಂಟ್ ಎಂಪವರ್‌ಮೆಂಟ್ ಅಕಾಡೆಮಿ ಮೂಲಕ ಸಿವಿಲ್ ಸರ್ವೀಸ್ ಪರೀಕ್ಷೆ ಪರೀಕ್ಷೆಗಳಲ್ಲಿ ಆಸಕ್ತಿ ಮೂಡಿಸಲು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುವ ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಗಮನಹರಿಸಲು ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ಬೃಹತ್ ಯೋಜನೆ ಜಾರಿಗೆ ತರಲು ಶಿಕ್ಷಣ ಕ್ಷೇತ್ರಕ್ಕೆ 10.03,000 ರೂ., ಆಸ್ಪತ್ರೆಗೆ ದಾಖಲಾಗುವ ರೋಗಿಗಳಿಗೆ ಉಪಹಾರ ನೀಡುವ ಯೋಜನೆಗೆ 10,00,000ರೂ. ಮೀಸಲಿಡಲಾಗಿದೆ.

ಕೈಗಾರಿಕಾ ವಲಯದ ಅಭಿವೃದ್ಧಿಗೆ 65 ಲ.ರೂ., ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೆ 90 ಲ.ರೂ., ತ್ಯಾಜ್ಯ ಸಂಸ್ಕರಣಾ ಕಾರ್ಯ ಚುರುಕುಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಕೈಗೊಳ್ಳಲು ಈ ಕ್ಷೇತ್ರದ ವಿವಿಧ ಯೋಜನೆಗಳಿಗೆ 2,72,41, 500 ರೂ., ಜಿ.ಪಂ. ವ್ಯಾಪ್ತಿಯಲ್ಲಿರುವ ರಸ್ತೆಗಳ ನವೀಕರಣ, ವಿವಿಧ ಕಟ್ಟಡಗಳ ನಿರ್ಮಾಣಕ್ಕೆ ಪೂರಕ ಯೋಜನೆಗೆ 5 ಕೋ. ರೂ.ಗಳನ್ನು ಈ ಮುಂಗಡಪತ್ರದಲ್ಲಿ ಮೀಸಲಿರಿಸಲಾಗಿದೆ ಎಂದು ಕೆ.ಕೆ.ಸೋಯಾ ತಿಳಿಸಿದರು. ಜಿ.ಪಂ. ಅಧ್ಯಕ್ಷ ಸಾಬು ಅಬ್ರಹಾಂ ಅಧ್ಯಕ್ಷತೆ ವಹಿಸಿದ್ದರು.

ಆರೋಗ್ಯ ಕ್ಷೇತ್ರಕ್ಕೆ ಅನುದಾನ ಮೀಸಲು

ಆರೋಗ್ಯ ಕ್ಷೇತ್ರ (ಅಲೋಪತಿ)ದ ಎಲ್ಲಾ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ 6,26,00,000 ರೂ., ಜಿಲ್ಲಾ ಆಯುರ್ವೇದ ಆಸ್ಪತ್ರೆ ಗುಣಮಟ್ಟ ಹೆಚ್ಚಿಸಲು 1 ಕೋ. ರೂ., ಜಿಲ್ಲಾ ಹೋಮಿಯೋಪತಿ ಆಸ್ಪತ್ರೆ ಮೂಲಭೂತ ಸೌಕರ್ಯ ಅಭಿವೃದ್ಧಿಗೆ 50 ಲ.ರೂ., ಗ್ರಾ.ಪಂ. ಮಟ್ಟದಲ್ಲಿ ಸಕ್ರಿಯವಾಗಿರುವ ವಯೋ ಕ್ಲಬ್‌ಗಳಿಗೆ ಆರ್ಥಿಕ ನೆರವು ನೀಡಲು ಮತ್ತು ಕ್ಷೇಮಾಭಿವೃದ್ಧಿ ಕಾರ್ಯಗಳಿಗೆ 72 ಲಕ್ಷ ರೂ., ವಿಶೇಷ ಚೇತನರ ಆರ್ಥಿಕ ಸಬಲೀಕರಣಕ್ಕಾಗಿ ಎಂಡೋಸಲ್ಫಾನ್ ಪುನರ್ವಸತಿ ಕೇಂದ್ರದಲ್ಲಿ ಶಾಶ್ವತ ಉದ್ಯೋಗ ತರಬೇತಿ ಕೇಂದ್ರ ಸ್ಥಾಪಿಸಲು 1,05,00,000 ರೂ. ಮೀಸಲಿರಿಸಲಾಗಿದೆ.

● ಕೆ.ಕೆ.ಸೋಯಾ, ಜಿ.ಪಂ.ನ ಉಪಾಧ್ಯಕ್ಷೆ

38 ಸ್ಥಳೀಯಾಡಳಿತ ಸಂಸ್ಥೆಗಳ ವಾರ್ಷಿಕ ಯೋಜನೆಗಳಿಗೆ ಸಮಿತಿ ಸಭೆ ಅನುಮೋದನೆ



ಕಾಸರಗೋಡು: ಜಿಲ್ಲಾ ಯೋಜನಾ ಸಮಿತಿ ಸಭೆ 38 ಸ್ಥಳೀಯಾಡಳಿತ ಸಂಸ್ಥೆಗಳ 2026-27ನೇ ಸಾಲಿನ ವಾರ್ಷಿಕ ಯೋಜನೆಗಳಿಗೆ ಅನುಮೋದನೆ ನೀಡಿತು. ಜಿಲ್ಲಾ ಯೋಜನಾ ಸಮಿತಿ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಜಿ.ಪಂ. ಅಧ್ಯಕ್ಷ ಸಾಬು ಅಬ್ರಹಾಂ ವಹಿಸಿ ಮಾತನಾಡಿದರು. ಸ್ಥಳೀಯ ಆರ್ಥಿಕ ಅಭಿವೃದ್ಧಿ ಸೇರಿದಂತೆ ಅಗತ್ಯದ ಯೋಜನೆಗಳಿಗೆ ಅನುಮೋದನೆ ನೀಡಲಾಯಿತು. ಇದುವರೆಗೆ ಜಿಲ್ಲಾಧಿಕಾರಿಯಾಗಿದ್ದ ಕೆ.ಇನ್ಬಶೇಖರ್ ಅವರನ್ನು ಸಭೆಯಲ್ಲಿ ಬೀಳ್ಕೊಡಲಾಯಿತು.

ಜಿಲ್ಲಾಡಳಿತದಿಂದ ಸಂಪೂರ್ಣ ಬೆಂಬಲ

ನೂತನ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ವಿವಿಧ ವಿಷಯಗಳ ಕುರಿತು ಮಾತನಾಡಿ, ಸ್ಥಳೀಯಾಡಳಿತ ಸಂಸ್ಥೆಗಳ ಸುಗಮ ಕಾರ್ಯ ನಿರ್ವಹಣೆಗೆ ಜಿಲ್ಲಾಡಳಿತದ ಸಂಪೂರ್ಣ ಬೆಂಬಲ ಇರುತ್ತದೆ ಎಂದರು. ಎಲ್ಲರ ಮಾತುಗಳ ಆಲಿಸಿ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಮುಂದುವರಿಯಲಾಗುವುದು ಎಂದು ನುಡಿದರು.

ಜಿಲ್ಲಾ ಯೋಜನಾಧಿಕಾರಿ ಟಿ.ರಾಜೇಶ್ ವರದಿ ಮಂಡಿಸಿದರು. 38 ಸ್ಥಳೀಯಾಡಳಿತ ಸಂಸ್ಥೆಗಳ ವಾರ್ಷಿಕ ಯೋಜನೆಗಳ ಅನುಮೋದಿಸಲಾಯಿತು.

ಅನುಮೋದನೆ

ಕಾಸರಗೋಡು ಜಿ.ಪಂ., ಪಿಲಿಕೋಡ್ ಗ್ರಾ.ಪಂ., ಕಾಞಂಗಾಡು ಬ್ಲಾಕ್ ಪಂ., ಮಧೂರು ಗ್ರಾ.ಪಂ. ಮತ್ತು ವಲಿಯಪರಂಬ ಗ್ರಾ.ಪಂ.ಗಳ ವಾರ್ಷಿಕ ಯೋಜನೆಗಳಲ್ಲಿನ ತಿದ್ದುಪಡಿಗಳನ್ನು ಸಮಿತಿ ಪರಿಗಣಿಸಿ ಅನುಮೋದಿಸಿತು. ಅಜಾನೂರು ಗ್ರಾ.ಪಂ., ಮಂಜೇಶ್ವರ ಗ್ರಾ.ಪಂ. ಮತ್ತು ಪೂರ್ವ ಎಳೇರಿ ಗ್ರಾಮ ಪಂಚಾಯತ್‌ಗಳ ಆರೋಗ್ಯ ಅನುದಾನ ಯೋಜನೆಗಳಿಗೆ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಯಿತು.

ಮುನಿಪುರ ಶ್ರೀ ದೇವಳದಲ್ಲಿ ತತ್ವಕಲಶ, ತತ್ವ ಹೋಮ, ನಾಳೆ ಶ್ರೀದೇವರ ಪ್ರತಿಷ್ಠೆ

ಬದಿಯಡ್ಕ: ಕುಂಬ್ಡಾಜೆ ಗ್ರಾಮದ ಮುನಿಯೂರು ಮುನಿಪುರ ಶ್ರೀ ಗೋಪಾಲ ಕೃಷ್ಣ ದೇವಳದಲ್ಲಿ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶದ 4ನೇ ದಿನವಾದ ಬುಧವಾರ ಶ್ರೀ ಕ್ಷೇತ್ರ ತಂತ್ರಿಗಳಾದ ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು, ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರ ನೇತೃತ್ವದಲ್ಲಿ ಬೆಳಗ್ಗೆ ಗಣಪತಿ ಹೋಮ, ತತ್ವಕಲಶ ಪೂಜೆ, ತತ್ವಹೋಮ, ತತ್ವಕಲಶಾಭಿಷೇಕ, ಅನುಜ್ಞಾ ಕಲಶಾಭಿಷೇಕ, ಅಂಕುರ ಪೂಜೆ, ತ್ರಿಕಾಲ ಪೂಜೆ, ರಾತ್ರಿ ಅನುಜ್ಞಾ ಬಲಿ, ಕ್ಷೇತ್ರಪಾಲನಲ್ಲಿ ಅನುಜ್ಞಾ ಪ್ರಾರ್ಥನೆ, ಅಂಕುರ ಪೂಜೆ, ತ್ರಿಕಾಲ ಪೂಜೆ, ಬಿಂಬಶುದ್ಧಿ, ಕಲಶಪೂಜೆ ನಡೆಯಿತು. ಬಳಿಕ ಪುತ್ತೂರು ತೆಂಕಿಲ ಧೀಶಕ್ತಿ ಮಹಿಳಾ ಯಕ್ಷಬಳಗದಿಂದ ಯಕ್ಷಗಾನ ತಾಳಮದ್ದಳೆ ಜರಗಿತು.

ಇಂದು ತತ್ವಕಲಶಾಭಿಷೇಕ

ಶ್ರೀ ಕ್ಷೇತ್ರದಲ್ಲಿ ಮಾ.5ರಂದು ಬೆಳಿಗ್ಗೆ ಗಣಪತಿ ಹೋಮ, ಸಂಹಾರತತ್ವ ಹೋಮ, ತತ್ವಕಲಶ ಪೂಜೆ, ಕುಂಭೇಶ ಕರ್ಕರಿ ಪೂಜೆ, ಶಯ್ಯಾಪೂಜೆ, ತತ್ವಕಲಶಾಭಿಷೇಕ, ಜೀವಕಲಶ ಪೂಜೆ, ಜೀವೋದ್ವಾಸನೆ, ಜೀವಕಲಶ, ಶಯ್ಯೋನ್ನಯನ, ರಾತ್ರಿ ಬಿಂಬಶುದ್ಧಿ, ಕಲಶಾಭಿಷೇಕ, ಪೀಠಾಧಿವಾಸ, ಅಧಿವಾಸ ಬಲಿ, ತ್ರಿಕಾಲ ಪೂಜೆ, ಶಿರಸ್ತತ್ವ ಹೋಮ, ರಾಕ್ಷೋಘ್ನ ಹೋಮ, ವಾಸ್ತುಹೋಮ, ವಾಸ್ತುಬಲಿ ನಡೆಯಲಿದೆ. ಸಂಜೆ ಅಗಲ್ಪಾಡಿ ಮಾರ್ಪನಡ್ಕ ಜಯನಗರ ಶ್ರೀ ಗೋಪಾಲಕೃಷ್ಣ ಭಜನಾ ಮಂದಿರದಿಂದ ಹೊರೆಕಾಣಿಕೆ ಮೆರವಣಿಗೆ, ರಾತ್ರಿ ಕಲಾತಪಸ್ವಿ ನಾಟ್ಯಗುರು ವಿದ್ವಾನ್ ಬಾಲಕೃಷ್ಣಮಾಸ್ತರನಾಟ್ಯನಿಲಯಂ ಮಂಜೇಶ್ವರ ಶಿಷ್ಯವೃಂದದವರಿಂದ ಭರತನಾಟ್ಯ ಕೃಷ್ಣಾಯಸ್ತುಭ್ಯಂ ನಮಃ ನಡೆಯಲಿದೆ.



ನಾಳೆ ಶ್ರೀ ದೇವರ ಪ್ರತಿಷ್ಠೆ

ಮಾ.6ರಂದು ಬೆಳಿಗ್ಗೆ 6 ಗಂಟೆಗೆ 108 ತೆಂಗಿನ ಕಾಯಿ ಗಣಪತಿ ಹೋಮ, ಪ್ರತಿಷ್ಠಾಪಾಣಿ, 10.44ರ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀ ದೇವರ ಪ್ರತಿಷ್ಠೆ ಪ್ರತಿಷ್ಠಾ ಬಲಿ, ಅಂಕುರ ಪೂಜೆ, ಮಹಾಪೂಜೆ, ಸಂಜೆ 6ರಿಂದ ನಿತ್ಯ ನೈಮಿತ್ತಿಕಾದಿಗಳ ನಿರ್ಣಯ, ಭದ್ರದೀಪವಿಟ್ಟು ಕವಾಟಬಂಧನ, ಅಂಕುರ ಪೂಜೆ, ಸೋಪಾನ ಪೂಜೆ ನಡೆಯಲಿದೆ. ರಾತ್ರಿ 7ರಿಂದ ಪ್ರೊ.ಎ. ಎಲ್.ಅನಂತಪದ್ಮನಾಭ ಮತ್ತು ವಿದ್ವಾನ್ ಕಾರ್ಲೆ ಗಣರಾಜ್‌ರಿಂದ ದ್ವಂದ್ವ ವಯಲಿನ್ ವಾದನ, ರಾತ್ರಿ 9ರಿಂದ ಟೀಮ್ ರಾಧಾ ಮಾದವಂ ಮುನಿಯೂರುರಿಂದ ಕೈಕೊಟ್ಟಿಕ್ಕಳಿ ಜರಗಲಿದೆ.

ಉಪ್ಪಳ ರೈಲ್ವೆ ನಿಲ್ದಾಣ ರಸ್ತೆ ದುಸ್ತರ: ದುರಸ್ತಿಗೆ ಸಾರ್ವಜನಿಕರ ಆಗ್ರಹ

ಉಪ್ಪಳ: ಉಪ್ಪಳ ರೈಲ್ವೆ ನಿಲ್ದಾಣ ರಸ್ತೆ ಹಲವು ವರ್ಷಗಳಿಂದ ಶೋಚನೀಯ ಸ್ಥಿತಿಯಲ್ಲಿದ್ದು, ವಾಹನ ಸಹಿತ ಊರವರ ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಈ ರಸ್ತೆಯನ್ನು ದುರಸ್ತಿಗೊಳಿಸಲು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಉಪ್ಪಳ ಪೇಟೆಯಿಂದ ರೈಲ್ವೆ ನಿಲ್ದಾಣ ತನಕದ ಸುಮಾರು 1 ಕಿಲೋ ಮೀ. ಕಾಂಕ್ರೀಟ್ ಹಾಗೂ ಡಾಮರು ರಸ್ತೆ ಹದಗೆಟ್ಟು ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಮೇಲ್ಭಾಗದಲ್ಲಿ ಪಂ. ಹಾಗೂ ಕೆಳ ಭಾಗದಲ್ಲಿ ರೈಲ್ವೆ ಇಲಾಖೆಗೆ ಸೇರಿದ ರಸ್ತೆಯಾಗಿದೆ. ಇತ್ತೀಚೆಗೆ ಆ ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗಿದೆ. ಈ ಪ್ರದೇಶದಲ್ಲಿ ರೈಲ್ವೆ ನಿಲ್ದಾಣ, ಅಯ್ಯಪ್ಪ ಮಂದಿರ, ನೂರಾರು ಮನೆಗಳು, ವ್ಯಾಪಾರ ಸಂಸ್ಥೆಗಳಿದ್ದು ಈ ಹದಗೆಟ್ಟ ರಸ್ತೆಯಲ್ಲಿ ದಿನನಿತ್ಯ ಸಾವಿರಾರು ಮಂದಿ ಸಂಚರಿಸುತ್ತಿದ್ದು, ತೀರಾ ಸಮಸ್ಯೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆಯನ್ನು ದುರಸ್ತಿಗೊಳಿಸಿ ಸುಗಮ ಸಂಚಾರ ಯೋಗ್ಯವನ್ನಾಗಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



ಮಧೂರು ಗ್ರಾಪಂ: 8,55,62,104 ರೂ.ಗಳ ಮಿಗತೆ ಬಜೆಟ್ ಮಂಡನೆ



ಕಾಸರಗೋಡು: ಮಧೂರು ಗ್ರಾಪಂನ 2026-27ನೇ ಸಾಲಿನ 34,80,06,004 ರೂ.ಗಳ ಆಯ, 26,24,44,900 ರೂ.ಗಳ ಆಯ, 8,55,62,104 ರೂ. ಮಿಗತೆ ಮುಂಗಡ ಪತ್ರವನ್ನು ಮಧೂರು ಗ್ರಾ.ಪಂ.ನ ಉಪಾಧ್ಯಕ್ಷರು ಹಾಗೂ ಹಣಕಾಸು ಸ್ಥಾಯೀ ಸಮಿತಿ ಅಧ್ಯಕ್ಷ ಭಾನುಪ್ರಕಾಶ್ ಬುಧವಾರ ಪಂ.ಸಭಾಂಗಣದಲ್ಲಿ ನಡೆದ ಬಜೆಟ್ ಅಧಿವೇಶನದಲ್ಲಿ ಮಂಡಿಸಿದರು.

ಕೃಷಿ ವಲಯಕ್ಕೆ ಆದ್ಯತೆ

ಈ ಬಜೆಟ್‌ನಲ್ಲಿ ಕೃಷಿ ವಲಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಕೃಷಿ ವಲಯಕ್ಕೆ 1,02,95,766 ರೂ.ಗಳನ್ನು ಮೀಸಲಿರಿಸಲಾಗಿದೆ. ಅರಣ್ಯ ಮೃಗಗಳ ಹಾವಳಿಯಿಂದ ಕೃಷಿ ಬೆಳೆ ನಷ್ಟ ಹೊಂದಿದರಿಂದ ಸೋಲಾರ್ ಫೆನ್‌ಸಿಂಗ್ಸ್ ಶೇ. 50 ಸಬ್ಸಿಡಿಯೊಂದಿಗೆ ನಡೆಸಲು, ಮಧೂರು ಗ್ರಾ.ಪಂ.ನ ಪ್ರಧಾನ ಕೃಷಿಯಾದ ಕಂಗು ಕೃಷಿ ಗಂಭೀರವಾಗಿ ಹಾನಿಗೊಳಿಸುವ ರೋಗಕ್ಕೆ ಔಷಧಿಗಾಗಿ ಶೇ.100ರಷ್ಟು ಸಬ್ಸಿಡಿ ನೀಡಲು, ಹಾಳಾದ ಕಂಗನ್ನು ಮುರಿದು ಹಾಕಲು ಆರ್ಥಿಕ ಸಹಾಯ ನೀಡಲು, ನೂತನ ಕಂಗು ಗಿಡಗಳ ನೀಡಲು ಉತ್ತಮ ಯೋಜನೆ ಅಳವಡಿಸಲಾಗಿದೆ. 20 ಎಕರೆಗಿಂತ ಅಧಿಕ ಸ್ಥಳ ಬೆಲೆಯಿರುವ ಪ್ರಿಸಿಷನ್ ಫಾರ್ಮಿಂಗ್ ಎಂಬ ನೂತನ ಕೃಷಿ ರೀತಿ ಜಾರಿಗೊಳಿಸಲು, ಹೆಚ್ಚಿನ ಕೃಷಿಕರನ್ನು ಈ ಕ್ಷೇತ್ರಕ್ಕೆ ಆಕರ್ಷಿಕಸಲು ನೂತನ ಯೋಜನೆ ರೂಪೀಕರಿಸಲಾಗಿದೆ.

ರಸ್ತೆ ಅಭಿವೃದ್ಧಿಗೆ ಮೀಸಲು

ಈ ಬಜೆಟ್‌ನಲ್ಲಿ ಸೇವಾ ವಲಯದಲ್ಲಿ 2,34,00,000 ರೂ.ಗಳನ್ನು ರಸ್ತೆಗಳ ಮಾತ್ರ ಅಭಿವೃದ್ಧಿಗೆ ಮೀಸಲಿರಿಸಲಾಗಿದೆ. ಮಧೂರು ನಿವಾಸಿಗಳ ಬಹುಕಾಲದ ಸಮಸ್ಯೆ ಗಳಲ್ಲಿ ಒಂದಾದ ತ್ಯಾಜ್ಯ ಸಂಸ್ಕರಣೆಗೆ ಶುಚಿತ್ವ ವಲಯದಲ್ಲಿ 42 ಲಕ್ಷ ರೂ.ಗಳ ಜಿ-ಬಿನ್, ರಿಂಗ್ ಕಂಪೋಸ್ಟ್, ಬೋಟಿಲ್ ಬೂತ್, ಮಿನಿ ಎಂಸಿಎಫ್ ಎಂಸಿಎಫ್ ಎಂಬೀ ಯೋಜನೆ ಈ ಬಜೆಟ್‌ನಲ್ಲಿ ಒಳಗೊಂಡಿದೆ. ಮುಂದಿನ ಯೋಜನೆಯಾದ 80 ಲ.ರೂ.ಗಳ ಎಂಸಿಎಫ್‌ಗೆ ಹೊರತಾಗಿದೆ. ಈ ಯೋಜನೆಗಳು. ಪಂ.ಅಧ್ಯಕ್ಷೆ ಸುಜ್ಞಾನಿ ಶ್ಯಾನುಭೋಗ್ ಅಧ್ಯಕ್ಷತೆ ವಹಿಸಿದ್ದರು. ಪಂ.ನ ವಿವಿಧ ಸ್ಥಾಯೀ ಸಮಿತಿ ಅಧ್ಯಕ್ಷ ಮಾಧವ ಮಾಸ್ತರ್, ಪುಷ್ಪಾ ಗೋಪಾಲನ್, ದಾಕ್ಷಾಯಿಣಿ, ಗ್ರಾಪಂ ಸದಸ್ಯ ಯೋಗೀಶ್ ಎಂ.ಆರ್., ಮಜೀದ್, ಅಮೀರಾ ರಹನಾಸ್, ಯೋಜನಾ ಸಮಿತಿ ಉಪಾಧ್ಯಕ್ಷ ಸುಕುಮಾರ ಕುದ್ರೆಪ್ಪಾಡಿ, ಕೃಷಿ ಆಫೀಸರ್ ಹಂಶೀನಾ, ಅಸಿಸ್ಟೆಂಟ್ ಇಂಜಿನಿಯರ್ ಅನಂತು ಮಾತನಾಡಿದರು. ನಿತು ಶಿಜಿಮೋನ್ ಸ್ವಾಗತಿಸಿ, ಅಕೌಂಟೆಂಟ್ ಕೃಷ್ಣಪ್ರಿಯಾ ವಂದಿಸಿದರು.

ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ 'ಕಲಿಕೋತ್ಸವ' ಉತ್ತಮ ವೇದಿಕೆ: ಹರ್ಷಾದ್ ವರ್ಕಾಡಿ



ಮಂಜೇಶ್ವರ: ಮಕ್ಕಳಲ್ಲಿರುವ ಪ್ರತಿಭೆಯನ್ನು ಮುಕ್ತವಾಗಿ ಅಭಿವ್ಯಕ್ತಿಪಡಿಸಲು 'ಕಲಿಕೋತ್ಸವ' ಒಂದು ಅತ್ಯುತ್ತಮ ವೇದಿಕೆಯಾಗಿದೆ. ಊರವರು ಮತ್ತು ಹೆತ್ತವರು ಇದನ್ನು ಗಮನಿಸಿದಾಗ ಮಗುವಿನ ಬೆಳವಣಿಗೆಗೆ ಹೆಚ್ಚಿನ ಪ್ರೇರಣೆ ಸಿಗುತ್ತದೆ ಎಂದು ಜಿ.ಪಂ. ಸದಸ್ಯ ಹರ್ಷಾದ್ ವರ್ಕಾಡಿ ತಿಳಿಸಿದರು. ಪೈವಳಿಕೆ ಕಾಯರ್‌ಕಟ್ಟೆಯ ಜಿಎಚ್‌ಎಸ್‌ಎಸ್ ಶಾಲೆ ಸೆಮಿನಾರ್ ಸಭಾಂಗಣದಲ್ಲಿ ಮಂಗಳವಾರ ನಡೆದ ಕಲಿಕೋತ್ಸವ 2025-26 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಇಂದು ಕೇವಲ ಪಠ್ಯದ ಓದಿಗಿಂತ ಸೃಜನಶೀಲತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಸಾಮರ್ಥ್ಯವಿರುವ ವಿದ್ಯಾರ್ಥಿಗಳಿಗೆ ಮಿಂಚಲು ಅಪಾರ ಅವಕಾಶಗಳಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಅತಿಥಿಯಾಗಿದ್ದ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಇಬ್ರಾಹಿಂ ಬಿ. ಮಾತನಾಡಿ, ಕುತೂಹಲ ಮತ್ತು ಹೊಸ ಆಲೋಚನೆಗಳು ಮಕ್ಕಳ ಮನಸ್ಸನ್ನು ಸದಾ ಹೊಸತನದತ್ತ ಪ್ರೇರೇಪಿಸುತ್ತವೆ. ಮಕ್ಕಳಲ್ಲಿ ಅಂತರ್ಗತವಾಗಿರುವ ಪ್ರತಿಭೆ ನಿರಂತರ ಪ್ರಯತ್ನ ಮತ್ತು ಇತರರ ಪ್ರೇರಣೆಯಿಂದ ಮಾತ್ರ ಬೆಳಕನ್ನು ಕಾಣಲು ಸಾಧ್ಯ ಎಂದರು.

ಪಿಟಿಎ ಅಧ್ಯಕ್ಷ ಆದಂ ಬಳ್ಳೂರು ಅಧ್ಯಕ್ಷತೆ ವಹಿಸಿದ್ದರು. ಪೈವಳಿಕೆ ಗ್ರಾ.ಪಂ. ಸದಸ್ಯರಾದ ಯಶೋದಾ ಅತಿಥಿಯಾಗಿದ್ದರು. ಕಾಯರ್‌ಕಟ್ಟೆ ಜಿಎಲ್‌ಎಸ್ ಪ್ರಾಂಶುಪಾಲ ಡೊಮಿನಿಕ್ ಆಗಸ್ಟಿನ್ ಮುಖ್ಯೋಪಾಧ್ಯಾಯ ಶಿವರಾಮ ಭಟ್, ಎಂಪಿಟಿಎ ಅಧ್ಯಕ್ಷೆ ಸುಮಿತ್ರಾ, ಪಿಟಿಎ ಉಪಾಧ್ಯಕ್ಷ ಖಲೀಲ್ ಚಿಪ್ಪಾರ್, ಸಿದ್ದಿಕ್ ಉಸ್ತಾದ್ ಹಾಗೂ ಎಸ್‌ಎಂಸಿ ಅಧ್ಯಕ್ಷ ರಜಿಕ್ ಪೆರುವೋಡಿ ಉಪಸ್ಥಿತರಿದ್ದರು. ಶಾಲಾ ಮುಖ್ಯೋಪಾಧ್ಯಾಯಿನಿ ಭಾಗ್ಯಲಕ್ಷ್ಮಿ ಸ್ವಾಗತಿಸಿ, ಹಿರಿಯ ಸಹಾಯಕ ಶಿಕ್ಷಕ ಹರೀಶ್ ಕುಮಾರ್ ಬಿ. ವಂದಿಸಿದರು. ಅಶ್ರಫ್ ಮರ್ತ್ಯ ನಿರೂಪಿಸಿದರು.

ಶ್ರೀ ಧರ್ಮಶಾಸ್ತಾ ಕ್ಷೇತ್ರದಲ್ಲಿ ಮೇಳೈಸಿದ ಕನ್ನಡ ಸಾಹಿತ್ಯ ಗಾನ ನೃತ್ಯ ಕಾರ್ಯಕ್ರಮ



ಕಾಸರಗೋಡು: ತೆಕ್ಕಿಲ್ ಚಟ್ಟಂಚಾಲ್ ಕನಕವಳಪ್ಪು ಶ್ರೀ ಧರ್ಮಶಾಸ್ತಾ ಕ್ಷೇತ್ರದಲ್ಲಿ ನಡೆದ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಕಾಸರಗೋಡು ಗಡಿನಾಡ ಕನ್ನಡತಿ ಡಾ.ವಾಣಿಶ್ರೀಯವರ ಸಾರಥ್ಯದ ಕಾಸರಗೋಡಿನ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ 181ನೇ ಕನ್ನಡ ಸಾಹಿತ್ಯ ಗಾನ ನೃತ್ಯ ವೈಭವ ಜರಗಿತು.

ಪ್ರಮುಖರಾದ ಮಲ್ಲ ಸೌಮ್ಯಾ, ಮಲ್ಲ ಐಶ್ವರ್ಯ, ಅಮೃತ್, ಸೀತಾರಾಮ, ತೇಜಸ್ವಿನಿ, ಭಾಗ್ಯಲಕ್ಷ್ಮಿ, ಅಮಿತಾ, ಶ್ರೀಜಾ, ದಿವಾಕರ ಕಾಸರಗೋಡು ಮೊದಲಾದವರು ವೇದಿಕೆಯಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಪ್ರೇಕ್ಷಕರ ಪ್ರಶಂಸೆ ಗಳಿಸಿದರು.

ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷೆ ಡಾ.ವಾಣಿಶ್ರೀ ಅವರು ತಮ್ಮ ಕನ್ನಡ ಸಾಹಿತ್ಯದ ಸವಿನುಡಿಗಳೊಂದಿಗೆ ಕಾರ್ಯಕ್ರಮವನ್ನು ಪ್ರಸ್ತುತಗೊಳಿಸಿದರು. ಕಾರ್ಯಕ್ರಮದಲ್ಲಿ ಗಣ್ಯರಾದ ಶಶಿಕಲಾ, ಶ್ಯಾಮಪ್ರಸಾದ್, ನಿಶಾಂತ್ ಮುಂತಾದವರು ಉಪಸ್ಥಿತರಿದ್ದರು. ಭಕ್ತಿಗೀತೆ ಹಾಗೂ ಸುಂದರ ನೃತ್ಯಗಳ ಕಾರ್ಯಕ್ರಮ ನೋಡಿ ಆಲಿಸಿದ ಜನರು ಅಭಿನಂದನೆ ವ್ಯಕ್ತಪಡಿಸಿದರು. ಎಲ್ಲಾ ಕಲಾರತ್ನಗಳಿಗೆ ಗೌರವಧನ ಮತ್ತು ಪುಸ್ತಕವನ್ನು ನೀಡಿ ಸನ್ಮಾನಿಸಲಾಯಿತು.

ಗೌರವ

ಕನಕವಳಪ್ಪು ಶ್ರೀ ಧರ್ಮಶಾಸ್ತಾ ಕ್ಷೇತ್ರದ ವ್ಯವಸ್ಥಾಪನಾ ಸಮಿತಿಯ ವತಿಯಿಂದ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆಯ ಅಧ್ಯಕ್ಷೆ ಡಾ.ವಾಣಿಶ್ರೀ ಅವರನ್ನು ಶ್ರೀ ಧರ್ಮಶಾಸ್ತಾ ದೇವರ ಪ್ರಸಾದ ನೀಡಿ ಗೌರವಿಸಲಾಯಿತು. ಭಾಗವಹಿಸಿದ ಎಲ್ಲಾ ಕಲಾವಿದರಿಗೆ ಸಂಸ್ಥೆಯ ವತಿಯಿಂದ ಗೌರವ ಧನ ಹಾಗೂ ಸ್ಮರಣಿಕೆ ನೀಡಲಾಯಿತು.

ಕುಂಬಳೆ ಪಂಚಾಯತ್ ಮಟ್ಟದ ಹಿಂದೂ ಏಕತಾ ಸಮ್ಮೇಳನ | ಲತೇಶ್ ಬಾಕ್ರಬೈಲು ಅಭಿಪ್ರಾಯ

ಹಿಂದುಗಳು ಜಾಗೃತರಾದಾಗ ಸಶಕ್ತ ಸಮಾಜ ನಿರ್ಮಾಣ ಸಾಧ್ಯ

ಕುಂಬಳೆ: ಕುಂಬಳೆ ಪಂಚಾಯತ್ ಮಟ್ಟದ ಹಿಂದೂ ಏಕತಾ ಸಮ್ಮೇಳನವು ಕುಂಬಳೆ ಕೃಷ್ಣನಗರದಲ್ಲಿ ಸಾವಿರಾರು ಮಂದಿಯ ಪಾಲ್ಗೊಳ್ಳುವಿಕೆಯೊಂದಿಗೆ ಜರಗಿತು. ಸಮ್ಮೇಳನ ಸಮಿತಿಯ ಅಧ್ಯಕ್ಷ ರಘುನಾಥ ಪೈ ಕುಂಬಳೆ ಅಧ್ಯಕ್ಷತೆ ವಹಿಸಿದ್ದರು.

ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಲತೇಶ್ ಬಾಕ್ರಬೈಲು ಮುಖ್ಯ ಭಾಷಣ ಮಾಡಿ, ಹಿಂದುಗಳು ಜಾಗೃತರಾದಾಗ ಸಶಕ್ತ ಸಮಾಜ ನಿರ್ಮಾಣ ಸಾಧ್ಯವಿದೆ. ಹಿಂದುಗಳು ಸಾಮರಸ್ಯದ ಬದುಕಿನೊಂದಿಗೆ ಅನ್ಯಾಯಗಳಿಗೆ ಕೂಡಲೇ ಸೆಟೆದು ನಿಲ್ಲುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು ಎಂದರು.

ಮಕ್ಕಳನ್ನು ಸಂಸ್ಕಾರವಂತರನ್ನಾಗಿಸಬೇಕು

ಮಕ್ಕಳಿಗೆ ಮನೆಯೇ ಸಂಸ್ಕಾರ ಮತ್ತು ಸಂಸ್ಕೃತಿ ಬೆಳೆಸುವ ತಾಣವಾಗಬೇಕು. ಅದರಲ್ಲೂ ತಾಯಂದಿರು ಮಕ್ಕಳಿಗೆ ಸುಸಂಸ್ಕೃತ ವಿಚಾರಗಳನ್ನು ಪ್ರತಿನಿತ್ಯ ಬೋಧನೆ ಮಾಡಬೇಕು. ಹಾಗಾದಲ್ಲಿ ಯುವಜನರು ದೇಶದ ಆಸ್ತಿಯಾಗಿ ಬೆಳೆದು ಬೆಳಗಬಲ್ಲರು ಎಂದು ನುಡಿದರು. ಭಾರತವು ವಿಶ್ವಕ್ಕೇ ಗುರು ಸ್ಥಾನದಲ್ಲಿದ್ದು, ಈ ನಿಟ್ಟಿನಲ್ಲಿ ನಾವು ಧನ್ಯರು ಎಂದರು.





ಹಿಂದು ಏಕತಾ ಸಮ್ಮೇಳನ ಸಮಿತಿಯ ರಕ್ಷಾಧಿಕಾರಿ ಚಕ್ರಪಾಣಿ ದೇವಪೂಜಿತ್ತಾಯ ಆರಿಕ್ಕಾಡಿ ಮತ್ತು ಸರಿತಾ ದಿನೇಶ್ ಆರಿಕ್ಕಾಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜಿತೇಶ್ ಕಂಚಿಕಟ್ಟೆ ಸ್ವಾಗತಿಸಿ, ಪೂರ್ಣಿಮಾ ಟೀಚರ್ ವಂದಿಸಿದರು. ಕಲಾರತ್ನ ವಕೀಲ ಶಂನಾಡಿಗ ಕುಂಬಳೆ ಕಾರ್ಯಕ್ರಮ ನಿರೂಪಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ

ಹಿಂದು ಏಕತಾ ಸಮಾವೇಶದ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮಯ್ಯಾಳ: 2.5 ಕೋ.ರೂ.ವೆಚ್ಚದ ವಿಸಿಬಿ ಕಮ್ ಸೇತುವೆ ಕಾಮಗಾರಿಗೆ ಶಾಸಕ ಕುಂಞಂಬು ಚಾಲನೆ

ಮುಳ್ಳೇರಿಯ: ದೇಲಂಪಾಡಿ ಗ್ರಾಮ ಪಂಚಾಯತ್‌ನ ಸಾಲೆತ್ತಡ್ಕದ ಮಯ್ಯಾಳದಲ್ಲಿ ನಿರ್ಮಿಸುವ ವಿಸಿಬಿ ಕಮ್ ಸೇತುವೆಯ ಪುನರ್ ನಿರ್ಮಾಣಕ್ಕಾಗಿ ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನಿಂದ ಹಂಚಿಕೆಯಾದ 2.5 ಕೋಟಿ ರೂ.ಗಳ ಕಾಮಗಾರಿಯನ್ನು ಉದುಮ ಶಾಸಕ ಸಿ.ಎಚ್. ಕುಂಞಂಬು ಉದ್ಘಾಟಿಸಿದರು. ದೇಲಂಪಾಡಿ ಗ್ರಾಮ ಪಂಚಾಯತ್ ಅಧ್ಯಕ್ಷ ಎ.ಮುಸ್ತಫಾ ಹಾಜಿ ಅಧ್ಯಕ್ಷತೆ ವಹಿಸಿದ್ದರು.

ಸಣ್ಣ ನೀರಾವರಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅನೂಪ್‌ಕುಮಾರ್ ವರದಿ ಮಂಡಿಸಿದರು. ದೇಲಂಪಾಡಿ ಗ್ರಾ.ಪಂ. ಉಪಾಧ್ಯಕ್ಷೆ ಬಿ.ಶಾರದಾ, ಸ್ಥಾಯೀ ಸಮಿತಿ ಅಧ್ಯಕ್ಷ ರತನ್‌ಕುಮಾರ್, ಸಾಯಿರಾ ಎ.ಬಿ.ಬಶೀರ್, ಕಾರಡ್ಕ ಬ್ಲಾಕ್ ಪಂ. ಸದಸ್ಯ ಜಿ.ಗೋಪಾಲನ್, ದೇಲಂಪಾಡಿ ಗ್ರಾಮಪಂಚಾಯತ್ ಮಾಜಿ ಅಧ್ಯಕ್ಷ ಎ.ಪಿ.ಉಷಾ, ರಾಜಕೀಯ ಪಕ್ಷದ ಪ್ರತಿನಿಧಿಗಳಾದ ಎ.ಪಿ.ಕುಶಲನ್, ಸಿ.ಎಚ್.ಅಶ್ರಫ್ ಹಾಜಿ, ಕೊರಗಪ್ಪ ಮಾತನಾಡಿದರು.



ದೇಲಂಪಾಡಿ ಗ್ರಾ.ಪಂ.ಸದಸ್ಯ ಎ.ಅಬ್ದುಲ್ಲ ಸ್ವಾಗತಿಸಿ, ತಿಮ್ಮಯ್ಯ ವಂದಿಸಿದರು.

ಸುತ್ತಮುತ್ತ

ವಿಶ್ವ ಮಹಿಳಾ ದಿನಾಚರಣೆ, ಸಾಧಕ ಪುರಸ್ಕಾರಕ್ಕೆ ಆಯ್ಕೆ

ಕೋಟ: ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಮಾತೃಸಂಸ್ಥೆ ಪಂಚವರ್ಣ ಯುವಕ ಮಂಡಲದ ಮಾರ್ಗದರ್ಶನದಲ್ಲಿ ಸ್ನೇಹಕೂಟ ಮಣೂರು ಇವರ ಸಹಯೋಗದೊಂದಿಗೆ ವಿಶ್ವಮಹಿಳಾ ದಿನಾಚರಣೆ ಮಾ.9ರಂದು



ಬೆಳಿಗ್ಗೆ 10.30ಕ್ಕೆ ಕೋಟದ ಪಂಚವರ್ಣ ಕಚೇರಿಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡಿದೆ. ಪಂಚವರ್ಣ ಮಹಿಳಾ ಸಾಧಕ ಪುರಸ್ಕಾರಕ್ಕೆ ಜಿಲ್ಲೆಯ ಸಾಮಾಜಿಕ ಕಾರ್ಯಕರ್ತೆ ಸಾಸ್ತಾನ ಪಾಂಡೇಶ್ವರದ ಲೀಲಾವತಿ ಗಂಗಾಧರ್ ಆಯ್ಕೆಗೊಳಿಸಿದ್ದು ಗಣ್ಯರ ಸಮ್ಮುಖದಲ್ಲಿ ಈ ಪುರಸ್ಕಾರ ಪ್ರದಾನ ನಡೆಯಲಿದೆ ಎಂದು ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಕಾರ್ಯಾಧ್ಯಕ್ಷೆ ಕಲಾವತಿ ಅಶೋಕ್, ಸ್ನೇಹಕೂಟದ ಭಾರತಿ ವಿ. ಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ. 7: ಮೆಸ್ಕಾಂ ಸಭೆ

ಬ್ರಹ್ಮಾವರ: ಮೆಸ್ಕಾಂ ಬ್ರಹ್ಮಾವರ ಉಪವಿಭಾಗ ಕಛೇರಿಯಲ್ಲಿ ಮಾ. 7ರಂದು ಸಮಯ ಬೆಳಿಗ್ಗೆ 10.30ರಿಂದ 12ಗಂಟೆಯವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಗ್ರಾಹಕರು ದೂರವಾಣಿ ಸಂಖ್ಯೆ 0820-2561234ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮದ್ಯ ಮಾರಾಟ ನಿಷೇಧ

ಉಡುಪಿ: ಜಿಲ್ಲೆಯಲ್ಲಿ ಹೋಳಿ ಹಬ್ಬದ ಆಚರಣೆಯ ಹಿನ್ನೆಲೆ ಗಂಗೊಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಗಂಗೊಳ್ಳಿ ಮತ್ತು ಗುಜ್ಜಾಡಿ ಗ್ರಾಮ ವ್ಯಾಪ್ತಿಯಲ್ಲಿ ಹಾಗೂ ಕುಂದಾಪುರ ನಗರ ಠಾಣೆಯ ಕಸಬಾ, ವಡೇರಹೋಬಳಿ ಹಾಗೂ ಹಂಗಳೂರು ಗ್ರಾಮ ವ್ಯಾಪ್ತಿಯಲ್ಲಿ ಮಾ. 5ರಂದು ಬೆಳಗ್ಗೆ 6 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ಗಂಟೆಯವರೆಗೆ ಮದ್ಯ ಮಾರಾಟದ ಸನ್ನದು ಹೊಂದಿರುವ ಬಾರ್, ರೆಸ್ಟೋರೆಂಟ್, ವೈನ್ ಶಾಪ್‌ಗಳ ಮದ್ಯ ಮಾರಾಟ ನಿಷೇಧಿಸಿ, ಅಬಕಾರಿ ಸನ್ನದುಗಳನ್ನು ಮುಚ್ಚಲು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಆದೇಶಿಸಿದ್ದಾರೆ.

ಮೊದಲನೇ ಪುಟದಿಂದ

ನಷ್ಟ ಭರಿಸುವ ಶಿಕ್ಷೆ

ಒಂದು ಲಾರಿ ಅಕ್ಕಿ ಬಂದರೆ (ಸುಮಾರು 300 ಚೀಲ) ಅನ್‌ಲೋಡ್ ಮಾಡುವ ವೇಳೆ ಕನಿಷ್ಠ 3 ರಿಂದ 4 ಗೋಣಿಯಷ್ಟು ಅಕ್ಕಿ ಸೋರಿ ಹೋಗುತ್ತದೆ. ಚೆಲ್ಲಿದ ಅಕ್ಕಿಯನ್ನು ಅಷ್ಟಿಷ್ಟು ಸಂಗ್ರಹಿಸಿದರೂ ಅದರಲ್ಲಿ ಕಲ್ಲು ಮಣ್ಣು ಸೇರಿಕೊಂಡು ಅದು ಮಾರಾಟಕ್ಕೆ ಯೋಗ್ಯವಾಗಿರುವುದಿಲ್ಲ. ಅನ್‌ಲೋಡ್ ಮಾಡುವ ವೇಳೆ ಸೋರಿಕೆಯಾದಷ್ಟೇ ಅಕ್ಕಿ ಲೋಡಿಂಗ್ ವೇಳೆಯೂ ಸೋರಿಕೆಯಾಗುತ್ತದೆ. ಕೊನೆಗೆ ಈ ಎಲ್ಲಾ ನಷ್ಟವನ್ನು ನ್ಯಾಯಬೆಲೆ ಅಂಗಡಿ ನಡೆಸುವವರು ಭರಿಸಬೇಕಾದ ಅನಿವಾರ್ಯತೆ ಇದೆ ಎನ್ನುವುದು ನ್ಯಾಯಬೆಲೆ ಅಂಗಡಿ ನಡೆಸುವವರ ಅಳಲು.

ಹಲವು ಸಮಯದಿಂದ ಈ ಸಮಸ್ಯೆಯನ್ನು ಎದುರಿಸುತ್ತಿದ್ದರೂ ಪಡಿತರ ವಿತರಕರ ದೂರನ್ನು ಆಲಿಸುವವರು ಮತ್ತು ಸಮಸ್ಯೆಗೆ ಪರಿಹಾರ ಒದಗಿಸುವವರು ಯಾರೂ ಇಲ್ಲ. ಸ್ಥಳೀಯ ಆಹಾರ ನಿರೀಕ್ಷಕರು ಅಥವಾ ನಾಗರಿಕ ಸರಬರಾಜು ಮತ್ತು ಗ್ರಾಹಕವ್ಯವಹಾರಗಳ ಇಲಾಖೆಯ ಅಧಿಕಾರಿಗಳಿಗೆ ಮುಂದೆ ತಮ್ಮ ಅಹವಾಲನ್ನು ಸಲ್ಲಿಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎನ್ನುವುದು ಪಡಿತರ ವಿತರಕರ ಅಳಲು. ಸಂಬಂಧಪಟ್ಟವರು ಜನರ ತೆರಿಗೆಯ ಹಣ ಈ ರೀತಿ ಪೋಲಾಗುವುದನ್ನು ತಡೆಯುವುದು ಮತ್ತು ಸರಕಾರದ ಮಹತ್ವಾಕಾಂಕ್ಷೆ ಯೋಜನೆಯಲ್ಲಿನ ಈ ರೀತಿಯ ಸಮಸ್ಯೆಗಳನ್ನು ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳುವ ಅಗತ್ಯವಿದೆ ಎನ್ನುವುದು ಸಾರ್ವಜನಿಕರ ಆಗ್ರಹವಾಗಿದೆ.

ರಸ್ತೆ ಅಗೆದರು

ಆದರೆ ಸಮರ್ಪಕವಾಗಿ ಮುಚ್ಚದೆ ಮಣ್ಣು ಹಾಕಿ ದಿಬ್ಬದಂತೆ ಮಾಡಿ ಕೋನ್ ಅಡ್ಡ ಇರಿಸಲಾಗಿದೆ. ತಿರುವಿನಲ್ಲಿ ಎಡಬದಿಗೆ ಸಂಚರಿಸುವ ವಾಹನಗಳು ತೀರಾ ಬಲಬದಿಗೆ ಸಂಚರಿಸುವ ಆವಶ್ಯಕತೆ ಇರುವುದರಿಂದ ಇಕ್ಕಟ್ಟಿನ ಸ್ಥಿತಿಯಲ್ಲಿ ವಾಹನಗಳು ಸಂಚರಿಸಬೇಕಿದೆ. ಸಂಬಂಧಪಟ್ಟವರು ತಕ್ಷಣವೇ ಇತ್ತ ಗಮನಹರಿಸಿ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ.

ನಿಜವಾದ ಸವಾಲು!

ಕೆಎಸ್ಆರ್ಟಿಸಿಯಿಂದ ಬಿಜೈ ಸಾಗುವ ರಸ್ತೆಯಲ್ಲಿ ಇಂತಹ ಚಿತ್ರಣ ಸಾಮಾನ್ಯವಾಗಿದೆ.

ಅಧಿವೇಶನದಲ್ಲೂ ಪ್ರಶ್ನೆ:

ಕರ್ನಾಟಕ ವಿಧಾನ ಪರಿಷತ್ತಿನ 158ನೆ ಅಧಿವೇಶನದಲ್ಲಿಯೂ ಮಂಗಳೂರಿನ ಒಳಚರಂಡಿ ವ್ಯವಸ್ಥೆಯ ಬಗ್ಗೆ ಪ್ರಶ್ನೆಯೊಂದನ್ನು ಕೇಳಲಾಗಿತ್ತು. ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ ಅವರು ಈ ಪ್ರಶ್ನೆಯನ್ನು ಕೇಳಿದ್ದರು. ಕೊಡಿಯಾಲ್ ಗುತ್ತು ವೆಟ್‌ವೆಲ್‌ನಿಂದ ಕುದ್ರೋಳಿ ವೆಟ್‌ವೆಲ್‌ಗೆ ಸಂಪರ್ಕಿಸುವ ಪಂಪಿಂಗ್ ಕೊಳವೆ ಬದಲಾವಣೆಗೆ 3.42 ಕೋಟಿ ರೂ. ಅಂದಾಜು ಮೊತ್ತದ ಕಾಮಗಾರಿ ನಡೆಯಲಿದೆ ಎಂಬ ಉತ್ತರ ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರಿಂದ ದೊರಕಿತ್ತು.

ಈ ಕೊಳವೆ ಸುಮಾರು 25 ವರ್ಷಗಳ ಹಿಂದೆ ಅಳವಡಿಸಲಾಗಿದ್ದು, ಒಳಭಾಗದಲ್ಲಿ ಸವೆದು ಪದೇ ಪದೇ ಒಡೆದು ಹೋಗುತ್ತಿದೆ. ಇದರಿಂದಾಗಿ ದುರಸ್ತಿ ಕಾಮಗಾರಿ ಅಸಾಧ್ಯ.ಹಾಗಾಗಿ ಹಳೆಯ 400 ಎಂಎಂ ಕೊಳವೆಯ ಬದಾಲಗಿ 600 ಎಂಎಂ ಕೊಳವೆಯನ್ನು ಅಳವಡಿಸಲು ಈ ಅಂದಾಜು ಮೊತ್ತದ ಕಾಮಗಾರಿ ಸಿದ್ಧಪಡಿಸಲಾಗಿದ್ದು, ತುರ್ತು ನೆಲೆಯಲ್ಲಿ ಈ ಕಾಮಗಾರಿ ಕೈಗೊಳ್ಳುವುದಾಗಿ ತಿಳಿಸಲಾಗಿದೆ. ಆದರೆ ಯಾವಾಗ ಆರಂಭವಾಗುವುದೋ ಕಾದುನೋಡಬೇಕಷ್ಟೆ.

ಮಾರ್ಚ್ ಆರಂಭದಲ್ಲೇ ಬತ್ತಿ ಹೋಗಿ ಬರಡಾಗಿದೆ ಬಾವಿ, ನದಿ ತೊರೆಗಳು | ಹನಿ ನೀರಿಗಾಗಿ ಪರದಾಟ

ನೀರಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ ಯೆಡ್ತರೆ ಗ್ರಾಮದ ಜನ

ಸಾದಂರ್ಭಿಕ ಚಿತ್ರ



ಉಪ್ಪುಂದ: ಬೇಸಿಗೆ ಆರಂಭವಾಗಿದೆ. ಇಷ್ಟು ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಮುಂಗಾರು ಮಳೆ ವಾಡಿಕೆಗಿಂತ ಸ್ವಲ್ಪ ಜಾಸ್ತಿಯಾಗಿದ್ದರೂ ಕೂಡಾ ಈ ಬಾರಿ ಬೇಸಿಗೆಯಲ್ಲಿ ನೀರಿನ ಹಪಹಪಿಕೆ ಕಡಿಮೆಯಾಗಬಹುದು ಎನ್ನುವ ಜನರ ನಿರೀಕ್ಷೆ ಮಾತ್ರ ಹುಸಿಯಾಗುವ ಲಕ್ಷಣಗಳು ಕಾಣಿಸುತ್ತಿದೆ. ಮಾರ್ಚ್ ಆರಂಭದಲ್ಲಿ ಬಾವಿಗಳ ತಳದರ್ಶನವಾದರೆ ನದಿ ತೊರೆಗಳು ಬತ್ತಿ ಹೋಗಿ ಬರಡಾಗಿದೆ.

ಇಲ್ಲಿನ ಪಟ್ಟಣ ಪಂಚಾಯತ್ ವ್ಯಾಪ್ತಿಯ ಯಡ್ತರೆ ಗ್ರಾಮದ ಜನರಿಗೆ ಪ್ರತಿ ವರ್ಷದಂತೆ ಈ ವರ್ಷವೂ ಕುಡಿಯುವ ನೀರಿನ ತತ್ವಾರ ಶುರುವಾಗಿದೆ. ಮಳೆಗಾಲ ಮುಗಿದು ಕೇವಲ ಒಂದು ತಿಂಗಳು ಕಳೆಯುವಷ್ಟರಲ್ಲೇ ಈ ಭಾಗದ ನಿವಾಸಿಗಳು ಹನಿ ನೀರಿಗಾಗಿ ಪರದಾಡುವಂತಾಗಿದೆ. ಈ ಬಗ್ಗೆ ಹಲವು ವರ್ಷಗಳು ಕಳೆದರೂ ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ವಿಫಲರಾಗಿದ್ದಾರೆ. ಸಮುದ್ರದ ನೆಂಟಸ್ಥಿಕೆ ಉಪ್ಪಿಗೆ ಬಡತನ ಎನ್ನುವಂತೆ ಕುಡಿಯುವ ನೀರಿನ ಬರ ಎದುರಿಸುತ್ತಿರುವುದು ಮಾತ್ರ ಶೋಚನೀಯ.

ಆದೆಷ್ಟೋ ವರ್ಷಗಳ ಸಮಸ್ಯೆ

ವಿಶೇಷವಾಗಿ ಗರ್ಜನಹಿತ್ಲು, ಸ್ಯಾಬರಹಿತ್ಲು, ಹೊಳ್ಳರಹಿತ್ಲು, ಪಾಣ್ತಿಗರಡಿ, ಕುದ್ರಿಹಿತ್ಲು ಸೇರಿದಂತೆ ಪ.ಪಂ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ಕಳೆದ ಆದೆಷ್ಟೋ ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ತಾಂಡವವಾಡುತ್ತಿದೆ. ಪಟ್ಟಣ ಪಂಚಾಯತ್ ವತಿಯಿಂದ ಎರಡು ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿದ್ದರೂ, ಅದು ಸಮರ್ಪಕವಾಗಿಲ್ಲ ಮತ್ತು ಅಲ್ಪ ಸಮಯದವರೆಗೆ ಮಾತ್ರ ಬರುತ್ತಿದೆ. ಹಳೆಯದಾದ ಮತ್ತು ಸರಿಯಾದ ನಿರ್ವಹಣೆ ಇಲ್ಲದ ಪೈಪ್‌ಲೈನ್ ವ್ಯವಸ್ಥೆಯೇ ಈ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣವಾಗಿದ್ದು, ತಕ್ಷಣದಿಂದ ಇದನ್ನು ಸರಿಪಡಿಸುವಂತೆ ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ. ಶಾಸಕರ ಪ್ರಯತ್ನಕ್ಕೆ ಗ್ರಾಮಸ್ಥರ ಆಶಯ: ಈ ಬಾರಿ ಶಾಸಕ ಗುರುರಾಜ್ ಗಂಟಿಹೊಳೆಯವರು ಯಡ್ತರೆ ಗ್ರಾಮದ ಶಾಶ್ವತ ಕುಡಿಯುವ ನೀರಿನ ಪರಿಹಾರಕ್ಕಾಗಿ ಹೊಸ ಪ್ರಯತ್ನದಲ್ಲಿದ್ದಾರೆ. ಅವರು ಪ್ರಯತ್ನಿಸುತ್ತಿರುವ ಈ ಯೋಜನೆಯು ತಾಂತ್ರಿಕವಾಗಿ ಯಶಸ್ವಿಯಾದಲ್ಲಿ ಈ ಭಾಗದ ಜನರ ದಶಕಗಳ ಕಾಲದ ನೀರಿನ ಬವಣೆಯನ್ನು ನೀಗಿಸಬಹುದು ಎಂಬುದು ಇಲ್ಲಿನ ನಿವಾಸಿಗಳ ಆಶಯವಾಗಿದೆ.

ಕಂಗಾಲಾಗಿದ್ದೇವೆ

ನಿತ್ಯ ನೀರಿನ ಸಮಸ್ಯೆಯಿಂದ ಕಂಗಾಲಾಗಿದ್ದೇವೆ, ಸಂಬಂಧಿಸಿದವರಿಗೆ ಮನವಿ ಮಾಡಿ ಸಾಕಾಗಿ ಹೋಗಿದೆ. ಜನರ ಗೋಳು ಕೇಳುವವರು ಯಾರು ಎನ್ನುವಂತಾಗಿದೆ. ಸುಬ್ಬಾರಾಡಿ ಡ್ಯಾಂ ಆದ ನಂತರ ಈ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ ಎಂದಿದ್ದರು. ಅದೂ ಕೂಡ ಮರಿಚಿಕೆಯಾಗಿಯೇ ಉಳಿದಿದೆ. ಕುಡಿಯುವ ನೀರು ನೀಡಲು ಸಾಧ್ಯವಾಗದಿದ್ದರೆ ಗ್ರಾಮಸ್ಥರು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

• ಪ್ರಸಾದ್ ಬೈಂದೂರು, ಸ್ಥಳೀಯರು

ಮಳೆ ನೀರಿನ ಸಂಗ್ರಹ ಅಗತ್ಯ

ರಾಜಸ್ಥಾನದ 500 ಮಿ.ಮೀ.ಗಿಂತ ಕಡಿಮೆ ಮಳೆಯಾಗುವ ಪ್ರದೇಶದಲ್ಲಿ ಮಳೆಕೊಯ್ಲು ಮೂಲಕ ನೀರಿನ ಸಂಗ್ರಹಿಸಿ ವರ್ಷವಿಡೀ ಅದರ ಬಳಕೆ ಕ್ರಮ ನಮಗೆ ಮಾದರಿಯಾಗಬೇಕಿದೆ. ಕರ್ನಾಟಕಕ್ಕಿಂತ ಸುಮಾರು 6 ಪಟ್ಟು ಕಡಿಮೆ ಮಳೆಯಾಗುವಲ್ಲಿ ಜನರು ಮಳೆನೀರು ಸಂಗ್ರಹದ ಮೂಲಕ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಂಡಿದ್ದಾರೆ. ನಮಗೇಕೆ ಸಾಧ್ಯವಾಗುತ್ತಿಲ್ಲ?.

• ಬೈಂದೂರು ಚಂದ್ರಶೇಖರ ನಾವಡ, ನಿವೃತ್ತ ಯೋಧರು

ತೆಕ್ಕಟ್ಟೆಯಲ್ಲಿ 'ಕಿಟಕಿ ಪಕ್ಕ ನಿಂತ ಹುಡುಗಿ' ಮಕ್ಕಳ ನಾಟಕ ಪ್ರದರ್ಶನ



ಕೋಟ: ಕಿಟಕಿ ಪಕ್ಕ ನಿಂತ ಹುಡುಗಿ ಅದ್ಭುತ ಕಥೆಯನ್ನಾಧರಿಸಿದ ನಾಟಕ. ಎಷ್ಟೋ ಶಿಕ್ಷಕರ ಶಿಕ್ಷಣವನ್ನು, ಆಯಾಮಗಳನ್ನು ಬದಲಾಯಿಸಿಕೊಂಡ ಕಥೆ. ಮಕ್ಕಳ ಮೂಲಕ ಡಾ. ಶ್ರೀಪಾದ ಭಟ್ಟರು ಸುಧಾ ಆಡುಕುಳರ ನಾಟಕವನ್ನು ಕೈಗೆತ್ತಿಕೊಂಡು ರಂಗ ಪ್ರಯೋಗಗೊಳಿಸಿದ್ದು ನಿಜಕ್ಕೂ ಸ್ತುತ್ಯರ್ಹ. ರಂಗಭೂಮಿಯ ನಾಟಕಗಳನ್ನು ಕರಾವಳಿಯಲ್ಲಿ ಅತ್ಯಧಿಕ ಸಂಖ್ಯೆ ಸಂಘಟನೆಗಳು ಆಯೋಜಿಸಿಕೊಳ್ಳುತ್ತಿರುವುದು ಸ್ವಾಗತಾರ್ಹ. ಇತ್ತೀಚಿನ ದಿನಗಳಲ್ಲಿ ರಂಗ ಚಟುವಟಿಕೆಗಳು ಯಥೇಚ್ಛವಾಗಿ ಕಂಡುಬರುತ್ತಿರುವುದು ಸಮಾಜದ ಬೆಳವಣಿಗೆ ಎಂದು ರಂಗ ನಿರ್ದೇಶಕ ಸದಾನಂದ ಬೈಂದೂರು ಸಮಾರೋಪ ಭಾಷಣಗೈದರು.

ತೆಕ್ಕಟ್ಟೆ ಹಯಗ್ರೀವದಲ್ಲಿ ಧಮನಿ ಟ್ರಸ್ಟ್ ತೆಕ್ಕಟ್ಟೆ ಹಾಗೂ ಶ್ರೀ ಕೈಲಾಸ ಕಲಾಕ್ಷೇತ್ರ ಟ್ರಸ್ಟ್ ತೆಕ್ಕಟ್ಟೆ ಜಂಟಿ ಆಶ್ರಯದಲ್ಲಿ ರಂಗೋತ್ಸವ ಸಮಾರೋಪದಲ್ಲಿ ಎಸ್.ಎಂ.ಎಸ್. ಆಂಗ್ಲ ಮಾಧ್ಯಮ ಶಾಲೆ ಬ್ರಹ್ಮಾವರ ಅಭಿನಯಿಸಿದ ಮಕ್ಕಳ ನಾಟಕ 'ಕಿಟಕಿ ಪಕ್ಕ ನಿಂತ ಹುಡುಗಿ' ನಾಟಕ ಪ್ರಸ್ತುತಿಯ ಸಂದರ್ಭ ಸದಾನಂದ ಬೈಂದೂರು ಮಾತನಾಡಿದರು.

ಪ್ರಾಂಶುಪಾಲೆ ಸುಶೀಲಾ ಹೊಳ್ಳ, ಲೇಖಕಿ ಶೋಭಾ ಆರಸ್, ಧಮನಿ ಟ್ರಸ್ಟ್ ಅಧ್ಯಕ್ಷೆ ಸುಲೋಚನಾ ಭಟ್ ಉಪಸ್ಥಿತರಿದ್ದರು. ಉಪನ್ಯಾಸಕ ಶಂಕರನಾರಾಯಣ ಉಪಾಧ್ಯಾಯ ನಿರೂಪಿಸಿದರು. ಶ್ರೀಶ ಭಟ್ ವಂದಿಸಿದರು.

ಭ್ರಷ್ಟಾಚಾರ ಎನ್ನುವುದು ನೀಗದ ದಾಹವಿದ್ದಂತೆ: ನ್ಯಾ. ಸಂತೋಷ್ ಹೆಗ್ಡೆ



ಕೋಟ: ಭ್ರಷ್ಟಾಚಾರ ಎನ್ನುವುದು ನೀಗದ ದಾಹವಿದ್ದಂತೆ. ಒಮ್ಮೆ ಭ್ರಷ್ಟಾಚಾರಕ್ಕೆ ಇಳಿದ ವ್ಯಕ್ತಿ ಎಷ್ಟೇ ಹಣ ಮಾಡಿದರೂ ಇನ್ನಷ್ಟು-ಮತ್ತಷ್ಟು ಹಣ ಮಾಡಬೇಕು ಎನ್ನುವ ದಾಹಕ್ಕಿಳಿಯುತ್ತಾನೆ. ನಮ್ಮ ಮಕ್ಕಳಿಗೆ ನೈತಿಕ ಪಾಠ ಕಲಿಸದಿದ್ದರೆ ಭಷ್ಟಾಚಾರವನ್ನು ನಿಯಂತ್ರಸಲು ಅಸಾಧ್ಯ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಜಸ್ಟೀಸ್ ಸಂತೋಷ್ ಹೆಗ್ಡೆ ತಿಳಿಸಿದರು.

ಅವರು ಬನ್ನಾಡಿಯಲ್ಲಿ ಜರಗಿದ ಬನ್ನಾಡಿ ದಿ. ಪದ್ದು ಆಚಾರ್ ಸಂಸ್ಮರಣೆ, ಸಹಾಯಧನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಧಿಕಾರ ಇದ್ದಾಗ ಅದನ್ನು ಪ್ರಾಮಾಣಿಕ ವಾಗಿಉಪಯೋಗಿಸಬೇಕು. ಬಡವರಿಗೆ, ದುರ್ಬಲರಿಗೆ ಜನರ ನಡವಳಿಕೆ ಬದಲಾಗದೆ ದೇಶದಲ್ಲಿ ಬದಲಾವಣೆ ಬಯಸಲು ಅಸಾಧ್ಯ. ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಎಚ್ಚರಿಕೆ ಅಗತ್ಯ. ಅಸಮರ್ಥರನ್ನು ಆಯ್ಕೆ ಮಾಡಿ ದೇಶ ಬದಲಾಗಬೇಕೆಂದು ಕನಸು ಕಾಣುವುದು ಕೂಡ ದುರಂತ ಎಂದರು.

ಈ ಸಂದರ್ಭ ಉತ್ತಮ ಬಿಎಲ್‌ಒ ರಾಜ್ಯ ಪ್ರಶಸ್ತಿ ಪುರಸ್ಕೃತ ವಿಜಯಲಕ್ಷ್ಮೀ ಶೆಟ್ಟಿ ಅವರನ್ನು ಗೌರವಿಸಲಾಯಿತು. ಅಶಕ್ತರಿಗೆ ಸಹಾಯಧನ ವಿತರಣೆ, ಪ್ರತಿಭಾ ಪುರಸ್ಕಾರ ನಡೆಯಿತು. ರೋಟರಿ ಸಹಾಯಕ ಗವರ್ನರ್ ಶ್ಯಾಮ ಸುಂದರ್‌ನಾಯರಿ, ರೋಟರಿ ಕೋಟ ಸಾಲಿಗ್ರಾಮ ಅಧ್ಯಕ್ಷ ಯೋಗೀಶ್ ಕುಮಾರ್, ವಕೀಲ ಬನ್ನಾಡಿ ಸೋಮನಾಥ ಹೆಗ್ಡೆ ಬಿಇಒ ಉಮಾ ಬಿ., ಉದ್ಯಮಿ ಶಂಕರ್ ಹೆಗ್ಡೆ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸಂಘಟಕ ಸೀತಾರಾಮ ಆಚಾರ್ ಸ್ವಾಗತಿಸಿದರು. ಉಪನ್ಯಾಸಕ ಸಂಜೀವ ಗುಂಡ್ಮಿ ಕಾರ್ಯಕ್ರಮ ನಿರೂಪಿಸಿದರು. ಸಂಯೋಜಕ ಬನ್ನಾಡಿ ನಾರಾಯಣ ಆಚಾರ್ ವಂದಿಸಿದರು.

ರಂಗದ ಮೇಲೆ ಮಹಿಳೆಯರು ವಿಜೃಂಭಿಸಿದಾಗ ಮಕ್ಕಳ ಪ್ರತಿಭೆ ಭದ್ರ



ಕೋಟ: ರಂಗ ಚಟುವಟಿಕೆಯನ್ನು ನಿರ್ವಹಿಸುತ್ತಾ ಸಮಾಜ ತಿದ್ದುವ ಕಾರ್ಯ ನಿಜಕ್ಕೂ ಶ್ಲಾಘನೀಯ. ನಿರಂತರ ರಂಗ ಚಟುವಟಿಕೆಯಿಂದ ಯಶಸ್ಸು ಸಾಧಿಸಿದ ಯಶಸ್ವೀ ಕಲಾವೃಂದ ಮಹಿಳೆಯರ ತಂಡವಾಗಿಸಿಕೊಂಡು ವರ್ಷದಿಂದ ವರ್ಷಕ್ಕೆ ಬೆಳೆಯುವುದನ್ನು ನೋಡುವಾಗ ನಿಜಕ್ಕೂ ಸಂತೋಷವಾಗುತ್ತದೆ. ಮಹಿಳೆಯರು ರಂಗದ ಮೇಲೂ ವಿಜೃಂಬಿಸಿದಾಗ ಮಕ್ಕಳಲ್ಲಿ ಪ್ರತಿಭೆ ಇನ್ನಷ್ಟು ಭದ್ರವಾಗುತ್ತದೆ ಎಂದು ನಿವೃತ್ತ ಹಿಂದಿ ಉಪನ್ಯಾಸಕ ಶ್ರೀನಿವಾಸ ಸೋಮಯಾಜಿ ಹೇಳಿದರು.

ತೆಕ್ಕಟ್ಟೆ ಹಯಗ್ರೀವದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಶ್ರೀ ಕೈಲಾಸ ಕಲಾಕ್ಷೇತ್ರ ತೆಕ್ಕಟ್ಟೆ ಸಹಕಾರದೊಂದಿಗೆ ಯಶಸ್ವಿ ಕಲಾವೃಂದ ಮಹಿಳಾ ತಂಡದ ಕಾರ್ಯಕ್ರಮದ ಸಂದರ್ಭ ಅವರು ಮಾತನಾಡಿದರು.

ಮಹಿಳಾ ದಿನಾಚರಣೆಯನ್ನು ಉತ್ಸುಕತೆಯನ್ನು ಬಹಳ ಮುಂಚೆಯೇ ಆಚರಿಸಿಸಂಭ್ರಮಿಸಿದ್ದುಶ್ಲಾಘ್ಯಯೋಗ್ಯ ವಿಚಾರ. ವಿವಿಧ ಕಲಾ ಪ್ರಕಾರವನ್ನು ಒಂದೇ ದಿನದಲ್ಲಿ ವೇದಿಕೆಯಲ್ಲಿ ತಂದು ಹಬ್ಬವಾಗಿಸಿದ ಮಹಿಳಾ ತಂಡ ಉತ್ತರೋತ್ತರ ಶ್ರೇಯಸ್ಸಾಗಲಿ ಎಂದು ಹಾರೈಸಿದರು.

ಹಿರಿಯ ತಾಳಮದ್ದಳೆ ಅರ್ಥದಾರಿ ಮೀರಾ ವಿ. ಸಾಮಗ, ನಿರ್ದೇಶಕರಾದ ರೋಹಿತ್ ಎಸ್. ಬೈಕಾಡಿ, ನರಸಿಂಹ ತುಂಗರನ್ನು ಸಮ್ಮಾನಿಸಲಾಯಿತು. ಯಶಸ್ವೀ ಕಲಾವೃಂದದ ಅಧ್ಯಕ್ಷ ಮಲ್ಯಾಡಿ ಸೀತಾರಾಮ ಶೆಟ್ಟಿ ಸ್ನೇಹಕೂಟ ಮಣೂರು ಅಧ್ಯಕ್ಷೆ ಭಾರತಿ ಮೈಯ್ಯ, ಸಂಗೀತ ಆಚಾರ್, ಸುಧಾ ಮಣೂರು ಉಪಸ್ಥಿತರಿದ್ದರು. ಶ್ಯಾಮಲಾ ಕಾರ್ಯಕ್ರಮ ನಿರೂಪಿಸಿದರು.

ನಾಟಕ, ಯಕ್ಷಗಾನ ರಂಗ ಪ್ರಸ್ತುತಿ

ಯಶಸ್ವೀ ಮಹಿಳೆಯರಿಂದಲೇ ನೃತ್ಯ, ಹಾಡು, ನಾಟಕ, ಯಕ್ಷಗಾನ ರಂಗ ಪ್ರಸ್ತುತಿಗೊಂಡಿತು.

ಉಡುಪಿ ನಾರ್ಥ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಶ್ರವಣ ದಿನ



ಉಡುಪಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆಸ್ಪತ್ರೆ, ತಾಲೂಕು ಆರೋಗ್ಯಾಧಿಕಾರಿ ಕಚೇರಿ ಉಡುಪಿ, ಕೆಎಂಸಿ ಮಣಿಪಾಲ ಶ್ರವಣ ವಿಭಾಗ ಹಾಗೂ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಉಡುಪಿ ನಾರ್ಥ್ ಇವರ ಜಂಟಿ ಆಶ್ರಯದಲ್ಲಿ ಉಡುಪಿ ನಾರ್ಥ್ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಶ್ರವಣ ದಿನವನ್ನು ಆಚರಿಸಲಾಯಿತು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಸತೀಶ್ ರಾವ್ ಕಾರ್ಯಕ್ರಮ ಉದ್ಘಾಟಿಸಿದರು. ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಚಂದ್ರಕಲಾ 'ಸಮುದಾಯದಿಂದ ಹಿಡಿದು ತರಗತಿ ಕೋಣೆಯ ವರೆಗೆ ಎಲ್ಲಾ ಮಕ್ಕಳಿಗಾಗಿ ಶ್ರವಣದ ಕಾಳಜಿ' ಥೀಮ್ ವಿಷಯವಾಗಿ ಮಾತನಾಡಿ, ಮಕ್ಕಳಲ್ಲಿ ಕಂಡುಬರುವ ತಡೆಗಟ್ಟಬಹುದಾದ ಶ್ರವಣ ನಷ್ಟವನ್ನು ಕಡಿಮೆ ಮಾಡಿ ಅವರ ಅರಿವಿನ ಸಾಮರ್ಥ್ಯವನ್ನು ಹೆಚ್ಚಿಸುವುದು, ಸಾಮಾಜಿಕವಾಗಿ ಎಲ್ಲರೊಡನೆ ಬೆರೆಯುವಂತೆ ಮಾಡುವುದೇ ಇಂದಿನ ಕಾರ್ಯಕ್ರಮದ ಉದ್ದೇಶ ಎಂದರು.

ಶ್ರವಣ ತಜ್ಞೆ ಸಮೀಕ್ಷಾ ಡಿ. ರಾವ್ ಮಾತನಾಡಿ, ಮಗು ಸರಿಯಾಗಿ ಮಾತನಾಡಬೇಕೆಂದರೆ ಮಗುವಿಗೆ ಕೇಳುವಿಕೆ ತುಂಬಾ ಮುಖ್ಯ. ಮಕ್ಕಳು ಕಿವಿಗೆ ಕಡ್ಡಿ ಅಥವಾ ಚೂಪಾದ ವಸ್ತುವನ್ನು ಹಾಕದಂತೆ ಪೋಷಕರು ಕಾಳಜಹಿ ವಹಿಸಬೇಕು. ಕಿವಿಯಲ್ಲಿ ಸಹಜ ಸ್ವಚ್ಛಗೊಳಿಸುವ ಕಾರ್ಯವಿಧಾನವಿರುವುದರಿಂದ ಕಡ್ಡಿಯಿಂದ ಕಿವಿಯನ್ನು ಸ್ವಚ್ಛ ಮಾಡಬಾರದು. ಸೀಳು ತುಟಿ ಮತ್ತು ಸೀಳು ಅಂಗುಳ ಇರುವ ಮಕ್ಕಳಿಗೆಸರಿಯಾದಸಮಯದಲ್ಲಿಶಸ್ತ್ರಚಿಕಿತ್ಸೆ ಮಾಡಿಸಬೇಕು. ಕಿವಿನೋವು, ಕಿವಿಯಲ್ಲಿ ಕೀವು, ತುರಿಕೆ ಇದ್ದಲ್ಲಿ ತಕ್ಷಣವೇ ಕಿವಿ ಮೂಗು ಗಂಟಲು ವೈದ್ಯರನ್ನು ಸಂಪರ್ಕಿಸಿ, ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದರು.

ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಬಸಪ್ಪ ಬೆನ್ನಪ್ಪನವರ್, ಕೆಎಂಸಿ ಮಣಿಪಾಲ ಶ್ರವಣ ವಿಭಾಗದ ದಿಯಾ, ಆಂಡ್ರಿವ್ ಇದ್ದರು. ಮುಖ್ಯೋಪಾಧ್ಯಾಯಿನಿ ಸಾವಿತ್ರಿ ಕೆ ಸ್ವಾಗತಿಸಿ, ಸಹಶಿಕ್ಷಕ ಗುರು ಪ್ರಸಾದ್ ವಂದಿಸಿದರು. 85 ಮಕ್ಕಳಿಗೆ ಕಿವಿಯ ತಪಾಸಣೆ ನಡೆಸಲಾಯಿತು.

ಕೋಟೇಶ್ವರ ದೇವಾಡಿಗ ಸಂಘದ ರಜತ ಸಂಭ್ರಮ



ಕುಂದಾಪುರ: ಅನಾದಿ ಕಾಲದಿಂದ ದೇವರನ್ನು ತೃಪ್ತಿ ಪಡಿಸುವ ಕೆಲಸವನ್ನು ಮಾಡಿಕೊಂಡು ಬಂದಿರುವ ದೇವಾಡಿಗ ಸಮಾಜ ದೇವರ ವಿಶೇಷ ಪ್ರೀತಿಗೆ ಪಾತ್ರವಾಗಿದೆ ಎಂದು ಬಾಳೆಕುದ್ರು ಹಂಗಾರಕಟ್ಟೆ ಮಠದ ಪೀಠಾಧಿಪತಿ ಶ್ರೀ ವಾಸುದೇವ ಸದಾಶಿವಾಶ್ರಮ ಸ್ವಾಮೀಜಿ ಹೇಳಿದರು.

ಕೋಟೇಶ್ವರ ಸರಸ್ವತಿ ಕಲ್ಯಾಣ ಮಂಟಪದಲ್ಲಿ ನಡೆದ ಕೋಟೇಶ್ವರ ದೇವಾಡಿಗ ಸಮಾಜ ಸೇವಾ ಸಂಘದ ರಜತ ಸಂಭ್ರಮದಲ್ಲಿ ಅವರು ಮಾತನಾಡಿದರು. ವಿಶ್ವ ದೇವಾಡಿಗ ಮಹಾ ಮಂಡಲ ಅಧ್ಯಕ್ಷ ಧರ್ಮಪಾಲ ದೇವಾಡಿಗ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಶಂಕರ್ ಅಂಕದಕಟ್ಟೆ ಅಧ್ಯಕ್ಷತೆ ವಹಿಸಿದ್ದರು. ಬೈಂದೂರು, ಕುಂದಾಪುರ, ಬ್ರಹ್ಮಾವರ ತಾಲೂಕು ದೇವಾಡಿಗ ಒಕ್ಕೂಟದ ಅಧ್ಯಕ್ಷ ರಘುರಾಮ್ ದೇವಾಡಿಗ ಆಲೂರು, ಮುಂಬೈ ದೇವಾಡಿಗ ಸಂಘದ ಅಧ್ಯಕ್ಷ ರವಿ ದೇವಾಡಿಗ, ಬೆಂಗಳೂರು ದೇವಾಡಿಗ ಸಂಘದ ಅಧ್ಯಕ್ಷ ರಮೇಶ್ ದೇವಾಡಿಗ ವಂಡ್ಸೆ, ಶ್ರೀ ಏಕನಾಥೇಶ್ವರಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಜನಾರ್ಧನ ದೇವಾಡಿಗ, ಏಕನಾಥೇಶ್ವರಿ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ ಅಧ್ಯಕ್ಷ ರತ್ನಾಕರ ಜಿ ಎಸ್, ಕುಂದಾಪುರ ದೇವಾಡಿಗ ಸಂಘದ ಅಧ್ಯಕ್ಷ ನಾಗರಾಜ್ ರಾಯಪ್ಪನ ಮಠ, ದೇವಬಂಧು ಸೊಸೈಟಿ ಅಧ್ಯಕ್ಷ ಸಂಜೀವ ದೇವಾಡಿಗ, ಗ್ರಾ.ಪಂ. ಮಾಜಿ ಅಧ್ಯಕ್ಷೆ ರಾಗಿಣಿ ದೇವಾಡಿಗ, ಸಂಘದ ಗೌರವ ಅಧ್ಯಕ್ಷ ಚಂದ್ರಶೇಖರ್ ದೇವಾಡಿಗ, ಶ್ಯಾಮಲಾ ದೇವಾಡಿಗ, ಕಾರ್ಯದರ್ಶಿ ಆಶ್ರಿತಾ ದೇವಾಡಿಗ, ವಿನೋದ್ ದೇವಾಡಿಗ, ಹರೀಶ್ ದೇವಾಡಿಗ, ಆನಂದ ದೇವಾಡಿಗ ಇದ್ದರು. ಸಾಧಕರಾದ ಶ್ರೀನಿವಾಸ ದೇವಾಡಿಗ ಮಾರ್ಕೋಡು, ವಿಠ್ಠಲ ದೇವಾಡಿಗ, ಯೋಗೀಶ್ ದೇವಾಡಿಗ ದೊಡ್ಡೋಣಿ, ಲೋಕೇಶ್ ಅಂಕದಕಟ್ಟೆ, ಸುಧೀರ್ ದೇವಾಡಿಗ, ಪ್ರತೀಕ್ಷಾ ಸಿ ದೇವಾಡಿಗ, ಸಂಘದ ಮಾಜಿ ಅಧ್ಯಕ್ಷರು, ಮಹಿಳಾ ಘಟಕದ ಮಾಜಿ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಶ್ರೀನಿವಾಸ್ ದೇವಾಡಿಗ ಸ್ವಾಗತಿಸಿದರು. ಪ್ರದೀಪ್ ದೇವಾಡಿಗ ವರದಿ ವಾಚಿಸಿದರು. ವಿಜೇತ ಕಾರ್ಯಕ್ರಮ ನಿರೂಪಿಸಿದರು. ರವಿ ದೇವಾಡಿಗ ವಂದಿಸಿದರು.

ಮಣಿಪಾಲ: ಮಹಿಳಾ ಉದ್ಯಮಶೀಲತೆಗೆ ಒತ್ತು; 'ಶಕ್ತಿ ಪಥ' ಕಾರ್ಯಾಗಾರಕ್ಕೆ ಚಾಲನೆ



ಉಡುಪಿ: ಮಾಹೆ ಸಂಸ್ಥೆಯ ಎಂಐಸಿ ಹಾಗೂ ಸೆಲ್ಕೊ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್ ಸಹಯೋಗದಲ್ಲಿ ಮಹಿಳಾ ಉದ್ಯಮಿಗಳಿಗಾಗಿ ಹಮ್ಮಿಕೊಳ್ಳಲಾದ 'ಶಕ್ತಿ ಪಥ' ಕಾರ್ಯಾಗಾರವು ಮಾಹೆಯ ಎಂಐಸಿ ಸಭಾಂಗಣದಲ್ಲಿ ಜರುಗಿತು.

ಕಾರ್ಯಾಗಾರ ಉದ್ಘಾಟಿಸಿದ ಉಡುಪಿ ನಿರ್ಮಿತಿ ಕೇಂದ್ರದ ನಿರ್ದೇಶಕ ಅರುಣ್ ಕುಮಾರ್ ಮಾತನಾಡಿ, ಸ್ಥಳೀಯ ಮತ್ತು ಸಮುದಾಯ ಆಧಾರಿತ ಉದ್ಯಮಗಳನ್ನು ಬಲಪಡಿಸಲು ಸಂಘಟಿತ ಬೆಂಬಲದ ಅಗತ್ಯವಿದೆ ಎಂದರು. ಮುಖ್ಯ ಅತಿಥಿಯಾಗಿದ್ದ ಟ್ಯಾಪ್ಮಿ ಅಲುಮ್ನಿ ಅಸೋಸಿಯೇಷನ್ ಉಪಾಧ್ಯಕ್ಷೆ ಮಹಾಲಸ ಕಿಣಿ, ಮಹಿಳೆಯರು ಸೋಲೊಪ್ಪದ ಛಲದೊಂದಿಗೆ ಹೊಸ ಅವಕಾಶಗಳನ್ನು ಅನ್ವೇಷಿಸಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಟ್ಯಾಪ್ಮಿ ನಿರ್ದೇಶಕ ಡಾ. ದುರ್ಗಾಪ್ರಸಾದ್, ಉದ್ಯಮಶೀಲತೆ ಬೆಳೆಸಲು ರಿಸ್ಕ್ ತೆಗೆದುಕೊಳ್ಳುವ ಮನೋಭಾವ ಅತಿಮುಖ್ಯ ಎಂದು ತಿಳಿಸಿದರು. ಸೆಲ್ಕೊ ಸೋಲಾರ್ ನ ಉಪ ಪ್ರಬಂಧಕ ಗುರುಪ್ರಕಾಶ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ತಂತ್ರಜ್ಞಾನದ ಮೂಲಕ ಉತ್ಪಾದಕತೆ ಹೆಚ್ಚಿಸುವ ಕುರಿತು ವಿವರಿಸಿದರು.

ಉಡುಪಿ ಹಾಗೂ ಕುಂದಾಪುರ ಭಾಗದ ಸುಮಾರು 50ಕ್ಕೂ ಹೆಚ್ಚು ಮಹಿಳಾ ಉದ್ಯಮಿಗಳು ಈ ಶಿಬಿರದ ಪ್ರಯೋಜನ ಪಡೆದರು.

ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಇಲಾಖೆಗಳಿಗೆ ಸಂಬಂಧಿಸಿ 'ಅರಣ್ಯ ಸಂರಕ್ಷಣಾ ಕಾಯ್ದೆ' ಕಾರ್ಯಾಗಾರ

ಅರಣ್ಯ ಕಾಯ್ದೆ ಅರಿವು, ಸಮಸ್ಯೆಗಳ ಪರಿಹಾರದ ಕಾಳಜಿ ಅಧಿಕಾರಿಗಳಲ್ಲಿ ಇರಲಿ



ಕುಂದಾಪುರ: ಅರಣ್ಯ ಪ್ರದೇಶಗಳಿಗೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ಅರಣ್ಯ ಇಲಾಖೆ ಸಂಬಂಧಿಸಿದ ಸಮಸ್ಯೆಗಳಿದ್ದು, ರಸ್ತೆ, ಶಾಲೆ ಸೇರಿದಂತೆ ವಿವಿಧ ಅಭಿವೃದ್ಧಿ ಕೆಲಸಗಳಿಗೆ ತೊಡಕಾಗುತ್ತಿದೆ. ಕೆಲವೊಂದು ಪ್ರದೇಶಗಳು ವನ್ಯಜೀವಿ, ಮೀಸಲು ಅರಣ್ಯ ಅಥವಾ ಕೆಸಿಡಿಸಿ ವ್ಯಾಪ್ತಿಗೆ ಸೇರುತ್ತವೆ ಎಂಬ ಗೊಂದಲ ಇದೆ. ಅರಣ್ಯ ಇಲಾಖೆ ಕಾಯ್ದೆ ಕಾನೂನು ಬಹಳ ಸುಂದರವಾಗಿದ್ದು, ಅಷ್ಟೇ ಕಠಿಣವಾಗಿದೆ. ಇದರ ಅರಿವು ಸ್ಥಳೀಯ ಮಟ್ಟದ ಅಧಿಕಾರಿಗಳಲ್ಲಿ ಇರಬೇಕು ಮತ್ತು ಇಂತಹ ಕಾನೂನುಗಳನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಗ್ರಾಮದ ನಮ್ಮ ವ್ಯಾಪ್ತಿಯ ಸಮಸ್ಯೆಗಳನ್ನು ಪರಿಹಾರಕೊಳ್ಳುವಲ್ಲಿ ವಿಶೇಷ ಕಾಳಜಿಯನ್ನು ಅಧಿಕಾರಿಗಳು ತೋರಬೇಕು. ನಿಯಮ ಪ್ರಕಾರ ಕಾನೂನಿನ ಅಡಿಯಲ್ಲಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಇದೆ ಎಂದು ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೈಂದೂರು ವಿಧಾನಸಭಾ ಕ್ಷೇತ್ರದ ಕುಂದಾಪುರ ಮತ್ತು ಬೈಂದೂರು ತಾಲೂಕು ವ್ಯಾಪ್ತಿಯ ವಿವಿಧ ಇಲಾಖೆಗೆ ಸಂಬಂಧಿಸಿದಂತೆ ಹೆಮ್ಮಾಡಿಯ ಜಯಶ್ರೀ ಸಭಾಭವನದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆಯ ಕುರಿತು ಬುಧವಾರ ಜರಗಿದ ಮಾಹಿತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ 30 ವರ್ಷಗಳಿಂದ ಅರಣ್ಯ ಇಲಾಖೆ ಸಮಸ್ಯೆಯಿಂದ ಕೊಲ್ಲೂರಿನಲ್ಲಿ ಆಸ್ಪತ್ರೆ ನಿರ್ಮಿಸಲು ಸಾಧ್ಯವಾಗಿಲ್ಲ, ಹಳೆ ಆಸ್ಪತ್ರೆಯನ್ನು ನವೀಕರಣ ಮಾಡಲು ಆಗಿಲ್ಲ, ಸಾರ್ವಜನಿಕ ಸೇವೆ ಮಾಡುವಾಗ ಅಧಿಕಾರಿಗಳ ಸಹಕಾರ ಅಗತ್ಯ ಎಂದರು.

ಕುಂದಾಪುರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ರುದ್ರನ್ ಪಿ. ಮಾತನಾಡಿ, ಅರಣ್ಯ ಪ್ರದೇಶದಲ್ಲಿ ಬೇರೆ ಚಟುವಟಿಕೆ ಮಾಡಲು ಸಂಪೂರ್ಣವಾಗಿ ನಿಷೇಧ ಇದೆ ಎಂದು ಹೇಳಲು ಆಗುವುದಿಲ್ಲ. ಅರಣ್ಯ ಸಂಪತ್ತು ರಕ್ಷಣೆ ಎಷ್ಟು ಮುಖ್ಯವೋ ನೂರಾರು ವರ್ಷಗಳಿಂದ ಅರಣ್ಯ ಪ್ರದೇಶವನ್ನು ಅವಲಂಬಿಸಿ ಜೀವನ ನಡೆಸುತ್ತಿರುವ ಜನರ ಬದುಕು ಕೂಡ ಅಷ್ಟೇ ಮುಖ್ಯ ಎಂದು ಹೇಳಿದರು.

ಕುಂದಾಪುರ ಉಪವಿಭಾಗದ ಸಹಾಯಕ ಆಯುಕ್ತೆ ರಶ್ಮಿ ಎಸ್.ಆರ್. ಮಾತನಾಡಿ, ಮಾಹಿತಿಯ ಅಭಾವದಿಂದ ಕೆಲವೊಮ್ಮೆ ಕಂದಾಯ ಮತ್ತು ಅರಣ್ಯ ಇಲಾಖೆ ನಡುವೆ ಗೊಂದಲ ಸೃಷ್ಟಿಯಾಗುತ್ತದೆ. ಜನಸಾಮಾನ್ಯರಲ್ಲೂ ಮತ್ತಷ್ಟು ಗೊಂದಲವನ್ನು ಸೃಷ್ಟಿ ಮಾಡುತ್ತೇವೆ. ಎಲ್ಲಾ ಇಲಾಖೆಗಳು ಸಮನ್ವತೆಯಿಂದ ಕಾರ್ಯನಿರ್ವಹಿಸಬೇಕಿದೆ ಎಂದು ಹೇಳಿದರು.

ಸಾಮಾಜಿಕ ಅರಣ್ಯ ಇಲಾಖೆ ಉಪ ಅರಣ್ಯ ಸಂರಕ್ಷಣಾಧಿಕಾರಿ ರವೀಂದ್ರ ಡಿ.ಎನ್., ಕುಂದಾಪುರ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಾಶ ಪೂಜಾರಿ, ಕುಂದಾಪುರ ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್, ಬೈಂದೂರು ತಹಶೀಲ್ದಾರ್ ರಾಮಚಂದ್ರಪ್ಪ, ಕುಂದಾಪುರ ತಾಪಂ. ಇಒ ಮಹೇಶ ಕೆ.ಜಿ., ಬೈಂದೂರು ತಾಪಂ. ಇಒ ರಾಮದಾಸ, ಕುಂದಾಪುರ ವಲಯ ಅರಣ್ಯ ಅಧಿಕಾರಿ ರಾಘವೇಂದ್ರ ಎಂ.ನಾಯ್ಕ್ ಇದ್ದರು. ಯೋಜನಾ ಅಧಿಕಾರಿ ಸತೀಶ್ ಸ್ವಾಗತಿಸಿದರು. ಸುಮಾ ಸಂಗ್ರಾಮ್ ವಂದಿಸಿದರು.